ಬಿಸಿಲ

ಮಾರ್ಚ್ 1999 ರೂ. 10


■ ವಾಣಿಜ್ಯ ■ ವಿಕಾಸ ■ ಮಾಹಿತಿ ■ ಸಂಪರ್ಕ

ಮಾಸ ಪತ್ರಿಕೆ



ವಿಕೆಟ್ ವೀರ

ಅನಿಲ್ ಕುಂಬ್ಳೆ



ಅಂಜನಾ ಮಿಶ್ರಾ

ರೇಪ್ ಕಥೆ

ಬಿಸಿಲ ಬದುಕು

ಮಾರ್ಚ್ 1999 ಸಂಪುಟ 2 ಸಂಚಿಕೆ 9

ಸಂಪಾದಕ
ಚಂದ್ರಕಾಂತ ವಡ್ಡು

ಉಪ ಸಂಪಾದಕರು
ಎ.ಎಂ.ಸುರೇಶ್

ನಿರ್ವಹಣೆ
ಸಿ.ಪಿ. ಸುರೇಶ್

ಪ್ರಸಾರ
ರಮೇಶ್ ವಿಟ್ಲಾಪುರ

ಅಕ್ಷರ ಜೋಡಣೆ
ನರೇಂದ್ರ ಪಾಟೀಲ, ಕೋಕಿಲ

ಮುಖಪುಟ ವಿನ್ಯಾಸ
ಅಂಕುರ

ಮುಖಪುಟ ರೂಪದರ್ಶಿ
ಗೌತಮಿ ಸರಾಫ್

ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951
ಬಸವೇಶ್ವರ ನಗರ, ಬೆಂಗಳೂರು- 560 079
ದೂರವಾಣಿ : 3307810

Printed, Published and Owned by Chandrakanta Vaddu, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3307810 Pager : 9622 738638 Printed at M.N.S.Enterprises, Bhattarahalli, Old Madras Road, Bangalore -560 049 Editor : Chandrakanta Vaddu

ಈ ಶತಮಾನ

ನಾವು ಬದುಕಿರುವ ಈ ಕಾಲಘಟ್ಟಕ್ಕೆ ತುಂಬಾ ಮಹತ್ವವಿದೆ. ಹಿಂದೆಂದೂ ಊಹಿಸದಂತಹ ವೈಜ್ಞಾನಿಕ ಸಂಶೋಧನೆಗಳು, ಆವಿಷ್ಕಾರಗಳು 20ನೇ ಶತಮಾನದಲ್ಲಿ ನಡೆದಿವೆ. ಮನುಷ್ಯನ ಬದುಕನ್ನು ಹಗುರಗೊಳಿಸಲು ಅಸಂಖ್ಯಾತ ಆಧುನಿಕ ಸೌಲಭ್ಯಗಳು ಸಜ್ಜುಗೊಂಡಿವೆ. ಸಂಪರ್ಕ ಕ್ಷೇತ್ರದ ಪ್ರಗತಿಯಂತೂ ಇಡೀ ಜಗತ್ತನ್ನು ಒಂದು ಪುಟ್ಟ ಹಳ್ಳಿಯಾಗಿಸಿದೆ. ಕೆಲವೇ ವರ್ಷಗಳ ಹಿಂದೆ ದೂರದರ್ಶನ ಎಂಬುದು ಕಲ್ಪನೆಗೂ ನಿಲುಕುವಂತಿರಲಿಲ್ಲ. ಈಗ ಎಲ್ಲವೂ ಸಾಧ್ಯವಾಗಿದೆ.

ಹೀಗೆ ಮನುಷ್ಯನ ಬದುಕನ್ನು ವೈವಿಧ್ಯಮಯ ಬದಲಾವಣೆಗೆ ಈಡು ಮಾಡಿರುವ ಈ ಶತಮಾನ ಅಷ್ಟೇ ವೈರುಧ್ಯಗಳಿಂದಲೂ ಕೂಡಿದೆ. ಗಾಂಧೀಜಿಯ ಬದುಕನ್ನು ಕಂಡ ಈ ಶತಮಾನ ಎರಡು ಮಹಾಯುದ್ಧಗಳ ಪರಿಣಾಮಗಳನ್ನೂ ಉಂಡಿದೆ. ವಿಶ್ವದ ಅನೇಕ ರಾಷ್ಟ್ರಗಳು ಶಾಂತಿ ಮಂತ್ರ ಜಪಿಸುತ್ತಲೇ ಉಡಿಯಲ್ಲಿ ಇಟ್ಟುಕೊಂಡ ಅಣುಬಾಂಬುಗಳನ್ನು ಝಳಪಿಸುತ್ತಿವೆ.

ಇಷ್ಟೆಲ್ಲಾ ಪ್ರಗತಿ, ವೈರುಧ್ಯ, ಸೌಲಭ್ಯಗಳ ಮಧ್ಯೆಯೂ ಮಾನವನ ದೈನಂದಿನ ಜೀವನದಲ್ಲಿ ನೆಮ್ಮದಿ ಜಿನುಗುತ್ತಿದೆಯೇ ಎಂದು ಪ್ರಶ್ನಿಸಿದರೆ ನಕಾರಾತ್ಮಕ ಉತ್ತರ ಬರುತ್ತದೆ. ಇದ್ದಷ್ಟು ಬಾಚಿಕೊಳ್ಳುವುದರೊಂದಿಗೆ ಇನ್ನಷ್ಟಕ್ಕೆ ಹಪಹಪಿಸುವ ಹೊಟ್ಟೆಬಾಕ ಗುಣ ಸಾರ್ವತ್ರಿಕವಾಗಿ ಕಾಣಿಸಿಕೊಂಡಿರುವುದನ್ನು ನೀವೂ ಗಮನಿಸಿರಬಹುದು. ಹೇಗಾದರೂ ಮಾಡಿ ಜಯಿಸಿಯೇ ತೀರಬೇಕೆಂದು ತಹತಹಿಸುವ ಮನಸ್ಸುಗಳು ಎಲ್ಲದಕ್ಕೂ ಸಿದ್ಧಗೊಂಡು ನಿಂತಿವೆ. ಇದಕ್ಕೆ ಈ ಶತಮಾನದ ಆದಿಯಲ್ಲಿದ್ದ ಬದುಕಿನ ಮೌಲ್ಯಗಳು ಕುಸಿದಿರುವುದೇ ಕಾರಣ.

ಹಿಂದೆ ಒಬ್ಬ ವ್ಯಕ್ತಿ ಜೀವನದಲ್ಲಿ ಯಶಸ್ವಿಯಾದರೆ ಆ ಯಶಸ್ಸಿನ ಮಾರ್ಗವನ್ನೂ ಗಣಿಸುತ್ತಿದ್ದರು. ಜೀವನದಲ್ಲಿ ಯಶಸ್ಸು ಎನ್ನುವುದು ಕೇವಲ ಹಣ ಗಳಿಕೆ ಮಾತ್ರ ಆಗಿರಲಿಲ್ಲ. ಈಗ ಹಣ ಸಂಪಾದನೆಯ ಮುಂದೆ ಬೇರೆ ಎಲ್ಲ ಗುಣಗಳೂ ಗೌಣ. ಕಾಪಿ ಹೊಡೆದು ಪರೀಕ್ಷೆಯಲ್ಲಿ ರ್‍ಯಾಂಕ್ ಬಂದರೂ ಸರಿ, ಅಡ್ಡಹಾದಿಯಿಂದ ಸ್ಪರ್ಧೆಯಲ್ಲಿ ಜಯಿಸಿದರೂ ಸೈ, ಹಣ ಚೆಲ್ಲಿ ಚುನಾವಣೆ ಗೆದ್ದರೂ ಆದೀತು, ದುಷ್ಟ ಮಾರ್ಗಗಳಿಂದ ದುಡ್ಡು ಹರಿದು ಬಂದರೂ ನಡೆದೀತು... ಒಟ್ಟಿನಲ್ಲಿ ಹಣ-ಅಧಿಕಾರ ಸಂಪಾದಿಸಿದ ವ್ಯಕ್ತಿಗೆ ಗೌರವ ದಕ್ಕುತ್ತದೆ. ಹೀಗೆ ಹಣವೇ ಯಶಸ್ಸಿನ ಮಾನದಂಡವಾಗುವುದರ ಜೊತೆಗೆ ಆ ಹಣ ಗಳಿಕೆಯ ವಿಧಾನ ಕುರಿತೂ ಮೌನ ಆವರಿಸಿರುವುದು ನಿಜಕ್ಕೂ ಶೋಚನೀಯ ವಿಷಯ.

ಯಶಸ್ಸಿನ ಮಾನದಂಡವನ್ನು ಪುನರ್ ಪರಿಶೀಲನೆಗೆ ಒಳಪಡಿಸದಿದ್ದರೆ ಈ ಶತಮಾನದ ಸಾಧನೆಗಳೆಲ್ಲ ದುರ್ಮಾರ್ಗಿಗಳ ದುರಹಂಕಾರ ಹೆಚ್ಚಿಸಲು ನೆರವಾಗುತ್ತವಷ್ಟೇ.

-ಸಂಪಾದಕ

ಹಾಸ್ಯ

ಮೊದಲ ರಾತ್ರಿ ಗಂಡ ತನ್ನ ಮಡದಿಯನ್ನು ಪ್ರೀತಿಯಿಂದ ಪ್ರಶ್ನಿಸಿದ:

''ಚಿನ್ನ, ಮದುವೆಗೆ ಮುಂಚೆ ನಿನಗೆ ಬೇರೆ ಹುಡುಗರ ಸ್ನೇಹವಿತ್ತೇ?''

ಪತ್ನಿ ಮೌನಿಯಾದಳು.

''ಹೇಳು ಪರವಾಗಿಲ್ಲ. ನಾನು ತಪ್ಪು ತಿಳಿಯೋಲ್ಲ'' ಎಂದ ಗಂಡ.

''ತಡೀರಿ, ಲೆಕ್ಕ ತಪ್ಪಿಸಬೇಡಿ. ಎಣಿಸ್ತಾ ಇದೀನಿ'' ಎಂದು ಪತ್ನಿ ನುಡಿದಾಗ ಗಂಡ ಧೊಪ್ಪನೆ ಕೆಳಗೆ ಬಿದ್ದ.

❍

ಗಂಡನಿಗೆ ಎರಡನೆ ಸಂಸಾರ ಇರುವುದು ಖಚಿತವಾಗಿತ್ತು ಮಡದಿಗೆ. ಭೀಮನ ಅಮಾವಾಸ್ಯೆಯ ದಿನ ಪತಿಯ ಕಾಲಿಗೆ ನಮಸ್ಕರಿಸಿದಳು.

''ಏನಂತ ಆಶೀರ್ವದಿಸಲಿ?'' ಗಂಡ ಕೇಳಿದ.

''ಏಳೇಳು ಜನ್ಮಕ್ಕೂ ನಿಮ್ಮ ಎರಡನೇ ಹೆಂಡತಿಯಾಗಿ ನಾನು ಇರಬೇಕು ಅಂತ ಆಶೀರ್ವಾದ ಮಾಡಿ!'' ಎಂದಳಾ ಸಾಧ್ವೀಮಣಿ.

❍

ಮೇಷ್ಟ್ರು

''ಒಮ್ಮೆ ನ್ಯೂಟನ್ ಸೇಬಿನ ಮರದಡಿ ಕುಳಿತಿದ್ದಾಗ ಒಂದು ಹಣ್ಣು ಬಿದ್ದ ಬಗ್ಗೆ ಚಿಂತಿಸಿ, ಅದು ಗುರುತ್ವಾಕರ್ಷಣೆಯಿಂದಲೇ ಸಾಧ್ಯ ಎಂದು ಸಾಧಿಸಿ ವಿಖ್ಯಾತ ವಿಜ್ಞಾನಿಯಾದ. ಇದರಿಂದ ನಿಮಗೇನು ತಿಳಿಯಿತು?''

ವಿದ್ಯಾರ್ಥಿಯೊಬ್ಬ

''ಕ್ಲಾಸ್‌ರೂಂನಲ್ಲಿ ಇರೋದು ದಂಡ ಅಂತ ಸಾರ್.''

❍

ರಾಜಣ್ಣ

''ನಿಜ ಹೇಳಬೇಕು ಅಂದ್ರೆ ನನ್ನ ಹೆಂಡತಿ ತುಂಬಾ ಒಳ್ಳೆಯವಳು. ಅವಳೊಬ್ಬ ದೇವತೆ ಕಣೋ.''

ಶಾಮಣ್ಣ

''ಅದೃಷ್ಟವಂತ ಕಣೋ ನೀನು. ನನ್ನ ಹೆಂಡತಿ ಇನ್ನೂ ಬದುಕೇ ಇದ್ದಾಳೆ.''

❍

ಆಕೆ

''ಅದ್ಯಾಕೆ ಆಫೀಸಿಗೆ ಹೋಗುವಾಗ ಈರುಳ್ಳಿ ತಿಂತೀಯಾ?''

ಈಕೆ

''ಈರುಳ್ಳಿ ವಾಸನೆ ಬಂದ್ರೇನೇ ನಮ್ಮ ಆಫೀಸರ್ ಮಾತನಾಡೋದು ನಿಲ್ಲಿಸೋದು, ಇಲ್ಲದಿದ್ದರೆ ಕೊರೀತಾ ಇರ್ತಾರೆ.''

❍

ವೈದ್ಯ

''ನಿಮ್ಮ ಕಾಯಿಲೆ ಬೇಗ ಗುಣವಾಗದು. ತಂದೆಯಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ ಬರುವ ವಂಶಪಾರಂಪರ್ಯ ಕಾಯಿಲೆ ಇದು.''

ರೋಗಿ

''ಹಾಗಾದ್ರೆ ಡಾಕ್ಟ್ರೇ, ಬಿಲ್ ಅನ್ನು ನಮ್ಮ ಅಪ್ಪನಿಗೇ ಕಳುಹಿಸಿಕೊಡಿ!''

❍

ಗೆಳೆಯ

''ಅಲ್ಲಯ್ಯಾ, ಎಲ್ಲಾ ಬಿಟ್ಟು ನೀನು ಚರ್ಮ ವೈದ್ಯನಾದದ್ದು ಏಕೆ?''

ವೈದ್ಯ

''ಯಾವ ರೋಗಿಯೂ ಮಧ್ಯರಾತ್ರಿಯಲ್ಲಿ ಬಂದು ಎಬ್ಬಿಸುವುದಿಲ್ಲ. ಚರ್ಮ ರೋಗದಿಂದ ಯಾವ ರೋಗಿಯೂ ಬೇಗ ಸಾಯುವುದಿಲ್ಲ, ಯಾವ ರೋಗಿಯೂ ಪೂರ್ತಿ ಗುಣಮುಖವಾಗುವುದೂ ಇಲ್ಲ. ಅದಕ್ಕೆ ನಾನು ಚರ್ಮ ವೈದ್ಯನಾದದ್ದು!''

❍

ಎಷ್ಟು ಬಿಸಿ ಇದ್ದರೂ, ''ಕಾಫಿ ಇನ್ನೂ ಬಿಸಿ ಮಾಡಿ ತರ್ಬೇಕಿತ್ತು'' ಎನ್ನುತ್ತಿದ್ದ ಗುಂಡ, ಬಿಸಿ ದ್ರವವನ್ನು ಆರಾಮವಾಗಿ ಗಂಟಲಿಗೆ ಸುರಿದುಕೊಳ್ಳುತ್ತಿದ್ದ.

ಇನ್ನೂ ಬಿಸಿ ಎಂಬ ಮಾತು ಕೇಳಿ ಕೇಳಿ ರೋಸಿಹೋಗಿದ್ದ ಪತ್ನಿ ಹೇಳಿದಳು:

''ಇನ್ನೂ ಬಿಸಿ ಸಾಧ್ಯವಿಲ್ಲಾರೀ, ಬೇಕಾದ್ರೆ ಕಾಫಿ ಕುಡಿದು ನೀವೇ ಒಲೆ ಮೇಲೆ ಕೂತ್ಕೊಳ್ಳಿ!''

❍

ಅಧ್ಯಾಪಕ

''ಇಷ್ಟು ದಪ್ಪಕ್ಷರ ಏಕೆ ಬರೆಯುತ್ತೀಯೋ?''

ವಿದ್ಯಾರ್ಥಿ

''ನೀವು ನನ್ನನ್ನು ನಿಮ್ಮ ಕನ್ನಡಕ ತರಿಸಲು ನಿಮ್ಮ ಮನೆಗೆ ಕಳುಹಿಸದೇ ಇರಲಿ ಅಂತ, ಸಾರ್!''

❍

ಮೇಷ್ಟ್ರು

''ಏನಪ್ಪಾ ಮಗು, ನಿಮ್ಮ ತಂದೆ ಏನ್ ಕೆಲ್ಸ ಮಾಡ್ಕೊಂಡಿದ್ದಾರೆ?''

ವಿದ್ಯಾರ್ಥಿ

''ನಮ್ಮ ತಾತ ಸಂಪಾದಿಸಿದ ಆಸ್ತೀನೆಲ್ಲಾ ಕಳಿಯೋ ಕೆಲ್ಸ ಮಾಡ್ಕೊಂಡಿದಾರೆ.''

❍

ಶಾಮು

''ರಾಮು, ನಿನಗೆ ಪುನರ್ಜನ್ಮದಲ್ಲಿ ನಂಬಿಕೆ ಇದೆಯಾ?''

ರಾಮು

''ಖಂಡಿತಾ ಇದೆ ಕಣೋ.''

ಶಾಮು

''ಹಾಗಿದ್ರೆ, ಒಂದು ನೂರು ರೂಪಾಯಿ ಸಾಲ ಕೊಟ್ಟಿರು, ಮುಂದಿನ ಜನ್ಮದಲ್ಲಾದರೂ ತೀರಿಸ್ತೀನಿ!''

■ **ಟಿ.ವಿ. ವೆಂಕಟರಮಣಯ್ಯ**

ಒಳನೋಟ

ವಿದ್ಯೆ - ಉದ್ಯೋಗ



ಅಂಜನಾ ಮಿಶ್ರಾ ಸ್ವತಃ ಹೇಳಿಕೊಂಡ ಕರುಣಾಜನಕ ಕಥೆ 8



ಕ್ರಿಕೆಟ್ ವೀರ ಅನಿಲ್ ಕುಂಬ್ಳೆ 20



ತೆರಿಗೆ ಉಳಿಸುವ ಉಪಾಯ 15



ಹೆಣ್ಣು ಗಂಡು ಪರಸ್ಪರ ಆಕರ್ಷಣೆಯ ಹಿನ್ನೆಲೆ 65



ಸಿನಿಮಾದೊಳಗೊಂದು ಸಿನಿಮಾ 72

ಸ್ಥಿರ ಶೀರ್ಷಿಕೆಗಳು

ಟಪಾಲು



ಚಂದಾ ಅವಧಿ

- ಸಿದ್ಧರಾಮ ರಾಜಮಾನೆ, ಗುಲ್ಬರ್ಗಾ.

ವಾರ್ಷಿಕ ಚಂದಾದಾರನಾದ ನನಗೆ ನಿಮ್ಮ ಪತ್ರಿಕೆ ಅಂಚೆ ಮೂಲಕ ತಪ್ಪದೇ ಬರುತ್ತಿದೆ. ಆದರೆ ನನ್ನ ಚಂದಾ ಅವಧಿ ಯಾವಾಗ ಮುಗಿಯುತ್ತದೆ ಗೊತ್ತಿಲ್ಲ. ದಯವಿಟ್ಟು ತಿಳಿಸಿ.

[ನಿಮಗೆ ಅಂಚೆ ಮೂಲಕ ತಲುಪುವ ಪ್ರತಿಯ ಮೇಲೆ ನಿಮ್ಮ ವಿಳಾಸದ ಲೇಬಲ್ ಇರುತ್ತದೆ. ವಿಳಾಸದ ಕೆಳಗಡೆ ನಿಮ್ಮ ಅಂಚೆ ಅವಧಿ ಮುಗಿಯುವ ತಿಂಗಳು ಮತ್ತು ವರ್ಷ ಇರುತ್ತದೆ. ಉದಾಹರಣೆಗೆ 10/99 ಎಂದಿದ್ದರೆ 99ನೇ ಇಸವಿ ಅಕ್ಟೋಬರ್ ತಿಂಗಳಿಗೆ ಚಂದಾ ಅವಧಿ ಮುಗಿಯುವುದೆಂದು ಅರ್ಥ. - ಸಂ]

ಕನ್ನಡದ ಹೆಜ್ಜೆ

-ರಾಘವೇಂದ್ರ ಡಿ. ಸಂಗನಗೌಡ್ರ, ರಾಮದುರ್ಗ.

ಇದು ಎಲ್ಲ ಕನ್ನಡಿಗರಿಗೆ ಸಂತೋಷದ ಸುದ್ದಿ. ಏಕೆಂದರೆ ಎಲ್ಲರೂ ಇಂಗ್ಲಿಷ್ ಕಲಿಯಲು ಶಕ್ಯರಲ್ಲ. ಅದರಲ್ಲಿ ಗಣಕಯಂತ್ರದಲ್ಲಿ ಕನ್ನಡ ಬರೆಯುವುದು ಸುಲಭದ ಮಾತಲ್ಲ. ಇದನ್ನು ಕನ್ನಡದವರೇ ಆದ ಮತ್ತು ನಮ್ಮ ರಾಜಧಾನಿಯಲ್ಲಿಯೇ ಹುಟ್ಟಿ ಬೆಳೆದು ಗಣಕಯಂತ್ರದಲ್ಲಿ ಕನ್ನಡ ಬರೆದ ಮಹಾಪುರುಷ ಎಂದೇ ಹೇಳುವ ಶೇಷಾದ್ರಿವಾಸು ಅವರಿಗೆ ಅಭಿನಂದನೆಗಳು. ಆದಷ್ಟು ಬೇಗ ಈ ಗಣಕಯಂತ್ರ ಎಲ್ಲ ಕನ್ನಡಿಗರಿಗೆ ಉಪಯೋಗವಾಗುವಂತೆ ಮತ್ತು ಬೇಗನೆ ಮಾರುಕಟ್ಟೆಗೆ ಬರುತ್ತದೆ ಎಂದು ಕಾಯುತ್ತಿರುವ ನಿಮ್ಮ ಅಭಿಮಾನಿ.

ಯಾವ ಯಾವ ಪತ್ರಿಕೆ?

-ಎ.ಜಿ. ಗಾಣಿಗೇರ್, ಪೋತ್ನಾಳ್.

ಇನ್ನೂ ಮೂರು ಹೊಸ ಪತ್ರಿಕೆಗಳನ್ನು ನೀವು ಓದುಗರಿಗೆ ನೀಡಲಿದ್ದೀರಿ ಎಂಬುದನ್ನು ಈ ಮುಂಚೆ ನಿಮ್ಮ ಸಂಚಿಕೆಯಲ್ಲಿ ತಿಳಿಸಿದ್ದೀರಿ. ಆದಕ್ಕಾಗಿ ನಮ್ಗೆ ಸಂತೋಷವಾಗಿದೆ. ಆದರೆ ಆ ಮೂರು ಪತ್ರಿಕೆಗಳು ಯಾವ ಯಾವ ವಿಷಯವನ್ನು ಕುರಿತು ಹೊರಬರಲಿವೆ ಎಂಬುವುದನ್ನು ದಯಮಾಡಿ ತಿಳಿಸುತ್ತೀರಾ? ಪತ್ರಿಕೆಯ ಶೀರ್ಷಿಕೆಯನ್ನು ಹೇಳದಿದ್ದರೂ ಪರ್ವಾಗಿಲ್ಲ.

ಸಂಪಾದಕೀಯ

-ಉದಯ್ ಪುತ್ತೂರ, ಉಡುಪಿ.

1999 ಫೆಬ್ರವರಿ ಸಂಚಿಕೆ ಓದಿದೆ. ರಾಜ್ಯದ ಪ್ರಸಕ್ತ ರಾಜಕೀಯ ವಿದ್ಯಮಾನಗಳನ್ನು ಬಹಳ ಮೌಲ್ಯಯುತವಾಗಿ, ಔಚಿತ್ಯಪೂರ್ಣವಾಗಿ ಸಂಪಾದಕೀಯದಲ್ಲಿ ವಿವೇಚಿಸಿದ್ದು ಭವಿಷ್ಯಕ್ಕೆ ಭಾಷ್ಯ ಬರೆದಂತಿತ್ತು. ಬದುಕಿನ ಪುಟಗಳು ವರ್ಣಮಯವಾಗಿದ್ದರೆ ಹೆಚ್ಚು ಆಕರ್ಷಕವೆನಿಸಿದೆ. ಅದೇನು ಅಂಥ ಗಂಭೀರ ಬೇಡಿಕೆ ಅಲ್ಲ. ಆದರೂ ಪುಟಗಳೆಲ್ಲವೂ ಸಮೃದ್ಧ ಮಾಹಿತಿ, ಜ್ಞಾನ, ವಸ್ತು ವೈವಿಧ್ಯಗಳಿಂದ ಕೂಡಿದೆ. ಕನ್ನಡ ನಾಡಿನ ಕನ್ನಡಿಗರೆಲ್ಲರ ಬದುಕಿನ ಅಂಗವಾಗಲಿ ಈ 'ಬದುಕು' ಎಂಬುದು ನನ್ನ ಹಾರೈಕೆ.

ಸಕಾಲಿಕ - ಮಾರ್ಮಿಕ

-ಲಕ್ಷ್ಮೀಕಾಂತ ಕೊಂಪಲ್, ಲಿಂಗಸೂಗೂರು.

ಫೆಬ್ರವರಿ 1999ರ 'ಬಿಸಿಲ ಬದುಕು' ಸಂಚಿಕೆಯಲ್ಲಿ ಪ್ರಕಟಗೊಂಡ 'ಮಾರುಕಟ್ಟೆ ಮುಗ್ಗಟ್ಟು, ಬದುಕಿನ ಬಿಕ್ಕಟ್ಟು' ಲೇಖನ ಸಕಾಲಿಕ ಹಾಗೂ ತುಂಬಾ ಮಾರ್ಮಿಕವಾಗಿದೆ.

ಖೇದವಾಯಿತು

-ಬಸವರಾಜ ಚ. ಕರಕರಡ್ಡಿ.

ಶ್ರೀಮತಿ ಶಾಂತಾ ನಾಗರಾಜ್ ಅವರ 'ಕಂಡೆಯಾ ಇದು ಇಂಡಿಯಾ!'ದಲ್ಲಿ ಮೂಡಿ ಬಂದ ಘಟನೆಗಳನ್ನು ಓದಿ ಮನಸ್ಸಿಗೆ ಖೇದವಾಯಿತು. ಇಂಥ ಹಗಲು ದರೋಡೆಯ ಮಾದರಿಯಲ್ಲಿ 'ಸುಲಿಗೆಯ ಸುಲಭದ ದಾರಿ'ಯನ್ನು ಕಂಡುಕೊಂಡವರೇ ಬಹಳ ಜನ. ಅದರಲ್ಲೂ ಶಿಕ್ಷಿತರಲ್ಲಿ ಇದು ಹೆಚ್ಚಾಗಿರುವುದು ಇನ್ನೂ ಆತಂಕಕಾರಿ ಎಂದು ತಿಳಿದು ನಿಜಕ್ಕೂ ನಾಚಿಕೆಯಾಯಿತು.

ಅಭಿನಂದನೆಗಳು

-ಎಚ್.ಎಂ. ಭಜಂತ್ರಿ, ತುಳಸಿಗೇರಿ.

ರಾಯಚೂರು ಜಿಲ್ಲೆ 5ನೇ ಕನ್ನಡ ಸಾಹಿತ್ಯ ಸಮ್ಮೇಳನ, ಲಿಂಗಸೂಗೂರ, ಇಲ್ಲಿ 'ಬಿಸಿಲ ಬದುಕು' ಮನೆ ಸಂಚಿಕೆ ಮಳಿಗೆಯಲ್ಲಿ ಚಂದಾದಾರನಾಗಿ ಮೊದಲ ಸಂಚಿಕೆ ಕೈ ಗೆತ್ತಿಕೊಂಡು ಓದಿದಾಗ ನಿಜವಾಗಿಯೂ ಹೃದಯ ತುಂಬಿ ಬಂತು. ಉತ್ತಮ ಬರವಣಿಗೆ, ಉತ್ತಮ ಆದರ್ಶಗಳನ್ನು ಓದುಗರ ಮುಂದೆ ಇಡುತ್ತಿರುವ ನಿಮ್ಮ ಪ್ರಯತ್ನ ಸುತ್ತ್ಯಾರ್ಹ, ಅಭಿನಂದನೆಗಳು.

ಹೃದಯದ ಮಾತು

-ಪ್ರವೀಣ ಕುಮಾರ ಕರಜಕಾಗರ, ಮೋರಟಗಿ.

ನಿಮ್ಮ ಆರೋಗ್ಯ ಅಂಕಣದಲ್ಲಿ ಮೂಡಿ ಬಂದ 'ಹೃದಯದ ಮಾತು' ಎಂಬ ಶೀರ್ಷಿಕೆ ತುಂಬಾ ಚೆನ್ನಾಗಿ ಮೂಡಿ ಬಂದಿದೆ.

ಅದರಲ್ಲಿ ಹೃದಯದ ಕಾರ್ಯದ ಬಗ್ಗೆ ವಿವರವಾಗಿ ತಿಳಿಸಿದ್ದಕ್ಕೆ ತುಂಬಾ ಧನ್ಯವಾದಗಳು. ಹಾಗೂ ಪ್ರತಿ ತಿಂಗಳ ಸಂಚಿಕೆಯಲ್ಲಿ ದೇಹದ ಒಂದೊಂದು ಭಾಗದ ವಿವರವನ್ನು ತಿಳಿಸಬೇಕು.

ಲೇಖನ ಚೆನ್ನಾಗಿತ್ತು

-ಗುರುರಾಜ್ ಬಿ.ಕನ್ನೂರ, ನಾಲತವಾಡ.

'ಬಿಸಿಲ ಬದುಕು' ಫೆಬ್ರವರಿ ತಿಂಗಳ ಸಂಚಿಕೆ ತುಂಬಾ ಉತ್ತಮವಾದ ಲೇಖನಗಳನ್ನು ಒಳಗೊಂಡಿತ್ತು. ಮುಖಪುಟದಲ್ಲಿ ಬರೀ ನೋಟುಗಳೇ ತುಂಬಿದ್ದವು! ಒಳಗಿನ ಒಂದೊಂದು ಲೇಖನಗಳು ಉತ್ತಮವಾಗಿದ್ದವು. ಸರಸವಾರ್ತೆಯಲ್ಲಿ ಇಬ್ಬರು ಸ್ತ್ರೀಯರ ನಗ್ನ ಫೋಟೋ ನೋಡಿ ನನಗೆ ಬಹಳ ಅಸಹ್ಯವೆನಿಸಿತು. ಇನ್ನು ಮುಂದೆ ಅಂತಹ ಚಿತ್ರಗಳನ್ನು ದಯಮಾಡಿ ಪ್ರಕಟಿಸಬೇಡಿ.

ಹೃದಯ ತೆರೆಸಿತು

-ಪಿ.ಎಚ್. ದಯಾನಂದ, ಹೊನ್ನಾವರ.

ಫೆಬ್ರವರಿ ತಿಂಗಳ 'ಬಿಸಿಲ ಬದುಕು'

ಟಪಾಲು

ಮಾಸಪತ್ರಿಕೆಯಲ್ಲಿ ಮೂಡಿ ಬಂದ 'ಆಪ್ತ ಸಮಾಲೋಚನೆ' ವಿಭಾಗವು ನನ್ನ ಮಿತ್ರನ ಹೃದಯವನ್ನು ತೆರೆಸಿತು. ಧನ್ಯವಾದಗಳು.

ನಾಳೆಗಾಗಿ ಉಳಿತಾಯ

-ಎಸ್. ರಾಜು ಮನಿಹಾಳ, ಸುರೇಬಾನ.

ಇದು ನಮ್ಮಂತಹ ಅನಾವಶ್ಯಕವಾಗಿ ಖರ್ಚು ಮಾಡುವ ಹುಡುಗರನ್ನು ಬಡಿದೆಬ್ಬಿಸಿದೆ. ಏಕೆಂದರೆ ಇವತ್ತಿನ ಉಳಿತಾಯ ವರ್ಷವಿಡೀ ಸಿಗುವ ಲಾಭ ಎಂಬುದನ್ನು ಮನದಟ್ಟು ಮಾಡಲಾಗಿದೆ.

ಬಿಟ್ಟ ಲೇಖನ

-ಆರೂರು ಲಕ್ಷ್ಮಣ್‌ಶೇಟ್, ಹುಬ್ಬಳ್ಳಿ.

'ಬಿಸಿಲ ಬದುಕು' ಫೆಬ್ರವರಿ ಸಂಚಿಕೆಯಲ್ಲಿ ಪ್ರೊ.ಎನ್. ವಜ್ರಕುಮಾರರ ಬಗೆಗಿನ ಲೇಖನ ಇರುವುದಾಗಿ ಸೂಚಿಸಿದ್ದೀರಿ. ಆದರೆ 62ನೇ ಪುಟದಲ್ಲಿ ನನ್ನ ಲೇಖನದ ಬದಲು ನಿಮ್ಮ ಪ್ರಕಟಣೆ ಇತ್ತು. ಇದು ಹೀಗೇಕಾಯಿತು?

[ಅನಿವಾರ್ಯ ಕಾರಣಗಳಿಂದ ಫೆಬ್ರವರಿ ಸಂಚಿಕೆಯಲ್ಲಿ ಪ್ರಕಟವಾಗದ ಈ ಲೇಖನ ಈ ಸಂಚಿಕೆಯಲ್ಲಿ ಬೆಳಕು ಕಂಡಿದೆ. ಅಚಾತುರ್ಯಕ್ಕೆ ವಿಷಾದಿಸುತ್ತೇವೆ. - ಸಂ]

ಡಲ್ ವ್ಯಾಪಾರ

-ಅಶ್ವಿನ್ ಪದವಿನಂಗಡಿ, ಮಂಗಳೂರು.

ಆಕರ್ಷಕ ಮುಖಪುಟದೊಂದಿಗೆ ಮೂಡಿ ಬಂದ ಫೆಬ್ರವರಿ 99ರ ಸಂಚಿಕೆಯ 'ಬಿಸಿಲ ಬದುಕು' ನಲ್ಲಿ ಮೂಡಿದ ಮುಖಪುಟ ಲೇಖನ 'ಎಲ್ಲೆಡೆ ವ್ಯಾಪಾರ ಡಲ್? ಕಾರಣವೇನು?' ಈಗಿನ ಪ್ರಸ್ತುತ ಮಾರುಕಟ್ಟೆಯ ನಿಜವಾದ ಸ್ಥಿತಿಗತಿಯನ್ನು ಮನಗಾಣಿಸಿದೆ. ಇಂತಹ ಉತ್ತಮವಾದ ಲೇಖನಗಳು ಮುಂದೆಯೂ ಮೂಡಿ ಬರಲಿ. ಲೇಖಕರಿಗೂ, ಪ್ರಕಟಿಸಿದ ನಿಮಗೂ ಅಭಿನಂದನೆಗಳು.

ವಯಸ್ಕರ ಅಂಕಣ ನಿಲ್ಲಿಸಿ

-ಆರ್. ರವಿಕುಮಾರ್, ಹಾಸನ.

ದಯವಿಟ್ಟು ನಿಮ್ಮ 'ವಯಸ್ಕರ ಸಂದೇಹ ಸಲಹೆ' ಅಂಕಣವನ್ನು ಮಹಿಳೆಯರ ದೈಹಿಕ ಹಾಗೂ ಪುರುಷರ ದೈಹಿಕ ಸಮಸ್ಯೆಗಳಿಗೆ ಮೀಸಲಿಡಿ. ಸೆಕ್ಸ್‌ಬುಕ್‌ನಂತಹ ಕಥೆ ಕೊಡಬೇಡಿ. ನಿಮಗೆ ಈ ರೀತಿ ಪ್ರಶ್ನೆ ಕೇಳುವ ಹೇಡಿಗಳು, ಅವಿವೇಕಿಗಳೂ, ಪೆದ್ದರೂ, ಅಯೋಗ್ಯರ ಬಗ್ಗೆ ಅನುಕಂಪವಿದ್ದರೆ ಅವರಿಗಾಗಿಯೇ ಒಂದು 'ವೈದ್ಯಕೀಯ ವಯಸ್ಕರಿಗಾಗಿ ಸಲಹೆ' ವಾರ ಅಥವಾ ಮಾಸಪತ್ರಿಕೆ ಪ್ರಾರಂಭಿಸಿ. ನಿಮ್ಮ ಪತ್ರಿಕೆ ಇನ್ನೂ ತುಂಬಾ ಸಂಸ್ಕರಣೆ ಹೊಂದಬೇಕು. ನಿಮ್ಮ ಪತ್ರಿಕೆ ಸುಧಾ, ತರಂಗ, India Today, ದಿಕ್ಸೂಚಿ, ಪ್ರಿಯಾಂಕ, ಲಂಕೇಶ್ ಪತ್ರಿಕೆಯಂತೆ ಒಂದು ನಿರ್ದಿಷ್ಟ ವಿಷಯಕ್ಕೆ ಒಳಪಟ್ಟಿರಲಿ. ಬಣ್ಣದ ಪುಟಗಳಿಂದ ಕೂಡಿ ವಾರಪತ್ರಿಕೆಯಾಗಿ ಹೊರಡಿಸಿ. ಆಗ ಒಂದು ಸ್ವರೂಪ ಬಂದು ನೀವು ಮೇಲೇಳುತ್ತೀರಿ. ನಿಮ್ಮ ನೇರ ಮಾರಾಟ ಯೋಜನೆ ಪರಿಣಾಮಕಾರಿಯಾಗಿದೆ. ಏಡ್ಸ್ ಬಗ್ಗೆ ಲೇಖನ ಚೆನ್ನಾಗಿದೆ. ನಿಮ್ಮ ಪತ್ರಿಕೆಯಲ್ಲಿ ವಿಷಯ ಕಡಿಮೆ ಇರುತ್ತದೆ. ಬೇಗ ಓದಿ ಮುಗಿಸಬಹುದು. ಆದ್ದರಿಂದ ವಿದ್ಯೆ ಉದ್ಯೋಗದಲ್ಲಿ, ಉದ್ಯೋಗವನ್ನಿಟ್ಟುಕೊಂಡು, ವಿದ್ಯೆಯನ್ನು ತೆಗೆದು ಹಾಕಿ. ಹಾಳೆಗಳನ್ನು ಅನಗತ್ಯವಾಗಿ ತುಂಬದೆ, ಮಾಹಿತಿ, ವಿದೇಶ ಸುದ್ದಿ, ತಂತ್ರಜ್ಞಾನ, ಕೃಷಿ, ಕಂಪ್ಯೂಟರ್, ಸಿನಿಮಾ, ಗ್ರಂಥ, ಕಥೆ ಕಾದಂಬರಿಗಳು ಇರಲಿ.

ನೆಚ್ಚಿನ ಪತ್ರಿಕೆ ಆದರೆ....

-ಸಾಗರ, ರಾಯಚೂರು.

ನಾನು 2 ತಿಂಗಳುಗಳಿಂದ ನಿಮ್ಮ ಪತ್ರಿಕೆಯ ಓದುಗಾರನಾಗಿದ್ದೇನೆ. ಉತ್ತಮ ಲೇಖನಗಳಿಂದ ಕೂಡಿದ್ದರಿಂದ ನನ್ನ ನೆಚ್ಚಿನ ಪತ್ರಿಕೆಯಾಗಿದೆ. ಆದರೆ 'ಸರಸವಾರ್ತೆ' ವಯಸ್ಕರ ಸಂದೇಹ ಸಲಹೆ ಹಾಗೂ ಆಪ್ತ ಸಮಾಲೇಚನೆ ಈ ವಿಭಾಗಗಳು ಪತ್ರಿಕೆಯ ಮೊಸರಿನಲ್ಲಿ ಕಲ್ಲಿದ್ದಂತೆ. ದಯವಿಟ್ಟು ಈ ವಿಭಾಗಗಳನ್ನು ನಿಷೇಧಗೊಳಿಸಿ. ಅದಕ್ಕಾಗಿ ಬೇರೆ ಪತ್ರಿಕೆಗಳು ಸಾಕಷ್ಟಿವೆ. ಮತ್ತೊಂದು ವಿಷಯವೆಂದರೆ ಅಂಗವಿಕಲರ ಬಗ್ಗೆ ಮಾಹಿತಿ, ಮಾರ್ಗದರ್ಶನ ನೀಡಿರಿ ಹಾಗೂ ಉದ್ಯೋಗದ ಮಾರ್ಗದರ್ಶನಗಳು ಅಪೂರ್ಣ ಬೇಡ.

ಕ್ವಿಜ್ ಹಿಂದುಗಡೆ ಜಾಹೀರಾತು

-ಟಿ. ಎಂ. ರುದ್ರಮುನಿ, ಅರಸೀಕೆರೆ.

ಫೆಬ್ರವರಿ ತಿಂಗಳ ಸಂಚಿಕೆ ಚೆನ್ನಾಗಿ ಮೂಡಿ ಬಂದಿದೆ. ದಯವಿಟ್ಟು ಕ್ವಿಜ್ ಹಿಂದುಗಡೆ ಜಾಹೀರಾತು ಬರುವ ರೀತಿ ಮುದ್ರಿಸಿ. ಉದಾಹರಣೆಗೆ ಫೆಬ್ರವರಿ ತಿಂಗಳ ಪೇಜ್ 33ರ ಜಾಹೀರಾತು ಪೇಜ್ 32ರಲ್ಲಿ ಬಂದಿದ್ದರೆ ಸಂವೇದನೆ ಲೇಖನವನ್ನು ಕತ್ತರಿಸುವ ಪ್ರಮೇಯ ಬರುತ್ತಿರಲಿಲ್ಲ.

ಬಂದ ದಿನವೇ ಖಾಲಿ

-ಶ್ರೀಶೈಲ, ಘುದ್ದೇಬಿಹಾಳ.

'ಬಿಸಿಲ ಬದುಕು' ಮಾಸಪತ್ರಿಕೆ ತುಂಬಾ ಚೆನ್ನಾಗಿ ಮೂಡಿ ಬರುತ್ತಿದೆ. ಇತ್ತೀಚೆಗಂತೂ ಅದರ ಜನಪ್ರಿಯತೆ ದುಪ್ಪಟ್ಟಾಗಿದೆ. ನಮ್ಮ ಊರಿಗೆ ಬರುವ ಎಲ್ಲಾ ಪತ್ರಿಕೆಗಳೂ ಬಂದ ದಿನದಲ್ಲೇ ಖಾಲಿ ಆಗಿ ಬಿಡುತ್ತವೆ. ಮರುದಿವಸ ಹೋದ ನನಗೆ ಪತ್ರಿಕೆ ಸಿಗದೆ ನಿರಾಶೆಯಾದ ಘಟನೆಗಳು ಅನೇಕ. ಆದ್ದರಿಂದ ತಾವು ನಮ್ಮಲ್ಲಿಗೆ ಹೆಚ್ಚಿನ ಪತ್ರಿಕೆಗಳನ್ನು ಕಳಹಿಸಿ ಕೊಡಿ. ತಮ್ಮ -ನಮ್ಮ ಈ 'ಬಿಸಿಲ ಬದುಕು' ಪತ್ರಿಕೆಯು ಹೀಗೆ ನಿರಂತರ ಅಭಿವೃದ್ಧಿ ಹೊಂದಲಿ.

ಅರ್ಥ - ಅಪಾರ್ಥ

1979ರಲ್ಲಿ ಆಟಗಾರನಾಗಿ **ಭಾರ** ಪ್ರವಾಸ ಮಾಡಿದ್ದ ಜಾವೇದ್ ಮಿಯಾಂದಾದ್ 1983 ಮತ್ತು 1987ರಲ್ಲೂ ಪ್ರವಾಸ ಮಾಡಿದ್ದು ಅವರೀಗ ತರಬೇತಿದಾರರಾಗಿ ತಂಡದಲ್ಲಿದ್ದು.....
[**ಸಂಯುಕ್ತ ಕರ್ನಾಟಕ**, 22. 1. 99] **-ಬಾವಾಸಾಬ ವಂಟಿ**, ಹುನಗುಂದ.

ನಿಮ್ಮ ಪ್ರವೇಶ ಪತ್ರಗಳು ನಮಗೆ ತಲುಪಲು ಅಂತಿಮ ದಿನಾಂಕ **30. 2. 1999.**
[**ಬಿಸಿಲ ಬದುಕು**, ಫೆಬ್ರವರಿ 1999] **- ಡಿ. ಜಬಿವುಲ್ಲಾ**, ಹರಪನಹಳ್ಳಿ.

....ಭಾರತೀಯ ಜನತಾ **ಪಾಟಿ**ಯಿಂದ ನಿಯೋಗ ಹೊರಟು ಸರಕಾರದ ಮೇಲೆ ಒತ್ತಾಯ ತರಲಾಗುವುದು.
[**ಪ್ರಜಾವಾಣಿ**, 21. 11. 98] **-ಬಸವರಾಜ ಗೊಂಧಳೆ**, ನಾಲತವಾಡ.

ಜನರಿಗಾಗಿ ನಮ್ಮ ಅಧಿಕಾರ ಅವಧಿಯಲ್ಲಿ ಸಾಕಷ್ಟು ಕೆಲಸ ಮಾಡಿದ್ದೇವೆ. ಆದರೆ ನಾವು **ಮಡಿದ** ಕೆಲಸವನ್ನು ಜನರಿಗೆ ತಿಳಿಸಿಕೊಡುವಲ್ಲಿ ಹಿಂದೆ ಬಿದ್ದಿದ್ದೇವೆ.
[**ಕನ್ನಡ ಪ್ರಭ**, 15. 1. 99] **-ಜಿ. ಜಿ. ಶೆಟ್ಟಿ**, ಬೆಂಗಳೂರು.



ಅಂಜನಾ ಮಿಶ್ರಾ
ರೇಪ್ ಕಥೆ

ಅಂಜನಾ ಮಿಶ್ರಾ ಸ್ವತಃ ಹೇಳಿಕೊಂಡ

ಕರುಣಾಜನಕ ಕಥೆ!

ಪತಿಯಿಂದ ಪರಿತ್ಯಕ್ತಳಾದ, ತಂದೆತಾಯಿಯರಿಂದ ತಿರಸ್ಕರಿಸಲ್ಪಟ್ಟ ಮತ್ತು ಕ್ರೂರವಾಗಿ ಅತ್ಯಾಚಾರಕ್ಕೊಳಪಟ್ಟ ಅಂಜನಾಮಿಶ್ರಾಳ ಜೀವನವು ಹಲವಾರು ದುರಂತಗಳಿಂದ ಕೂಡಿದೆ. ಇದು ಓರಿಸ್ಸಾ ಮುಖ್ಯಮಂತ್ರಿ ಜೆ. ಬಿ. ಪಟ್ನಾಯಕ್‌ರನ್ನು ಪದಚ್ಯುತಗೊಳಿಸುವ ಹಂತವನ್ನು ತಲುಪಿತು. ಇಡೀ ವ್ಯವಸ್ಥೆಯ ವಿರುದ್ಧ ಏಕಾಂಗಿ ಮಹಿಳೆ ಹೋರಾಟ ನಡೆಸಿದ ಕಥೆ ಇದಾಗಿದೆ.

ಮಾರ್ಚ್ 8 ರಂದು ವಿಶ್ವ ಮಹಿಳಾ ದಿನ ಆಚರಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ಅಂಜನಾ ಮಿಶ್ರಾರ ಯಾತನೆ, ಹೋರಾಟ ಸಮಾಜದ ಕಣ್ಣು ತೆರೆಸಲೆಂದು ಆಶಿಸುತ್ತೇವೆ.

ನಿರೂಪಣೆ: **ವಸುಂಧರಾ ಭೂಪತಿ**

ನನ್ನ ಪ್ರಯತ್ನವನ್ನು ಯಾವುದೇ ಕಾರಣಕ್ಕೂ ಬಿಡುವುದಿಲ್ಲ. ದಿನಕಳೆದಂತೆ ನನ್ನಲ್ಲಿ ಈ ಹೋರಾಟದ ಕೊನೆಯ ಹಂತ ತಲುಪುವ ಸಂಕಲ್ಪ ಶಕ್ತಿ ಹೆಚ್ಚಾಗುತ್ತಿದೆ. ನನ್ನ ಇಚ್ಛಾಶಕ್ತಿಯು ಬಲವಾಗಿ ಗಟ್ಟಿಗೊಳ್ಳುತ್ತಿದೆ. ನನ್ನ ಇಚ್ಛಾಶಕ್ತಿಯಿಂದ ಮಹಿಳೆಯರು ಮೊದಲು ಮನುಷ್ಯರು ನಂತರ ಮಹಿಳೆಯರು ಮತ್ತು ಮಹಿಳೆಯರನ್ನು ಮನುಷ್ಯತ್ವ ನಡೆಸಿಕೊಳ್ಳಬೇಕು ಎಂಬುದನ್ನು ಸಿದ್ಧಪಡಿಸಿ ತೋರಿಸುತ್ತೇನೆ. ನನಗೆ ಶಕ್ತಿ ಎಲ್ಲಿಂದ ಬರಬೇಕು? ದೇವರಿಂದ ಮತ್ತು ನನ್ನ ಪರವಾಗಿರುವ ಸತ್ಯದಿಂದ ಸತ್ಯವೇ ನನಗೆ ಶಕ್ತಿ. 'ಸತ್ಯಮೇವ ಜಯತೆ'.

ಒರಿಸ್ಸಾದ ಅತ್ಯಂತ ಪ್ರತಿಷ್ಠಿತರೆಂದು ಕರೆಸಿಕೊಳ್ಳುವ ಮನೆತನದಲ್ಲಿ 11 ಮೇ 1969ರಲ್ಲಿ ಜನ್ಮಿಸಿದೆ. ನನ್ನ ಬಾಲ್ಯ ಸುಖವಾಗಿ, ಸಕಲ ಭಾಗ್ಯಗಳಿಂದ ಕೂಡಿತ್ತು. ಕಾನ್ವೆಂಟ್ ಶಿಕ್ಷಣದ ಹಿನ್ನೆಲೆಯು ನನ್ನ ಬೆನ್ನಿಗಿತ್ತು. ನಾನು ದುಂಡಗೆ, ಮುದ್ದು ಮುದ್ದಾಗಿದ್ದೆ. ಶಾಲೆಯ ದಿನಗಳಲ್ಲಿ ಅತ್ಯಂತ ಸಂತಸದಲ್ಲಿ ತೇಲಾಡಿದ್ದೆ. ಮನೆಯಲ್ಲಿ ಒಂದು ರೀತಿಯ ಶಿಸ್ತಿನ ವಾತಾವರಣವಿದ್ದರೂ ಯಾರೂ ಯಾವುದನ್ನು ಇಲ್ಲವೆನ್ನುತ್ತಿರಲಿಲ್ಲ. ನಾನು ಬಯಸಿದ್ದೆಲ್ಲ ದೊರಕುತ್ತಿತ್ತು. ನನ್ನ ಸಂಬಂಧಿಗಳು (ರಕ್ತ) ಅಸಾಧಾರಣ ಬುದ್ಧಿಶಕ್ತಿಯುಳ್ಳ ಪ್ರತಿಭಾಶಾಲಿಗಳಾಗಿದ್ದರಲ್ಲದೇ ಸಾಹಸಿಗಳೂ ಆಗಿದ್ದರು. ನಾನು ಜೀವನವನ್ನು ಹೇಗೆ ಬರುತ್ತದೋ ಹಾಗೆ ಸ್ವೀಕರಿಸುವ ಪ್ರವೃತ್ತಿಯುಳ್ಳವಳು. ಕುಟುಂಬದ ನಾಲ್ಕು ಮಕ್ಕಳಲ್ಲಿ ನಾನು ಮೂರನೆಯವಳಾಗಿ, ಇಬ್ಬರು ಅಣ್ಣ ತಮ್ಮಂದಿರ ನಡುವೆ ಅಕ್ಕನ ಒಡನಾಟದಲ್ಲಿ ಬೆಳೆದೆ. ನಾನು ಶಾಲೆಯಲ್ಲಿ ಓದಿನ ಜೊತೆಗೆ ಇನ್ನಿತರ ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ಹೆಚ್ಚಾಗಿ ಭಾಗವಹಿಸಲು ಇಚ್ಛಿಸುತ್ತಿದ್ದೆ. ಮಾರ್ಚ್ 1984ರಲ್ಲಿ ICSE ಪರೀಕ್ಷೆ ಪಾಸು ಮಾಡಿದೆ. ನನ್ನ ಮೆಚ್ಚಿನ ವಿಷಯ ಇಂಗ್ಲಿಷ್ ಸಾಹಿತ್ಯ ಆಗಿದ್ದು ಗಣಿತವನ್ನು ದ್ವೇಷಿಸುತ್ತಿದ್ದೆ.

ನನಗೆ ತಂದೆಯೊಡನೆ ವಿಶೇಷ ಆತ್ಮೀಯ ಒಡನಾಟವಿತ್ತು. ಅಕ್ಕ ನನ್ನ ಅತ್ಯುತ್ತಮ ಗೆಳತಿಯಾಗಿದ್ದು ಅವಳ ಬಳಿ ನಾನು ಮನಸ್ಸು ಬಿಚ್ಚಿ ಎಲ್ಲವನ್ನು ಹೇಳಿಕೊಳ್ಳುತ್ತಿದ್ದೆ. ಈಗ ಅವರೆಲ್ಲ ಎಲ್ಲಿ? ಮತ್ತು ಯಾಕೆ ದೂರವಾಗಿದ್ದಾರೆ?

ನಾನು ಪಿ.ಯು.ಸಿ. (ವಿಜ್ಞಾನ) ಎರಡನೆ ವರ್ಷದಲ್ಲಿದ್ದಾಗ ನನ್ನಕ್ಕ ಎಲೆಕ್ಟ್ರಾನಿಕ್ಸ್ ಎಂಜಿನಿಯರ್ ಆಗಿದ್ದಳು. ನಮ್ಮ ತಂದೆ ತಾಯಿ ಹಾಗೂ ಬಂಧುಗಳ ಇಚ್ಛೆಗೆ ವಿರುದ್ಧವಾಗಿ ಬೇರೆ ಜಾತಿಯ ಹುಡುಗನನ್ನು ರಿಜಿಸ್ಟರ್ಡ್ ಮದುವೆಯಾದಳು. ಈ ಹಗರಣವು ಭುವನೇಶ್ವರದಲ್ಲಿ ಅಭೂತಪೂರ್ವ ಆಯಾಮವನ್ನು ಸೃಷ್ಟಿಸಿತ್ತು. ಇದಕ್ಕೆ ನಿಜವಾಗಲೂ ನಾನು ಬಲಿಪಶುವಾದೆ. ನನ್ನ ಅಕ್ಕನ ಮದುವೆ ಮತ್ತೆ ಪುನರಾವೃತ್ತಿಯಾಗುವುದರಲ್ಲಿ ಅಂದರೆ, ಭವಿಷ್ಯದಲ್ಲಿ ಅಂತಹ ಕ್ರಾಂತಿಕಾರಿ ಕಾರ್ಯ ನನ್ನಿಂದ ನಡೆಯಬಾರದು ಹಾಗೂ ನನ್ನಕ್ಕನ ಮದುವೆಯಿಂದಾಗಿ ತಮ್ಮ ಕಳೆದುಹೋದ ಘನತೆ ಮರಳಿ ಪಡೆದುಕೊಳ್ಳುವುದಕ್ಕಾಗಿ ನನ್ನ ತಂದೆ ತಾಯಿಯರು ತಕ್ಷಣವೇ ನನ್ನ ಮದುವೆ ಮಾಡಿಬಿಡಬೇಕೆಂದು ನಿರ್ಧರಿಸಿದರು.

ನನ್ನ ತಂದೆತಾಯಿಯರು ಇಂತಹ ಅಳಿಯನನ್ನು ಪಡೆಯಲು ಅದೃಷ್ಟವಂತರಾಗಿದ್ದರು. ಸುಭಾಷ್ ಒಬ್ಬ ಒರಿಯಾ ಬ್ರಾಹ್ಮಣ, ಐ.ಎಫ್.ಎಸ್ ಅಧಿಕಾರಿಯಾಗಿದ್ದ, ರೂಪವಂತನೂ ಹೌದು. ವರದಕ್ಷಿಣೆ, ವಯಸ್ಸಿನ ಅಂತರ ಸಾಂಪ್ರದಾಯಿಕ ವ್ಯತ್ಯಾಸಗಳಿದ್ದರೂ ಅವುಗಳನ್ನು ಗಮನಿಸಲಿಲ್ಲ. ಅದೊಂದು ರಾಜಮನೆತನದವರ ಮದುವೆಯಂತೆಯೇ ನಡೆಯಿತು.

ನನ್ನ ದಾಂಪತ್ಯ ಜೀವನ ಕಹಿ ಪ್ರಸಂಗದಿಂದಲೇ ಆರಂಭವಾಯಿತು. ವರದಕ್ಷಿಣೆಯ ಬೇಡಿಕೆ ಮತ್ತು ಲೈಂಗಿಕ ಕಿರುಕುಳ ಸುಭಾಷನಿಂದ ದಾಂಪತ್ಯ ಜೀವನದ ಪ್ರಥಮರಾತ್ರಿಯೇ ಶುರುವಾಯಿತು. ನನ್ನ ಸಂಪೂರ್ಣ ದಾಂಪತ್ಯ ಜೀವನದ ಕೊನೆಯಿಲ್ಲದ ದುರಂತಗಳು, ನೋವಿನ ಸರಮಾಲೆಯಿಂದ ಕೂಡಿದುದಾಗಿದೆ. ಕೆಲವೇ ಕೆಲವು ಮೃದು ಮಧುರ ಕ್ಷಣಗಳನ್ನು ಬಿಟ್ಟರೆ ಉಳಿದಿದ್ದೆಲ್ಲ ಬರೀ

ಆತಂಕ, ಭಯದಿಂದಲೇ ತುಂಬಿತ್ತು. ನಾನು ನಿಜವಾಗಿಯೂ ಯಾವತ್ತೂ ಹೃದಯತುಂಬಿ ಆನಂದವನ್ನು ಅನುಭವಿಸಲಿಲ್ಲ. ನನ್ನ ಬದುಕಿನ ಮುನ್ನುಡಿಯೇ ಸರಿಯಿರಲಿಲ್ಲ. ಬಿರುಗಾಳಿಯ ಮಧ್ಯೆಯೇ ಬದುಕಿ ಶಾಂತಸ್ಥಿತಿ ಅನುಭವಿಸ ಬೇಕಾಗಿತ್ತು.

ಪ್ರೀತಿ, ಪ್ರೇಮದ ಬಗೆಗಿನ ಸುಂದರವಾದ, ನವಿರಾದ ಭಾವನೆಗಳು ನನ್ನ ಮದುವೆಯ ಎರಡು ದಿನಗಳ ಬಳಿಕ ನನ್ನ ಪತಿ ಅವನತ್ತಿಗೆ ರಾಜಲಕ್ಷ್ಮಿಯ ತೋಳುಗಳಲ್ಲಿದ್ದುದ್ದನ್ನು ಕಂಡ ಕೂಡಲೇ ನುಚ್ಚು ನೂರಾದವು. ನಾನು ಅದನ್ನು ಪ್ರತ್ಯಕ್ಷ ಕಂಡಿದ್ದಕ್ಕೆ ತೆತ್ತ ಬೆಲೆ ಸುಭಾಷನ ಬೂಟು ಕಾಲಿನ ರಭಸದ ಒದೆತ. ಹೊರಬರಲು ಅಸಾಧ್ಯವಾದಂತಹ ಮದುವೆಯೆಂಬ ವ್ಯವಸ್ಥೆಯಲ್ಲಿ ನಾನು ಬಂಧಿತ ಳಾಗಿದ್ದೆ. ನನ್ನ ಮನಸ್ಸೆಂಬ ಮಂಜಿನಲ್ಲಿ ಮರೆಯಾಗಿ ಹೋಗಿದ್ದ ಭಾವನೆಗಳನ್ನು ಮತ್ತೆ ಗರಿಗೆದರಿಸಿದ್ದು ನಿಶೀತನ ಹುಟ್ಟು. ನಾನು ಮರೆತ ಸಾವಿರ ಹಾಡುಗಳಲ್ಲಿನ ಸಾಲುಗಳನ್ನು ನೆನಪಿಸಿ ಕೊಂಡು ಚೂರುಚೂರಾಗಿದ್ದ ಕನಸುಗಳನ್ನು ಮತ್ತೆ ಒಟ್ಟು ಸೇರಿಸಿ ಸಂತಸದಿಂದ ಹೊಸ ಜೀವನವನ್ನು ಪ್ರಾರಂಭಿಸಬೇಕೆಂದು ಯೋಚಿಸಿದೆ.

ತಾಯಿಯ ಕನಸುಗಳನ್ನು ನನಸು ಮಾಡುವ ವನಂತೆ 18. 3. 89ರಲ್ಲಿ ನನ್ನ ಜೀವನದಲ್ಲಿ ನಿಶೀತ ಆಗಮಿಸಿದ. ನಾನು ಹೆರಿಗೆ ನೋವಿನಿಂದ ಒದ್ದಾ ಡುತ್ತಿರುವಾಗ ಹೊರಗೆ ಸುಭಾಷ ಕಣ್ಣೀರು ಹಾಕುತ್ತಿದ್ದನೆಂದು ನನ್ನ ಕುಟುಂಬದವರು ನಂತರ ತಿಳಿಸಿದಾಗ ಮನಸ್ಸು ಮೂಕವಾಗಿತ್ತು. ಅವನಿಗೂ ಭಾವನೆಗಳಿವೆ ಎಂದರಿವಾಗಿತ್ತು.

ಆದರೆ ಅವನು ನನ್ನನ್ನು 'ಮಾನಸಿಕ ಅಸ್ವಸ್ಥಳು' (ಹುಚ್ಚಿ) ಎಂದು ಪ್ರಾಮಾಣೀಕರಿಸಲು ಪ್ರಯತ್ನಿಸಿದ್ದು ಒಂದು ದುರಂತ. ಸುಭಾಷ ಮತ್ತು ರಾಜಲಕ್ಷ್ಮಿಯಿಂದ ವರದಕ್ಷಿಣೆಗಾಗಿ ದೈಹಿಕ ಕಿರು ಕುಳಕ್ಕೊಳಪಟ್ಟಿದ್ದಲ್ಲದೆ ನನಗೆ ಅನೇಕ ವಿಧದ ಔಷಧಿಗಳು, ಚುಚ್ಚುಮದ್ದುಗಳನ್ನು ಕೊಡಿಸಿದರು. ಮತ್ತು ಬಂದ ಹೊತ್ತಿನಲ್ಲಿ ಅವರು ಆತ್ಮಹತ್ಯೆಯ ವಿಚಾರ ತುಂಬಿದರು.

ಜೀವನವು ದುರಂತದಿಂದ ಕೂಡಿದ್ದುದರಿಂದ ನಾನು ನನ್ನ ಹೋರಾಟವನ್ನು ಶಾಂತವಾಗಿ, ಗಟ್ಟಿಗೊಂಡ ನಿರ್ಧಾರದಿಂದ ನಡೆಸಿದ್ದೆ. ಸುಭಾಷನಿಗೆ ಅವನತ್ತಿಗೆ ಜೊತೆಗಿದ್ದ ಅಕ್ರಮ ಸಂಬಂಧ ನನ್ನನ್ನು ಆಳವಾದ ನೋವಿಗೆ ಈಡು ಮಾಡಿತ್ತು. ಇಂತಹ ಅಕ್ರಮ ಸಂಬಂಧ ಇನ್ನಷ್ಟು ಕುರೂಪ ತಾಳಿದ್ದು ನಮ್ಮತ್ತೆ ಮಾವ, ರಾಜಲಕ್ಷ್ಮಿ, ಸುಭಾಷರು ಸಮಾಜದ ಎಲ್ಲ ಕಟ್ಟುಪಾಡುಗಳನ್ನು ಮೀರಿ ಇಂತಹ ಸಂಬಂಧದಿಂದ ಮಗುವನ್ನು ಪಡೆಯಬೇಕೆಂದು ಇಚ್ಛಿಸುವರೆಂದು ಅರಿವಾದಾಗ ನಾನು ಬಲವಾದ ಆಘಾತಕ್ಕೊಳಗಾದೆ. ರಾಜಲಕ್ಷ್ಮಿಯು ಎಲ್ಲದುಷ್ಟ ಪ್ರವೃತ್ತಿಗಳ ಕೂಟ. ಅಂತಹದಕ್ಕೆ ಅವನ ಇಂದ್ರಿಯಗಳೆಲ್ಲ ಸಂಪೂರ್ಣ ವಾಗಿ ವಶವಾಗಿವೆ. ಅಗ್ನಿಗೆ ತುಪ್ಪ ಸುರಿದಂತೆ ರಾಜಲಕ್ಷ್ಮಿ ಅವನ ಕುಡಿತ, ಸಿಗರೇಟು, ಎಲೆಯಡಿಕೆ ಜಿಗಿಯುವುದು, ಜರ್ದಾ ಹಾಕುವುದು ಮುಂತಾದ ದುಶ್ಚಟಗಳಿಗೆ ಪ್ರೋತ್ಸಾಹ ನೀಡುತ್ತಿದ್ದಳು.

ನಾನು ಛಲದಿಂದ ಹೋರಾಡುತ್ತಲೇ ಇದ್ದೆ. ಅದಕ್ಕಾಗಿ ನಾನು ಅಮೂಲ್ಯ ಬೆಲೆಯನ್ನು ತೆರಬೇಕಾಗುತ್ತದೆಂದು ತಿಳಿದಿರಲಿಲ್ಲ. ನಾನು ಬೆಳೆದ ಸಾಂಪ್ರದಾಯಿಕ ವಾತಾವರಣ ನನಗೆ ತಿಳಿಸಿದ್ದೇನೆಂದರೆ ದಾಂಪತ್ಯದಲ್ಲಿ 'ಪ್ರೇಮ ಮತ್ತು ಕ್ಷಮೆ' ಎರಡೂ ಇರುತ್ತದೆ. ಹೇಗೆಂದರೆ ಪ್ರೀತಿಸಲ್ಪಟ್ಟವರು ಮಾತ್ರ ಕ್ಷಮೆಗೆ ಅರ್ಹರು.

ಸುಭಾಷನ ಭಾರದ ಬೇಡಿಕೆಗಳಲ್ಲಿ ನಾಜೂಕಿನವಳಾದ ನಾನು ಕುಸಿಯುತ್ತಿರುವಾಗ ದೀರ್ಘವಾದ ಕತೆಯನ್ನು ಸುಲಭವಾಗಿ ಮೊಟುಕು ಗೊಳಿಸಲು ಪ್ರಯತ್ನಿಸಿದ. ಡೈವೋರ್ಸ್ ನೀಡಬೇಕೆಂದು ಯೋಚಿಸಿ, ಅದಕ್ಕಾಗಿ ಸುಲಭದ ಹಾಗೂ ತಕ್ಷಣದ ಸೂತ್ರ, ಮಾನಸಿಕ ಅಸ್ವಸ್ಥತೆಯ ದಾರಿಯನ್ನು ಹುಡುಕಿದ.

ನನಗೆ ಜಯದ ಕ್ಷಣ ದೊರೆತಿದ್ದು 1991ರಲ್ಲಿ




ಅಂಜನಾ ಮಿಶ್ರಾ ರೇಪ್ ಕಥೆ

ಬೆರಹಾಂಪುರ ವಿಶ್ವವಿದ್ಯಾಲಯದ ಆನರ್ಸ್ ಡಿಗ್ರಿ ಇಂಗ್ಲಿಷ್ ಸಾಹಿತ್ಯದಲ್ಲಿ ಕಾಲೇಜಿಗೆ ಹೋಗದೇ ದೊರಕಿಸಿಕೊಂಡಿದ್ದು. ಆದರೆ ರಾಜಲಕ್ಷ್ಮಿ ತನ್ನೆಲ್ಲ ಲಗ್ಗೇಜಿನೊಡನೆ 1994ರಲ್ಲಿ ಸಂಭಾಲಪುರದಲ್ಲಿನ ಸುಭಾಷನ ಅಧಿಕೃತ ನಿವಾಸಕ್ಕೆ ಆಗಮಿಸಿದಾಗ ನನ್ನ ಜೀವನವು ದುರಂತದ ತಿರುವು ತೆಗೆದುಕೊಂಡಿತು. ಆಗ ನಾನು ಎರಡನೆಯ ಮಗುವಿನ ಗರ್ಭಿಣಿ ಯಾಗಿದ್ದೆ. ತುಂಬು ಗರ್ಭಿಣಿ ಬೇರೆ. ಗರ್ಭವು ಆಕಸ್ಮಿಕವಾಗಿ ಸಂಭವಿಸಿತ್ತಲ್ಲದೇ ನಾನು ಗರ್ಭ ಪಾತಕ್ಕೆ ವಿರೋಧಿಯಾಗಿದ್ದುದರಿಂದ ಅದನ್ನು ಹೊರಹಾಕಲು ಇಷ್ಟಪಡಲಿಲ್ಲ. ಅಲ್ಲದೇ ನಿಶೀತನಿಗೂ ಆಟವಾಡಲು ಒಳ್ಳೆಯ ಸಂಗಾತಿ ದೊರೆಯುತ್ತಾನೆಂದು ಆಶಿಸಿದೆ. ಎಲ್ಲ ದುಃಖ ವನ್ನು ಮೌನವಾಗಿ, ಹತಾಶಳಾಗಿ ಅನುಭವಿಸುತ್ತಿದ್ದೆ.

ನನ್ನ ಆನಂದದ ಬುಗ್ಗೆ, ಎರಡನೆಯ ಮಗ ನಿಹಿತ್ 9 ಜೂನ್ 1994ರಂದು ಜನಿಸಿದ. ನನ್ನ ಬದುಕಿನಲ್ಲಿ ಮತ್ತೆ ಸಂತಸದ ಅಳಲನ್ನು ತಂದ. ಅಕ್ಟೋಬರ್ 94ರಲ್ಲಿ ನನ್ನ ಅತ್ತೆ ತೀರಿಹೋದ ನಂತರ ಸುಭಾಷ್ ಇನ್ನಷ್ಟು ಕ್ರೂರಿಯಾದ. 1995 ಏಪ್ರಿಲ್ 4ರಂದು ಸುಭಾಷ್ ನನ್ನನ್ನು ರೂರ್ಕೆಲಾದಲ್ಲಿನ ಪ್ರಶಾಂತಿ ಎಂಬ ಮಾನಸಿಕ ರೋಗಿಗಳ ನರ್ಸಿಂಗ್ ಹೋಂಗೆ ಸೇರಿಸಿದ್ದ. ನಾನು ಎಲ್ಲ ರೀತಿಯಿಂದ ಸ್ವಸ್ಥಳಾಗಿದ್ದರೂ ನನ್ನ ಗಂಡ ಮತ್ತು ಅತ್ತೆ ಮನೆಯವರು ನಾನು ಮಾನಸಿಕ ಅಸ್ವಸ್ಥಳು ಎಂದು ಸಾಬೀತು ಪಡಿಸಲು ಏನೆಲ್ಲ ನಾಟಕವಾಡಿದರು. ಏಪ್ರಿಲ್ 6 ರಂದು ಆಸ್ಪತ್ರೆಯಿಂದ ಮನೆಗೆ ಬಂದೆ. ನಂತರ ಏಪ್ರಿಲ್ 10 ರವರೆಗೆ ನನಗೆ ನಿದ್ರಾಜನಕ ಹಾಗೂ ಮತ್ತು ಬರಿಸುವ ಔಷಧಿಗಳನ್ನು ನೀಡಲಾಗುತ್ತಿತ್ತು. ಅದರಿಂದಾಗಿ ನನ್ನಲ್ಲಿ ಭೀತಿ ಹಾಗು ಭ್ರಾಂತಿ ಉಂಟಾದುದರಿಂದ ಮತ್ತೆ ಅದೇ ನರ್ಸಿಂಗ್

ಅಂಜನಾ ಮಿಶ್ರಾ ರೇಪ್ ಕೇಸ್‌ನಲ್ಲಿ ಅಧಿಕಾರಕ್ಕೆ ಎರವಾದ ಒರಿಸ್ಸಾ ಮುಖ್ಯಮಂತ್ರಿ ಜೆ.ಬಿ.ಪಟ್ನಾಯಕ್





ಅಂಜನಾ ಮಿಶ್ರಾ ರೇಪ್ ಕಥೆ

ಹೋಂಗೆ ಸೇರಿಸಲಾಯಿತು. ವೈದ್ಯರ ಕೈ ಬೆಚ್ಚಗೆ ಮಾಡಿದ್ದರಿಂದ ನನ್ನ ಅತ್ತೆ ಮನೆಯವರು ಹೇಳಿದಂತೆ ಅವರು ಕೇಳುತ್ತಿದ್ದರು.

ನನ್ನ ನೋವು ಮತ್ತು ಅಸಹಾಯಕತೆಯನ್ನು ಯಾರಾದರೂ ಊಹಿಸಲು ಸಾಧ್ಯವೆ? ಸ್ವಸ್ಥಳನ್ನು ಮಾನಸಿಕ ಅಸ್ವಸ್ಥಳೆಂದು ಸಾಬೀತು ಪಡಿಸಲು ನನಗೆ ಆರು ಬಾರಿ ವಿದ್ಯುತ್ ಶಾಕ್ ಚಿಕಿತ್ಸೆ ನೀಡಲಾಯಿತು. ಶಾಕ್ ಚಿಕಿತ್ಸೆಯ ನಂತರ ನನ್ನ ಜ್ಞಾಪಕಶಕ್ತಿ ನಶಿಸಿ ಹೋಗಿತ್ತು. ನಾನು ಯಾರೆಂಬುದೇ ಮರೆತುಹೋಗಿತ್ತು. ಹೃದಯ ಒಡೆದು ಚೂರಾಗಿತ್ತು. ನಡುಗುತ್ತಿದ್ದೆ. ನನ್ನ ಮೇಲೆ ಆತ್ಮೀಯತೆ ಬೆಳೆಸಿಕೊಂಡಿದ್ದ ಆಸ್ಪತ್ರೆಯ ನರ್ಸೊಬ್ಬಳು ನನ್ನ ತವರು ಮನಗೆ ಅನಾಮಧೇಯ ಕರೆ ಮಾಡಿ ವಿಷಯವನ್ನೆಲ್ಲ ತಿಳಿಸಿದ್ದರಿಂದ ನನ್ನ ತಂದೆ ತಾಯಿಯರು ಓಡೋಡಿ ಬಂದರು.

ಮಕ್ಕಳನ್ನು ತನ್ನೊಡನೆ ಬಿಟ್ಟು ತವರು ಮನೆಗೆ ಹೋಗುವಂತೆ ಸುಭಾಷ ತಿಳಿಸಿದ. ನಂತರ ಅವರನ್ನು ಕಳಿಸುವುದಾಗಿ ಪ್ರಮಾಣ ಮಾಡಿದ. ಹತ್ತು ತಿಂಗಳ ಕಾಲ ನಾನು ಸಹನೆಯಿಂದ ಕಾದೆ. ನನಗೆ ಮಕ್ಕಳೊಡನೆ ದೂರವಾಣಿ ಮೂಲಕವೂ ಮಾತಾಡಲು ಬಿಡಲಿಲ್ಲ. ನನ್ನ ಬಂಧುಗಳಲ್ಲೊಬ್ಬರು ಪ್ರಯತ್ನಪಟ್ಟು ಸಂಧಾನಕ್ಕೆ ಹೋದಾಗ ಅವರ ಬಳಿ, ನಾನು ಎರಡು ವರ್ಷ ಮಕ್ಕಳಿಂದ ದೂರವಾಗಿರಬೇಕು, ಇದಕ್ಕೊಪ್ಪಿದರೆ ಮಾತ್ರ ನಂತರ ನಾನು ಮಕ್ಕಳ ಬಳಿ ವಾಪಸ್ಸು ಹೋಗಬಹುದೆಂದು ತಿಳಿಸಲಾಗಿತ್ತು.

ನನ್ನ ಎರಡು ಮಕ್ಕಳ ನೆನಪುಗಳು, ಅದರಲ್ಲೂ ವಿಶೇಷವಾಗಿ ದೂರವಾಗುವಾಗ ಹಾಲು ಕುಡಿಯುತ್ತಿದ್ದ ಚಿಕ್ಕ ಮಗುವಿನ ನೆನಪು ಗಂಡನ ಮನೆಗೆ ವಾಪಸ್ಸು ಹೋಗಬೇಕೆಂಬ ನಿರ್ಧಾರ ತಳೆಯುವಂತೆ ಮಾಡಿತು. ನಾನು ನನ್ನೆಲ್ಲ ಭಾವನೆಗಳನ್ನು, ನೋವನ್ನು, ವಿದ್ಯುತ್ ಶಾಕ್ ಚಿಕಿತ್ಸೆಯಿಂದಾದ ಆಘಾತ ಮತ್ತು ನರ್ಸಿಂಗ್ ಹೋಂನಲ್ಲಿನ ಕೆಟ್ಟ ಅನುಭವಗಳು ಎಲ್ಲವನ್ನೂ ಬದಿಗೊತ್ತಿ 1996 ಜನವರಿ 30 ರಂದು ಅಲ್ಲಿಗೆ ಹೋದೆ. ಇದರ ಫಲವಾಗಿ ಕಠಿಣ ನಿರ್ಧಾರದ ಘಟನೆಗಳು ನಡೆದು ಅನೇಕ ದುರಂತಗಳು ನಡೆದು ಹೋದವು.

ಮೊಟ್ಟಮೊದಲು ನನ್ನ ಹಾಗೂ ನನ್ನ ತಂದೆಯವರ ವಿರುದ್ಧ ವಂಚನೆಯ ವಿಷಯವಾಗಿ ಅಫಿಡವಿಟ್ ಮಾಡಿಸಲು ಒತ್ತಾಯ ಪಡಿಸಲಾಯಿತು. ನನ್ನ ತಂದೆ ತಾಯಿಯರ ವಿರುದ್ಧ ಕಟಕ್‌ನಲ್ಲಿ ಕ್ರಿಮಿನಲ್ ಕೇಸ್ ಹಾಕಲು ಮುಂದುವರೆದರು. ನನ್ನನ್ನು ಜೂನ್ 1996ರಲ್ಲಿ ಬಲವಂತವಾಗಿ ಬ್ರಹ್ಮಕುಮಾರಿಯನ್ನಾಗಿ ಮಾಡಲು ಪ್ರಯತ್ನ ನಡೆಸಿದರು. ಬ್ರಹ್ಮಕುಮಾರಿ ಸಮಾಜದ ಮುಖ್ಯ ಸ್ಥಳ ಮೌಂಟ್ ಅಬುಗೆ ಕರೆದೊಯ್ದು ಅಲ್ಲಿ ಸೇರಿಸುವುದಕ್ಕಾಗಿ, ಅಲ್ಲಿನ ದಾಖಲು ಪುಸ್ತಕದಲ್ಲಿ ಕಾನೂನಿನ ಪ್ರಕಾರ ಮದುವೆಯಾಗಿದ್ದು ಎರಡು ಮಕ್ಕಳನ್ನು ಹೊಂದಿರುವವಳನ್ನು 'ಅವಿವಾಹಿತೆ' ಎಂದು ನಮೂದಿಸಲಾಗಿತ್ತು.

ಈ ಎಲ್ಲ ಯೋಜನೆಗಳು ತಲೆಕೆಳಗಾದಾಗ ಸಜೀವವಾಗಿಯೇ ಕೊನೆಗಾಣಿಸಬೇಕೆಂಬ ಅವನ ಪೈಶಾಚಿಕ ಪ್ರವೃತ್ತಿಗೆ ಮತ್ತೊಂದು ಯೋಜನೆ ಹೊಳೆಯಿತು. ಸುಭಾಷ್ ವಿಶೇಷ ಮುತುವರ್ಜಿಯಿಂದ ದೇಶದ ಅತ್ಯಂತ ಪ್ರತಿಷ್ಠಿತ ಹುಚ್ಚಾಸ್ಪತ್ರೆಯಲ್ಲಿ, ರಾಂಚಿಯ ಕಾಂಕೆಯ ಪ್ರಧಾನ ಮಾನಸಿಕ ರೋಗಿಗಳ ಸಂಸ್ಥೆಯಲ್ಲಿ ನನ್ನನ್ನು ಕರೆದುಕೊಂಡು ಹೋಗಿ ಕೂಡಿ ಹಾಕಿದ.

ಆಸ್ಪತ್ರೆಯ ಅಧಿಕಾರಿಗಳು ಏಳನೆಯ ದಿನ ಸುಭಾಷನಿಗೆ ನಾನು ಸ್ವಸ್ಥಳಾಗಿದ್ದೇನೆಂದು, ವಾಪಸ್ಸು

ಅಂಜನಾ ಮಿಶ್ರಾ ಸಂದರ್ಶನ

ಇದೊಂದು ನೈತಿಕ ಜಯ



ಪ್ರ: ಜೆ.ಬಿ. ಪಟ್ನಾಯಕರ ರಾಜೀನಾಮೆಗೆ ನಿಮ್ಮ ಪ್ರತಿಕ್ರಿಯೆ ಏನು?

ಉ: ಇದು ದೇವರ ತೀರ್ಪು

ಪ್ರ: ನಿಮ್ಮ ಮೊಕದ್ದಮೆ ಅವರ ಪದಚ್ಯುತಿಗೆ ಕಾರಣವಾಯಿತೆ?

ಉ: ನನಗೆ ಗೊತ್ತಿಲ್ಲ. ನನ್ನದು ನ್ಯಾಯಕ್ಕಾಗಿ ನಡೆಸುತ್ತಿರುವ ಹೋರಾಟ ಮತ್ತು ಇದು ಇನ್ನೂ ಮುಂದುವರೆಯುತ್ತದೆ. ಅವರ ರಾಜೀನಾಮೆಯಿಂದ ಮಹಿಳೆಯರ ಆತ್ಮ ಗೌರವವು ಹೆಚ್ಚಿದಂತಾಗಿದೆ. ಅವರು ಅದೇ ಪದವಿಯಲ್ಲಿ ಮುಂದುವರೆದಿದ್ದರೆ ಅದು ಸ್ತ್ರೀತ್ವಕ್ಕೇ ಅವಮಾನ ಮಾಡಿದಂತೆ.

ಪ್ರ: ನಿಮಗೆ ಜಯದ ಅನುಭವವಾಗಿದೆಯೆ?

ಉ: ಹೌದು. ಇದು ನೈತಿಕ ಜಯ.

ಪ್ರ: ಈಗ ಪಟ್ನಾಯಕ್ ರಾಜೀನಾಮೆ ನೀಡಿದ್ದಾರೆ. ಅವರ ಮೇಲೆ ಯಾವುದೇ ರೀತಿಯ ಹಗೆ ಸಾಧಿಸುವಿರಾ?

ಉ: ಇಲ್ಲ. ಅವರ ರಾಜೀನಾಮೆಯು ಅವರನ್ನು ಅಪರಾಧದ ಪಿತೂರಿಯಿಂದ ಹೊರಗಿಡುವುದಿಲ್ಲ. ಬೇರೆ ಇನ್ನಿತರ ಅಪರಾಧಿಗಳಂತೆಯೇ ಅವರನ್ನು ನಡೆಸಿಕೊಳ್ಳಬೇಕು.

ಪ್ರ: ಅವರ ರಾಜಿನಾಮೆಯಿಂದ ನೀವು ಅರ್ಧ ಯುದ್ಧ ಗೆದ್ದಂತೆ ಎಂದು ಭಾವಿಸಿರುವಿರಾ?

ಉ: ನ್ಯಾಯಕ್ಕಾಗಿ ನಡೆಸುತ್ತಿರುವ ದೀರ್ಘ ಹೋರಾಟಕ್ಕೆ ಇವರ ರಾಜೀನಾಮೆ ಘಟನೆ ಸಹಾಯವಾಗುತ್ತದೆ.

ಕರೆದೊಯ್ಯಬೇಕೆಂದು ಪತ್ರ ಬರೆದರೂ ಸಹ ಅವನು ಬರಲಿಲ್ಲ. ವ್ಯಂಗ್ಯದ ವಿಷಯವೆಂದರೆ, ರಾಜ್ಯ ಮಾನವ ಹಕ್ಕು ಸಂರಕ್ಷಣಾ ಸಮಿತಿಯವರೂ ಮನುಷ್ಯಳಾಗಿ ನನ್ನ ಹಕ್ಕು ರಕ್ಷಿಸುವಲ್ಲಿ ವಿಫಲವಾಗಿದ್ದಾರೆ. ಏಕೆಂದರೆ ಮಾನವ ಹಕ್ಕು ಸಂರಕ್ಷಣಾ ಸಮಿತಿಯವರಿಗೆ ಸಂಪೂರ್ಣ ಮಾಹಿತಿ ನೀಡಿಯೇ ರಾಂಚಿಗೆ ಕರೆದುಕೊಂಡು ಬಂದಿದ್ದರು. ಅವರು ಮೊದಲೇ ಸುಭಾಷ್ ರಾಂಚಿಯಿಂದ ಕರೆದೊಯ್ಯದಿದ್ದ ಪಕ್ಷದಲ್ಲಿ ತಾವೇ ವಾಪಸ್ಸು ಕರೆದೊಯ್ಯುತ್ತೇವೆಂದು ತಿಳಿಸಿದ್ದರು.

ನಾನು ಕನಿಷ್ಟವೆಂದರೂ ಮೂವತ್ತು ಪತ್ರಗಳನ್ನು ಸುಭಾಷ್ ಹಾಗೂ ತಂದೆಯವರಿಗೆ ಇಲ್ಲಿಂದ ಆದಷ್ಟು ಬೇಗ ಪಾರು ಮಾಡಬೇಕೆಂದು ಬರೆದೆ. ಸುಭಾಷನಿಂದ ಯಾವುದೇ ಪ್ರತಿಕ್ರಿಯೆ ಕಂಡು ಬರಲಿಲ್ಲ. ತಂದೆ ಮಾತ್ರ ಮಾನವ ಹಕ್ಕು ಸಂರಕ್ಷಣಾ ಸಮಿತಿಯ ಮುಖಾಂತರ ಪ್ರತಿಕ್ರಿಯಿಸಿದರು. ಮಾನವ ಹಕ್ಕು ಸಂರಕ್ಷಣಾ ಸಮಿತಿಯವರು ಎರಡು ತಿಂಗಳ ಬಳಿಕ ಪೊಲೀಸ್ ಇನ್ಸ್‌ಪೆಕ್ಟರ್ ಬಿದ್ಯುಲ್ಲತಾ ನಾಯಕ್‌ರನ್ನು ಪರಿಶೀಲನೆ ನಡೆಸಲು ಕಳಿಸಿತು. ಅವರು ನನ್ನ ಜೊತೆಗೆ ಹಾಗೂ ವೈದ್ಯರೊಡನೆ ಚರ್ಚೆ ಮಾಡಿ ನಾನು ಸ್ವಸ್ಥಳಾಗಿದ್ದೇನೆಂದು ಮನವರಿಕೆ ಮಾಡಿಕೊಂಡಿದ್ದರಿಂದ ಹತ್ತು ದಿನಗಳಲ್ಲಿಯೇ ಅಲ್ಲಿಂದ ಕರೆದೊಯ್ಯುತ್ತೇನೆಂದು ತಿಳಿಸಿ ಹೋದದ್ದಷ್ಟೆ. ಅವರಿಂದ ವಿಷಯ ತಿಳಿಯಲು ನಾನು ವ್ಯರ್ಥವಾಗಿ ಕಾಯುತ್ತಿದ್ದೆ.

ಮಾನವ ಹಕ್ಕು ಸಂರಕ್ಷಣಾ ಸಮಿತಿ ನನ್ನ ತಂದೆಯ ಮಾತಿಗೆ ಕಿವಿಗೊಡದೇ ಸೋಮಾರಿತನದಿಂದ ವರ್ತಿಸಿದಾಗ ಅವರು ರಾಜ್ಯದಲ್ಲಿ ಮುಂಚೂಣಿಯಲ್ಲಿರುವ ಮಹಿಳಾ ಸಂಘ ಉತ್ಕಲ ಮಹಿಳಾ ಸಮಿತಿಯನ್ನು ಸಂಪರ್ಕಿಸಿದಾಗ ಅವರು ತಕ್ಷಣವೇ ಕಾರ್ಯ ಪ್ರವೃತ್ತರಾಗಿ ಮಾನವ ಹಕ್ಕು ಸಂರಕ್ಷಣಾ ಸಮಿತಿಯ ಮೇಲೆ ಒತ್ತಡ ತಂದು ನನ್ನನ್ನು ರಾಂಚಿಯಿಂದ ಬಿಡುಗಡೆಗೊಳಿಸಿದರು. ನಾನು ಒಂಬತ್ತು ತಿಂಗಳು ಮತ್ತು ಹತ್ತು ದಿನ ಭಯಾನಕ ಹುಚ್ಚರ ಸಂತೆಯಲ್ಲಿ, ಅಂಧಕಾರದಲ್ಲಿ ಕಳೆದೆ. ಆಸ್ಪತ್ರೆಗೆ ಸೇರಿಸುವಾಗ ಸುಭಾಷ್ ಕೊಟ್ಟಿದ್ದ ನೂರು ರೂಪಾಯಿ ಬಿಟ್ಟರೆ ನನ್ನ ಬಳಿ ಇನ್ನೇನೂ ಇರಲಿಲ್ಲ. ಏಳು ತಿಂಗಳ ಕಾಲ ನಾನು ಸೋಪು, ಟೂತ್‌ಪೇಸ್ಟ್, ಶಾಂಪೂ, ಡಿಟರ್ಜೆಂಟ್ ಯಾವುದೂ ಇಲ್ಲದೇ ದಿನಗಳನ್ನು ನೂಕಿದೆ. ರಾಂಚಿಯ ಚಳಿಗಾಲ ಅನುಭವಿಸಿದವರಿಗೇ ಗೊತ್ತು, ಮೈ ನಡುಗಿಸುವ, ಗದಗುಟ್ಟಿಸುವ ವಿಪರೀತ ಚಳಿ, ಕೂಳಿಗ್ಗಾಳಿ ತಡೆದುಕೊಳ್ಳಲು ನನ್ನ ಬಳಿ ಸ್ವೆಟರ್ ಇರಲಿಲ್ಲ.

ರಾಂಚಿಯಿಂದ ನಾನು 'ಬಸುಂಧರಾ'ಗೆ ವರ್ಗಾಯಿಸಲ್ಪಟ್ಟೆ. ಅದು ಅನಾಥರ, ದಿಕ್ಕಿಲ್ಲದವರ ಮನೆಯಾಗಿತ್ತು. ಮಾನವ ಹಕ್ಕು ಸಂರಕ್ಷಣಾ ಸಮಿತಿಯವರು 1997ರ ಏಪ್ರಿಲ್ 27ರಂದು ಅಲ್ಲಿಗೆ ಕರೆದುಕೊಂಡು ಬಂದರು. ಬಸುಂಧರಾದ ಕಾರ್ಯದರ್ಶಿ, ಸ್ವೆಲಾ ಬೆಹೆರಾರವರ ಪರಿಚಯವಾದ ಆ ಕ್ಷಣವನ್ನು ಮತ್ತು ನನ್ನ ಜೀವನದಲ್ಲಿ ಹೊಸ ಹುರುಪಿನ ಗಾಳಿಯನ್ನು ತಂದಿದ್ದನ್ನು ನಾನೆಂದೂ ಮರೆಯಲು ಸಾಧ್ಯವೇ ಇಲ್ಲ. ಆಕೆ ತನ್ನ ತೋಳುಗಳಲ್ಲಿ ನನ್ನನ್ನು ಆಲಿಂಗಿಸಿಕೊಂಡಾಗ ಎಲ್ಲವೂ ಆಕೆಗೆ ಅರ್ಥವಾಗಿದೆಯೆಂದು ಆಕೆಯ ಬೆಚ್ಚಗಿನ ಸ್ಪರ್ಶದಲ್ಲಿಯೇ ತಿಳಿಯಿತು. ನಾನು ಸರಿಯಾದ ಆಹಾರವಿಲ್ಲದೇ, ನ್ಯೂನ ಪೋಷಣೆಯಿಂದ ನಡುಗುತ್ತಿದ್ದೆ ಮತ್ತು ಬಹಳ ನಿಶ್ಶಕ್ತಳಾಗಿದ್ದೆ. ನಿಲ್ಲಲು ತ್ರಾಣವಿರಲಿಲ್ಲ. ರಾಂಚಿಯ ಮಲಿನವಾದ ಪರಿಸರ ಮತ್ತು ನಾಲಿಗೆಗೆ ಸೋಕಿಸಲೂ ಸಾಧ್ಯವಿಲ್ಲದಂತಹ ಆಹಾರ ನನ್ನನ್ನು ದುರ್ಬಲಳನ್ನಾಗಿ ಮಾಡಿತ್ತು. ಚರ್ಮವು ಒಣಗಿ ಬಿರುಕು ಬಿಟ್ಟು ಅಸಹ್ಯವಾಗಿ ಕಾಣುತ್ತಿತ್ತು.

ನನ್ನನ್ನೊಂದು ಮೂಲಭೂತ ಪ್ರಶ್ನೆ ಕಾಡುತ್ತಿದೆ. 'ವ್ಯಕ್ತಿ ಮಾನಸಿಕ ಅಸ್ವಸ್ಥತೆ ಅನುಭವಿಸುತ್ತಿದ್ದರೆ ಅವನು/ಅವಳು ಮತ್ತೆ ಚಿಕಿತ್ಸೆಯ ನಂತರ ವಾಪಸ್ಸು ಬಂದು ಸಹಜ





ಅಂಜನಾ ಮಿಶ್ರಾ
ರೇಪ್ ಕಥೆ

ಜೀವನ ನಡೆಸಲು ಸಾಧ್ಯವಿಲ್ಲವೆ? ಬಹುಶಃ ಪೀನಲ್ ಕೋಡ್ ರಚಿಸಿದ ಜನ ದುರದ್ದೇಶದಿಂದ ಕೂಡಿ ಹಾಕುವ ಅಪರಾಧಕ್ಕೆ ಶಿಕ್ಷೆ ವಿಧಿಸುವ ಅಂಶವನ್ನು ಮನಗಂಡಿರಲಿಕ್ಕಿಲ್ಲವೇನೋ. ಮಹಿಳಾ ಆಯೋಗದ ಅಧ್ಯಕ್ಷೆ 1996 ಮೇ 13ರಂದು ಸುಭಾಷನೊಡನೆ ಮರು ಹೊಂದಾಣಿಕೆಯ ಮಾತುಕತೆಯನ್ನು ವ್ಯವಸ್ಥೆ ಮಾಡಿದ್ದರು. ಅದನ್ನು ನಾನು ಸಾರಾಸಗಟಾಗಿ ತಿರಸ್ಕರಿಸಿದ್ದರೇ ಚೆನ್ನಾಗಿತ್ತೆಂದು ನನಗನ್ನಿಸಿತು.

ಸುಭಾಷ್, ರಾಜಲಕ್ಷ್ಮಿ ಮತ್ತು ಇತರ ಕುಟುಂಬದ ಸದಸ್ಯರ ಮೇಲೆ 1997 ಮೇ 30 ರಂದು ಪ್ರಥಮ ಮಾಹಿತಿ ವರದಿ (FIR) A98A ಕಲಂನಲ್ಲಿ ಸಲ್ಲಿಸಿದೆ. ಸುಭಾಷ್ ಮತ್ತು ರಾಜಲಕ್ಷ್ಮಿಯನ್ನು ಬಂಧಿಸಿ 4 ದಿನಗಳ ಕಾಲ ಬಂಧನದಲ್ಲಿಡಲಾಯಿತು. ಅವರಿಗೆ ಜಾಮೀನು ನಿರಾಕರಿಸಲಾಯಿತು.

ಕೇಂದ್ರ ಕಛೇರಿಯ ಡಿ.ಐ.ಜಿ. ಎನ್.ಎನ್. ಸ್ವೇನ್‌ರವರು ರಾಜ್ಯದಲ್ಲಿ ಅತ್ಯಂತ ಪ್ರಾಮಾಣಿಕ ಹಾಗೂ ನ್ಯಾಯಯುತ ಅಧಿಕಾರಿ ಎಂದು ಹೆಸರು ಪಡೆದವರು ಈ ತನಿಖೆ ಕೈಗೆತ್ತಿಕೊಂಡರು. ಅವರು ಬಹಳ ನಿಧಾನ ಗತಿಯಲ್ಲಿ ತನಿಖೆ ನಡೆಸುತ್ತಿದ್ದರು. 1997 ಜುಲೈ 2 ರಂದು ನನ್ನನ್ನು ಹೈಕೋರ್ಟಿಗೆ ಬರಲು ಆದೇಶಿಸಿದರು. ಮುಖ್ಯ ನ್ಯಾಯಾಧೀಶರ ಮುಂದೆ ನನ್ನನ್ನು ಹಾಜರು ಪಡಿಸುತ್ತೇನೆಂದು ಅಡ್ವೋಕೇಟ್ ಜನರಲ್ ಹೇಳಿದರು. ನಾನು ಸ್ವೆಲಾ ಬೆಹೆರಾ ಜೊತೆಗೆ ಅಡ್ವೋಕೇಟ್ ಜನರಲ್ ಇಂದ್ರಜಿತ್‌ರೇ ಅವರನ್ನು ಹೈಕೋರ್ಟ್ ಚೇಂಬರಿನಲ್ಲಿ ಮೊದಲ ಬಾರಿಗೆ ಭೇಟಿಯಾದೆ. ಅವರು ಬಹಳ ಸಭ್ಯವ್ಯಕ್ತಿಯಂತೆ ಕಂಡು ಬಂದರಲ್ಲದೇ ನನ್ನ ವಿಷಯದಲ್ಲಿ ತಮಗಾದ ನೋವು, ಆಘಾತವನ್ನು ವ್ಯಕ್ತಪಡಿಸಿದರಲ್ಲದೇ ನನಗೆ ತಮ್ಮ ಸಂಪೂರ್ಣ ಬೆಂಬಲವನ್ನು



ಅಂಜನಾ ಮಿಶ್ರಾ

ರೇಪ್ ಕಥೆ


ನೀಡುವುದಾಗಿ ಭರವಸೆಯಿತ್ತರು. 'ಹನುಮಾನ್ ಚಾಲೀಸ'ದ ಒಂದು ಪ್ರತಿಯನ್ನು ನನಗೆ ಬಳುವಳಿಯಾಗಿ ನೀಡಿದರು.

1997 ಜುಲೈ 11 ನನ್ನ ಪಾಲಿಗೆ ದುರದೃಷ್ಟದ ದಿನ. ನನಗೆ ಸುಭಾಷನ ಮೊಕದ್ದಮೆಯಲ್ಲಿ ರಾಜ್ಯದಿಂದ ನಿಯಮಿಸಲ್ಪಟ್ಟ ವಿಶೇಷ ಪಬ್ಲಿಕ್ ಪ್ರಾಸಿಕ್ಯುಟರ್ ಪಿತಂಬರ ಆಚಾರ್ಯರವರಿಂದ ಕರೆ ಬಂತು ಅದರಂತೆ ನಾನು ರೇ ಅವರನ್ನು ಸಂಪರ್ಕಿಸಿದಾಗ ಅವರು ಮೊಕದ್ದಮೆಯಲ್ಲಿನ ಕೆಲವು ಮುಖ್ಯ ಬೆಳವಣಿಗೆಗಳ ಬಗ್ಗೆ ಚರ್ಚೆ ಮಾಡಬೇಕೆಂದೂ, ಹಾಗೆಯೇ ನನ್ನೊಡನೆ ಲಂಚ್ ತೆಗೆದುಕೊಳ್ಳುವುದಕ್ಕಾಗಿ ಕಾಯುತ್ತಿರುವುದಾಗಿ ತಿಳಿಸಿದರು. ಪಿತಂಬರ ಆಚಾರ್ಯರವರ ಹೇಳಿಕೆ ಮತ್ತು ಇಂದ್ರಜಿತ್ ರೇ ಅವರೊಂದಿಗೆ ಚರ್ಚಿಸಲು ಹೊರಟಿರುವ ವಿಷಯವನ್ನು ಸ್ವಲ್ಪ ಬೆಹೆರಾಗೆ ತಿಳಿಸಿ ಬಸುಂಧರಾದ ಉದ್ಯೋಗಸ್ಥ ಡಾಲಿಯ ಜೊತೆಗೂಡಿ ಇಂದ್ರಜಿತ್ ರೇ ಅವರ ನಿವಾಸಕ್ಕೆ ತೆರಳಿದೆ. ಅವರು ತಮ್ಮ ಮನೆಯಲ್ಲಿ ನನ್ನ ಮೇಲೆ ಬಲಾತ್ಕಾರದಿಂದ ಮಾನಭಂಗ ಮಾಡಲು ಪ್ರಯತ್ನಿಸಿದರು. ಬಾಗಿಲು ತಟ್ಟಿದ ಸದ್ದಾದಾಗ ರೇ ಅವರು ನನ್ನ ಮೇಲಿನ ತಮ್ಮ ಹಿಡಿತವನ್ನು ಸಡಲಿಸಿದಾಗ ಅಲ್ಲಿಂದ ನಾನು ಜಾರಿಕೊಂಡು ಪಾರಾದೆ.

ನನಗೆ ನ್ಯಾಯ ಸಿಗದಿದ್ದಕ್ಕೆ ಮತ್ತು ನಮ್ಮ ಪ್ರಥಮ ಮಾಹಿತಿ ವರದಿ ದಾಖಲಾಗಿರದುದಕ್ಕೆ ಡಿ.ಐ.ಜಿ ಸ್ವೇನ್‌ರವರ ಸಲಹೆಯ ಮೇರೆಗೆ ನನ್ನ ಮೇಲೆ ನಡೆದ ದೌರ್ಜನ್ಯದ ವಿರುದ್ಧ ನ್ಯಾಯ ದೊರಕಿಸಿಕೊಡುವಂತೆ ಮುಖ್ಯಮಂತ್ರಿಯವರನ್ನು ಕಂಡು ಬಿನ್ನವಿಸಿಕೊಂಡು ಅರ್ಜಿ ಸಲ್ಲಿಸಿದೆವು. ಮುಖ್ಯಮಂತ್ರಿಗಳು ನ್ಯಾಯ ದೊರಕಿಸಿಕೊಡುತ್ತೇನೆಂದು ಆಶ್ವಾಸನೆ ಕೊಟ್ಟರೂ ಕೂಡ ಜುಲೈ 18 ರಂದು ದೆಹಲಿಯಿಂದ ವಾಪಸ್ಸು ಬಂದ ನಂತರ ಅವರ ವರಸೆಯೇ ಬದಲಾಯಿತು. ಅವರ ಕಚೇರಿಯಿಂದ ರಾಜಿ ಸಂಧಾನಕ್ಕಾಗಿ ನನ್ನ ಮೇಲೆ ಒತ್ತಡ ತರಲಾಯಿತು.

ದಿಟ್ಟತನದಿಂದ 1997ರ ಜುಲೈ 19ರಂದು ಕಟಕ್‌ನ ಕಂಟೋನ್ಮೆಂಟ್ ಪೊಲೀಸ್ ಸ್ಟೇಷನ್‌ನಲ್ಲಿ ದೌರ್ಜನ್ಯದ ವಿರುದ್ಧ FIR ಸಲ್ಲಿಸಿದೆ. ಪ್ರಾರಂಭದಲ್ಲಿಯೇ ಪೊಲೀಸರಿಂದ ಬಲವಾದ ಪ್ರತಿಭಟನೆ ಕಂಡು ಬಂತು. ಹೇಗೆಂದರೆ ಅಸಲು FIR ನಲ್ಲಿನ ಕಲಂ 376/511, ಇದು ಅತ್ಯಾಚಾರಕ್ಕೆ ಪ್ರಯತ್ನಿಸಿದ್ದಕ್ಕೆ ಸಂಬಂಧಿಸಿದ್ದು, ಅದನ್ನು ಹರಿದುಹಾಕುವುದಕ್ಕೆ ಪ್ರಯತ್ನ ನಡೆಯುತ್ತಿತ್ತು. ಅದನ್ನು ಹೊರತು ಪಡಿಸಿ ಕಲಂ 354 ಅಡಿಯಲ್ಲಿ ದೌರ್ಜನ್ಯದ ವಿರುದ್ಧ ಮಾತ್ರ ದಾಖಲು ಮಾಡಿಕೊಳ್ಳಬೇಕೆಂದು ಪ್ರಯತ್ನಿಸಿದರು.

ನಾನು ಏಕಾಂಗಿಯಾಗಿ ನಡೆಸಿದ ಹೋರಾಟ ಇಡೀ ವ್ಯವಸ್ಥೆಯ ವಿರುದ್ಧ, ಮುಖ್ಯಮಂತ್ರಿ ಜೆ. ಬಿ. ಪಟ್ನಾಯಕ್‌ರು ಬಹಿರಂಗವಾಗಿ ಇಂದ್ರಜಿತ್ ರೇಗೆ ಬೆಂಬಲ ವ್ಯಕ್ತಪಡಿಸುತ್ತಿದ್ದುದರ ವಿರುದ್ಧ, ಎಂದೂ ಶಾಂತಿಯುತವಾಗಿರಲಿಲ್ಲ. ಒಂದು ನೆಮ್ಮದಿ ಗೊಳಿಸುವ ಪ್ರಕರಣ ಜರುಗಿದ್ದೆಂದರೆ ಹೈಕೋರ್ಟ್ CBI ತನಿಖೆಗೆ ಆದೇಶ ನೀಡಿದಾಗ ಮತ್ತು ಇಂದ್ರಜಿತ್ ರೇಯ ಮೇಲೆ ನವೆಂಬರ್ 1997 ರಂದು ಅತ್ಯಾಚಾರಕ್ಕೆ ಪ್ರಯತ್ನಿಸಿದುದರ ವಿರುದ್ಧ ಚಾರ್ಜ್‌ಶೀಟ್ ಹಾಕಲಾಯಿತು. ಇಷ್ಟೆಲ್ಲ ಆದರೂ ಅವರು ಆಗಸ್ಟ್ 1998ರವರೆಗೆ ಅಡ್ವೋಕೇಟ್ ಜನರಲ್ ಆಗಿಯೇ ಸೇವೆಯಲ್ಲಿ ಮುಂದುವರೆದರು. ಅವರಿಗೆ ಮುಖ್ಯಮಂತ್ರಿಯವರ ಸಂಪೂರ್ಣ ಬೆಂಬಲವಿತ್ತು. ಅವರು ನಿರೀಕ್ಷಣಾ ಜಾಮೀನಿಗೆ ವ್ಯವಸ್ಥೆ ಮಾಡಿಕೊಂಡಿದ್ದರು. ಸಾರ್ವಜನಿಕರಿಂದ, ಮಾಧ್ಯಮಗಳಿಂದ ವಿರೋಧ ವ್ಯಕ್ತವಾದಾಗ ಮತ್ತು ಆಡಳಿತ ಪಕ್ಷದ ಕೆಲವು ಸದಸ್ಯರು ಪಟ್ಟು ಹಿಡಿದು ಅವರನ್ನು ಉಚ್ಚಾಟನೆ ಮಾಡಬೇಕೆಂದು ಒತ್ತಾಯ ತಂದಾಗ ಆಗಸ್ಟ್ 1998ರಲ್ಲಿ ರಾಜೀನಾಮೆ ನೀಡಿದರು.



ನನಗೆ ರೇ ಹಾಗೂ ಮುಖ್ಯಮಂತ್ರಿಯ ಕಡೆಯ ಜನರಿಂದ ಸಂಧಾನ ಮಾಡಿಕೊಳ್ಳಬೇಕೆಂಬ ಪ್ರಸ್ತಾಪಗಳು ಬಂದವು. ಮೊದಲ ರಾಜಿ ಪ್ರಸ್ತಾಪ ಬಂದಿದ್ದು ಮಹಿಳಾ ಮಂತ್ರಿ ಬಿಜಯಲಕ್ಷ್ಮಿ ಸಾಹುಳಿಂದ ಮತ್ತು ಹಾಗೆಯೇ ಉಳಿದ ಮಂತ್ರಿಗಳಾದ ಕಿಶೋರ್ ಪಾಟೀಲ್, ಜಗನ್ನಾಥ್ ಪಟ್ನಾಯಕ್, ದುರ್ಗಾಶಂಕರ್ ಪಟ್ನಾಯಕ್ ಮತ್ತು ಹರಿಹರ ಸ್ವೈನರವರಿಂದಲೂ ಬಂದಿತು. ನಾನು ಅದಕ್ಕೆ ದಿಟ್ಟತನದಿಂದ ಒಪ್ಪದೇ ಇದ್ದಾಗ ಸುಭಾಷನೊಂದಿಗೆ ಸಂಧಾನ ಮಾಡಿಕೊಳ್ಳುವುದಕ್ಕೆ ಹಾಗೂ ಅದರ ಮೂಲಕ ರೇಯೊಂದಿಗೂ ರಾಜಿ ಮಾಡಿಕೊಳ್ಳಬೇಕೆಂದು ವಿಷಯವನ್ನು ಪ್ರಸ್ತಾಪಕ್ಕೆ ತಂದರು. ನನಗೆ ಬೆದರಿಕೆ ಹಾಕಲಾಗಿದ್ದೇನೆಂದರೆ ಇದಕ್ಕೊಪ್ಪದಿದ್ದರೆ ನಾನು ಸಾಮೂಹಿಕ ಅತ್ಯಾಚಾರಕ್ಕೊಳಗಾಗಬಹುದು ಇಲ್ಲವೇ ನಿನ್ನ ಮುಖದ ಮೇಲೆ ಆಸಿಡ್ ಎರಚಲಾಗಬಹುದು ಇಲ್ಲವೇ ಒರಿಸ್ಸಾದಲ್ಲಿ ನಡೆದ ತಂದೂರ್ ಕೇಸ್‌ನ ಪುನರಾವೃತ್ತಿ ಆಗಬಹುದೆಂದು ಹೆದರಿಸಲಾಯಿತು.

ಈ ಮಧ್ಯೆ ತಂದೆಯೂ ನನ್ನನ್ನು ದೂರ ತಳ್ಳಿದರು. ಇಂತಹ ಬದುಕುಲಾರದ ಸ್ಥಿತಿಯಲ್ಲಿ ನಾನು ಉಪವಾಸ ಕೈಗೊಂಡೆ. ಮಹಿಳಾ ಸಂಘಟನೆಗಳ ಒತ್ತಾಯದ ಮೇರೆಗೆ 7 ದಿನಗಳ ಉಪವಾಸ ವ್ರತ ಬಿಡಬೇಕಾಯಿತು.

ನನ್ನ ಮೊದಲ ಜಯ ದೊರಕಿದ್ದು ನ್ಯಾಯಾಲಯ ನನ್ನ ತಂದೆಯ ಅರ್ಜಿಯನ್ನು ತಿರಸ್ಕರಿಸಿದ್ದಲ್ಲದೇ ಆ ಮನೆಯಲ್ಲಿ ವಾಸವಾಗಿರಲು ನನಗೆ ಅನುಮತಿ ನೀಡಿತ್ತು. ನ್ಯಾಯಾಲಯದ ತೀರ್ಪು ಹೇಳಿತ್ತು - 'ಅಂಜನಾ ಒಬ್ಬ ಪ್ರಾಪ್ತ ವಯಸ್ಕಳು ಮತ್ತು ಆಕೆ ಎಲ್ಲಿ ಬೇಕಾದರೂ ವಾಸ ಮಾಡಬಹುದು'.

ನನ್ನ ತಂದೆ ತಾಯಿಯರು ಮುಂಬಯಿಯಲ್ಲಿ ಹೊಸ ವೃತ್ತಿಯನ್ನು ಕೈಗೊಳ್ಳಲು ರಾಜ್ಯವನ್ನು ಬಿಟ್ಟು ಹೊರಡಬೇಕಾಯಿತು. ಆಗ ಅವರು ನನಗೆ ತಮ್ಮ ಮುಂಬಯಿಯ ಹೊಸ ವಿಳಾಸವನ್ನು ತಿಳಿಸುವ ಸೌಜನ್ಯವನ್ನು ತೋರಲಿಲ್ಲ. ಈಗಿರುವ ಮನೆಯ ಕೀಲಿಕೈಯನ್ನು ಕೊಟ್ಟರಲ್ಲದೇ ಏನನ್ನು ಹೇಳದೇ ಹೊರಟು ಹೋದರು. ನ್ಯಾಯಕ್ಕಾಗಿ ನಡೆಸುತ್ತಿರುವ ಈ ಹೋರಾಟದಲ್ಲಿ ನನ್ನ ಮನ, ಮಕ್ಕಳಿಂದ ದೂರವಾದದ್ದು ಮಾತ್ರವಲ್ಲ ತಂದೆ



ಅಂಜನಾ ಮಿಶ್ರಾ
ರೇಪ್ ಕಥೆ

ತಾಯಿಯರೂ ದೂರವಾದರು.

ನನ್ನ ಪಾಲಿಗೆ ಉದ್ಯೋಗದ ಬಾಗಿಲುಗಳಂತೂ ಎಲ್ಲೆಡೆಗೆ ಮುಚ್ಚಿದ್ದವು. ಮುಖ್ಯಮಂತ್ರಿಯನ್ನು ಎದುರು ಹಾಕಿಕೊಳ್ಳಲು ಅವರ್‍ಯಾರೂ ತಯಾರಿರಲಿಲ್ಲ. ನನ್ನ ತಂದೆಯ ಆದೇಶದಿಂದಲೇ ನನ್ನ ದೂರವಾಣಿಯ ಸಂಪರ್ಕ ಕಡಿದು ಹಾಕಲಾಗಿತ್ತಲ್ಲದೆ ತಾತ್ಕಾಲಿಕ ಸುರಕ್ಷಿತ ಕಸ್ಟಡಿಯಲ್ಲಿಡಲು ಇಲಾಖೆ ಬರೆದಿದ್ದರು. ಹಣಕಾಸಿನ ಮುಗ್ಗಟಂತೂ ಹೇಳಲಿಕ್ಕೆ ಸಾಧ್ಯವಿಲ್ಲ. ಆರು ತಿಂಗಳು ಹೋರಾಟದಲ್ಲಿಯೇ ಕಳೆಯಿತು. ಸ್ನೇಹಿತರಿಂದ ಮಾನಸಿಕ ಬೆಂಬಲ ಹಾಗೂ ನನ್ನ ಏಕೈಕ ಬಂಧು ಹಿರಿಯತ್ತಿಗೆ ಮೊದಲು ಸಹಾಯವನ್ನು ನೀಡಬೇಕೆಂದು ಇಚ್ಛಿಸಿದವರು ಕೂಡ ಒಂದೇ ಭೇಟಿಗೆ ಸಾಕು ಮಾಡಿಕೊಂಡರು.

ಕೇವಲ ಸ್ಥಳೀಯ ಖಾಸಗಿ ದೂರದರ್ಶನ ಚಾನಲ್ OTV ನನಗೆ ಹಾಗೂ ಕ್ರಿಕೆಟ್ ಆಟಗಾರ ದೇಬಶಿಶ್ ಮೊಹಂತಿಗೆ ಒಟ್ಟಿಗೆ ವರ್ಷದ ವ್ಯಕ್ತಿಗಳಾಗಿ ಪ್ರೇಕ್ಷಕರ ಮತಗಳ ಆಧಾರದ ಮೇಲೆ ಈ ಪ್ರಶಸ್ತಿಗಾಗಿ ನನ್ನನ್ನೂ ಆಯ್ಕೆ ಮಾಡಿದ್ದರು.


ಅತ್ಯಂತ ಹತಾಶಳಾದ ತಾಯಿಯಾಗಿ ಮಕ್ಕಳಿಂದ ದೂರವಾಗಿ ತೀಕ್ಷ್ಣವಾದ ವೇದನೆಯಿಂದ ತತ್ತರಿಸುತ್ತ ಹೈಕೋರ್ಟಿನಿಂದ ಬರುವ ಆದೇಶಕ್ಕಾಗಿ ಕಾಯುತ್ತಿದ್ದೆ. 1996ರ ಮೇ 6 ರಂದು ಕೊನೆಯ ಬಾರಿಗೆ ನನ್ನ ಚಿಕ್ಕ ಮಗ ನಿಹಿತನನ್ನು ನೋಡಿದ್ದು ಮತ್ತು 1997 ಮೇ 14 ರಂದು ನಿಶೀತನನ್ನು ಕೇವಲ ಹತ್ತು ನಿಮಿಷಗಳ ಕಾಲ ಡಿ.ಜಿ.ಪಿ. ಬಿ.ಬಿ. ಪಾಂಡಾರ ಕಛೇರಿಯಲ್ಲಿ ಕಂಡಿದ್ದೆ.

ನಾನು ನ್ಯಾಯವಾದಿ ಪಿ.ಕೆ. ಮಿಶ್ರಾರ ಕಛೇರಿಯಲ್ಲಿ ಜನವರಿ 6 1999ರಂದು ನಡೆದ ಮರು ಹೊಂದಾಣಿಕೆಯ ಸಭೆಯಲ್ಲಿ ಮಾನ್ಯ ನ್ಯಾಯಾಧೀಶರಿಗೆ ನನ್ನ ಮಕ್ಕಳನ್ನು ಭೇಟಿ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ವಿನಂತಿಸಿಕೊಂಡೆ. ಮಕ್ಕಳೊಡನೆ ದೂರವಾಣಿಯ ಮೂಲಕ ಮಾತನಾಡಲೂ ಅವಕಾಶವಿರಲಿಲ್ಲ. ಹೊಸ ವರ್ಷದ ಶುಭಾಶಯ ತಿಳಿಸಲು ಕನಿಷ್ಠ ಮೂವತ್ತು ಕರೆಗಳನ್ನಾದರೂ ಮಾಡಿದೆ. ಆದರೆ ಆ ಕರೆಗೆ ಓಗೊಡಲು ಮಕ್ಕಳನ್ನು ಬಿಡಲಿಲ್ಲ.

ನನ್ನ ವಕೀಲ ದೇಬಶೀಸ್ ಪಾಂಡರವರು ಹೈಕೋರ್ಟ್ ತಾತ್ಕಾಲಿಕ ಮಧ್ಯಂತರ ಆದೇಶ (Imperium order) ನೀಡಿದೆಯೆಂದೂ ನಾನು ಶಾಲೆಯ ಪ್ರಿನ್ಸಿಪಾಲರಿಗೆ 7 ದಿನಗಳ ಮೊದಲೇ ತಿಳಿಸಿ ಫೆಬ್ರವರಿ 15 ರೊಳಗೆ ಮಕ್ಕಳನ್ನು ಭೇಟಿ ಮಾಡಬಹುದೆಂದು ತಿಳಿಸಿದರು. ನನಗೆ ತಿಳಿದು ಬಂದ ಒಂದು ವರದಿಯ ಪ್ರಕಾರ ಭುವನೇಶ್ವರ CGM ಕೋರ್ಟನಲ್ಲಿ ತಡೆಯಾಜ್ಞೆಯ ನ್ಯಾಯವಿಚಾರಣೆಯ ಪ್ರಗತಿ ಆಮೆಗತಿಯಲ್ಲಿ ಸಾಗುತ್ತಿತ್ತು. ನನ್ನ ಕಥೆಯನ್ನು ಸಮರ್ಥಿಸಲು ಕನಿಷ್ಠ ಆರು ಸಾಕ್ಷಿಗಳು ಬೇಕಿತ್ತು. ನನ್ನ ವಕೀಲರು ಸುಭಾಷನೊಡನೆ ಅಸಹಕಾರ ಧೋರಣೆ ವ್ಯಕ್ತಪಡಿಸುತ್ತಿದ್ದರು. ನನಗೆ ಆಶ್ಚರ್ಯವಾಗಿದ್ದೆಂದರೆ ವಕೀಲರು ಇಂದ್ರಜಿತ್ ರೇ ಅವರಿಗೆ ತಡೆಯಾಜ್ಞೆ ಸಿಕ್ಕಿರುವ ವಿಷಯ ತಿಳಿಸಿರಲಿಲ್ಲ.

ರಕ್ಷಣಾಧಿಕಾರಿಗಳಿಂದ ಮತ್ತು ವಿಶೇಷವಾಗಿ ನಯಾಪಲ್ಲಿ ಇನ್‌ಚಾರ್ಜ್ ಪೊಲೀಸ್ ಇನ್ಸ್‌ಪೆಕ್ಟರ್ ಪ್ರೇಮಾಂಜನ ಪರಿದಾನಿಂದ ಉದ್ದೇಶಪೂರ್ವಕ ಅಸಹಕಾರ ಮತ್ತು ಹಿಂಸೆ ಅನುಭವಿಸುವುದು ನನ್ನ ಜೀವನದ ಒಂದು ಭಾಗವೇ ಆಗಿ ಹೋಗಿತ್ತು. 1998ರ ಜೂನ್ ಅಂತ್ಯದಲ್ಲಿ ಪರಿದಾನ ವಿರುದ್ಧ ಹೈಕೋರ್ಟಿನಲ್ಲಿ ನಾನು ಸಲ್ಲಿಸಿದ ಅರ್ಜಿಯಿಂದಾಗಲೀ ಮತ್ತು ಭುವನೇಶ್ವರ ಎಸ್.ಪಿ.ಗೆ. ಬರೆದ ಪತ್ರಗಳಿಂದಾಗಲೀ ಯಾವುದೇ ರೀತಿಯ ಪ್ರಯೋಜನವಾಗಲಿಲ್ಲ. ಪರಿದಾನ ಒತ್ತಡದಿಂದ ಪೊಲೀಸ್ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಹಾಗೆ ಮಾಡುತ್ತಿದ್ದಾರೆಂಬುದಕ್ಕೆ ನನ್ನ ಹತ್ತಿರ ಅಫಿಡವಿಟ್ ಮತ್ತು ದಾಖಲೆಗಳು ಇವೆ. ಪರಿದಾ ಇಂದ್ರಜಿತ್ ರೇಯ ಕಡೆಯವನಾಗಿದ್ದ.

ಜನವರಿ 9 ರಂದು ಮಧ್ಯಾಹ್ನ 4 ಗಂಟೆಯಿಂದ ನನ್ನ ಮನೆಯ ಹೊರಗೆ ಟೆಂಟ್‌ನಲ್ಲಿರುವ ರಕ್ಷಣಾಧಿಕಾರಿಯನ್ನು ನನ್ನ PSO ಇತಿಶ್ರೀ ದಾಸ್ ಅವರನ್ನು ಸಂಪರ್ಕಿಸಬೇಕೆಂದು ವಿನಂತಿಸಿಕೊಳ್ಳುತ್ತಿದ್ದೆ. ನಿರಾಕರಿಸಿದಾಗ ನಾನು ಹತಾಶಳಾಗಿ ಅಲ್ಲಿಂದಿಲ್ಲಿಗೆ ತಿರುಗಾಡುತ್ತಿದ್ದೆ. ಆಗಲ್ಲಿಗೆ OTVಯ ಸುದ್ದಿ ವಿಭಾಗದ ಮುಖ್ಯಸ್ಥ ಸುತಾನುಗುರು ರೇ ಅವರ ತಡೆಯಾಜ್ಞೆಯ ವಿಷಯದ ಬಗ್ಗೆ ತಿಳಿಯಲು ಬಂದ. ಅವನು ನನ್ನ ಜೀವನ ಚರಿತ್ರೆ ಬರೆಯಲು ಕೂಡ ಇಚ್ಛಿಸುತ್ತಿದ್ದ. ಇದಕ್ಕೆ ಮುಂಚೆಯೂ ನಡೆದ ಹಲವಾರು ಘಟನೆಗಳಲ್ಲಿ ನನ್ನನ್ನು ಭೇಟಿಯಾಗಿದ್ದ. ಸಮಸ್ಯೆ ವಿವರಿಸಿ ಸಹಾಯ ಕೇಳಲು ಗುರು ಒಪ್ಪಿಕೊಂಡ. ನಾವು ರಾತ್ರಿ 8.30ಕ್ಕೆ ಅಲ್ಲಿಂದ ಹೊರಟೆವು.



ನಾನು ರಾಷ್ಟ್ರೀಯ ಹೆದ್ದಾರಿಯ ಟ್ರಾಫಿಕ್‌ನ್ನು ತಪ್ಪಿಸಿಕೊಳ್ಳುವುದಕ್ಕೆ ಕಟಕ್‌ಗೆ ಹೋಗಲು ಬಾರಾಂಗದ ರಸ್ತೆಯನ್ನು ಆಯ್ದುಕೊಂಡೆ. ಬೇಗ ತಲುಪಬೇಕೆಂಬ ಉದ್ದೇಶದಿಂದ ಆ ದಾರಿಯಲ್ಲಿ ಹೊರಟೆ. ಒಂದೆಡೆ ಟ್ಯಾಕ್ಸಿ ಡ್ರೈವರ್ ಯಾಡೋ ನಿಧಾನವಾಗಿ ಓಡಿಸುತ್ತಿದ್ದಾನೆಂದು ನನಗನ್ನಿಸಿದಾಗ ಮುಂದೆ ನೋಡಿದೆ. ಅಲ್ಲಿ ಒಬ್ಬ ವ್ಯಕ್ತಿ ತನ್ನ ಕೈಗಳನ್ನು ಚಾಚಿಕೊಂಡು ದಾರಿಗಡ್ಡವಾಗಿ ನಿಂತಿದ್ದ. ಇನ್ನಿಬ್ಬರು ದಾರಿಬದಿಯಲ್ಲಿ ಸ್ಕೂಟರ್ ಪಾರ್ಕ್ ಮಾಡಿ ನಿಂತು ಕೊಂಡಿದ್ದರು.

ದಾರಿಗಡ್ಡ ನಿಂತಿದ್ದ ಆ ವ್ಯಕ್ತಿ ರಿವಾಲ್ವರ್ ಹಿಡಿದು ಹತ್ತಿರ ಬಂದು ಗುರುವನ್ನು ಮುಂದಿನ ಸೀಟಿಗೆ ತಳ್ಳಿ ನನ್ನ ಪಕ್ಕದಲ್ಲಿ ಕುಳಿತು ಪೀಡಿಸಲಾರಂಭಿಸಿದ. ರಿವಾಲ್ವರ್‌ನ್ನು ಗುರು ತಲೆಗೆ ಹಿಡಿದಿದ್ದ. ಕುಡುಗೋಲಿನಂತಹ ಆಯುಧವನ್ನು ಹಿಡಿದುಕೊಂಡ ಇನ್ನೊಬ್ಬ ವ್ಯಕ್ತಿ ಡ್ರೈವರನ್ನು ಎಳೆದು ಸ್ಕೂಟರಿನ ಹಿಂದಿನ ಸೀಟಿಗೆ ವರ್ಗಾಯಿಸಿದ.- ಕಾಯುತ್ತಿದ್ದ ಇನ್ನೊಬ್ಬ ಮೂರನೆಯ ವ್ಯಕ್ತಿ ಡ್ರೈವರ್‌ನ ಸೀಟನ್ನು ಆಕ್ರಮಿಸಕೊಂಡ. ನಾವು ನಮ್ಮಲ್ಲಿದ್ದ ಬೆಲೆ ಬಾಳುವ ವಸ್ತುಗಳನ್ನು ಮತ್ತು ಹಣವನ್ನು ತೆಗೆದುಕೊಂಡು ನಮ್ಮನ್ನು ಹೋಗಲು ಬಿಡಿ ಎಂದು ಪರಿಪರಿಯಾಗಿ ಅವರನ್ನು ಕೇಳಿಕೊಂಡೆವು. ಆದರೆ ಆ ಮನುಷ್ಯ ನನ್ನನ್ನು ತಿನ್ನಬೇಕೆಂಬುದು ತನ್ನ ಬಯಕೆ ಎಂದ. ಸ್ವಲ್ಪ ಮುಂದೆ ಕಾರನ್ನು ನಡೆಸಿಕೊಂಡು ಹೋಗಿ, ಅಲ್ಲಿಂದ ಕಚ್ಚಾದಾರಿಯಲ್ಲಿ ತಿರುಗಿಸಿಕೊಂಡು



ಅಂಜನಾ ಮಿಶ್ರಾ
ರೇಪ್ ಕಥೆ

ಬಹಳ ದೂರ ನಿರ್ಜನ ಪ್ರದೇಶದವರೆಗೂ ಕಾರು ಒಯ್ದ. ಅಲ್ಲಿ ಅವನು ನನ್ನನ್ನು ಕಾರಿನಿಂದ ಹೊರಗೆಳೆದ ಮತ್ತು ಕೈಗೆ ಕುಡುಗೋಲು ತೆಗೆದುಕೊಂಡ. ಗುರುವನ್ನು ಹಿಂದಿನ ಸೀಟಿನಲ್ಲಿ ಕುಳ್ಳರಿಸಿ ಸ್ಕೂಟರಿನಲ್ಲಿದ್ದ ವ್ಯಕ್ತಿ ಮಿಯಾನ್ ಎಂಬುವವನು ಗುರುವಿನ ತಲೆಗೆ ರಿವಾಲ್ವರ್ ಹಿಡಿದಿದ್ದ. ಅವನು ನನ್ನನ್ನು ಅಲ್ಲಿಂದ ಇನ್ನೂ ಸ್ವಲ್ಪ ದೂರ ನಿರ್ಜನ ಪ್ರದೇಶಕ್ಕೆ ಎಳೆದೊಯ್ದ. ನಾನು ನನ್ನನ್ನು ಕೊಂದು ಬಿಡು ಎಂದು ಕೂಗಿದಾಗ, ಅವನು ನಾನು ಸ್ವಲ್ಪ ಪ್ರತಿಭಟನೆ ತೋರಿದರೂ ಗುರುವನ್ನು ತಲೆಗೆ ಗುಂಡು ಹೊಡೆದು ಸಾಯಿಸುತ್ತೇನೆಂದು ಹೇಳಿದ.


ನನ್ನನ್ನು ಸಂಪೂರ್ಣ ನಗ್ನಗೊಳಿಸಿ ಆ ಭಯಾನಕ ಚಳಿಯ ರಾತ್ರಿಯಲ್ಲಿ ಪುನಃ ಪುನಃ ಅತ್ಯಾಚಾರವೆಸಗಿದ. ಅವನೇ ಹೇಳಿದಂತೆ ಆ ವ್ಯಕ್ತಿಯ ಹೆಸರು ವಿ.ಕೆ. ಮತ್ತು ಅವನ ಗೆಳೆಯ ಮಿಯಾನ್ ಒಬ್ಬರ ನಂತರ ಒಬ್ಬರು ನನ್ನ ಮೇಲೆ ಕ್ರೂರವಾಗಿ ಅತ್ಯಾಚಾರವೆಸಗಿದರು. ನನಗೆ ಅವರು ಹೇಳಿದ್ದೇನೆಂದರೆ ನಾನು ದಿಟ್ಟತನದಿಂದ ಹೋರಾಡುತ್ತಿರುವುದಕ್ಕೆ, ಇಂದ್ರಜಿತ್ ರೇ ಬಗ್ಗೆ ನನ್ನ ನಿಲುವನ್ನು ಬದಲಿಸಿಕೊಳ್ಳದೇ ಸಂಧಾನಕ್ಕೆ ಒಪ್ಪದೇ ಇರುವುದಕ್ಕೆ ನಾನು ತೆರುತ್ತಿರುವ ಬೆಲೆ ಇದೆಂದು ತಿಳಿಸಿದರಲ್ಲದೇ ಈಗಲೂ ನಾನು ಒಪ್ಪಿಕೊಂಡರೆ ಮುಖ್ಯಮಂತ್ರಿಯವರು ನನ್ನನ್ನು ರಾಣಿಯ ಹಾಗೆ ನೋಡಿಕೊಳ್ಳುತ್ತಾರೆಂದು ಮತ್ತು ಎಲ್ಲ ರೀತಿಯ ಐಷಾರಾಮದ ಬದುಕು ನನ್ನದಾಗುತ್ತದೆಂದು ಇಲ್ಲದಿದ್ದರೆ ಜೀವನಪೂರ್ತಿ ಹೀಗೆ ಹಿಂಸಿಸುವೆಂದರು.

ಎಲ್ಲವೂ ಮುಗಿದ ನಂತರ ಕೊನೆಗೆ ನನ್ನನ್ನು ಕಾರಿನ ಬಳಿ ಕರೆತಂದರು ಮತ್ತು ಅವನ ವಿನಂತಿಯ ಮೇರೆಗೆ ಗುರುವನ್ನು ನನ್ನ ಪಕ್ಕದಲ್ಲಿ ಕುಳಿತುಕೊಳ್ಳಲು ಅವಕಾಶಕೊಟ್ಟರು. ಮಿಯಾನ್ ಸ್ಕೂಟರಿನಲ್ಲಿ ಹೋದ. ವಿ.ಕೆ. ಮುಂದಿನ ಸೀಟಿನಲ್ಲಿ ಕುಳಿತ. ಸಾಹು ಸ್ಟೇರಿಂಗ್ ಹಿಡಿದ ಮತ್ತು ಟ್ಯಾಕ್ಸಿ ಡ್ರೈವರ್‌ನನ್ನು ತಮ್ಮಿಬ್ಬರ ಮಧ್ಯೆ ಕುಳ್ಳರಿಸಿಕೊಂಡರು.

ತ್ರಿಸೂಲಿಯಾ ಚೌಕ್‌ನ ಮುಖ್ಯರಸ್ತೆಯಲ್ಲಿ ಒಂದೆಡೆ ಮೊಬೈಲ್‌ಸ್ಕ್ವಾಡ್ ಗಾಡಿಯನ್ನು ನಿಲ್ಲಿಸಬೇಕೆಂದು ಸಂಜ್ಞೆ ಮಾಡಿದರೂ ಅವನು ಹಾಗೇ ಓಡಿಸಿದ. ಆದರೆ ಅವರು ಕೂಡ ಗಾಡಿ ನಿಲ್ಲಿಸಲು ಮುಂದೆ ಯಾವುದೇ ಪ್ರಯತ್ನ ಮಾಡಲಿಲ್ಲ.

ಸಾಹು ನಂತರ ನಮ್ಮನ್ನು ಚಂದಕ ಕಾಡಿನ ಮೂಲಕ ಭುವನೇಶ್ವರಕ್ಕೆ ವಾಪಸ್ಸು ಕರೆದೊಯ್ಯುತ್ತೇನೆಂದು ಕಾಡಿನಲ್ಲಿ ಇನ್ನೊಂದು ನಿರ್ಜನ ಪ್ರದೇಶದೆಡೆಗೆ ಕಾರನ್ನು ತಿರುಗಿಸಿಕೊಂಡು ನಿಲ್ಲಿಸಿದ. ರಿವಾಲ್ವರನ್ನು ಕೈಯಲ್ಲಿ ಹಿಡಿದುಕೊಂಡೇ ನನ್ನನ್ನು ಹೊರಗೆಳೆಯಲು ಪ್ರಯತ್ನಿಸಿದ. ನಾನು ಬಲವಾಗಿ ಪ್ರತಿಭಟಿಸಿ ಗುರುವಿನ ಕಡೆಗೆ ಸರಿದುಕೊಂಡಾಗ ನಮ್ಮನ್ನು ಕೊಲ್ಲುವುದಾಗಿ ಬೆದರಿಸಿದ. ಆಗ ಗುರು 'ಕೊಂದು ಬಿಡು' ಎಂದಾಗ ಅವನನ್ನು ಚೆನ್ನಾಗಿ ಥಳಿಸಿದ. ನನಗೂ ಒಂದೆರಡು ಹೊಡೆತ ಕೊಟ್ಟು ರಿವಾಲ್ವರನ್ನು ಗುರುವಿನೆಡೆಗೆ ಹಿಡಿದು ಕಾರಿನ ಹಿಂದಿನ ಸೀಟಿನಲ್ಲಿ ಗುರುವಿನ ಎದುರಿಗೇ ಮತ್ತೆ ಅತ್ಯಾಚಾರವೆಸಗಿದ. ನಾನು ಟ್ಯಾಕ್ಸಿ ಡ್ರೈವರನನ್ನು ನಮಗೆ ಸಹಾಯ ಮಾಡಬೇಕೆಂದು ಅಂಗಲಾಚಿದಾಗ ಅವನು ನಿರಾಕರಿಸಿದ. ನಮ್ಮನ್ನು ಸಾಯಿಸುವರೆಂದು ಗುರು ತಿಳಿಸಿದಾಗ ಭುವನೇಶ್ವರಕ್ಕೆ ವಾಪಸ್ಸು ಬಂದೆವು.

ಕ್ರಿಯಾಶೀಲ ಕಾರ್ಯದಲ್ಲಿ
ತೊಡಗಿಸಿಕೊಳ್ಳಲು
ಯುವಕರಿಗೆ ಕರೆ



ಆದರೆ... ಇದಿಲ್ಲಾ ಅಂದ್ರೆ ನನಗೆ ಕ್ರಿಯಾಶೀಲವಾಗಿರೋದಕ್ಕೆ ಸಾಧ್ಯವಾಗೋಲ್ಲಾ... ಮಾರಾಯಾ!

ಎರಡು ಗಾಡಿಗಳು ನಮ್ಮನ್ನು ಭುವನೇಶ್ವರದರೆಗೂ ಹಿಂಬಾಲಿಸಿದವು. ನಾವು ನಂತರ ಮತ್ತೆ ರಾಷ್ಟ್ರೀಯ ಹೆದ್ದಾರಿಯನ್ನು ಬಳಸಿಕೊಂಡು ಕಟಕ್‌ನಲ್ಲಿನ ನನ್ನ ವಕೀಲರ ಕಛೇರಿ ತಲುಪಿದೆವು. ನಮ್ಮ ವಕೀಲರು ಹೆಂಡತಿಗೆ ಹುಷಾರಿಲ್ಲದ ಕಾರಣ ಭುವನೇಶ್ವರಕ್ಕೆ ರಾತ್ರಿಯೇ ಹೋಗಿದ್ದಾರೆಂದು ತಿಳಿದಾಗ ನಮಗೆ ಇನ್ನಷ್ಟು ಆಘಾತವಾಯಿತು. ವಕೀಲರ ತಾಯಿಯ ಬಳಿ ನಾನು ಸಾಮೂಹಿಕ ಅತ್ಯಾಚಾರಕ್ಕೊಳಗಾಗಿದ್ದೇನೆಂದು ವಕೀಲರನ್ನು ಸಂಪರ್ಕಿಸಲು ಅಲ್ಲಿಯ ದೂರವಾಣಿ ಉಪಯೋಗಿಸಲು ಅವಕಾಶಕೊಡಬೇಕೆಂದು ಬೇಡಲು ಆಕೆಯೂ ನಿರಾಕರಿಸಿದಳು. ಆಕೆ ನನ್ನ ಮುಖದ ಮೇಲೆ ಹೊಡೆದಂತೆ ಬಾಗಿಲು ಹಾಕಿಕೊಂಡಳು. ವಕೀಲರ ಮನೆಯ ಎದುರಿನ ಅಂಗಡಿಯವನು ಅಲ್ಲಿ ಕುಳಿತುಕೊಳ್ಳಬಹುದೆಂದು ತಿಳಿಸಿದ. ಕಾರಿನಲ್ಲಿ ಸೆಲ್ ಫೋನನ್ನು ಅವರು ಬಿಟ್ಟು ಹೋಗಿದ್ದಾರೆಂದು ತಿಳಿಸಿ ಡ್ರೈವರ್ ಅದನ್ನು ತಂದುಕೊಟ್ಟ.

ನಾನು ದೂರವಾಣಿಯ ಮೂಲಕ ಆಘಾತ, ಅಸಹಾಯಕತೆಯಿಂದ ವಕೀಲರನ್ನು ಸಂಪರ್ಕಿಸಿದಾಗ ಅವರು 'ಎಲ್ಲವೂ ಮುಗಿದುಹೋಗಿರುವಾಗ ಈಗ FIR ಸಲ್ಲಿಸುವುದರಿಂದ ಏನು ಪ್ರಯೋಜನ?' ಎಂದು ತಣ್ಣಗಿನ ಧ್ವನಿಯಲ್ಲಿ ಹೇಳಿದಾಗ ನನಗೆ ಇನ್ನಷ್ಟು ಆಘಾತವಾಯಿತು. ನಾನು FIR ಸಲ್ಲಿಸಲೇಬೇಕು ಎಂದು ಹಟ ಹಿಡಿದಾಗ ಅವರು ಅಲ್ಲಿಗೆ ಬರುವುದಕ್ಕೆ ನಿರಾಕರಿಸಿದರು. ನಂತರ ನಾನು ನನ್ನ ಸ್ನೇಹಿತರನ್ನು ಮತ್ತು ಮಹಿಳಾ ಹೋರಾಟಗಾರ್ತಿಯರನ್ನು ಕರೆದುಕೊಂಡು ಮಹಿಳಾ ಪೊಲೀಸ್ ಠಾಣೆಗೆ ಹೋಗಿ FIR ಸಲ್ಲಿಸಿದೆ.

ನ್ಯಾಯಕ್ಕಾಗಿ ನನ್ನ ಹೋರಾಟ, ಮನುಷ್ಯನ ಮೂಲಭೂತ ಹಕ್ಕುಗಳಿಗಾಗಿ ಹೋರಾಟ ಎಂದಿಗೂ ಬತ್ತಿ ಹೋಗದ ಉತ್ಸಾಹದಿಂದ ಮುಂದುವರೆಯುತ್ತದೆ. ನಾನು ಈ ಪ್ರಯತ್ನವನ್ನು ಎಂದಿಗೂ ಬಿಡುವುದಿಲ್ಲ. ಅಪರಾಧಗಳು ಪ್ರತಿದಿನವೂ ನಡೆಯುತ್ತಲೇ ಇವೆ, ಹೆಚ್ಚಾಗುತ್ತಲೇ ಇವೆ. ಇದು ನನ್ನ ವೈಯಕ್ತಿಕ ಹೋರಾಟ ಮಾತ್ರವಲ್ಲ. ಈ ಹೋರಾಟದಲ್ಲಿ ರಾಜ್ಯದ ಮಹಿಳೆಯರು ತಮ್ಮನ್ನು ತೊಡಗಿಸಿಕೊಂಡಿರುವುದರಿಂದ ಏನೇ ಬರಲಿ ನಾನು ಖಂಡಿತ ಮುಂದುವರೆಯುವೆ. ನನಗೆ ಕಳೆದುಕೊಳ್ಳಲು ಉಳಿದಿರುವುದಾದರೂ ಏನು? ಎಲ್ಲವನ್ನು ಕಳೆದುಕೊಂಡಿದ್ದೇನೆ. ಈಗ ನಾನು ಗೆದ್ದೇ ಗೆಲ್ಲುತ್ತೇನೆಂಬ ಆತ್ಮವಿಶ್ವಾಸ ನನಗಿದೆ. ■



ತೆರಿಗೆ ಉಳಿಸುವ ಉಪಾಯ

ಮಾರ್ಚ್ ತಿಂಗಳಲ್ಲಿ ತೆರಿಗೆಯ ಬಗ್ಗೆ ವಿಪರೀತ ತಲೆ ಕೆಡಿಸಿಕೊಂಡು ಪರದಾಡುವ ಪ್ರತಿಯೊಬ್ಬರಿಗೂ ಉಪಯುಕ್ತವಾದ ಲೇಖನವಿದು.

■ ನಾರಾಯಣ ಎಂ.ಭಟ್

ಮಾರ್ಚ್ ತಿಂಗಳು ಬಂತೆಂದರೆ ಮಿ.ಸಂಪತ್ ಕುಮಾರ್ ಅವರಿಗೆ ಎಲ್ಲಿಲ್ಲದ ಚಿಂತೆ ಕಾಡ ತೊಡಗುತ್ತದೆ. ಈ ಬಾರಿ ಅವರ ಮೇಲೆ 8 ಸಾವಿರ ರೂಪಾಯಿಗಳ ತೆರಿಗೆ ಇದೆ. ಅದನ್ನು ತಪ್ಪಿಸಲು ಯಾವ ಯಾವ ಯೋಜನೆಗಳಲ್ಲಿ ಹಣವನ್ನು ಎಷ್ಟೆಷ್ಟು ಪ್ರಮಾಣದಲ್ಲಿ ತೊಡಗಿಸಬೇಕು ಎನ್ನುವುದು ಅರ್ಥವಾಗದೆ ಇಡೀ ಸ್ಥಿತಿಯೇ ತುಂಬಾ ಗೊಂದಲ ಮಯವಾಗಿದೆ.

ಈ ಪರಿಸ್ಥಿತಿಯನ್ನು ಅನುಭವಿಸುತ್ತಿರುವವರಲ್ಲಿ ಮಿ.ಸಂಪತ್ ಏಕಾಂಗಿಯೇನಲ್ಲ. ಪ್ರೈವೇಟ್ ಕಂಪನಿಯೊಂದರಲ್ಲಿ ಟೈಪಿಸ್ಟ್ ಆಗಿರುವ ಸರೋಜ ತಾನು ಪ್ರತಿ ತಿಂಗಳು ಪೋಸ್ಟ್ ಆಫೀಸ್‌ನಲ್ಲಿ ಕಟ್ಟುತ್ತಿರುವ 300 ರೂಪಾಯಿಗಳ ರೆಕರಿಂಗ್ ಡಿಪಾಸಿಟ್‌ನಿಂದ ತನ್ನ ಮೇಲೆ ಕರ ಬೀಳಬಹುದೇ ಅಥವಾ ರಿಯಾಯಿತಿ ದೊರೆಯಬಹುದೇ ಎಂಬುದನ್ನು ಅರಿಯಲು ಯಾರನ್ನು ಕೇಳಬೇಕೋ ಎಂದು ತಿಳಿಯದೇ ಚಿಂತಿತಳಾಗಿದ್ದಾಳೆ.

ಆಂಗ್ಲ ಭಾಷೆಯಲ್ಲಿ ಒಂದು ಹೇಳಿಕೆ ಇದೆ.

"Two things are certain in life one is death! Another is Tax!!"

ನಮ್ಮಲ್ಲಿ ಬಹುತೇಕ ಜನ 'ಇನ್‌ಕಮ್ ಟ್ಯಾಕ್ಸ್' ಎಂಬ ಪದ ಕೇಳಿದೊಡನೆಯೇ ಬೆಚ್ಚಿ ಬೀಳುತ್ತಾರೆ! ಬಹಳ ಮಂದಿಗೆ ಇನ್‌ಕಮ್ ಟ್ಯಾಕ್ಸ್‌ನ್ನು ಉಳಿಸುವುದನ್ನು ಅರಿಯಬೇಕಾದರೆ, 'ಕಬ್ಬಿಣದ ಕಡಲೆ' ಯನ್ನು ತಿಂದಂತೆ ಎಂಬ ಭಾವನೆಯಿದೆ. ಇನ್ನು ಕೆಲವರು ಅಯ್ಯೋ ಬಿಡಿ, 100 ರೂಪಾಯಿ ತೆರಿಗೆ ಉಳಿಸೋದಕ್ಕೆ 500 ರೂಪಾಯಿ ಉಳಿತಾಯ ಮಾಡಬೇಕು. ಆದ್ದರಿಂದ ತೆರಿಗೆ ಕಟ್ಟುವುದೇ ಸರಿಯಾದ ಮಾರ್ಗ ಎಂಬ ಅಜ್ಞಾನ ತೋರುತ್ತಾರೆ! ಇವೆರಡು ತುಂಬಾ ತಪ್ಪು ಕಲ್ಪನೆಗಳು.

ಒಂದು ಉದಾಹರಣೆಯನ್ನು ಗಮನಿಸಿ. ಮಿ.ನಾಗೇಶ್ ಕುಮಾರ್, ತಮ್ಮ ಮಗಳ (ಅಪ್ರಾಪ್ತ ವಯಸ್ಸಿನ) ಇಲ್ಲವೆ ಹೆಂಡತಿಯ ಹೆಸರಿನಲ್ಲಿ ಪ್ರತಿ ತಿಂಗಳು 2500 ರೂ.ಗಳನ್ನು 15 ವರ್ಷಗಳ ಕಾಲ ಪಿ.ಪಿ.ಎಫ್ ಅಕೌಂಟ್‌ನಲ್ಲಿ ಜಮಾ ಮಾಡುತ್ತಾ ಹೋದರೆ., 15 ವರ್ಷಗಳ ನಂತರ (ಅಂದರೆ ಅವರ ಹೆಂಡತಿ ಅಥವಾ ಮಗಳಿಗೆ) ಅವರಿಗೆ, ಲಭ್ಯವಾಗುವ ಒಟ್ಟು ಮೊತ್ತ ಎಷ್ಟು ಗೊತ್ತೆ?

ಹೆಚ್ಚು ಕಮ್ಮಿ ಹನ್ನೆರಡು ಲಕ್ಷದ ಐವತ್ತೆಂಟು ಸಾವಿರದ ಆರುನೂರು ರೂಪಾಯಿಗಳು!

(12,58600!!).

ಇದು ಯಾವುದೇ ತೆರಿಗೆಯನ್ನು ನೀಡದೆ ಲಭ್ಯವಾಗುವ ಮೊತ್ತ!

ಹೌದು, ಇದಕ್ಕೆ ಗಿಫ್ಟ್‌ಟ್ಯಾಕ್ಸ್ ಆಗಲಿ. ವೆಲ್ತ್‌ಟ್ಯಾಕ್ಸ್ ಆಗಲಿ ಅಥವಾ ಇನ್‌ಕಮ್ ಟ್ಯಾಕ್ಸ್ ಆಗಲಿ ನೀಡಿಲ್ಲ ಎಂದಾಗ ನಮಗೆ ಕ್ರಮಬದ್ಧವಾದ ಹಾಗೂ ಯೋಜನಾ ಬದ್ಧವಾದ ತೆರಿಗೆ ಉಳಿತಾಯ ಯೋಜನೆಗಳ ಮಹತ್ವ ಅರಿವಿಗೆ ಬರುತ್ತದೆ.

ಇಲ್ಲಿ ಒಂದು ಮುಖ್ಯ ಗಮನಾರ್ಹ ಅಂಶವೆಂದರೆ, ಈ ಮೇಲೆ ಕಾಣಿಸಿದ ಹೂಡಿಕೆಯ ಮೇಲೆ ಮಿ.ನಾಗೇಶಕುಮಾರ್ ಪ್ರತಿ ವರ್ಷವೂ ತೆರಿಗೆಯಲ್ಲಿ ರಿಯಾಯಿತಿಯನ್ನು ಪಡೆದಿದ್ದಾರೆ ಎನ್ನವುದು.

ಈ ಲೇಖನದಲ್ಲಿ ತೆರಿಗೆ ಉಳಿತಾಯದ ಹಲವಾರು ಯೋಜನೆಗಳನ್ನು ಪರಿಚಯಿಸುವ ಪ್ರಯತ್ನ ಮಾಡಲಾಗಿದೆ.

ಮೊದಲಿಗೆ 1998-99ನೇ ಸಾಲಿನಲ್ಲಿ ಲಭ್ಯವಿರುವ ತೆರಿಗೆ ಉಳಿತಾಯ ಯೋಜನೆಗಳನ್ನು ಗಮನಿಸೋಣ.

ಆದಾಯ ತೆರಿಗೆ ಅಧಿನಿಯಮ ಸೆಕ್ಷನ್ 88ರ ಅನ್ವಯ ವರ್ಷಕ್ಕೆ ನೀವು ತೆರಿಗೆ ಉಳಿತಾಯ ಯೋಜನೆಯಡಿ ತೊಡಗಿಸಬಹುದಾದ ಗರಿಷ್ಠ ಮೊತ್ತ 70,000 ರೂಪಾಯಿಗಳು ಅಂದರೆ ಇದಕ್ಕೆ ಶೇ.20ರಷ್ಟು ತೆರಿಗೆ ರಿಯಾಯಿತಿಯನ್ನು ದೊರಕಿಸಿಕೊಂಡರೆ ನೀವು 14,000 ರೂ.ಗಳಷ್ಟು ತೆರಿಗೆಯನ್ನು ಉಳಿಸಿಕೊಳ್ಳಬಹುದು.

ತೆರಿಗೆ ಉಳಿತಾಯದ ಹಲವಾರು ಯೋಜನೆಗಳ ಪೈಕಿ ಬಹಳ ಪ್ರಚಲಿತ ಯೋಜನೆಗಳೆಂದರೆ

1. ಪಬ್ಲಿಕ್ ಪ್ರಾವಿಡೆಂಟ್ ಫಂಡ್ (P.P.F) (15 ವರ್ಷದ ಸಾರ್ವಜನಿಕ ಭವಿಷ್ಯನಿಧಿ ಖಾತೆ)
2. ಜೀವವಿಮೆಗಾಗಿ ತೆತ್ತ ಪ್ರೀಮಿಯಂ
3. ರಾಷ್ಟ್ರೀಯ ಉಳಿತಾಯ ಪತ್ರ 8ನೇ ಮಾಲಿಕೆ.
4. ಯು.ಟಿ.ಐ. ಜಾರಿಗೆ ತಂದಿರುವ ಯೂನಿಟ್ ಲಿಂಕ್ಡ್ ಇನ್‌ಶೂರೆನ್ಸ್ ಪ್ಲಾನ್ (ULIP) ಹಾಗೂ ಎಲ್.ಐ.ಸಿ. ಮ್ಯೂಚುವಲ್ ಫಂಡ್‌ನ ಯೋಜನೆ (ಧನರಕ್ಷಾ - 1989).
5. ಎನ್.ಎಸ್.ಎಸ್. 1992, (ರಾಷ್ಟ್ರೀಯ ಉಳಿತಾಯ ಯೋಜನೆ)
6. ಹಲವಾರು ಮ್ಯೂಚುಯಲ್ ಫಂಡ್‌ಗಳು ಜಾರಿಗೆ ತಂದಿರುವ ಈಎಲ್‌ಎಸ್‌ಎಸ್ (ಈಕ್ವಿಟ್ ಲಿಂಕ್‌ಡ್ ಸೇವಿಂಗ್ ಸ್ಕೀಮ್).
7. ಇನ್‌ಫ್ರಾಸ್ಟ್ರಕ್ಚರ್ ಬಾಂಡ್‌ಗಳು

ಇದೇ ಅಲ್ಲದೆ ಎಲ್‌ಐಸಿಯ Annuity Plans, Pension Funds, ಇನ್‌ಫ್ರಾಸ್ಟ್ರಕ್ಚರ್ ಕಂಪನಿಗಳ ಈಕ್ವಿಟಿ ಷೇರುಗಳು, ಸಹ ತೆರಿಗೆ ಉಳಿತಾಯಕ್ಕೆ ಲಭ್ಯ.

ಪೋಸ್ಟ್ ಆಫೀಸ್‌ನಿಂದ ಜಾರಿಗೆ ಬಂದಿರುವ ಜೀವವಿಮೆ ಯೋಜನೆಗಳು ಸರಕಾರಿ ಮತ್ತು ಸರಕಾರದಿಂದ ಅನುದಾನಿತ ಸಂಸ್ಥೆಯಲ್ಲಿ ದುಡಿಯುವ ಜನರಿಗೆ ಲಭ್ಯವಿರುವ ಆಕರ್ಷಕ ತೆರಿಗೆ ರಿಯಾಯಿತಿಯ ಯೋಜನೆಗಳಾಗಿವೆ.

ಹೂಡಿಕೆಗೆ ಮುನ್ನ ನೀವು ಹಲವಾರು ಅಂಶಗಳನ್ನು ಗಮನಿಸಿಕೊಂಡರೆ ನಿಮ್ಮ ಹೂಡಿಕೆಗೆ ಗರಿಷ್ಠ ಪ್ರತಿಫಲ ಹಾಗೂ ಹೆಚ್ಚಿನ ಸುರಕ್ಷತೆ ಮತ್ತು ಆಕರ್ಷಕ ತೆರಿಗೆ ರಿಯಾಯಿತಿಯು ಲಭಿಸುವುದು. ಈ ಮುಂದೆ ತಿಳಿಸಿರುವ ಕೆಲವು ಟಿಪ್ಸ್‌ಗಳು ನಿಮಗೆ ಮಾರ್ಗದರ್ಶಿಯಾಗಬಲ್ಲವು.

ಮೊಟ್ಟ ಮೊದಲನೇಯದಾಗಿ ತೆರಿಗೆ ರಿಯಾಯಿತಿ ಯೋಜನೆಯಲ್ಲಿ ಹೂಡಿದ ಹಣವು ಆದಾಯ ತೆರಿಗೆ ಅಧಿನಿಯಮದಲ್ಲಿ ಲಭ್ಯವಿರುವ ಮಿತಿಯೊಳಗೆ ಇರುವಂತೆ ನೋಡಿಕೊಳ್ಳಿ.

(18ನೇ ಪುಟ ನೋಡಿ)

ಹೂಡಿಕೆಯ ವಿಧ	ಹೂಡಿಕೆಯ ಮಿತಿ U/S 88ರ ಅನ್ವಯ	ಯೋಜನೆಯಡಿ ಮಾಡಬಹುದಾದ ಹೂಡಿಕೆ (ಕನಿಷ್ಠ ಮೊತ್ತ)	ಯೋಜನೆಯಡಿ ಮಾಡಬಹುದಾದ ಹೂಡಿಕೆ (ಗರಿಷ್ಠ ಮೊತ್ತ)	ವಯೋಮಿತಿ ಪ್ರಾರಂಭಿಕ ಹೂಡಿಕೆಗಾಗಿ	ನಷ್ಟ ಮತ್ತು ಅಪಾಯದ ಸಂಭಾವನಿಯತೆ	ಬಡ್ಡಿದರ
PPF (PUBLIC PROVIDENT FUND)	60,000 ರೂ.ಗಳು	100 ರೂ. ಪ್ರತಿ ವರ್ಷಕ್ಕೆ (ಯೋಜನೆ ಜಾರಿಯಲ್ಲಿರುವ ತನಕ)	60,000 ರೂ.ಗಳು ಪ್ರತಿ ವರ್ಷ	ಯಾವುದೇ ಮಿತಿಯಿಲ್ಲ	ಕಡಿಮೆ	12%
LIC ಪ್ರೀಮಿಯಂ ಉಂಬಳಿ ಪಾಲಿಸಿ (Endowment Policy)	60,000 ರೂ.ಗಳು	ನಿಗದಿ ಪಡಿಸಿದ ಪ್ರಿಮಿಯಂ ಪ್ರತಿ ವರ್ಷವೂ	ಮಿತಿ ಇಲ್ಲ	ಕನಿಷ್ಠ ವಯೋಮಿತಿ 12ವರುಷಗಳು, ಗರಿಷ್ಠ ವಯೋಮಿತಿ 65 ವರ್ಷಗಳು	ಕಡಿಮೆ	ಬೋನಸ್ ದರವು ಪಾಲಿಸಿಯಿಂದ ಪಾಲಿಸಿಗೆ ಹಾಗು ವರ್ಷದಿಂದ ವರ್ಷಕ್ಕೆ ಬದಲಾಗುತ್ತಿರುವುದು.
National Savings Certificate VIII Issue. (ರಾಷ್ಟ್ರೀಯ ಉಳಿತಾಯ ಪತ್ರ, 8ನೇ ಮಾಲಿಕೆ)	60,000 ರೂ.ಗಳು	100 ರೂ.ಗಳು (ಪ್ರಾರಂಭಿಕ ವರ್ಷದಲ್ಲಿ ಮಾತ್ರವೇ)	ಮಿತಿ ಇಲ್ಲ	ಮಿತಿ ಇಲ್ಲ	ಕಡಿಮೆ	11.5%
ULIP ಯೋಜನೆ (UTI)	60,000 ರೂ.ಗಳು	ಯೋಜನೆಯಡಿ ಪ್ರತಿ ವರ್ಷಕ್ಕೆ ರೂ. 400 ಪಾವತಿ	7,500 ರೂ.ಗಳು ಪ್ರತಿ ವರ್ಷಕ್ಕೆ	ಕನಿಷ್ಠ ವಯೋಮಿತಿ 12 ವರ್ಷಗಳು, ಗರಿಷ್ಠ ತಯೋಮಿತಿ 50.5/ 55.5 ವರ್ಷಗಳು 15/ 10 ವರುಷ ಅವಧಿಗೆ	ಮಾಧ್ಯಮ	ಡಿವಿಡೆಂಡ್ (Yield) 12%
National Savings Scheme, 1992 (ರಾಷ್ಟ್ರೀಯ ಉಳಿತಾಯ ಯೋಜನೆ 1992	60,000 ರೂ.ಗಳು	100 ರೂ.ಗಳು (ಪ್ರಾರಂಭಿಕ ವರ್ಷದಲ್ಲಿ ಮಾತ್ರವೇ)	ಮಿತಿ ಇಲ್ಲ	ಮಿತಿ ಇಲ್ಲ	ಕಡಿಮೆ	11% ಸರಳಬಡ್ಡಿ
ELSS Equity linked Savings Scheme	10,000. ರೂ.ಗಳು	1000 ರೂ.ಗಳು ಪ್ರಾರಂಭಿಕ ವರ್ಷದಲ್ಲಿ ಮಾತ್ರವೇ	ಮಿತಿ ಇಲ್ಲ	ಮಿತಿ ಇಲ್ಲ	ಹೆಚ್ಚು	ಬದಲಾಗುತ್ತಿರುವುದು ಮತ್ತು ಮೂಲ ಹಣದ ವೃದ್ಧಿಗೆ ಅನುಗುಣವಾಗಿ ನೀಡಿಕೆ
Infrastructure Bonds ಇನ್‌ಫ್ರಾಸ್ಟ್ರಕ್ಚರ್ ಬಾಂಡ್‌ಗಳು	70,000 ರೂ.ಗಳು	ನೀಡಿಕೆದಾರರನ್ನು ಅವಲಂಬಿಸಿ ಕನಿಷ್ಠ ಹೂಡಿಕೆ ಪ್ರಾರಂಭಿಕ ವರ್ಷ ಮಾತ್ರವೇ	ಮಿತಿ ಇಲ್ಲ	ಮಿತಿ ಇಲ್ಲ	ಮಾಧ್ಯಮ ದಿಂದ ಹೆಚ್ಚು ನೀಡಿಕೆದಾರರನ್ನು ಅವಲಂಬಿಸಿ ಹಾಗು ಪ್ರಾಜೆಕ್ಟ್‌ನ ವಿಧವನ್ನು ಅವಲಂಬಿಸಿ.	12ರಿಂದ 13% ನೀಡಿಕೆದಾರರನ್ನು ಅವಲಂಬಿಸಿ

ಬಡ್ಡಿ ಪಾವತಿ	ಬಡ್ಡಿಯ ಮೇಲೆ ಕರ	ಯೋಜನೆಯ ಅವಧಿ	ಕಾಲಾವಧಿಗೆ ಮುನ್ನ ಹಣದ ವಾಪಾಸಾತಿ (ನಗದೀಕರಣ)	ಸಾಲದ ಸವಲತ್ತು	ಅತಿರಿಕ್ತ ಸವಲತ್ತು/ ಪ್ರಯೋಜನಗಳು
ವಾರ್ಷಿಕ, ಚಕ್ರಬಡ್ಡಿ	ಸಂಪೂರ್ಣ ವಿನಾಯಿತಿ (ಯಾವುದೇ ಮಿತಿ ಇಲ್ಲ)	15 ವರ್ಷಗಳ ಯೋಜನೆ, 5 ವರ್ಷಗಳ ವಿಸ್ತರಣೆ ಪ್ರತಿ ಬಾರಿಗೆ ಸಾಧ್ಯ.	ಕೆಲವು ನಿಬಂಧನೆಗಳಿಗೊಳಪಟ್ಟು 5 ವರ್ಷದ ನಂತರ ಪತ್ರಿ ವರ್ಷವೂ ಒಂದು ಬಾರಿ ಹಣವನ್ನು ಹಿಂತೆಗೆದುಕೊಳ್ಳಬಹುದು.	ಎರಡು ಹಾಗೂ ಐದನೇಯ ವರ್ಷ ಶೇ. 1% ಬಡ್ಡಿಯಂತೆ	ನಾಮ ನಿರ್ದೇಶನ ಮಾಡಬಹುದು (Nomination)
ಬೋನಸ್ ಅನ್ನು ಪಾಲಿಸಿಯ ಪರಿಪಕ್ವವಾದ ನಂತರ ಲೆಕ್ಕ ಹಾಕಿ ನೀಡಲಾಗುವುದು.	ಬೋನಸ್‌ನ ಮೇಲೆ ಕರವಿಲ್ಲ	10 ವರ್ಷದಿಂದ 58 ವರ್ಷಗಳು	ಪಾಲಿಸಿಯನ್ನು ಸರೆಂಡರ್ ಮಾಡಬಹುದು. (3 ವರ್ಷದ ನಂತರ)	10. 5% ಬಡ್ಡಿ ದರಲ್ಲಿ ಲಭ್ಯ (3 ವರ್ಷದ ನಂತರ)	ಪಾಲಿಸಿ ಜಾರಿಯಲ್ಲಿರುವವರೆಗೂ ಜೀವ ವಿಮೆ ಲಭ್ಯ. ಅಪಘಾತ ವಿಮೆಯ ಸೌಲಭ್ಯವೂ ಸಾಧ್ಯ. ನಾಮ ನಿರ್ದೇಶನ ಮಾಡಬಹುದು
ಸಾಲಿಯಾನ ಬಡ್ಡಿ 6 ತಿಂಗಳಿಗೊಮ್ಮೆ ಲೆಕ್ಕ ಹಾಕಿ ಅವಧಿ ಅಂತ್ಯದಲ್ಲಿ ನೀಡಲಾಗುವುದು.	ಕರವಿದೆ. ಆದರೆ ತೆರಿಗೆ ಅಧಿ ನಿಯಮದ ಸೆಕ್ಷನ್ 80L ರ ಅನ್ವಯ 12,000 ರೂ. ಗಳಿಗೆ ಒಳಪಟ್ಟ ಗಳಿಸಿದ ಬಡ್ಡಿಗೆ ವಿನಾಯಿತಿ	6 ವರ್ಷಗಳು	ಮರಣ ಸಂಭವಿಸಿದಾಗ, ಕೋರ್ಟಿನ ಆದೇಶವಿದ್ದಾಗ (Courts order)	ಸಾಲದ ಸವಲತ್ತಿಲ್ಲ, ಆದರೆ ಬ್ಯಾಂಕ್‌ನಲ್ಲಿ ಅಡವಿಟ್ಟ ಸಾಲಕ್ಕೆ ಪ್ರಯತ್ನಿಸಬಹುದು.	ಜಂಟಿ ಹೆಸರಿನಲ್ಲಿ ಹೂಡಿಕೆ ಹಾಗು ನಾಮ ನಿರ್ದೇಶನ ಮಾಡಬಹುದು
ವಾರ್ಷಿಕ ಘೋಷಣೆಗೆ ಅವಧಿ ಅಂತ್ಯದಲ್ಲಿ ನೀಡಿಕೆ	ತೆರಿಗೆ ಇದೆ. ಆದರೆ ವಿನಾಯಿತಿ U/S 80L ರ ಅನ್ವಯ, 15,000 ರೂ. ಮಿತಿಗೆ ಒಳಪಟ್ಟು	10 ರಿಂದ 15 ವರ್ಷಗಳು	ಸಾಧ್ಯವಿದೆ	ಇಲ್ಲ	ಅವಧಿ ಜಾರಿಯಲ್ಲಿರುವ ತನಕವೂ ಜೀವ ವಿಮೆ ರಕ್ಷಣೆ, ಅಪಘಾತ ವಿಮೆ ಸೌಲಭ್ಯ. ಜಂಟಿ ಹೆಸರಿನಲ್ಲಿ ಹೂಡಿಕೆ ಸಿದ್ಧ.
ವಾರ್ಷಿಕ ಸರಳಬಡ್ಡಿ	ತೆರಿಗೆ ಇದೆ. ಆದರೆ ವಿನಾಯಿತಿ U/S 80L ರ ಅನ್ವಯ, 12,000 ರೂ. ಮಿತಿಗೆ ಒಳಪಟ್ಟು.	4 ವರುಷಗಳು, ಯೋಜನೆಯನ್ನು ಅವಧಿಯ ನಂತರವೂ ಮುಂದುವರಿಸಬಹುದು.	ಮರಣ ಸಂಭವಿಸಿದರೆ ಮಾತ್ರವೇ	ಇಲ್ಲ	ಜಂಟಿ ಹೆಸರಿನಲ್ಲಿ ಹೂಡಿಕೆ ಮಾಡಬಹುದು.
ಗಳಿಕೆಯನ್ನು ಘೋಷಿಸಿ, ಹಂಚಲಾಗುವುದು ವಾರ್ಷಿಕವಾಗಿ	U/S 80 L ರ ಅನ್ವಯ 15,000 ರೂ. ಮಿತಿಗೆ ಒಳಪಟ್ಟು ತೆರಿಗೆಯಲ್ಲಿ ವಿನಾಯಿತಿ.	10 ವರ್ಷಗಳು	3 ವರ್ಷದ ನಂತರ ಮರು ಖರೀದಿ, ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಲಿಸ್ಟಿಂಗ್ (Listing in Exchange)	ಇಲ್ಲ, ಬ್ಯಾಂಕ್‌ಗಳಲ್ಲಿ ಅಡವಿಟ್ಟು ಸಾಲ ಕೇಳಬಹುದು.	ಜಂಟಿ ಹೆಸರಿನಲ್ಲಿ ಹೂಡಿಕೆ ಸಾಧ್ಯ. (ನೀಡಿಕೆದಾರರನ್ನು ಅವಲಂಬಿಸಿ)
ನೀಡಿಕೆದಾರರನ್ನು ಅವಲಂಬಿಸಿದೆ	ಸಾಮಾನ್ಯವಾಗಿ ಪೂರ್ಣ ತೆರಿಗೆ ಬೀಳುವುದು.	ಸಾಮಾನ್ಯವಾಗಿ 3 ರಿಂದ 10 ವರುಷಗಳು (ನೀಡಿಕೆದಾರರನ್ನು ಅವಲಂಬಿಸಿದೆ	ನೀಡಿಕೆದಾರರನ್ನು ಅವಲಂಬಿಸಿದೆ, ಸಾಮಾನ್ಯವಾಗಿ 3 ವರ್ಷದ ನಂತರ ಲಭಿಸಬಹುದು.	ಇಲ್ಲ, ಆದರೆ ಬ್ಯಾಂಕ್‌ಗಳಿಂದ ಪ್ರಯತ್ನಿಸಬಹುದು.	ಜಂಟಿ ಹೆಸರಿನಲ್ಲಿ ಹೂಡಿಕೆ ಸಾಧ್ಯ.

(15ನೇ ಪುಟದಿಂದ)

ಉದಾಹರಣೆಗೆ: ಮನೆಕಟ್ಟಲು ನೀವು ಪಡೆದ ಸಾಲದ ಮರುಪಾವತಿ ಮಾಡುತ್ತಿದ್ದರೆ, ವಾರ್ಷಿಕ 10,000 ರೂಪಾಯಿಗಳ ಮರುಪಾವತಿಗಷ್ಟೇ ತೆರಿಗೆ ರಿಯಾಯಿತಿಯ ಲಭ್ಯ. ಒಂದು ವೇಳೆ ನೀವು ವರ್ಷಕ್ಕೆ 18,000ರೂ.ಗಳಷ್ಟು ಹಣ ಮರುಪಾವತಿ ಮಾಡುತ್ತಿದ್ದರೂ ಸಹ ಹೆಚ್ಚಿನ 8,000 ರೂ.ಗಳಿಗೆ ತೆರಿಗೆಯಲ್ಲಿ ಯಾವುದೇ ರಿಯಾಯಿತಿಯ ಲಭ್ಯವಾಗಲಾರದು!

ಹಾಗೆಯೇ ಈಎಲ್‌ಎಸ್‌ಎಸ್‌ನಲ್ಲಿ ನೀವು ಹೂಡಬಹುದಾದ ಗರಿಷ್ಠ ಮೊತ್ತ 10,000 ರೂಪಾಯಿಗಳು.

ಎರಡನೇಯದಾಗಿ ನಿಮ್ಮ ವಯಸ್ಸನ್ನು ಆಧರಿಸಿ ಹಣ ಹೂಡಿಕೆ ಮಾಡಿ.

ಉದಾಹರಣೆಗೆ ಪಿ.ಪಿ.ಎಫ್. ಅಕೌಂಟ್‌ನಲ್ಲಿ ನೀವು ಹಣ ಹೂಡಿಕೆ ಮಾಡುವುದಕ್ಕೆ ಮುಂಚೆ ಅದರ ಅವಧಿ 15 ವರ್ಷಗಳು ಎನ್ನವುದನ್ನು ಗಮನಿಸಿ. ಆದ್ದರಿಂದ ನಿಮ್ಮ ವಯಸ್ಸು 60ಕ್ಕೆ ಮೇಲ್ಪಟ್ಟು ಇದ್ದರೆ ಇದೊಂದು ಆಕರ್ಷಕ ಯೋಜನೆ ನಿಮ್ಮ ಪಾಲಿಗೆ ಆಗಲಾರದು. ಜೀವ ವಿಮೆಯಲ್ಲಿ ಹೂಡಿಕೆ ಮಾಡಬೇಕಾದಲ್ಲಿ ವಯಸ್ಸು ಕಮ್ಮಿ ಇರುವಾಗಲೇ ಆರಂಭಿಸುವುದು ಸೂಕ್ತ. ವಯಸ್ಸು ಹೆಚ್ಚಾದಂತೆಲ್ಲ ಕಟ್ಟಬೇಕಾದ ಪ್ರಿಮಿಯಂ ಹಣದ ಮೊತ್ತ ಹೆಚ್ಚಾಗಿರುತ್ತದೆ. ಯುಎಲ್‌ಐಪಿ ಯೋಜನೆಗೆ ಸೇರಲು ನಿಮ್ಮ ವಯಸ್ಸು 55 ವರ್ಷಕ್ಕಿಂತ ಕಡಿಮೆ ಇರಬೇಕು.

ಹೂಡಿಕೆ ಹಾಗೂ ಅಪಾಯ ಮತ್ತು ನಷ್ಟ ಸಂಭವದ ಬಗ್ಗೆ ಕೂಲಂಕುಷವಾಗಿ ತಿಳಿದ ನಂತರವೇ ಹಣ ಹೂಡುವುದು ಜಾಣ ಹೂಡಿಕೆದಾರನ ಲಕ್ಷಣ.

ನೀವು ನಿವೃತ್ತಿಯ ಅಂಚಿನಲ್ಲಿದ್ದರೆ, ಷೇರು ಹಾಗೂ ಇನ್ನಿತರ ಹೂಡಿಕೆಯ ಯೋಜನೆಯಲ್ಲಿ ಹಣ ತೊಡಗಿಸಿ, ತೆರಿಗೆ ಉಳಿತಾಯ ಮಾಡುವೆ ಎಂಬ ಹುಂಬತನಕ್ಕೆ ಕೈಹಾಕದಿರುವುದೇ ವಾಸಿ! ಆದರೆ, ನಿಮ್ಮ ವಯಸ್ಸು ನಿಮ್ಮೊಂದಿಗಿದ್ದರೆ (ಉದಾ: 25ರಿಂದ 30 ವರ್ಷ) ನೀವು ಷೇರು ಮಾರುಕಟ್ಟೆಯಲ್ಲಿ ಇಲ್ಲವೇ ಈಎಲ್‌ಎಸ್‌ಎಸ್ ಯೋಜನೆಗಳಲ್ಲಿ ಹಣಹೂಡಲು ಅಡ್ಡಿಯಿಲ್ಲ, ಆದರೆ ಷೇರು ಮಾರುಕಟ್ಟೆ ಅಥವಾ ಈಎಲ್‌ಎಸ್‌ಎಸ್‌ನ ಆಯ್ಕೆಯಲ್ಲಿ ತುಂಬಾ ಜಾಗರೂಕತೆ ವಹಿಸುವುದು ಅತೀ ಅಗತ್ಯ. ಇಲ್ಲಿ ಹೂಡಿದ ಹಣಕ್ಕೆ ಹೆಚ್ಚಿನ ಪ್ರತಿಫಲ ಮತ್ತು ಆಕರ್ಷಕ ತೆರಿಗೆ ರಿಯಾಯಿತಿಯೂ ಲಭ್ಯವಾಗುವ ಸಂಭವನೀಯತೆ ಇದೆ.

ಪಿ.ಪಿ.ಎಫ್, ಎನ್‌ಎಸ್‌ಸಿ ಹಾಗೂ ಎನ್‌ಎಸ್‌ಎಸ್‌ಗಳಲ್ಲಿ ಹಣ ಹೂಡಿಕೆ ಅತ್ಯಂತ ಹೆಚ್ಚಿನ ಭದ್ರತೆ ನೀಡಬಲ್ಲದಾದರೂ ದೊರೆಯುವ ಪ್ರತಿಫಲ ಹೆಚ್ಚಾಗಿರುವುದಿಲ್ಲ.

ಆದ್ದರಿಂದ ನೆನಪಿಡಿ, ನೀವು ನಷ್ಟದ ಸಂಭಾವನೀಯತೆಯನ್ನು ಅನುಭವಿಸಲು ಹೆಚ್ಚು ಶಕ್ತರಾಗಿದ್ದಷ್ಟು, ನಿಮ್ಮ ಹೂಡಿಕೆಯನ್ನು ಹೆಚ್ಚು ಪ್ರತಿಫಲ ನೀಡುವ ಯೋಜನೆಗಳಲ್ಲಿ ತೊಡಗಿಸುವ ಸಾಹಸ ಮಾಡಬಹುದು. ಇಲ್ಲವಾದಲ್ಲಿ ಕಡಿಮೆ ನಷ್ಟದ ಸಂಭವನೀಯತೆ ಇರುವ ಯೋಜನೆಗಳಿಗೆ ಶರಣು ಹೋಗುವುದೇ ಹೆಚ್ಚು ಸೂಕ್ತ!

ಜೀವ ವಿಮೆಯಲ್ಲಿ ತೊಡಗಿಸಿದ ಹಣಕ್ಕೆ ದೊರೆಯುವ ಪ್ರತಿಫಲ ಕಮ್ಮಿ. ಇಲ್ಲಿ ಜೀವದ ವಿಮೆಗೆ ಹೆಚ್ಚಿನ ಆದ್ಯತೆ ಇರುವುದರಿಂದ, ಈ ಯೋಜನೆಯನ್ನು ಹೆಚ್ಚಿನ ಪ್ರತಿಫಲಾಪೇಕ್ಷೆ ಇರುವವರು ದೂರವಿಡುವುದರಲ್ಲಿ ಆಶ್ಚರ್ಯವಿಲ್ಲ.

ಒಂದು ಲಕ್ಷ ವಿಮೆಯನ್ನು 20 ವರ್ಷದ ಅವಧಿಗೆ ತೆಗೆದುಕೊಂಡರೆ ದೊರೆಯುವ (ಪ್ರತಿಫಲ) ವಾರ್ಷಿಕ ಚಕ್ರಬಡ್ಡಿ 7.4 (ಉಂಬಳಿ ಯೋಜನೆಯಲ್ಲಿ).

ಆದ್ದರಿಂದ, ನೀವು ಯೋಜನೆಯನ್ನು ಆಯ್ಕೆ ಮಾಡುವ ಮುನ್ನವೇ ಸುರಕ್ಷತೆ ಹಾಗೂ ಪ್ರತಿಫಲಗಳ ಸಮನ್ವಯ ಇರುವಂತೆ ನೋಡಿಕೊಳ್ಳಿ.

ಹೂಡಿಕೆಯ 'ಅವಧಿ'ಯು ಬಹುಮುಖ್ಯ. ನಿಮ್ಮ 'ಹಣ'ವು ಹೂಡಿಕೆಯಾದ ನಂತರವೂ ಅತೀತುರ್ತಿನ ವೇಳೆಯಲ್ಲಿ ನಿಮಗೆ ಲಭ್ಯವಿರಬೇಕು. ಉದಾಹರಣೆಗೆ: ಎನ್‌ಎಸ್‌ಸಿಯಲ್ಲಿ ತೊಡಗಿಸಿದ ಹಣವನ್ನು 6 ವರುಷಗಳ ನಂತರವೇ ಹಿಂತೆಗೆದುಕೊಳ್ಳಲು ಸಾಧ್ಯ. ಆದರೆ ಈಎಲ್‌ಎಸ್‌ಎಸ್ ಯೋಜನೆಯಲ್ಲಿ 3 ವರುಷದ ನಂತರ ಹಣವನ್ನು ಹಿಂತೆಗೆಯುವ ಸೌಲಭ್ಯವಿರುತ್ತದೆ.

ಜೀವ ವಿಮೆ ಪಾಲಿಸಿಗಳ ಮೇಲೆ ಸಾಲದ ರೂಪದಲ್ಲಿ ನೀವು ಕಟ್ಟಿರುವ ಪ್ರಿಮಿಯಂಗಳನ್ನು ಆಧರಿಸಿ ಹಣವನ್ನು ಮರಳಿ ಪಡೆಯಬಹುದಾದರೂ ಈ ವ್ಯವಸ್ಥೆಯನ್ನು ಕೊನೆಯ ಮಾರ್ಗವನ್ನಾಗಿ ಉಪಯೋಗಿಸುವುದು ಉತ್ತಮ. ಉದಾಹರಣೆಗೆ ನೀವು ಇಲ್ಲಿಯ ತನಕ 10,000 ರೂಪಾಯಿ ಪ್ರೀಮಿಯಂ ಕಟ್ಟಿದ್ದರೆ ನಿಮಗೆ ದೊರೆಯುವ ಸಾಲ 4500 ರೂಪಾಯಿಗಳನ್ನು ಮೀರಲಾರದು!. ಅದೂ ಅಲ್ಲದೇ, ಜೀವವಿಮೆಯ ಎಲ್ಲಾ ಪಾಲಿಸಿಗಳ ಮೇಲೆ ಸಾಲದ ಸೌಲಭ್ಯ ಲಭ್ಯವಿಲ್ಲ. (ಉದಾ: ಹಣ ಮರಳಿ ಬರುವ ಪಾಲಿಸಿ ಇತ್ಯಾದಿಗಳು) ಆದ್ದರಿಂದ ನಿಮ್ಮ ನಿಕಟ ಭವಿಷ್ಯದ ಬೇಡಿಕೆಗಳ ಪೂರೈಕೆ (ಉದಾ: ಮೂರು ವರುಷದ ನಂತರ ಮಗಳ ಮದುವೆ, 6 ವರುಷದ ನಂತರ ಮಗನಿಗೆ ಇಂಜಿನೀಯರಿಂಗ್ ಸೀಟು ಇತ್ಯಾದಿ)ಗಳನ್ನು ಗಮನಿಸಿಕೊಂಡು, ಅಲ್ಪಾವಧಿ ಅಥವಾ ಮಾಧ್ಯಮಾವಧಿ ಇಲ್ಲವೇ ದೀರ್ಘಾವಧಿಯ ಹೂಡಿಕೆಯ ಯೋಜನೆಗಳನ್ನು ಆಯ್ಕೆ ಮಾಡಿಕೊಳ್ಳಿ.

ನಿಮ್ಮ ಹೂಡಿಕೆಗೆ ಪ್ರತಿಫಲಗಳು ಬೇರೆ ಬೇರೆ ಯೋಜನೆಗಳಲ್ಲಿ ಬೇರೆ ಬೇರೆ ರೀತಿಯಾಗಿರುತ್ತದೆ. ಆದ್ದರಿಂದ ಹೂಡಿಕೆಗೆ ಮುನ್ನವೇ ಯಾವ ಯಾವ ಯೋಜನೆಗಳಲ್ಲಿ ಎಷ್ಟೆಷ್ಟು ಹಣ ಹೂಡಿದರೆ ಅತ್ಯಧಿಕ ಪ್ರತಿಪಲ ದೊರೆಯುವ ಸಾಧ್ಯತೆಗಳಿವೆ ಎನ್ನುವುದನ್ನು ತುಲನಾತ್ಮಕ ದೃಷ್ಟಿಯಿಂದ ಲೆಕ್ಕ ಹಾಕಿ ನೋಡಿ. ನಿಮಗೆ ದೊರೆಯುವ ಪ್ರತಿಫಲವು ಅದಕ್ಕೆ ಅನ್ವಯಿಸುವ ತೆರಿಗೆಯನ್ನು ಕಳೆದ ನಂತರ ವಾರ್ಷಿಕ ವೃದ್ಧಿಯನ್ನು ಯಾವ ದರದಲ್ಲಿ ದೊರಕಿಸುತ್ತಿದೆ (Post tax annualised return) ಎನ್ನುವುದು ಮುಖ್ಯ.

ಉದಾಹರಣೆಗೆ ಈಎಲ್‌ಎಸ್‌ಎಸ್‌ನಲ್ಲಿ ತೊಡಗಿಸಿದ 10,000 ರೂಪಾಯಿ 3 ವರ್ಷದ ನಂತರ 16,000 ರೂಪಾಯಿಗಳಾಗಿ ವೃದ್ಧಿಗೊಂಡರೆ, ವಾರ್ಷಿಕ ಚಕ್ರ ಬಡ್ಡಿ ದರ 17 ರಂತೆ ಕಂಡರೂ ನಿಜವಾದ ಪ್ರತಿಫಲ 15.5. ರಷ್ಟಾಗಿರುವುದು. ಇಲ್ಲಿ ಕ್ಯಾಪಿಟಲ್ ಗೆಯನ್ಸ್‌ನ ಮೇಲೆ ತೆರಿಗೆ ಮುರಿಯಲಾಗುತ್ತದೆ. ಎನ್‌ಎಸ್‌ಸಿಯಲ್ಲಿ ತೊಡಗಿಸಿದ ಹಣಕ್ಕೆ ಅರ್ಧವಾರ್ಷಿಕ ಚಕ್ರಬಡ್ಡಿ 11.5 ರಷ್ಟಿದ್ದು, ವಾರ್ಷಿಕ ಚಕ್ರಬಡ್ಡಿ 11.83 ಇರುತ್ತದೆ. ಇದೇ ಅಲ್ಲದೇ ಎನ್‌ಎಸ್‌ಸಿಯಲ್ಲಿ ದೊರೆತ ವಾರ್ಷಿಕ ಚಕ್ರಬಡ್ಡಿಯು ಮುಂದಿನ ವರುಷಗಳಲ್ಲಿ ಹೂಡಿಕೆ ಎಂದು ಪರಿಗಣಿಸಲ್ಪಟ್ಟು ಶೇ20ರ ತೆರಿಗೆ ರಿಯಾಯಿತಿ ಲಭಿಸುವಂತೆ ಮಾಡುವುದು ಹೀಗಾಗಿ ಎನ್‌ಎಸ್‌ಸಿಯಲ್ಲಿನ ಪ್ರತಿಫಲ 14.2ರಷ್ಟಾಗುತ್ತದೆ.

ಕೆಲವು 'ಹೂಡಿಕೆ'ಯ ಯೋಜನೆಗಳಲ್ಲಿ ಹಲವು ವಿಶೇಷ ಆಕರ್ಷಣೆಗಳಿರುತ್ತವೆ. ಉದಾಹರಣೆಗೆ ಯುಎಲ್‌ಐಪಿನಲ್ಲಿ ಜೀವವಿಮೆಯ ಜೊತೆ ಅಪಘಾತ ವಿಮೆಯ ಸೌಲಭ್ಯವಿರುತ್ತದೆ. ಹೂಡಿಕೆಗೆ ಮುನ್ನ ಇಂತಹ ಯೋಜನೆಗಳತ್ತಲೂ ಕಣ್ಣು ಹಾಯಿಸಿ.

ಹಣ ಹೂಡಿಕೆಯನ್ನು ಪ್ರತಿತಿಂಗಳೂ ಮಾಡುವುದು ಸೂಕ್ತವೆ ಅಥವಾ ನಿಮ್ಮ ಅನುಕೂಲಕ್ಕೆ ತಕ್ಕಂತೆ ಮಾಡುವುದೆ ಎನ್ನುವುದು ಮುಖ್ಯ. ನೀವು ಸಂಬಳದಾರರಾಗಿದ್ದರೆ ನಿಮ್ಮ ಸಂಬಳದಲ್ಲಿಯೇ ಹೂಡಿಕೆಗೆ ಹಣವನ್ನು ಮುರಿಸಿಕೊಳ್ಳುವುದು ಸೂಕ್ತ ಒಮ್ಮೆ ಮನೆಗೆ ತಂದ ಮೇಲೆ ಕೆಲವೊಮ್ಮೆ ಹಣವನ್ನು ಅನಗತ್ಯ ದುಂದು ವೆಚ್ಚಕ್ಕೆ ಸುರಿಯುವ ಸಾಧ್ಯತೆಗಳಿರುತ್ತವೆ ಅಲ್ಲವೇ?

ಕೇವಲ ಹೂಡಿಕೆಯ ಮೇಲಿನ ಪ್ರತಿಫಲ ಹಾಗೂ ಸುರಕ್ಷತೆಯಷ್ಟೇ ಮುಖ್ಯವಲ್ಲ. ಹೂಡಿಕೆಯ ನಂತರ ಲಭ್ಯವಿರುವ ಸೇವೆ

ಸೌಲಭ್ಯಗಳು ಬಹುಮುಖ್ಯ.

ನಿಮ್ಮ ಹೂಡಿಕೆಯ ಹಣವು ಫಲಿತವಾದನಂತರ, ಅದನ್ನು ಪಡೆಯಲು ಪೋಸ್ಟ್ ಆಫೀಸ್‌ಗೆ ಹೋದರೆ ಅಲ್ಲಿ ತಾಸು ಗಟ್ಟಲೇ ಕ್ಯೂನಲ್ಲಿ ನಿಲ್ಲುವ ಸಂದರ್ಭ ಬಂದಾಗ ಹೂಡಿಕೆಯ ನಂತರದ ಉತ್ತಮ ಸೇವಾ ಸೌಲಭ್ಯದ ಅಗತ್ಯತೆಯ ಅನುಭವ ನಿಮಗಾಗುತ್ತದೆ.

ಈ ಹಿಂದೆ ವಿವರಿಸಿದಂತೆ ನಿಮ್ಮ ಅಪ್ರಾಪ್ತ ವಯಸ್ಸಿನ ಮಗ/ಮಗಳು ಹಾಗೂ ಹೆಂಡತಿಯ ಹೆಸರಿನ ಮೇಲೆ ಹೂಡಿಕೆ ಮಾಡಿದಾಗಲೂ ತೆರಿಗೆ ರಿಯಾಯಿತಿಗೆ ನೀವು ಅರ್ಹರಾಗಿರುವಿರಿ. ಎಲ್ಐಸಿಯ ಪ್ರಿಮಿಯಂ, ಪಿಪಿಎಫ್ ಹಾಗೂ ಎಲ್ಐಪಿನಂತಹ ಯೋಜನೆಗಳು ಇದಕ್ಕೆ ಉದಾಹರಣೆಗಳು.


ಕೊನೆಯದಾಗಿ ಈ ಎಲ್ಲಾ ಯೋಜನೆಗಳನ್ನು ಗಮನಿಸಿದಾಗ ಒಂದು ಅಂಶ ಬೆಳಕಿಗೆ ಬರುವುದು. ಅದೇನೆಂದರೆ, ಯಾವುದೇ ಒಂದು ಯೋಜನೆಯು ನೀವು ಇಚ್ಛೆ ಪಡುವ ಎಲ್ಲಾ ಸವಲತ್ತುಗಳನ್ನು ಒದಗಿಸಲು ಅಶಕ್ತವಾಗಿದೆ. ಆದ್ದರಿಂದ ಈ ಎಲ್ಲಾ ಯೋಜನೆಗಳ ಸೂಕ್ತವಾದ ಆಯ್ಕೆಗಳಿಂದಲೇ ತೆರಿಗೆ ಉಳಿತಾಯವನ್ನು ಗರಿಷ್ಟವಾಗಿ ಸಾಧಿಸಲು ಸಾಧ್ಯ.

ತೆರಿಗೆ ಉಳಿತಾಯಕ್ಕೆ ಎರಡು ಸರಳ ಸೂತ್ರಗಳಿವೆ.

1. ಪ್ರತಿಯೊಬ್ಬರಿಗೂ ಹೊಂದಿಕೊಳ್ಳುವ ಸಾರ್ವತ್ರಿಕ ಯೋಜನೆ ಯಾವುದೂ ಇಲ್ಲ!

2. ನೀವು ಮಾಡುವ ಹೂಡಿಕೆಯು ನಿಮ್ಮ ವೈಯಕ್ತಿಕ ಅಗತ್ಯತೆ ಹಾಗೂ ಬೇಡಿಕೆಗಳನ್ನು ಪೂರೈಸುವಂತಿರಬೇಕು ಮತ್ತು ಇದರ ಬಗ್ಗೆ ನಿಮಗಿಂತ ಹೆಚ್ಚಾಗಿ ಅರಿತವರು ಯಾರೂ ಇಲ್ಲಾ!

ಆದ್ದರಿಂದ ನೀವೇ ಈ ಬಗ್ಗೆ ಅಂತಿಮ ನಿರ್ಧಾರ ತಾಳಬೇಕು. ಹಾಗಿದ್ರೆ ಇಂದಿನಿಂದಲೇ ತೆರಿಗೆ ಉಳಿತಾಯಕ್ಕೆ ಶ್ರೀಕಾರ ಮಾಡಿ. 'ತೆರಿಗೆ ವಂಚನೆ'ಯಿಂದ ದೂರವಿರಿ.! ■



ಮಂಡ್ಯದ ಪಂದ್ಯವೊಂದರಲ್ಲಿ ಕುಂಬ್ಳೆ ಎಸೆದ ಬೌನ್ಸರ್ ದಾಂಡಿಗನ ಮುಖಕ್ಕೆ ಬಡಿದಾಗ, ಅಲ್ಲಿನ ಜನ ಅವರಿಗೆ ಇಕ್ಕಲು ಹೊರಟ್ಟಿದ್ದರು. ಆ ಘಟನೆ ಅವರು ಸ್ಪಿನ್ ಚೆಂಡೆಸೆತಕ್ಕೆ ನಾಂದಿ ಹಾಡಿತು.

■ ಮಾಧವ ಐತಾಳ್

ಮುಂಬೈನ ನಕಲಿ ಹುಲಿ ಬಾಳಠಾಕ್ರೆ ಭಾರತ ಪಾಕಿಸ್ತಾನ ಕ್ರಿಕೆಟ್ ಸರಣಿಯನ್ನು ನಿಲ್ಲಿಸುತ್ತೇನೆ ಎಂದು ಘರ್ಜಿಸಿತ್ತು. ನಂತರ ಮಿಯಾವ್ ಎನ್ನದಿದ್ದಲ್ಲಿ -

ಆ ಘಟನೆ ಅದೇ ದಿನ ನಡೆಯದಿದ್ದಲ್ಲಿ ಪಂದ್ಯ ಸಮನಾಗುತ್ತಿತ್ತು. ಮೂರನೇ ದಿನ ಮಳೆ ಸುರಿಯಿತು. ಭಾನುವಾರ ಬಾರದ ವರುಣನಿಗೆ -

ಅನಿಲ್ ಕುಂಬ್ಳೆಯನ್ನು ಬೌಲ್ ಮಾಡುತ್ತಿದ್ದ ತುದಿಯಿಂದ ಬದಲಿಸಿ ಇನ್ನೊಂದೆಡೆಯಿಂದ ಚೆಂಡೆಸೆಯಲು ಅಜರ್ ಹೇಳದಿದ್ದಲ್ಲಿ -

ಭಾರತ ಅಂದು ಗೆಲ್ಲುತ್ತಿರಲಿಲ್ಲ. ಭಾರತೀಯನೊಬ್ಬ ದಾಖಲೆಯನ್ನು ಸಮ ಮಾಡುತ್ತಿರಲಿಲ್ಲ. ಎತ್ತಣ ಮಾಮರ ಎತ್ತಣ ಕೋಗಿಲೆ ಎನ್ನಬೇಡಿ, ಇವೆಲ್ಲಕ್ಕೂ ಸಂಬಂಧವಿದೆ.

ಸಮವಾದ ವಿಶ್ವ ದಾಖಲೆ

ಅಂದು ಭಾನುವಾರ. ಪಾಕಿಸ್ತಾನದ ಪ್ರಾರಂಭ ಆಟಗಾರರು ವಿಜೃಂಭಿಸುತ್ತಿದ್ದರು. ಕುಂಬ್ಳೆ ಬೌಲ್ ಮಾಡುತ್ತಿದ್ದ ವಿರುದ್ಧ ದಿಕ್ಕಿನಲ್ಲಿ ನೆಲ ಸ್ವಲ್ಪ ಸಡಿಲವಾಗಿತ್ತು. ಅದಕ್ಕೆ ಕಾರಣ ಪಾಕಿಸ್ತಾನದ ವೇಗದ ಬೌಲರ್‌ಗಳ ಪದಾಘಾತ. ಅಜರ್ ಕುಂಬ್ಳೆಯ ಪಕ್ಕ ಬದಲಾಯಿಸಿದರು. ಊಟದ ನಂತರ ಕುಂಬ್ಳೆ ತಮ್ಮ ಚೆಂಡೆಸೆತದ ವೇಗವನ್ನು ಹೆಚ್ಚಿಸಿದರು. ಕುಂಬ್ಳೆಯ ಟೋಪಿ ಸ್ವೆಟರನ್ನು ತೆಗೆದುಕೊಂಡ ತೆಂಡೂಲ್ಕರ್ ಅದನ್ನು ಅಂಪೈರ್ ಜಯಪ್ರಕಾಶ್‌ಗೆ ಕೊಟ್ಟು, ಕುಂಬ್ಳೆಗೆ ನಾನು ನಿನ್ನ ಭವಿಷ್ಯವನ್ನು ಬದಲಿಸುತ್ತೇನೆ ಎಂದರು. ನಂತರದ ಮೊದಲ ಚೆಂಡಿನಲ್ಲೇ ದಾಂಡಿಗ ಔಟಾದರು. ಆಗ ಸಮಯ 12.57. ನಂತರ ಕ್ರಮವಾಗಿ 24.2, 24.3, 28.3, 28.4, 36.1, 38.3, 54.1, 58.5, 59 ಮತ್ತು 60.3ನೇ ಓವರಿನಲ್ಲಿ ವಿಕೆಟ್‌ಗಳು ಕ್ರಮವಾಗಿ ಉರುಳಿ 10ನೇ ವಿಕೆಟ್ ಉರುಳಿ ಬಿದ್ದಾಗ ಸಮಯ 3.46. ಆಗ ಕುಂಬ್ಳೆಯ ಚೆಂಡೆಸೆತದ ವಿವರ ಹೀಗೆ ಇತ್ತು :

26.3 ಓವರ್ - 9 ಮೇಡನ್ - 74 ರನ್ - 10 ವಿಕೆಟ್

1956ರಲ್ಲಿ ಜಿಮ್ ಲೇಕರ್ ಇಂತದ್ದೇ ಸಾಧನೆಗೈದಿದ್ದರು. (53 ರನ್ನಿಗೆ 10 ವಿಕೆಟ್) ಕುಂಬ್ಳೆಯ ಕೊನೆಯ ಕ್ಯಾಚ್ ಹಿಡಿದಾತ ಲಕ್ಷ್ಮಣ್, ಚೆಂಡು ಆತನ ಬಳಿ ಇರಲಿಲ್ಲ. ತಂಡದ ತರಬೇತುದಾರ ಕುರ್ನೋಸ್‌ಗೆ ಅದು ಅಂಗಳದಲ್ಲಿ ಸಿಗಲಿಲ್ಲ. ಕೊನೆಗೆ ಅದು ವೆಂಕಿಯ ಬ್ಯಾಗ್‌ನಿಂದ ಹೊರಗೆ ಬಂತು. ಬಹುಶಃ ಕುಂಬ್ಳೆಯ ಪಾಲಿನ ಎಂದೆಂದಿಗೂ ಅಳಿಯದ ಸ್ಮರಣ ಚಿನ್ಹೆಯಾಗಿ ಉಳಿದು ಬಿಡುತ್ತದೆ.

ಕೋಟ್ಲಾದಲ್ಲಿ 3 ಜನ 8 ವಿಕೆಟ್ ತೆಗೆದುಕೊಂಡಿದ್ದಾರೆ. ಅವರು ಸಿಕಂದರ್ ಭಕ್ತ್, ಎಸ್. ವೆಂಕಟರಾಘವನ್ ಮತ್ತು ವಿನೂ ಮಂಕಡ್. 9 ವಿಕೆಟ್ ಪಡೆದವರು ಕಪಿಲ್‌ದೇವ್, ಎಸ್.ಪಿ. ಗುಪ್ತೆ ಮತ್ತು ಬೆಸ್ಸು ಪಟೇಲ್. ತಂಡದ ಉಳಿದ ಸದಸ್ಯರು ಹೇಳುವ ತನಕ ತನ್ನ ಸಾಧನೆಯ




ಬಗ್ಗೆ ಕುಂಬ್ಳೆಗೆ ಹೆಚ್ಚೇನೂ ಗೊತ್ತಿರಲಿಲ್ಲ. ದೇಶ, ವಿದೇಶಗಳ ಎಲ್ಲೆಡೆಯಿಂದ ಶುಭಾಶಯಗಳ ಮಳೆ ಸುರಿಯಿತು. ಗೃಹಮಂತ್ರಿ ಕುಂಬ್ಳೆಗಾಗಿ ವಿಶೇಷ ಪಾರ್ಟಿ ನೀಡಿದರು. ಆದರೂ ಈ ಸಭ್ಯ, ಸುಸಂಸ್ಕೃತ ಮನುಷ್ಯ ಇನ್ನಷ್ಟು ಸೌಜನ್ಯದಿಂದ ಮಾತನಾಡಿದ. ನಂತರ ಸಂದರ್ಶನವೊಂದರಲ್ಲಿ ಎಳೆಯ ಬೌಲರ್‌ಗಳಿಗೆ ಆತ ಹೇಳಿದ್ದು - ಶಿಸ್ತು ಸಂಯಮದ ಬಗ್ಗೆ Go for it dudes ಎಂದಲ್ಲ. ವಾರ್ನ್‌ಯಂತಹ ವಾರ್ನ್‌ಯೇ ಹೇಳಿದ - ಕುಂಬ್ಳೆಯಂತಹ ಸಭ್ಯನೊಬ್ಬ ಇಂತಹ ಸಾಧನೆಗೈದಿದ್ದು ಅತ್ಯಂತ ಸಂತೋಷದ ವಿಷಯ !

ಸಣ್ಣ ಪ್ರಾರಂಭ

ಅನಿಲ್ ಕುಂಬ್ಳೆಯದ್ದು 'ಆಡ್ಹಾ'ದ ಕ್ರಿಕೆಟಲ್ಲ. ತರಬೇತಾದ ಕ್ರಿಕೆಟ್. ಎತ್ತರಿಸಿದ ಸೀಟಿನ ಸೈಕಲ್‌ನಲ್ಲಿ ಯಡಿಯೂರಿನ ಟೀಚರ್ಸ್ ಕಾಲೋನಿಯಿಂದ ವೃತ್ತ ಪತ್ರಿಕೆಗಳಿಗೆ ವಾರಕ್ಕೆ ಮೂರು ದಿನ ಯಂಗ್ ಕ್ರಿಕೆಟರ್ಸ್‌ನ ಪಂದ್ಯಗಳ ಓಟ ವಿವರ ಕೊಡಲು ಹೋಗುತ್ತಿದ್ದ ಅನಿಲ್, ಕೆಲವು ಬಾರಿ ರನ್ ಪಟ್ಟಿಯಲ್ಲಿ ಸ್ನೇಹಿತರ ಹೆಸರನ್ನು ಸೇರಿಸಿ, ರನ್‌ಗಳನ್ನು ತಿದ್ದುವ ಬಾಲ್ಯ ಚೇಷ್ಟೆಗಳನ್ನು ಮಾಡಿದ್ದಾರೆ. ಪತ್ರಿಕೆಗಳಲ್ಲಿ ಹೆಸರು ಮುದ್ರಿತವಾದಾಗ ದಿಲ್ ಪಸಂದ್ ಮತ್ತು ನಿಪ್ಪಟ್ಟಿನ ಪಾರ್ಟಿ ನಡೆಯುತ್ತಿತ್ತು.

ಮಂಡ್ಯದ ಪಂದ್ಯವೊಂದರಲ್ಲಿ ಕುಂಬ್ಳೆ ಎಸೆದ ಬೌನ್ಸರ್ ದಾಂಡಿಗನ ಮುಖಕ್ಕೆ ಬಡಿದಾಗ, ಅಲ್ಲಿನ ಜನ ಅವರಿಗೆ ಇಕ್ಕಲು ಹೊರಟ್ಟಿದ್ದರು. ಆ ಘಟನೆ ಅವರು ಸ್ಪಿನ್ ಚೆಂಡೆಸೆತಕ್ಕೆ ನಾಂದಿ ಹಾಡಿತು. ಜಯನಗರ ಯಂಗ್ ಕ್ರಿಕೆಟರ್ಸ್‌ಗೆ ಆತ ಆಡಲು ಪ್ರಾರಂಭಿಸಿದ್ದು ದಾಂಡಿಗನೆಂದು. ಬಾಲ್ಯದಿಂದಲೇ ಶಿಸ್ತು, ತಾದ್ಯಾತ್ಮ ಮತ್ತು ದೃಢಸಂಕಲ್ಪದ ಬೆನ್ನು ಹತ್ತಿದ್ದ ಕುಂಬ್ಳೆ ಅಭ್ಯಾಸಕ್ಕಾಗಿ ಬೆಳಿಗ್ಗೆ 6.30ಕ್ಕೆ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಹೋಗಿ, ಶಾಲೆ ಮುಗಿದ ನಂತರ ಮತ್ತೆ ಅಭ್ಯಾಸಕ್ಕಾಗಿ ಕ್ರೀಡಾಂಗಣಕ್ಕೆ ಸೈಕಲ್ ತುಳಿಯುತ್ತಿದ್ದರು. ಓದನ್ನು ಎಂದೂ ಕಡೆಗಣಿಸದ ಕುಂಬ್ಳೆಗೆ ಸರೋಜ ಕೃಷ್ಣಸ್ವಾಮಿ ಹೆಚ್ಚಿಗೆ ಉಪದೇಶ ಮಾಡುವ ಅಗತ್ಯವಿರಲಿಲ್ಲ. 1989-90 ರಲ್ಲಿ ಮೊದಲ ಟೆಸ್ಟ್ ಆಡಲು ಕರೆ ಬಂದಾಗ ಪರೀಕ್ಷೆ ಮುಗಿಸಿಕೊಂಡು ನಾಲ್ಕು ದಿನ ತಡವಾಗಿ ಲಂಡನ್ನಿನಲ್ಲಿದ್ದ ತಂಡ ಸೇರಿದ ಕುಂಬ್ಳೆ,. ಇಂಜಿನಿಯರಿಂಗ್‌ನ ಕಡೆಯ



ಕುಂಬ್ಳೆ: ವಿಶೇಷ ಸಂದರ್ಶನ

ಭಾನುವಾರದ ಆ ಸಾಧನೆಯ ನಂತರ ಕನ್ನಡಿಗರ ಖುಷಿಯ ಉಬ್ಬರ ಹೆಚ್ಚಿದೆ. ಸದ್ಯಕ್ಕೆ ಅದು ಕಡಿಮೆಯಾಗುವ ಸಂಭವವಿಲ್ಲ. ಬೆಂಗಳೂರಿನ ನಿಲ್ದಾಣದಲ್ಲಿ ಕುಂಬ್ಳೆ ಬಂದಿಳಿದಾಗ ಜನರನ್ನು ನೋಡಬೇಕಿತ್ತು. ಅಲ್ಲಿಂದ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಬರಲು ಸಾಕಷ್ಟು ಸಮಯ ಆಯ್ತು.

■ಈ 10 ವಿಕೆಟ್ ಗಳಿಸಿದ ಸಾಧನೆ ಬಗ್ಗೆ ನಿಮ್ಮ ಅನಿಸಿಕೆ.

ನನಗೆ ಆಶ್ಚರ್ಯವಾಯಿತು. ನಾನು ಇನ್ನಿಂಗ್ಸ್ ಒಂದರಲ್ಲಿ 10 ವಿಕೆಟ್ ಗಳಿಸುವ ಯೋಚನೆಯನ್ನೇ ಮಾಡಿರಲಿಲ್ಲ. ಅದು ಅಸಾಧ್ಯವಾದದ್ದು ಘಟಿಸಿದ ದಿನ.

■ಇದರ ನಂತರ ನಿಮ್ಮಿಂದ ಜನ ಇನ್ನೂ ಹೆಚ್ಚಿನದನ್ನು ನಿರೀಕ್ಷಿಸುತ್ತಾರೆ.

ನಿಜ. ನಾನು ಜನರ ನಿರೀಕ್ಷೆಗೆ ತಕ್ಕಂತೆ ಬದುಕಬೇಕು. ವೈಯಕ್ತಿಕವಾಗಿ ಹೇಳಬೇಕೆಂದರೆ, ನನ್ನ ಬದುಕಿನಲ್ಲಿ ಈ ಸಾಧನೆ ಹೆಚ್ಚು ಬದಲಾವಣೆಯನ್ನು ತರುವುದಿಲ್ಲ.

■ಇದೊಂದು ಅದ್ಭುತ ಸಾಧನೆಯಲ್ಲವೇ?

ಪತ್ರಿಕೆಗಳು ಮತ್ತು ಜನ ಈ ಸಾಧನೆಯನ್ನು ಪ್ರಪಂಚದಲ್ಲಿ ಸಾಧ್ಯವಾಗದ್ದು ಎನ್ನುತ್ತಾರೆ. ನನ್ನ ಮಟ್ಟಿಗೆ ಇದು ತತ್‌ಕ್ಷಣ ಘಟಿಸಿತು.

■ಶ್ರೀನಾಥ್ ನಿಮ್ಮ ಸಾಧನೆಗೆ ಸಹಕರಿಸಿದ್ದು.

ಇದು ಶ್ರೀನಾಥ್ ತೋರಿಸಿದ ದೊಡ್ಡತನ. ಶ್ರೀನಾಥ್ ವೈಡ್‌ಗಳನ್ನು ಎಸೆದದ್ದು ಕ್ರೀಡಾಸ್ಫೂರ್ತಿಯ ಸೂಚಕ.

■ಕೊನೆಯ ವಿಕೆಟ್ ಕ್ಯಾಚ್ ಮೂಲಕ ಬಿದ್ದಿತು. ಆ ಚೆಂಡು ನಿಮಗೆ ಸಿಕ್ಕಿತಾ?

ಆ ಕ್ಯಾಚ್ ಲಕ್ಷ್ಮಣ್ ಹಿಡಿದದ್ದು. ಆತನ ಹತ್ತಿರ ಚೆಂಡು ಇರಲಿಲ್ಲ, ಅಂಗಳದಲ್ಲೂ ಇರಲಿಲ್ಲ. ಕೊನೆಗೆ ವೆಂಕಿ ಅದನ್ನು ನನಗೆ ಕೊಟ್ಟ.

■ನಿಮಗೆ ಲೇಕರ್ ಸಾಧನೆ ಬಗ್ಗೆ ಗೊತ್ತಿತ್ತಾ?

ಹೌದು. ನನಗೆ ಅಂಕಿಸಂಖ್ಯೆಗಳ ಬಗ್ಗೆ ಹೆಚ್ಚು ಗೊತ್ತಿಲ್ಲ. ಆದರೆ ಕೆಲವು ಸಂಗತಿಗಳನ್ನು ಎಲ್ಲ ಕ್ರಿಕೆಟ್ ಆಟಗಾರರೂ ತಿಳಿದುಕೊಂಡಿರಬೇಕು.

■ಮಾಧ್ಯಮದಲ್ಲಿ ಸಿಕ್ಕ ಪ್ರಚಾರ, ಜನರ ಪ್ರತಿಕ್ರಿಯೆ?

ಮಾಧ್ಯಮದಲ್ಲಿ ಕ್ರಿಕೆಟ್‌ಗೆ ಸಿಗುವ ಆದ್ಯತೆಯಿಂದಾಗಿ, ಸುದ್ದಿ ಬಲುಬೇಗ ಹರಡಿತು. ಕ್ರಿಕೆಟ್‌ಗೆ ಎಲ್ಲವನ್ನೂ ಸಮಗೊಳಿಸುವ ಸಾಮರ್ಥ್ಯ ಇದೆ. ಕೆಲವೊಂದು ದಿನ ಎಷ್ಟೇ ಚೆನ್ನಾಗಿ ಚೆಂಡೆಸೆದರೂ ಒಂದೇ ಒಂದು ವಿಕೆಟ್ ಸಿಗುವುದಿಲ್ಲ. ಇನ್ನೊಂದು ದಿನ 5 ಅಥವಾ 6 ವಿಕೆಟ್ ಸಿಗಬಹುದು. ಆದರೆ ಆ ಭಾನುವಾರ ನನಗೆ 10 ವಿಕೆಟ್ ಸಿಕ್ಕಿತು. ಮುಂದಿನ ಪಂದ್ಯದಲ್ಲಿ ಮತ್ತೆ ಮುಂಚಿನಿಂದ ಪ್ರಾರಂಭಿಸಬೇಕು.

ಸಂದರ್ಶನ : ಕಿರಣ್

ವರ್ಷದಲ್ಲಿ 18 ವಿಷಯಗಳಲ್ಲಿ ಗುರುತಿಸಬಹುದಾದ ಸಾಧನೆಯನ್ನು ಆತ ಕ್ಲಿಷ್ಟ ಎನ್ನುವ 3 ವಿಷಯಗಳಲ್ಲಿ ಅತೀ ಹೆಚ್ಚು ಅಂಕ ಗಳಿಸಿದರು. ವಿದೇಶೀ-ಸ್ವದೇಶಿ ಪ್ರವಾಸದಿಂದಾಗಿ ಅಭ್ಯಾಸ ತಪ್ಪಿದಾಗ, ವಿಶೇಷ ಪಾಠಕ್ಕೆ ತಪ್ಪದೆ ಹಾಜರಾಗುತ್ತಿದ್ದರು. ಇಂಜಿನಿಯರಿಂಗ್ ಪದವಿಯಿಂದಾಗಿಯೇ ಕುಂಬ್ಳೆಗೆ ತಿರುಗುವ ಚೆಂಡಿನ ಹಿಂದಿನ ವಿಜ್ಞಾನ, ಕೈಯಿಂದ ಬಿಡುಗಡೆಯಾದ ಚೆಂಡಿನ ವರ್ತನೆಯ ವಾಯುಚಲನಶಾಸ್ತ್ರ ಗೊತ್ತು. ದಿನದ ಆಟ ಮುಗಿದ ನಂತರ ಎಲ್ಲಿ ತಪ್ಪಾಗಿದೆ ಎಂದು ವಿಮರ್ಶಿಸಬಲ್ಲ 2ನೇ ಆಟಗಾರ ಕುಂಬ್ಳೆ. ತಂಡದ ಮೀಟಿಂಗ್‌ನಲ್ಲಿ ವೈಯಕ್ತಿಕ ಸಾಧನೆ, ತಪ್ಪು-ಒಪ್ಪುಗಳನ್ನು ವಿಶ್ಲೇಷಿಸಲು ಲ್ಯಾಪ್‌ಟಾಪ್ ಕಂಪ್ಯೂಟರ್‌ಗಳನ್ನು ಪರಿಚಯಿಸಿದ್ದೇ ಕುಂಬ್ಳೆ.

ವೈಯಕ್ತಿಕ ಸಾಧನೆಗಳಿಗಾಗಿ ಎಂದೂ ಆಡದ ಕುಂಬ್ಳೆ, ತಂಡಕ್ಕಾಗಿ ಆಡಲು ಎಂದೂ ಗೊಣಗದ ಮನುಷ್ಯ. ಅಂಕಣದಲ್ಲಿ ಕ್ರಿಕೆಟ್ ಆಡದೇ ಇರುವ ಸಮಯದಲ್ಲಿ ಅಂಗವಿಕಲ ಮಕ್ಕಳೊಡನೆ ಸ್ನೇಹ ಬೆಳೆಸುವ ಈತ, ಸ್ಪಾಸ್ಟಿಕ್ ಸೊಸೈಟಿಗೆ ಆಗಾಗ ನೆರವು ನೀಡುತ್ತಾರೆ. ಕಿಶೋರರನ್ನು ಅಸಾಧ್ಯವಾಗಿ ಪ್ರೀತಿಸುತ್ತಾರೆ. ಮೊದಲು ಅಲುಗಾಡುವ ಕವಾಸಾಕಿಯಲ್ಲಿ ತಿರುಗುತ್ತಿದ್ದ ಕುಂಬ್ಳೆ, ನಂತರ ಆಯ್ದುಕೊಂಡಿದ್ದು ಫೋರ್ಡ್ ಎಸ್ಕಾರ್ಡ್, ಅದರ ಸಂಖ್ಯೆ 7090. ಮೊದಲಿನ 70 ಅವರ ಹುಟ್ಟಿದ ವರ್ಷವಾದರೆ, ನಂತರದ 90 ಅವರು ರಾಷ್ಟ್ರವನ್ನು ಪ್ರತಿನಿಧಿಸಿದ ವರ್ಷದ ಸಂಖ್ಯೆ.

ಕುಂಬ್ಳೆಯ ಸ್ಪಿನ್

ಕುಂಬ್ಳೆ ಪ್ರಥಮ ದರ್ಜೆ ಪಂದ್ಯಗಳಲ್ಲಿ 9 ವರ್ಷದಲ್ಲಿ 400 ಕ್ಕೂ ಹೆಚ್ಚು ವಿಕೆಟ್ ಪಡೆದಿದ್ದಾರೆ. ಇದರಲ್ಲಿ ಸ್ವದೇಶದಲ್ಲಿ ಟೆಸ್ಟ್‌ಗಳಲ್ಲಿ ಪಡೆದ 162 ವಿಕೆಟ್ ಹಾಗೂ ವಿದೇಶಗಳಲ್ಲಿ 26 ಟೆಸ್ಟ್‌ಗಳಲ್ಲಿ ಪಡೆದ 90 ವಿಕೆಟ್ ಸೇರಿವೆ. ಇಷ್ಟೆಲ್ಲದರ ನಂತರವೂ ಮೂಢರು ಹೇಳುತ್ತಾರೆ. ಆತ ಚೆಂಡನ್ನು ತಿರುಗಿಸುವುದಿಲ್ಲ ಎಂದು. ಇದು ಆತನಿಗೆ ಅಸಾಧ್ಯ ನೋವು ಕೊಡುವ ಸಂಗತಿ. ಕುಂಬ್ಳೆಯ ಸ್ಪಿನ್‌ನಲ್ಲಿ ಲೈನ್ ಮತ್ತು ಲೆಂತ್‌ನದ್ದು ಮಹತ್ವದ ಪಾತ್ರ. ಕಠಿಣ ಶ್ರಮ, ಶಿಸ್ತು ಮತ್ತು ಚುರುಕಾದ ಬುದ್ಧಿಯನ್ನಾಧರಿಸಿದ ಬೌಲಿಂಗ್‌ನಲ್ಲಿ ಮುಷ್ತಾಕ್ ಅಥವಾ ಶೇನ್ ವಾರ್ನ್‌ಯ ಸಾಂಪ್ರದಾಯಿಕ ಸ್ಪಿನ್ ಶೈಲಿಯಿಲ್ಲ. ಚಂದ್ರುವಿನ ಊಹಿಸಲು ಅಸಾಧ್ಯವಾದ ಚೆಂಡೆಸೆತ ಕೂಡಾ ಇರುವುದಿಲ್ಲ. ಚೆಂಡು ತಿರುಗುವ ಸಾಧ್ಯತೆಯಿರುವ ಅಂಗಳದಲ್ಲಿ ನೇರವಾದ, ಕರಾರುವಕ್ಕಾದ ಚೆಂಡೆಸೆಯುವ ಕುಂಬ್ಳೆ, ತಟಕ್ಕನೆ ತಿರುಗುವ ಲೆಗ್‌ಬ್ರೇಕ್, ಸರ್ರನೆ ನುಗ್ಗುವ ಗೂಗ್ಲಿ ಅಥವಾ ಜಾರಿದಂತೆ ಬರುವ ಸರಪಳಿ ಚೆಂಡನ್ನು ಹೆಚ್ಚಾಗಿ ಬಳಸುವುದಿಲ್ಲ. ಚೆಂಡನ್ನು ಹೆಚ್ಚಾಗಿ ತಿರುಗಿಸುವುದೂ ಇಲ್ಲ. ಇದರಿಂದಾಗಿ ಲೆಗ್‌ಸ್ಪಿನ್ನಿಗನ ಬ್ರಾಂಡ್‌ಗಳಾದ ಆಮಿಷ ಒಡ್ಡಿ ಮಾಡಿಸುವ

ಕುಂಬ್ಳೆ ಅಸ್ತ್ರಗಳು

ಫ್ಲಿಪ್ಪರ್

ಇದು ಕಡಿಮೆ ಅಂತರದಲ್ಲಿ ಪುಟನೆಗೆದು ನಂತರ ಮುನ್ನುಗ್ಗುವ ಚೆಂಡು. ದಾಂಡಿಗ ಕಾಲು ಮುಂದಿಟ್ಟು ಆಡಲು ಪ್ರೇರೇಪಿಸುತ್ತದೆ.

ಯಾರ್ಕರ್

ಹಿಂದಿನ ದಾಂಡಿಗ ಲೆಗ್‌ಬ್ರೇಕ್ ಬಲಿಯಾಗಿದ್ದರೆ, ನಂತರ ಬರುವವ ಚೆಂಡು ತಿರುಗಿದ ಸ್ಥಳದಲ್ಲಿ ತನ್ನ ದೃಷ್ಟಿ ಕೇಂದ್ರೀಕರಿಸುತ್ತಾನೆ. ಪುಟನೆಗೆಯುವ ಅಂತರದಲ್ಲಿ ಸ್ವಲ್ಪ ವ್ಯತ್ಯಾಸವಿರುವ ಚೆಂಡು ಯಾರ್ಕರ್.

ನಿಧಾನಗತಿಯ ಲೆಗ್‌ಬ್ರೇಕ್

ಹೆಚ್ಚು ತಿರುಗುವ ನಿಧಾನ ಗತಿಯ ಚೆಂಡು. ಭಾರೀ ಪರಿಣಾಮಕಾರಿ.

ಒಂದು ದಿನದ ಪಂದ್ಯ ಟೆಸ್ಟ್‌ಗಳ ಸಾಧನೆ

ಸ್ಪಿನ್ನಿಗ	ಪಂದ್ಯ	ಎಸೆದ ಚೆಂಡು	ಕೊಟ್ಟ ಓಟ	ಗಳಿಸಿದ ವಿಕೆಟ್	ಸರಾಸರಿ	ಐದು ವಿಕೆಟ್	ಅತ್ಯುತ್ತಮ
ಕುಂಬ್ಳೆ	158/51	8522/15736	5840/6380	212/234	27.54/27.26	2/13	6-12/10-74
ವಾರ್ನೆ	106/68	5979/20025	4182/7866	164/315	25.5/24.97	1/14	5-33/8-71
ಮುಷ್ತಾಕ್	130/42	6727/10548	4842/4938	144/169	33.62/29.21	1/10	5-36/7-56

ಸ್ಟಂಪಿಂಗ್, ಲಾಂಗ್ ಆಫ್‌ನಲ್ಲಿ ಬುತ್ತಿ ಹಿಡಿತ ಅಥವಾ ಕದ್ದು ಮುಚ್ಚಿ ಕಳಿಸುವ ಪ್ಯಾಡ್ ಬ್ಯಾಟ್‌ಗಳ ಬಡಿತ ಇದ್ಯಾವುದರಲ್ಲೂ. ಕುಂಬ್ಳೆ ತಜ್ಞರಲ್ಲ. ವಿಸ್ಡೆನ್ ಕ್ರಿಕೆಟ್‌ಬುಕ್‌ನಲ್ಲಿ ಬರೆದಿರುವ ಸ್ಕೈಲ್ಡ್ ಬೆರ್ರಿ ಪ್ರಕಾರ 'ವೇಗವಾಗಿ, ಎರಡೂ ಕಡೆ ತಿರುಗಬಹುದಾದ ಚೆಂಡನ್ನು ಕುಂಬ್ಳೆ ಎಸೆಯಬಲ್ಲರು. ಚೆಂಡನ್ನು ಗಾಳಿಯಲ್ಲಿ ತೇಲಿ ಬಿಡುವುದು ಆತನ ಎತ್ತರದಿಂದಾಗಿ ಕಷ್ಟವಾದದ್ದಾದರೂ, ಅದನ್ನು ಆತ ಮಾಡಬಲ್ಲ. ಆತನ ನಿಷ್ಕೃಷ್ಟತೆ ಆತನ ಬಲಗಳಲ್ಲೊಂದು. ಒಂದು ದಿನದ ಪಂದ್ಯಗಳಲ್ಲಿ ಆತನ ಓವರ್ ರನ್ ಸರಾಸರಿಯು ವಾರ್ನೆ (4.11) ಮುಷ್ತಾಕ್ (4.32) ಅಥವಾ ಪಾಲ್ ಸ್ಟ್ರಾಂಗ್ (4.21) ಕ್ಕಿಂತ ಕಡಿಮೆ (4.1) ಇದೆ.

ಲೆಗ್‌ಬ್ರೇಕ್, ಗೂಗ್ಲಿ, ತೀವ್ರವಾಗಿ ತಿರುಗುವ ಚೆಂಡು ಮತ್ತು ತಕ್ಷಣ ನುಗ್ಗಿ ಬಿಡುವ ವೇಗವಾದ ಮಟ್ಟಸವಾದ ಚೆಂಡನ್ನು ಎಸೆಯಬಲ್ಲ ಕುಂಬ್ಳೆಯನ್ನು ಚಂದ್ರಶೇಖರ್ ಮತ್ತು ಆಸ್ಟ್ರೇಲಿಯಾದ ಬಿಲ್ ಓರೆಲಿಗೆ ಮಾತ್ರ ಹೋಲಿಸಬಹುದು. ಒಂದರ್ಥದಲ್ಲಿ ಕುಂಬ್ಳೆ ಚಂದ್ರು ಮತ್ತು ಇಂಗ್ಲೆಂಡ್‌ನ ಡೆರೆಕ್ ಅಂಡರ್‌ವುಡ್‌ನ ಮಿಶ್ರಣ. ಅಂಡರ್‌ವುಡ್ ದಾಂಡಿಗನ ದೌರ್ಬಲ್ಯಗಳನ್ನು ತಮ್ಮ ಬಲವಾಗಿಸಿಕೊಂಡಿದ್ದರೆ, ಚಂದ್ರುವಿನ ವೈಶಿಷ್ಟ್ಯ ಆತನ ಊಹಿಸಲು, ಅಸಾಧ್ಯವಾದ ಶೈಲಿ.

ವಿದೇಶಗಳಲ್ಲಿ ವೈಫಲ್ಯ

ಸಾಮಾನ್ಯವಾಗಿ ಬೌಲರ್ ಒಬ್ಬ ಅತ್ಯುತ್ತಮ ಸಾಧನೆ ಮಾಡಿದಾಗಲೆಲ್ಲ ಪಿಚ್ ಬೌಲರ್‌ಗೆ ಸೂಕ್ತವಾಗಿತ್ತು. 'ವಿರೋಧಿ ತಂಡ ನರವಿಲ್ಲದಂತೆ ಆಡಿತು' ಅಂಪೈರುಗಳು ತಪ್ಪು ನಿರ್ಣಯ ಕೊಟ್ಟರು ಎನ್ನಲಾಗುತ್ತೆ. ಆದರೆ ಬ್ಯಾಟಿಗನೊಬ್ಬ ಚೆನ್ನಾಗಿ ಆಡಿದರೆ, ಆತನನ್ನು ವಾಚಾಮಗೋಚರವಾಗಿ ಹೊಗಳಲಾಗುತ್ತದೆ.

96ರ ನಂತರ ವಿದೇಶಗಳಲ್ಲಿ ಕುಂಬ್ಳೆಯ ಸಾಧನೆ ತೃಪ್ತಿದಾಯಕವಾಗಿಲ್ಲ. ಇಂಗ್ಲೆಂಡ್ - 3 ಟೆಸ್ಟ್‌ಗಳಲ್ಲಿ 5 ವಿಕೆಟ್, ದಕ್ಷಿಣ ಆಫ್ರಿಕಾ - 3 ಟೆಸ್ಟ್‌ನಲ್ಲಿ 8 ವಿಕೆಟ್, ವಿಂಡೀಸ್ - 5 ಟೆಸ್ಟ್‌ನಲ್ಲಿ 19 ವಿಕೆಟ್, ಶ್ರೀಲಂಕಾ - 2 ಟೆಸ್ಟ್‌ನಲ್ಲಿ 3 ವಿಕೆಟ್, ಜಿಂಬಾಬ್ವೆ 1 ಟೆಸ್ಟ್‌ನಲ್ಲಿ 7 ವಿಕೆಟ್, ನ್ಯೂಜಿಲೆಂಡ್ - 2 ಟೆಸ್ಟ್‌ನಲ್ಲಿ 9 ವಿಕೆಟ್ ಅನ್ನು ಕುಂಬ್ಳೆ ಪಡೆದಿದ್ದಾರೆ. ಭಾರತದ ಹಿಂದಿನ ಸ್ಪಿನ್ನಿಗರು ವಿದೇಶಗಳಲ್ಲಿ ಸಫಲರಾಗಿದ್ದರು. ಅದಕ್ಕೆ ಕಾರಣ ದಕ್ಷ ವಿಕೆಟ್ ಕೀಪರ್ ಹಾಗೂ ವಿಕೆಟ್ ಸುತ್ತಲಿನ ಕ್ಷೇತ್ರ ರಕ್ಷಣೆ. ಭಾರತದ ಕ್ಷೇತ್ರರಕ್ಷಣೆಯ ಗುಣಮಟ್ಟ ತೀವ್ರವಾಗಿ ಕುಸಿದಿದೆ ಎನ್ನುವುದನ್ನು ನಾವು ಮರೆಯಬಾರದು. ಚಂದ್ರು, ಬೇಡಿ, ಪ್ರಸನ್ನ, ವೆಂಕಟ್ ಅವರ ಕಾಲದಲ್ಲಿ ಜಗತ್ತಿನ ಉತ್ತಮ ವಿಕೆಟ್ ಕೀಪರ್‌ಗಳಲ್ಲಿ ಒಬ್ಬರಾದ ಕಿರ್ಮಾನಿ ಇದ್ದರು. ಕ್ಷೇತ್ರ ರಕ್ಷಣೆ ಅತ್ಯುತ್ತಮವಾದದ್ದಾಗಿತ್ತು. ನಯನ್ ಮೊಂಗಿಯಾ ಉತ್ತಮ ವಿಕೆಟ್ ಕೀಪರ್ ನಿಜ. ಆದರೆ ಚೆಂಡನ್ನು ಹಿಡಿಯುವುದಕ್ಕಿಂತ ಆತ ಕೂಗುವುದೇ ಹೆಚ್ಚು. ಜಡೇಜಾ, ಅಜರ್ ಬಿಟ್ಟರೆ ಉಳಿದವರ ಕ್ಷೇತ್ರ ರಕ್ಷಣೆ ಮಟ್ಟ ಹೇಳಿಕೊಳ್ಳುವಂತಿಲ್ಲ. ಆದರೂ ಕುಂಬ್ಳೆಯ ವಿಕೆಟ್ ಉರುಳಿಸಿದ ದರವು ಬೇಡಿ ಮತ್ತು ಪ್ರಸನ್ನ ಅವರಿಗಿಂತ ಉತ್ತಮವಾಗಿದೆ. ಕುಂಬ್ಳೆ ಟೆಸ್ಟ್‌ಗಳಲ್ಲಿ 11 ಬಾರಿ 8 ವಿಕೆಟ್ ಕಿತ್ತಿದ್ದಾರೆ.

ಕ್ರಿಕೆಟ್ ವ್ಯವಸ್ಥೆ ಇಂತಹ ಕುಂಬ್ಳೆಯನ್ನು ಕೆಟ್ಟದಾಗಿ ನಡೆಸಿಕೊಂಡಿದೆ. ಕಲ್ಲೆಸೆತ, ಹೂಮಾಲೆ ಇವೆರಡೂ ಇಲ್ಲಿ ಒಂದರ ಹಿಂದೆ ಬರುತ್ತವೆ. ಅತ್ಯುತ್ತಮವಾಗಿ ಆಡಿದಲ್ಲಿ ದೇವರಂತೆ ಕಾಣುವ ಜನ, ಸೋತಲ್ಲಿ ನಾಯಿಯಂತೆ ಕಾಣುತ್ತಾರೆ. ಎಲ್ಲ ಕ್ರೀಡಾ ವ್ಯವಸ್ಥೆಯಂತೆ ಭಾರತೀಯ ಕ್ರಿಕೆಟ್ ರಾಜಕೀಯದಲ್ಲಿ ನರಳುತ್ತಿದೆ. 1990ರಲ್ಲಿ ಕುಂಬ್ಳೆಯನ್ನು ತಂಡಕ್ಕೆ ಆಯ್ದುಕೊಂಡಾಗ, ಮಾಜೀ ನಾಯಕನೊಬ್ಬ ಕೇಳಿದ್ದ - ಎಲ್ಲಿನಿಂದ ಹಿಡಿದು ಕೊಂಡು ಬಂದಿರಿ ಈತನನ್ನು?

1992ರಲ್ಲಿ ತಂಡಕ್ಕೆ ಹಿಂತಿರುಗುವ ಮೊದಲು ಹಿಂದಿನ ಋತುವಿನಲ್ಲಿ ಈತನನ್ನು ತಂಡದಿಂದ ಕೈ ಬಿಡಲಾಗಿತ್ತು. 95ರಲ್ಲಿ ಮತ್ತೊಮ್ಮೆ ತಂಡದಿಂದ ಹೊರದೂಡಲ್ಪಟ್ಟರು. ಆಯ್ಕೆದಾರರ ಪ್ರಕಾರ ಚೆಂಡನ್ನು ಚೆನ್ನಾಗಿ ತಿರುಗಿಸಬಲ್ಲ ಹತ್ತಾರು ಕಾಂಜಿಪಿಂಜಿ ಬೌಲರ್‌ಗಳು ಬಂದರು ಹೋದರು. ಸಹರಾ ಕಪ್ ಹಾಗೂ ಪಾಕ್‌ನ ಪ್ರವಾಸಕ್ಕೆ ಆಯ್ಕೆಯಾಗದೇ ಇದ್ದದ್ದು ಕುಂಬ್ಳೆಗೆ ಅಪಾರ ನೋವು ತಂದಿತು. ಕುಂಬ್ಳೆ ತಮ್ಮ ಉಪನಾಯಕನ ಪಟ್ಟವನ್ನೂ ಕಳೆದುಕೊಂಡರು. 1997ರಲ್ಲಿ ಅವರಿಗೆ ಸೂಕ್ತ ಯಶಸ್ಸು ದೊರಕಲಿಲ್ಲ. ಆತನನ್ನು ಶಾಶ್ವತವಾಗಿ ಹೊರತಳ್ಳುವ ಷಡ್ಯಂತ್ರ ನಡೆಯಿತು. ವೆಲ್ಲಿಂಗ್‌ಟನ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಭಾರತ ಗೆಲ್ಲುವಂತೆ ಚೆಂಡೆಸೆಯಲಿಲ್ಲವೆಂದು ಆತನನ್ನು ದೂಷಿಸಲಾಯಿತು. ಹಿಂದಿನ ದಿನ ಉಪನಾಯಕ



ಆಫ್‌ಸ್ಪಿನ್‌ನಲ್ಲಿ ಚೆಂಡಿನ ಚಲನೆ



ಲೆಗ್‌ಸ್ಪಿನ್‌ನಲ್ಲಿ ಚೆಂಡಿನ ಚಲನೆ

ಸ್ಪಿನ್ ಚೆಂಡೆಸೆತ ಎಂಬ ಮಂತ್ರಜಾಲ

ಕ್ರಿಕೆಟ್ ಕ್ರೀಡಾಂಗಣವೊಂದರಲ್ಲಿ (ಗಲ್ಲಿಯಲ್ಲೂ) ನಡೆಯುವ ಆಟವಾದರೂ, ಅದು ನಿಜವಾಗಿ ನಡೆಯುವುದು ಮನುಷ್ಯನ ಮಿದುಳಿನಲ್ಲಿ. ವಾಸಿಂ ಅಕ್ರಮ್, ಅಲೆನ್ ಮೆಕ್ ಡೊನಾಲ್ಡ್, ಜಾವಗಲ್ ಶ್ರೀನಾಥ್ ಮತ್ತು ವೆಸ್ಟ್ ಇಂಡೀಸಿನ ದೈತ್ಯ ಬೌಲರ್‌ಗಳು ವೇಗವಾಗಿ ಓಡಿ ಬಂದು ಚೆಂಡೆಸೆಯುವುದನ್ನು ನೋಡಿದರೆ, ವಿಕೆಟ್‌ಗಳು ಹಾರುವುದೇನು, ಸಾಮಾನ್ಯ ಬ್ಯಾಟಿಗನ ತೊಳ್ಳೆಯೇ ನಡುಗಿ ಬಿಡುತ್ತದೆ. ಇದರಿಂದಾಗಿಯೇ ವೇಗದ ಚೆಂಡೆಸೆತಕ್ಕೆ ಮಾರು ಹೋಗಿ, ತಾವೂ ವೇಗದ ಬೌಲರ್ ಆಗಬೇಕು ಎಂದುಕೊಳ್ಳುವವರ ಸಂಖ್ಯೆ ಹೆಚ್ಚು.

ಸ್ಪಿನ್ ಚೆಂಡೆಸೆತ ಎಂಬುದು ಒಂದು ಅದ್ಭುತ. ವೇಗದ ಚೆಂಡೆಸತಕ್ಕೆ ವೇಗದ ಉತ್ಪಾದನೆಗೆ, ಚೆಂಡನ್ನು ಪುಟನೆಗೆಸಲು ಹಾಗೂ ಎಸೆಯಲು ಅಪಾರ ಶಕ್ತಿ ಬೇಕು. ಸ್ಪಿನ್‌ಗೆ ಬೇಕಾದ್ದು ಸಮಯಕ್ಕೆ ತಕ್ಕಂತೆ ಚೆಂಡನ್ನು ತಿರುಗಿಸುವ ಮತ್ತು ಗಾಳಿಯಲ್ಲಿ ತೇಲಿಸುವ ಬುದ್ಧಿಯ ಲೆಕ್ಕಾಚಾರ ಸ್ಪಿನ್ ಬೌಲಿಂಗ್‌ನ ವೈಶಿಷ್ಟ್ಯಗಳಲ್ಲೊಂದು. ಅದು ಬ್ಯಾಟಿಗನನ್ನು ಅಮಿಷವೊಡ್ಡಿ ಹೊರಗೆಳೆದು ವಿಕೆಟ್ ರಕ್ಷಕನ ಮೂಲಕ ಸ್ಟಂಪ್ ಮಾಡಿಸುವುದು. ಸಾಮಾನ್ಯವಾಗಿ ಚೆಂಡು ಸ್ವಲ್ಪ ಹಳೆಯದಾದ ನಂತರ ಸ್ಪಿನ್ನಿಗನನ್ನು ಚೆಂಡೆಸೆಯಲು ಕರೆಯಲಾಗುತ್ತದೆ. ಧೂಳು ದಾಂಡಿನ ಹೊಡೆತದಿಂದಾಗಿ ಸ್ವಲ್ಪ ಮಟ್ಟಿಗೆ ತನ್ನ ಆಕಾರ ಬದಲಾಯಿಸಿಕೊಂಡ ಚೆಂಡಿನ ಗುರುತ್ವಾಕರ್ಷಣ ಕೇಂದ್ರ ಬದಲಾಗುತ್ತದೆ, ಚೆಂಡು ತಿರುಗುತ್ತದೆ.

ಲೆಗ್‌ಸ್ಪಿನ್

ಸಾಮಾನ್ಯವಾಗಿ ಲೆಗ್‌ಸ್ಪಿನ್ನಿಗೆ ಚೆಂಡೆಸೆಯಲು ಕರ್ಣರೇಖೆಯ (ಡಯಾಗನಲ್) ಓಟವನ್ನು ಅಳವಡಿಸಿಕೊಂಡಿರುತ್ತಾನೆ. ಎರಡೂ ಬದಿಯ ಸ್ಟಂಪ್‌ಗಳನ್ನು ಸೇರಿಸುವ ನೇರ ರೇಖೆ ಹಾಗೂ ಕರ್ಣರೇಖೆಯ ನಡುವಿನ ಕೋನವು ಸುಮಾರು 55 ರಿಂದ 60° ಇರುತ್ತದೆ. ಚೆಂಡೆಸೆಯಲು ಆತ ವಿಕೆಟ್‌ನಿಂದ ಹೋಗುವ ದೂರ 8 ರಿಂದ 14 ಅಡಿ ಇರುತ್ತದೆ. ಪಾಕಿಸ್ತಾನದ ಅಬ್ದುಲ್ ಖಾದಿರ್ (ಈತನ ಅಂಗಚೇಷ್ಟೆ ಅತ್ಯಂತ ತಮಾಷೆಯದಾಗಿತ್ತು) 12 ಅಡಿ ದೂರದಿಂದ ಓಡಿ ಬಂದು ಚೆಂಡೆಸೆಯುತ್ತಿದ್ದರು. ಈ ಎಲ್ಲ ಸಾಮಾನ್ಯ ನಿಯಮಗಳನ್ನು ಮುರಿದಾತ ಕರ್ನಾಟಕದ ಭಗವತ್ ಚಂದ್ರಶೇಖರ್. ತನ್ನ ಕೈಯಲ್ಲಿನ ದೋಷವನ್ನು ಪ್ರಬಲ ಅಸ್ತ್ರವನ್ನಾಗಿಸಿಕೊಂಡಿದ್ದ ಚಂದ್ರುವಿಗೆ ಇದ್ದ ಹೆಸರು 'ಫ್ರೀಕ್ ಟ್ವೀಕರ್'. ವೇಗ ಹಾಗೂ ಸ್ಪಿನ್ ಎರಡನ್ನು ಒಳಗೊಂಡಿದ್ದ ಚಂದ್ರುವಿನ ಚೆಂಡಿಗೆ ಸಿಕ್ಕಿ ವಿಕೆಟ್‌ಗಳು ಹಾರಿಹೋದ ಅನೇಕ ಪ್ರಸಂಗಗಳಿವೆ. ಕ್ರಿಕೆಟ್ ಚರಿತ್ರೆಯಲ್ಲಿ ಈತನ ಸಾಧನೆ, ಸ್ಥಾನ ಎರಡೂ ಶಾಶ್ವತವಾದಂತವು.

ಈ ಗುಂಪಿಗೆ ಸೇರಿದ ಅಸಾಮಾನ್ಯರು ಕುಂಬ್ಳೆ, ವಾರ್ನೆ, ಸುಭಾಷ್ ಗುಪ್ತೆ, ಮುಷ್ತಾಕ್, ಅಹ್ಮದ್, ಸನ್ನಿ ರಾಮಧಿನ್, ರಿಚಿ ಬೆನೋ, ಬಿಲ್ ಓರೀಲಿ ಮುಂತಾದವರು.

ಲೆಗ್‌ಸ್ಪಿನ್ನಿಗ ಗೂಗ್ಲಿ, ಟಾಪ್ ಸ್ಪಿನ್ನರ್ ಹಾಗೂ ಫ್ಲಿಪ್ಪರ್‌ಗಳನ್ನು ಬಳಸುತ್ತಾನೆ. ಸಾಮಾನ್ಯವಾಗಿ ಬಲಗೈ ಆಟಗಾರನಿಗ ಬಲದಿಂದ ಎಡಕ್ಕೆ ತಿರುಗುವ ಚೆಂಡನ್ನೆಸೆದು, ಬ್ಯಾಟಿಗ ಲಕ್ಷ್ಮಣರೇಖೆ ದಾಟಿ ಆಡುವಂತೆ ಪ್ರೇರೇಪಿಸಿ ಸ್ಟಂಪ್ ಆಗುವಂತೆ, ಇಲ್ಲವೇ ಲೆಗ್‌ಸ್ಟಂಪ್‌ನಿಂದ ಹೊರಗೆ ಚೆಂಡೆಸೆದು ಬ್ಯಾಟಿಗನು ಸಮಯವನ್ನು ಸರಿಯಾಗಿ ನಿರ್ಧರಿಸಲು ಸಾಧ್ಯವಾಗದೆ ವಿಕೆಟ್ ಕಳಕೊಳ್ಳುವಂತೆ ಮಾಡುತ್ತಾನೆ. ಎಡಗೈ ಬ್ಯಾಟಿಗನಿಗೆ ಚೆಂಡೆಸೆಯುವಾಗ ಆತನು ಗೂಗ್ಲಿ ಅಥವಾ ಟಾಪ್‌ಸ್ಪಿನ್ನರ್ ಬಳಸುವ ಅಗತ್ಯವಿದೆ. ಇಲ್ಲದೇ ಹೋದಲ್ಲಿ ಬ್ಯಾಟಿಗ ಚೆಂಡನ್ನು ಬಲಭಾಗಕ್ಕೆ ಗುಡಿಸಿ ಬಾರಿಸುವ ಸಾಧ್ಯತೆ ಇದೆ. ಆತ ವಿಕೆಟ್ ಮೇಲಿನಿಂದ ಇಲ್ಲವೇ ಬಳಸಿ ಬಂದು ಚೆಂಡೆಸೆಯುತ್ತಾನೆ. ವಿಕೆಟ್‌ನ ಮೇಲಿನಿಂದ ಚೆಂಡೆಸೆದರೆ, ಮಧ್ಯವಿಕೆಟ್‌ನ ನೇರಕ್ಕೆ ಚಲಿಸಿದರೆ, ಬ್ಯಾಟಿಗ ಎಲ್‌ಬಿಡಬ್ಲ್ಯೂ ಆಗುವ ಸಾಧ್ಯತೆ ಇದೆ.

ಆಫ್‌ಸ್ಪಿನ್

ವಿಕೆಟ್‌ಗಳ ನಡುವಿನ ನೇರರೇಖೆ ಹಾಗೂ ಕರ್ಣ ರೇಖೆಯ ನಡುವಿನ ಕೋನ 35-45° ಇರುತ್ತದೆ. ಚೆಂಡೆಸೆಯಲು ಆತ ವಿಕೆಟ್‌ನಿಂದ ಹೋಗುವ ದೂರ 8 ರಿಂದ 10 ಅಡಿ. ವೆಂಕಟ್ ರಾಘವನ್ ಮತ್ತು ಪ್ರಸನ್ನ ಕಡಿಮೆ ದೂರದಿಂದ ಚೆಂಡೆಸೆಯುತ್ತಿದ್ದರು. ಆಫ್‌ಸ್ಪಿನ್‌ನಲ್ಲಿ ಚೆಂಡು ಎಡದಿಂದ ಬಲಕ್ಕೆ ತಿರುಗುತ್ತದೆ. ಕ್ರಿಕೆಟ್‌ನಲ್ಲಿ ಆಫ್‌ಸ್ಪಿನ್ನರ್‌ಗಳ ಸಂಖ್ಯೆಯೇ ಹೆಚ್ಚು. ಆಫ್‌ಸ್ಪಿನ್‌ನ ಮುಖ್ಯ ಅಂಶ ಚೆಂಡೆಸೆಯುವಾಗ ಮುಂಗೈ ತಿರುಗುವುದಿಲ್ಲ.

ಬಹುಪಾಲು ಸ್ಪಿನ್ ಚೆಂಡೆಸೆತಗಾರರು ವಿಶಿಷ್ಟ ಭಂಗಿ, ಅಂಗಚೇಷ್ಟೆಯನ್ನು ಹೊಂದಿರುತ್ತಾರೆ. ಸನ್ನಿ ರಾಮದಿನ್ ಅಂಗಿಯ ತೋಳನ್ನು ಕೆಳಗಿಳಿಸಿಕೊಂಡು, ಬದಲಾವಣೆಗಳು ಕಾಣದಂತೆ ಮುಚ್ಚಿಕೊಳ್ಳುತ್ತಿದ್ದರು. ಮುಷ್ತಾಕ್‌ದು ಕರಚಳಕದ ಚೆಂಡೆಸೆತವಾದರೆ, ಅಬ್ದುಲ್ ಖಾದಿರ್ ಶಕ್ತಿ ಮತ್ತು ಶಕ್ತಿತೋಳಿನ ಬಲವನ್ನು ಸಂಯೋಜಿಸಿ ಕಪಿಯ ಶೈಲಿಯಲ್ಲಿ, ವಾರ್ನ್ ಹಲ್ಲುಕಿರಿಯುತ್ತ, ಭಾರೀ ತಿರುಗುವ ಚೆಂಡನ್ನು ಎಸೆಯುತ್ತಾರೆ. ಇವೆಲ್ಲ ನಿಗೂಢ ಹಾಗೂ ಮಾಂತ್ರಿಕ ಸಾಮರ್ಥ್ಯವುಳ್ಳವು.

ಆಫ್‌ಸ್ಪಿನ್ ಹಿಡಿತ



ಲೆಗ್‌ಸ್ಪಿನ್



ಜಯಪ್ರಕಾಶ್, ಅಂಪೈರ್

■ ಅದೊಂದು ವಿಶಿಷ್ಟ ಸಾಧನೆ. ಅವರು ತುಂಬಾ ಚೆನ್ನಾಗಿ ಬೌಲ್ ಮಾಡಿದರು. ಪಿಚ್ ಕೂಡಾ ಅವರ ಕಡೆಗೆ ಇದ್ದಿತ್ತು.

■ ಒಬ್ಬರಿಗಿಂತ ಇನ್ನೊಬ್ಬರು ವಿಭಿನ್ನರು. ವಾರ್ನೆ ಮತ್ತು ಮುಷ್ತಾಕ್ ಆಫ್ ಸ್ಪಿನ್ನರ್‌ಗಳಾದರೆ, ಕುಂಬ್ಳೆ ಮತ್ತು ಮುತ್ತಯ್ಯ ಮುರುಳೀಧರನ್ ಲೆಗ್‌ಸ್ಪಿನ್ನರ್‌ಗಳು.

■ ಆಫ್‌ಸ್ಪಿನ್ನರ್‌ಗಳಲ್ಲಿ ಶೇನ್ ವಾರ್ನೆ ಮತ್ತು ಮುರುಳೀಧರನ್ ಅತ್ಯುತ್ತಮ.

■ ಇದು ಕೆಲವು ಸಲ ಸರಿ. ಕೆಲವೊಮ್ಮೆ ಅಲ್ಲ. ಏಕೆಂದರೆ ಯಾರಾದರೂ ದಾಖಲೆ ಸ್ಥಾಪಿಸುತ್ತಿದ್ದರೆ, ಉಳಿದವರೆಲ್ಲ ಅವರಿಗೆ ಸಹಾಯ ಮಾಡುತ್ತಾರೆ. ಇಲ್ಲೂ ಸಹ ಅದು ನಡೆದಿದೆ.

■ ಖಂಡಿತ ಇದೆ. ಭಾರತದಲ್ಲಿ ಸ್ಪಿನ್ನರ್‌ಗಳು ಸಾಕಷ್ಟು ಜನ ಇದ್ದಾರೆ. ಮುಂದಿನ ಜನಾಂಗದಲ್ಲಿ ಅವರು ಬರುತ್ತಾರೆ.

■ ಪ್ರಸನ್ನ, ಚಂದ್ರ, ಬೇಡಿ, ವೆಂಕಟ್, ಕುಂಬ್ಳೆ, ವಾರ್ನೆ, ಮುರುಳೀಧರನ್, ಸಕ್ಲೈನ್ ಇವರೆಲ್ಲ ಶ್ರೇಷ್ಠ ಮಟ್ಟದ ಬೌಲರ್‌ಗಳು. ಕುಂಬ್ಳೆಗೆ ಪಿಚ್ ಹೊಂದಿಕೊಂಡಲ್ಲಿ ಅಂದಿನ ಪಂದ್ಯ ಅವರದ್ದು.

ಪ್ರಶ್ನೆಗಳು

1. ಕುಂಬ್ಳೆ ಸಾಧನೆ ನಿಮ್ಮ ದೃಷ್ಟಿಯಲ್ಲಿ ಯಾವ ರೀತಿ ವಿಶಿಷ್ಟ?
2. ವಾರ್ನೆ, ಸಕ್ಲೇನ್ ಮುಸ್ತಾಕ್, ಮುತ್ತಯ್ಯ ಮುರಳೀಧರನ್ ಮತ್ತು ಕುಂಬ್ಳೆ ಮಧ್ಯೆ ನೀವು ಕಂಡ ವ್ಯತ್ಯಾಸವೇನು?
3. ನಿಮ್ಮ ಪ್ರಕಾರ ಈವತ್ತಿನ ಸ್ಪಿನ್ನರುಗಳಲ್ಲಿ ಯಾರು ಶ್ರೇಷ್ಠ?
4. ಜಿಮ್ ಲೇಕರ್ ಜೊತೆ ಡೇವಿಡ್ ಲಾಕ್ ಇದ್ದರು, ಶ್ರೀನಾಥ್ ಕುಂಬ್ಳೆಗೆ 10 ವಿಕೆಟ್ ಸಿಗಲಿ ಅಂತ ವೈಡ್‌ಗಳನ್ನು ಬೌಲ್ ಮಾಡಿದರು. ಇದು ಸರಿಯೇ?
5. ಸ್ಪಿನ್ನರ್‌ಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಸ್ಪಿನ್ ಬೌಲಿಂಗ್‌ಗೆ ಭವಿಷ್ಯವಿದೆ ಎನ್ನುತ್ತೀರಾ?
6. ನೀವು ನೋಡಿದ ಸ್ಪಿನ್ನರ್‌ಗಳಲ್ಲಿ ಯಾರು ಶ್ರೇಷ್ಠರು? ಅವರಿಗಿಂತ ಕುಂಬ್ಳೆ ಯಾವ ರೀತಿ ಭಿನ್ನ?

ಕುಂಬ್ಳೆಯು ಎತ್ತರವಾಗಿರುವುದರಿಂದ ಅದು ಅವರ ಚೆಂಡೆಸೆತ ಸ್ವಲ್ಪ ಮಟ್ಟಿಗೆ ಭಿನ್ನ.

ಬಿ. ಎಸ್. ಚಂದ್ರಶೇಖರ್,

ಮಾಜಿ ಕ್ರಿಕೆಟ್ ಆಟಗಾರ

■ 10 ವಿಕೆಟ್ ತೆಗೆಯುವುದು ಸುಲಭವಾದ ಕೆಲಸವಲ್ಲ. ಅದೊಂದು ಅದ್ಭುತ. ಇದು ಎಲ್ಲರೂ ಹೆಮ್ಮೆ ಪಡಬಹುದಾದ ಸಾಧನೆ.

■ ಮುರುಳೀಧರನ್, ವಾರ್ನೆ, ಸಕ್ಲೈನ್ - ಸಾಂಪ್ರದಾಯಿಕ ಸ್ಪಿನ್ನರ್‌ಗಳು. ಅನಿಲ್ ಕುಂಬ್ಳೆ ಪುಟನೆಗೆಯಬಲ್ಲ, ವೇಗವಾದ ಚೆಂಡನ್ನೆಸೆಯಬಲ್ಲ ವಿಶ್ವಮಟ್ಟದ ಬೌಲರ್.

■ ಸಕ್ಲೈನ್ ಮುಷ್ತಾಕ್, ಕುಂಬ್ಳೆ ಹಾಗೂ ವಾರ್ನೆ

■ ಗೊತ್ತಿಲ್ಲ.

■ ಎಲ್ಲಿ ಕಡಿಮೆಯಾಗುತ್ತಿದೆ. ನಮ್ಮ ಸ್ಪಿನ್ನರ್‌ಗಳು ಹೆಚ್ಚಾಗುತ್ತಿದ್ದಾರೆ. ನಮ್ಮಲ್ಲಿ 6-7 ಜನ ಸ್ಪಿನ್ನರ್‌ಗಳಿದ್ದಾರೆ.

■ ಬೇರೆಯವರಿಗೆ ಹೋಲಿಸಿದರೆ ಕುಂಬ್ಳೆ ವೇಗವಾಗಿ, ಅಪಾಯಕಾರಿಯಾಗಿ ಬೌಲ್ ಮಾಡುತ್ತಾರೆ.

ಸಂದರ್ಶನ: ಕಿರಣ್

ನಾಗಿದ್ದಾತ, ಮುಂದಿನ ಪಂದ್ಯವನ್ನು ದೂರದರ್ಶನದಲ್ಲಿ ನೋಡುವ ಸ್ಥಿತಿ ಉದ್ಭವವಾಯಿತು.

ಪಂದ್ಯವೊಂದರ ದಿಕ್ಕನ್ನು ತಿರುಗಿಸಿ, ಅದನ್ನು ಗೆಲ್ಲಬಲ್ಲ ಛಾತಿಯುಳ್ಳ, ಏಕಾಂಗಿಯಾಗಿ ಪಂದ್ಯಗಳನ್ನು ಗೆದ್ದಿರುವ ಈತನನ್ನು, ಕ್ರಿಕೆಟ್‌ನ ಆಯ್ಕೆದಾರರು ಖ್ಯಾತ ಅಂಕಣಕಾರರು ನಡೆಸಿಕೊಂಡಿರುವ ರೀತಿ ಇದು. ಸದಾ ಈತನಿಂದಲೇ ತಂಡ ಗೆಲ್ಲಬೇಕು ಎನ್ನುವುದು ಎಷ್ಟು ಸರಿ? ಅದೂ ಏಕಾಂಗಿಯಾಗಿ? 51 ಟೆಸ್ಟ್‌ಗಳಲ್ಲಿ 234 ವಿಕೆಟ್ ಪಡೆದಿರುವ ಈತನಿಗೆ ಚೆಂಡು ತಿರುಗಿಸಲು ಬರುವುದಿಲ್ಲ ಎನ್ನುತ್ತಾರೆ ಪಂಡಿತರು!


ಇಬ್ಬರ ಸಾಧನೆ ಹೋಲಿಕೆ

ಜಿಮ್ ಲೇಕರ್		ಅನಿಲ್ ಕುಂಬ್ಳೆ
23.4.1922	ಜನನ ದಿನಾಂಕ	17.10.1970
ಬಲಗೈ, ಆಫ್ ಬ್ರೇಕ್	ಚೆಂಡೆಸೆತದ ಶೈಲಿ	ಲೆಗ್‌ಬ್ರೇಕ್, ಗೂಗ್ಲಿ
1947-48, ವೆಸ್ಟ್ ಇಂಡೀಸ್ ವಿರುದ್ಧ ಬ್ರಿಡ್ಜ್ ಟೌನ್	ಪ್ರಥಮ ಪಂದ್ಯ	1990, ಮ್ಯಾಂಚೆಸ್ಟರ್‌ನಲ್ಲಿ ಇಂಗ್ಲೆಂಡ್ ವಿರುದ್ಧ.
48	ಆಡಿದ ಟೆಸ್ಟ್‌ಗಳು	51
12,027	ಎಸೆದ ಚೆಂಡುಗಳು	15,748
674	ಓಟ ರಹಿತ ಓವರ್‌ಗಳು	676
4104	ಕೊಟ್ಟ ಓಟಗಳು	6384
193	ಪಡೆದ ವಿಕೆಟ್	234
21.24.	ವಿಕೆಟ್ ಸರಾಸರಿ	27.28
53ಕ್ಕೆ 10	ಅತ್ಯುತ್ತಮ ಚೆಂಡೆಸೆತ	74ಕ್ಕೆ 10
9 ಸಲ	ಐದು ವಿಕೆಟ್‌ಗಳನ್ನು ಪಡೆದದ್ದು	13 ಸಲ

3ನೇ ದಾಖಲೆ

ಬೌಲಿಂಗ್‌ನಲ್ಲಿ ಭಾರತದ ದಾಖಲೆ ಇದ್ದುದು ಜಸ್ಸು ಪಟೇಲ್ ಹೆಸರಿನಲ್ಲಿ. 1959-60ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಕಾನ್ಪುರದಲ್ಲಿ ಪಟೇಲ್ 69 ರನ್ನಿತ್ತು 9 ವಿಕೆಟ್ ಕಿತ್ತಿದ್ದರು. ಪಾಕಿಸ್ತಾನದ ವಿರುದ್ಧ 1952-53ರಲ್ಲಿ ಕಾನ್ಪುರದಲ್ಲಿ ವೀನೂಮಂಕಡ್ 52 ರನ್ನಿತ್ತು 8 ವಿಕೆಟ್ ಗಳಿಸಿದ್ದರು.

ಭಾರತೀಯರ ಹೆಸರಿನಲ್ಲಿ 2 ವಿಶ್ವದಾಖಲೆಗಳಿವೆ. ಮೊದಲಿನದ್ದು ಗವಾಸ್ಕರ್ ಹೆಸರಿನಲ್ಲಿ 34 ಶತಕ, 10,000 ರನ್. ಇನ್ನೊಂದು ಕಪಿಲ್ ಅವರ ಅತೀ ಹೆಚ್ಚು ವಿಕೆಟ್‌ಗಳಿಕೆಯ ದಾಖಲೆ. ಈಗ ಕುಂಬ್ಳೆ ಅಸಾಧ್ಯ ಎನ್ನಿಸಿದ್ದ ಇನ್ನೊಂದು ದಾಖಲೆಯನ್ನು ಸಮಮಾಡಿದ್ದಾರೆ. ಆದರ ಯಶಸ್ಸು ಅವರ ತಲೆಗೇರಿಲ್ಲ. ಮೊನ್ನೆ ಅವರು ಹೇಳಿದರು : ಹಿಂದಿನ ಪಂದ್ಯದಲ್ಲಿ ನಾನು 5 ವಿಕೆಟ್ ಗಳಿಸಿದ್ದರೂ, ಅದರ ನಂತರದ ಪಂದ್ಯದಲ್ಲಿ ಒಂದು ವಿಕೆಟ್‌ನಿಂದ ಲೆಕ್ಕ ಪ್ರಾರಂಭಿಸಬೇಕೆಂಬ



ಅದೃಷ್ಟಶಾಲಿ ಸ್ಟೋಕ್ಸ್

ಅದು ದೂರದರ್ಶನದ ಹಾವಳಿ ಇಲ್ಲದಿದ್ದ ಕಾಲ. 1956 ರಲ್ಲಿ 10 ವರ್ಷದ ಬಾಲಕನೊಬ್ಬ ತನ್ನ ತಂದೆಯ ಜೊತೆ ಮ್ಯಾಂಚೆಸ್ಟರ್‌ನಲ್ಲಿ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ನಡುವೆ ನಡೆದ ಪಂದ್ಯದಲ್ಲಿ ಜಿಮ್ ಲೇಕರ್ ಹತ್ತು ವಿಕೆಟ್ ಪಡೆದದ್ದನ್ನು ಕಂಡ.

ಕುಂಬ್ಳೆ ಮೊನ್ನೆ ಕೋಟ್ಲಾ ಮೈದಾನದಲ್ಲಿ ಮಾಡಿದ ಸಾಧನೆಯನ್ನು ಕಂಡ ಬ್ರಿಟಿಷ್ ಸಂಜಾತ ಜರ್ಮನಿಯ ಪ್ರಜೆ ರಿಚರ್ಡ್ ಸ್ಟೋಕ್ಸ್ ವ್ಯವಹಾರಕ್ಕೆ ಸಂಬಂಧಿಸಿದಂತೆ ಭಾರತಕ್ಕೆ ಬಂದಿದ್ದರು. ಕಷ್ಟದಿಂದಲೇ ಪಂದ್ಯಕ್ಕೆ ಟಿಕೆಟ್ ಗಿಟ್ಟಿಸಿದ ಈ ವ್ಯಕ್ತಿ ಲೇಕರ್ ಹಾಗೂ ಕುಂಬ್ಳೆ ಇಬ್ಬರ ಜಾಗತಿಕ ದಾಖಲೆಯನ್ನು 43 ವರ್ಷಗಳ ಅವಧಿಯಲ್ಲಿ ಕಂಡ ಏಕೈಕ ವ್ಯಕ್ತಿ.

ಈಗ ಈತ ಕ್ರಿಕೆಟ್‌ನ ದಂತಕತೆಯ ಭಾಗವಾಗಿ ಹೋಗಿ ಬಿಟ್ಟಿದ್ದಾರೆ!

ಟಿಪಿಕಲ್ ಜಿಮ್ ಲೇಕರ್

ಈತನಿಗೂ, ಕುಂಬ್ಳೆಗೂ ಅನೇಕ ಸಾಮ್ಯಗಳಿವೆ. ಅವುಗಳಲ್ಲೊಂದು - ಈತ ತನ್ನ ವೃತ್ತಿ ಪ್ರಾರಂಭಿಸಿದ್ದು ದಾಂಡಿಗ ಹಾಗೂ ವೇಗದ ಬೌಲರ್ ಆಗಿ. ತನ್ನ ಶಾಲೆ ಹಾಗೂ ಬ್ರಾಡ್‌ಫೋರ್ಡ್‌ಲೀಗ್‌ಗಾಗಿ ಆಡುತ್ತಿದ್ದ ಈತ, ಪ್ರಯೋಗಾರ್ಥವಾಗಿ ಆಫ್ ಸ್ಪಿನ್ ಮಾಡಲು ಪ್ರಾರಂಭಿಸಿದ. ಇನ್ನೊಬ್ಬ ಎಡಗೈ ಸ್ಪಿನ್ನರ್ ಆದ ಟೋನಿ ಲಾಕ್ ಜೊತೆ ಚೆಂಡೆಸೆಯುತ್ತಿದ್ದ ಈತ ಪ್ರಾರಂಭದ ಅಂತರಾಷ್ಟ್ರೀಯ ಪಂದ್ಯಗಳಲ್ಲಿ ಯಶಸ್ಸು ಗಿಟ್ಟಿಸಿರಲಿಲ್ಲ. 1948ರಲ್ಲಿ ಆಸ್ಟ್ರೇಲಿಯನ್ನರಿಂದ ಚೆನ್ನಾಗಿ ಇಕ್ಕಿಸಿಕೊಂಡಿದ್ದ ಲೇಕರ್‌ಗೆ ತಂಡದ ಸ್ಥಾನ ಶಾಶ್ವತವಾದದ್ದಾಗಿರಲಿಲ್ಲ.

31ರ ಜುಲೈ 1956. 34 ವರ್ಷ ವಯಸ್ಸಿನ ಲೇಕರ್ ಆಸ್ಟ್ರೇಲಿಯಾದ ವಿರುದ್ಧ 4ನೇ ಟೆಸ್ಟ್‌ನ ಕೊನೆಯ ದಿನ ಚೆಂಡೆಸೆಯಲು ಸಿದ್ಧನಾಗಿ ನಿಂತಿದ್ದರು. ಸರಣಿ 1-1ರಲ್ಲಿ ಸಮನಾಗಿತ್ತು. 6 ಅಡಿ ಎತ್ತರದ ಲೇಕರ್ ತನ್ನ ಚೆಂಡೆಸೆತದ ಹಾದಿಯನ್ನು ತುಳಿಯುತ್ತಿದ್ದಾಗ ಚರಿತ್ರೆಯಲ್ಲಿ ಆತ ಹೆಜ್ಜೆ ಗುರುತು ಮೂಡಿಸುತ್ತಿದ್ದಾನೆಂದು ಬೇರೆಯವರಿಗೆ ಹೋಗಲಿ, ಸ್ವತಃ ಆತನಿಗೇ ಗೊತ್ತಿರಲಿಲ್ಲ. ಕರಾರುವಕ್ಕಾಗಿ ಚೆಂಡೆಸೆಯಬಲ್ಲನಾಗಿದ್ದ ಲೇಕರ್ ಚೆಂಡಿನ ಕೋನವನ್ನು, ಗಾಳಿಯಲ್ಲಿ ಏರಿಳಿಸುವುದನ್ನು ಕರತಲಾಮಕ ಮಾಡಿಕೊಂಡಿದ್ದರು. ಆ ಪಂದ್ಯದಲ್ಲಿ ಆಸ್ಟ್ರೇಲಿಯಾವನ್ನು ಧೂಳಿ ಪಟ ಮಾಡಿ ಬಿಟ್ಟ ಲೇಕರ್ 53ರನ್ ಓಟ ನೀಡಿ 10 ವಿಕೆಟ್ ಕಿತ್ತರು. ಈ ಸಾಧನೆಯು ಆತನ ಬದುಕನ್ನೇ



ಬದಲಿಸಿ ಬಿಟ್ಟಿತು. 1956ರ ಸರಣಿಯಲ್ಲಿ ಅವರು 46 ವಿಕೆಟ್ ಕಿತ್ತರು. ಇದರಲ್ಲಿ ಓಲ್ಡ್ ಟ್ರಾಫರ್ಡ್‌ನ 19 ವಿಕೆಟ್ ಹಾಗೂ ಲೀಡ್ಸ್‌ನಲ್ಲಿ 3ನೇ ಟೆಸ್ಟ್‌ನಲ್ಲಿ ಆತ ಪಡೆದ 11 ವಿಕೆಟ್ ಸೇರಿವೆ.

ವಿಶ್ವದಾಖಲೆ ಸ್ಥಾಪಿಸುವ ಮೊದಲು, 2 ತಿಂಗಳ ಹಿಂದೆ ಲೇಕರ್ ಸರ್ರೆಯ ಪರವಾಗಿ ಆಸ್ಟ್ರೇಲಿಯನ್ನರ 10 ವಿಕೆಟ್ ಕಸಿದಿದ್ದರು (88 ಕ್ಕೆ 10). 1964ರಲ್ಲಿ ಆಟದಿಂದ ನಿವೃತ್ತಿ ಪಡೆದ ಲೇಕರ್ ಕುರಿತ ಪುಸ್ತಕ 'Over to me' ವಿವಾದಾತ್ಮಕವಾಗಿತ್ತು. ಕ್ರಿಕೆಟ್‌ನ ವೀಕ್ಷಕ ವಿವರಣಾಕಾರರಾಗಿ ಹೆಸರು ಪಡೆದಿದ್ದ ಅವರು ಏಪ್ರಿಲ್ 23, 1986ರಲ್ಲಿ ಮೃತರಾದರು.

■ ಚೆಂಡು ಗಾಳಿಯಲ್ಲಿ ಹೆಚ್ಚು ಕಾಲ ಇದ್ದರೆ ಹೆಚ್ಚೆಚ್ಚು ತಿರುಗುತ್ತದೆ. ಚೆಂಡನ್ನು ವೇಗವಾಗಿ ಎಸೆದಲ್ಲಿ ಅದು ಗಾಳಿಯಲ್ಲಿರುವುದೂ ಕಡಿಮೆ, ತಿರುಗುವುದೂ ಕಡಿಮೆ. ನನಗೆ ವಾರ್ನೆಯಂತೆ ಚೆಂಡನ್ನು ತಿರುಗಿಸುವ ಆಸೆಯಿದೆ. ನಾನು ಚೆಂಡನ್ನು ಹೆಚ್ಚು ತಿರುಗಿಸಲಾರೆ ಎನ್ನುವ ನನ್ನ ಮಿತಿ ನನಗೆ ಗೊತ್ತಿದೆ.

-ಅನಿಲ್ ಕುಂಬ್ಳೆ

■ ನನ್ನ ಬೌಲಿಂಗ್‌ನಲ್ಲಿ ವಕಾರ್ ಯೂನೀಸ್ ಹೊಡೆದ ಚೆಂಡು ಆಕಾಶಕ್ಕೇರಿತು. ಕ್ಷೇತ್ರಪಾಲಕ ಅದನ್ನು ಹಿಡಿಯದೇ ಹೋಗಲಿ ಎಂದು ನಾನು ಬೇಡಿಕೊಂಡೆ.

-ಜಾವಗಲ್ ಶ್ರೀನಾಥ್

■ ನಮ್ಮ ಪ್ರಖ್ಯಾತ ಸ್ಪಿನ್ನರುಗಳಾದ ಚಂದ್ರ, ಪ್ರಸನ್ನ, ಬೇಡಿ, ವೆಂಕಟ್‌ಗೆ ಹೋಲಿಸಿದರೆ ಅನಿಲ್ ಚಂದ್ರನಂತೆ. ಪಂದ್ಯಗಳನ್ನು ಗೆಲ್ಲಿಸಬಲ್ಲ ಛಾತಿಯುಳ್ಳವ. ಇವರಿಬ್ಬರ ನಡುವೆ ಇರುವ ವ್ಯತ್ಯಾಸವೆಂದರೆ ಅನಿಲ್ ಯೋಜಿತ ರೀತಿಯಲ್ಲಿ ಬೌಲ್ ಮಾಡುತ್ತಾರೆ. ಚಂದ್ರು ಸಹಜ ಪ್ರವೃತ್ತಿಯ ಬೌಲರ್.

-ಅನ್ಷುಮನ್ ಗಾಯಕ್‌ವಾಡ್

■ ಇದೊಂದು ಭಾರೀ ಸಾಧನೆ. ಕುಂಬ್ಳೆಯಂತಹ ಸಭ್ಯನೊಬ್ಬ ಇದನ್ನು ಸಾಧಿಸಿದ್ದು ಸಂತೋಷದ ವಿಷಯ.

-ಶೇನ್ ವಾರ್ನೆ

ಅರಿವು ನನಗಿದೆ. ಚಂದ್ರುಗೆ ನನ್ನನ್ನು ಹೋಲಿಸಬೇಡಿ, ಆತ ಗ್ರೇಟ್. ವೇಗಕ್ಕಾಗಿ ಅನೇಕ ಪಂದ್ಯಗಳನ್ನು ಗೆದ್ದು ಕೊಟ್ಟಿದ್ದಾರೆ.

ಕ್ರಿಕೆಟ್‌ನಲ್ಲಿ ಲೆಗ್‌ಸ್ಪಿನ್ನರ್‌ಗಳ ಕುರಿತು ಒಂದು ಮಾತಿದೆ '30 ವರ್ಷ ವಯಸ್ಸಾದಾಗ ಅವರು ಪ್ರಬುದ್ಧರಾಗುತ್ತಾರೆ' ಎಂದು. ಕುಂಬ್ಳೆಗಿನ್ನೂ 28 ವರ್ಷ. 30 ಆಗಲು ಇನ್ನೂ 2 ವರ್ಷ ಇದೆ. ಕೆಟ್ಟ ರಾಜಕೀಯ ತಲೆ ಹಾಕದಿದ್ದಲ್ಲಿ ಈತ ಭಾರತ ತಂಡದ ನಾಯಕನಾಗಬಲ್ಲ ಯೋಗ್ಯತೆ ಉಳ್ಳಾತ. ವಯಸ್ಸು ಕೂಡಾ ಆತನ ಜೊತೆಗಿದೆ. ಈಗಾಗಲೇ ಯಶಸ್ಸು, ಸೋಲು, ನಿರ್ಲಕ್ಷ್ಯ, ಪ್ರೀತಿ ಇವುಗಳೆಲ್ಲದರಿಂದ ಕುಂಬ್ಳೆ ಪ್ರಬುದ್ಧರಾಗಿ ಬಿಟ್ಟಿದ್ದಾರೆ.

ಭವಿಷ್ಯ ಹೇಗಿದೆಯೋ, ಅದರಲ್ಲಿ ಏನು ಕಾದಿದೆಯೋ ಗೊತ್ತಿಲ್ಲ. ಒಂದಂತೂ ಸತ್ಯ. ಭವಿಷ್ಯದಲ್ಲಿಯೂ ಕ್ರಿಕೆಟ್ ಇತಿಹಾಸದಲ್ಲಿ ಅವರ ಹೆಸರು ಅಜರಾಮರ. ಅವರ ದಾಖಲೆಯನ್ನು ಇನ್ನೊಬ್ಬ ಮುರಿದರೂ ಸಹಾ! ■

ದಿನಸಿ ಡಾಕ್ಟರು

■ ಡಾ. ಎಚ್. ಎಸ್. ವೆಂಕಟೇಶ್

'**ಗು**ರುವೇ, ಇನ್ನು ಸ್ವಲ್ಪ ದಿನ ನಾನು ನಿಂಗೆ ಸಿಗಾಕಿಲ್ಲ'.

ಒಂದು ಭಾನುವಾರ, ಪರಮ ನಮ್ಮ ಮನೆಯಲ್ಲಿ ಟಿಫನ್ ತಿನ್ನುತ್ತಾ ಹೇಳಿದ.

'ಏನು ವಿಶೇಷ ಪರಮೇಶ್' ಜಯ ಕೇಳಿದಳು.

ಏನಿಲ್ಲಾ ಅತ್ಗೆ, ನನ್ನ ಭಾಮೈದ ಒಂದು ಹೊಸಾ ಬಿಸಿನೆಸ್ಸು ಶುರು ಮಾಡವ್ನೆ. ಅದ್ಕೆ ಅವಂಗೆ ಸ್ವಲ್ಪ ದಿನ ಹೆಲ್ಪ್ ಮಾಡೋಣಾಂತ'.

'ಅಂದ್ರೆ ನಿನ್ನ ಭಾಮೈದ ಇಷ್ಟರಲ್ಲೇ ಆತ್ಮಹತ್ಯೆ ಮಾಡ್ಕೋತಾನೆ' ಕೇಳಿದೆ.

'ನೋಡಿದ್ರಾ ಅತ್ಗೆ, ಇವ್ರು ಹೇಳೋದನ್ನ' ಸಿಡುಕಿದ ಪರಮ.

'ಅವ್ರ ಬುದ್ಧಿ ನಿಮಗೆ ಗೊತ್ತಿಲ್ವಾ? ನೀವ್ಯಾಕೆ ಚಿಂತೆ ಮಾಡ್ತೀರಿ? ಆದ್ರೂ ನಿಮ್ಮ ಭಾಮೈದ ಏನು ಬಿಸಿನೆಸ್ಸು ಮಾಡ್ತಾರೆ?' ಜಯ ಕೇಳಿದಳು.

'ಈವಾಗ್ತಾನೇ ಕಾಲೇಜಿನಿಂದ ಹೊರ್ಗೆ ಬಂದವ್ನೆ'



ಪರಮ ಬಿಸಿನೆಸ್ಸಿನಲ್ಲಿ ಕೈ ಹಾಕಿದನೆಂದರೆ ಆಗುವುದು ಎರಡೇ. ಒಂದು ಸ್ವಲ್ಪ ದಿನದಲ್ಲೇ ಅವನನ್ನು ನಂಬಿದ ಕುಳ, ಒಳ್ಳೆ ದುಡ್ಡು ಮಾಡುತ್ತಾನೆ. ಇಲ್ಲದಿದ್ರೆ, ಕಳ್ಳಕುಳನಾಗಿ ಊರುಬಿಡ್ತಾನೆ.

'ಅಂದ್ರೆ ಇನ್ನೂ ಬಿಸಿನೆಸ್ಗೆ ಹೊಸಬಾನ್ನು'

'ಅದ್ರೆ, ಗುರೂ, ಬುರುಡೆ ಚೆನ್ನಾಗಿದೆ. ಹಸ್ತಗುಣಾನೂ ಫಸ್ಟ್‌ಕ್ಲಾಸಾಗಿದೆ, ಅವ್ನ ಮೇಷ್ಟ್ರು ಕೈಲಿ ಆಗ್ದೇ ಇರೋ, ಕಾಯಿಲೇನೆಲ್ಲಾ ಇವ್ನೇ ವಾಸಿ ಮಾಡವ್ನೆ' ತಲೆ ಗಿರ್ರೆಂದಿತು. ಇವನು ಯಾವುದರ ಬಗ್ಗೆ ಹೇಳ್ತಾಯಿದಾನೆ?

'ಪರಮ, ನಿನ್ನ ಭಾಮೈದ ಯಾವ ಕಾಲೇಜಿನಲ್ಲಿ ಓದ್ದ? ಈಗ ಏನಾಗಿದಾನೆ?'

'ಅದೇ ಗುರೂ, ಮೆಡಿಕಲ್ ಕಾಲೇಜಿನಲ್ಲಿ. ಈ ವರ್ಷ ಪೂರ್ತಿ ಆಯ್ತು. ಅದ್ಕೆ ಅವ್ನು ಶುರು ಮಾಡೋ ಬಿಸಿನೆಸ್ಸಿಗೆ ಏನಾದ್ರೂ ಸಹಾಯ ಮಾಡಣಾಂತ'.

ಪಾಪಿ, ಚಂಡಾಲ, ಗೌರವವಾದ ವೈದ್ಯ ವೃತ್ತಿಯನ್ನು ಇವನು ವ್ಯಾಪಾರದ ಮಟ್ಟಕ್ಕೆ ಇಳಿಸಿದ್ದಾನಿಲ್ಲಾ? ಎಂದು ಸಂಕಟವಾಯ್ತು.

ಇವನನ್ನು ನಂಬಿ ಬರುವ ಆ ಡಾಕ್ಟರ್ ಭಾಮೈದುನನ ಪಾಡೇನಾಗುತ್ತೋ ಶಿವನೇ? ಎನಿಸಿತು.

ಆದರೂ ಎಲ್ಲೋ ಏನೋ ಅನುಮಾನ. ಪರಮ ಕೈ ಹಾಕಿದನೆಂದರೆ ಅವನು ನೆಲಕ್ಕೆ ಬೀಳುವ ಸಾಧ್ಯತೆಯೇ ಇಲ್ಲ, ಅಂತಹ ಚಂಡಾಲ ಬುರುಡೆ ಅವನದು.

ನಗರದಲ್ಲಿ ಯಾವ ಗಲ್ಲಿಯಲ್ಲಿ ಹೋದರೂ ಪೆಟ್ಟಿಗೆ ಅಂಗಡಿಗಳಂತೆ ತಲೆ ಎತ್ತಿರುವ ಕ್ಲಿನಿಕ್, ನರ್ಸಿಂಗ್ ಹೋಂಗಳು, ಡಾಕ್ಟರುಗಳು ಓದಿರುವ ಉದ್ದುದ್ದ ಡಿಗ್ರಿಗಳು ಕಣ್ಣಿಗೆ ರಾಚುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಈಗ ತಾನೇ ಡಿಗ್ರಿ ಮುಗಿಸಿದ ಪರಮನ ಭಾಮೈದ ಏನು ಮಾಡಲು ಸಾಧ್ಯ?

ತಲೆ ಕೆರೆದುಕೊಳ್ಳಲು ನನ್ನ ಬಿಟ್ಟು, ಪರಮ ಎದ್ದಿದ್ದ. ಒಂದೈದು ಆರು ತಿಂಗಳು ಕಳೆದಿರಬಹುದು. ನಾನೂ ಎಲ್ಲಾ ಮರೆತಿದ್ದೆ.

'ಗುರುವೇ, ಚೆನ್ನಾಗಿರೋ ಸೆಕೆಂಡ್ ಹ್ಯಾಂಡ್ ಮೆಟಡಾರ್ ಇದ್ರೆ ಹೇಳ್ತೋ' ಒಂದು ದಿನ ಪರಮ ಕೇಳಿದ್ದ.

'ಯಾಕೋ ಈಗ ಮೆಟಡಾರು? ಏನಾದ್ರೂ ಹೊಸ ಪ್ಲಾನೇ?'

'ಇಲ್ಲಯ್ಯ, ನನ್ನ ಭಾಮೈದಂಗೆ ಬೇಕಂತೆ, ಬಿಸಿನೆಸ್ಸು ಚೆನ್ನಾಗಿದ್ಯಂತೆ'. ಅರ್ಥವೇ ಆಗಲಿಲ್ಲ. ಒಂದು ವೇಳೆ ಅದನ್ನು ಏನಾದ್ರೂ ಆಂಬ್ಯುಲೆನ್ಸ್‌ತರಾ ಮಾಡ್ತಾನಾ? ಎನಿಸಿತು.

'ನಿಮ್ಮ ಭಾಮೈದುನನ ಆದಾಯ, ವ್ಯಾಪಾರ ಹೇಗಿದೆ?' ಜಯ ಒಂದು ದಿನ ಕೇಳಿದ್ದಳು.

'ತಿಂಗ್ಳಿಗೆ ಏನಿಲ್ಲಾಂದ್ರೂ, ಎರ್ಡು ಮೂರು ಕ್ವಿಂಟಾಲ್ ಅಕ್ಕಿ, ಒಂದೆರಡು ಕ್ವಿಂಟಾಲ್ ರಾಗಿ, ಹಣಸೇ ಹಣ್ಣು, ಮೆಣಸಿನಕಾಯಿ, ಸೊಪ್ಪು ತರಕಾರಿಗೇನೂ ಕಮ್ಮಿಯಿಲ್ಲ ಅತ್ಗೆ, ತುಂಬಾ ಚೆನ್ನಾಗಿ ಆದಾಯವಿದೆ' ಪರಮ ಹೆಮ್ಮೆಯಿಂದ

ಬಾಯಿ ಬಿಟ್ಟಿದ್ದ.

ಮಿಕಿ, ಮಿಕಿ ನೋಡಿದೆವು. ಪರಮನ ಭಾಮೈದ ಡಾಕ್ಟರಲ್ಲವೇ? ಇವನು ಕೊಡುತ್ತಿರುವ ವಿವರಣೆ ಒಳ್ಳೇ ದಿನಸೀ ವ್ಯಾಪಾರದ ಹೋಲ್‌ಸೇಲ್ ನಂತಿದೆಯಲ್ಲಾ?

'ಅಂಕಲ್, ಇದೇನಿದೂ, ಡಾಕ್ಟರಾದ್ರ ಹಣ ಬಿಟ್ಟು ಇದಂತಾ ವ್ಯಾಪಾರ? ಆದಾಯ? ಬಂಗಾರಿ ಕೇಳಿದಳು.

'ಅವೆಲ್ಲಾ ಗುಟ್ಟು ಹೇಳಾಂಗಿಲ್ಲ. ಬೇಕಾದ್ರೆ ತೋರಿಸ್ತೀನಿ' ಪರಮ ಮುಗುಮ್ಮಾಗಿ ಹೇಳಿದ.

ಒಟ್ಟಿನಲ್ಲಿ ಪರಮನ ಭಾಮೈದ ಡಾಕ್ಟರಾಗಿ ಕ್ಲಿನಿಕ್ಸ್ ನಡೆಸುತ್ತಿದ್ದಾನೋ? ಇಲ್ಲಾ ಯಾವುದಾದ್ರೂ ಮಂಡಿ ವ್ಯಾಪಾರ ಮಾಡುತ್ತಿದ್ದಾನೋ? ತಿಳಿಯಲಿಲ್ಲ. ಇತ್ತೀಚೆಗೆ, ನನ್ನನ್ನೂ ಸೇರಿ, ಪರಮ ತನಗೆ ಗೊತ್ತಿರುವವರಿಗೆಲ್ಲಾ ಕಡಿಮೆ ಬೆಲೆಯಲ್ಲಿ ಒಳ್ಳೆಯ ಅಕ್ಕಿ, ರಾಗಿ, ಹುಣಸೇಹಣ್ಣು, ಮೆಣಸಿನಕಾಯಿ, ಬೆಲ್ಲ, ತರಕಾರಿ ಸಪ್ಲೈ ಮಾಡಲು ಪ್ರಾರಂಭಿಸಿದ. ಮಾಲಿನಲ್ಲೇನೂ ಮೋಸವಿಲ್ಲ. ಬೆಲೆಯೂ ಕಡಿಮೆ, ನಮಗಂತೂ ಅರ್ಥವಾಗದು.

ಎಲ್ಲವೂ ಭಾಮೈದುನನಿಂದ ಬಂದಿದ್ದು ಎನ್ನುತ್ತಾನೆ. ಏನಯ್ಯಾ ಮಾಯೆ? ಪರಮನ ತರಲೆ ಅರ್ಥವಾಗಲೇ ಇಲ್ಲ. ಒಟ್ಟಿನಲ್ಲಿ ನಮ್ಮ ಮನೆಗೆ ಮಾಮೂಲಿಗಿಂತಾ ಇನ್ನೂರು, ಮುನ್ನೂರು ರೂಪಾಯಿ ಉಳಿತಾಯದಲ್ಲಿ ತಿಂಗಳ ರೇಷನ್ ಸಪ್ಲೈಯಾಗುತ್ತಿತ್ತು.

'ಬೇಡಾ ಬಂಗಾರಿ, ನಿಂಗ್ಯಾಕೆ ಈ ಹುಚ್ಚು' ವೈದ್ಯಕೀಯ ಸೇರಲು ಎಂಟ್ರೆನ್ಸ್‌ಗೆ ತಯಾರಾಗುತ್ತಿದ್ದ ಮಗಳು ಬಂಗಾರಿಗೆ ಹೇಳಿದೆ.

'ಇದ್ರಲ್ಲಿ ತುಂಬಾ ಆದಾಯ ಇದ್ಯಂತಪ್ಪಾ'

'ಸೇವೆ ಮಾತು ಬಿಟ್ಟು ಆದಾಯವಂತೆ! ಯಾರು ಇದೆಲ್ಲಾ ನಿಂಗೆ ಹೇಳಿದ್ದು?'

ಈಗ ನೋಡು ಬೀದಿಗೆ ಹತ್ತು ಜನ ಡಾಕ್ಟರುಗಳು' ರೇಗಿದೆ.

'ಪರಮೇಶ್ ಅಂಕಲ್ಲೇ ಹೇಳಿದ್ದು'

ಪಾಪಿ, ನನ್ನ ಬಂಗಾರಿ ತಲೆಯನ್ನು ಕೆಡಿಸಿದ್ದ.

'ಯಾವುದಕ್ಕೂ ನಾನು ವಿಚಾರ ಮಾಡ್ಬೇಕು' ಮೊದಲು ಪರಮನ ಭಾಮೈದ ಡಾಕ್ಟ್ರ ಬಗ್ಗೆ ತಿಳಿಯಬೇಕಿತ್ತು. ಪರಮನಿಂದ ಅವನ ಗತಿ ಏನಾಗಿದೆಯೆಂದು ತಿಳಿಯಬೇಕಲ್ಲವೇ?

'ಇಲ್ಲದ್ದನ್ನೆಲ್ಲಾ ಬಂಗಾರಿ ತಲೆಗ್ಯಾಕೋ ತುಂಬ್ತಿ' ಒಂದು ದಿನ ಪರಮನಿಗೆ ರೇಗಿದೆ.

'ಮೊದ್ಲು ಅದನ್ನೆಲ್ಲಾ ತೋರ್‍ಸ್ತ ಗುರೂ, ಆಮೇಲೆ ಬೇಕಾದ್ರೆ ನಿರ್ಧಾರ ತೊಗೊಳ್ಳಿ' ಪರಮನೆಂದ.

ಹೌದಲ್ಲಾ, ಅದೂ ಸರಿಯೆನಿಸಿತು.

ಒಂದು ಭಾನುವಾರ ನಾನು, ಜಯ, ಬಂಗಾರಿ, ಚೋಟು, ಪರಮ ಹೊರಟೆವು. ಪರಮನ ಡಾಕ್ಟರ್ ಭಾಮೈದುನ ಕಾರುಬಾರು ನೋಡಲು.

'ಗ್ರಾಮೀಣ ಸಂಚಾರಿ ಚಿಕಿತ್ಸಾಲಯ' ಬೋರ್ಡು ಹೊತ್ತ, ಪರಮ ಖರೀದಿಸಿದ ಸೆಕೆಂಡ್ ಹ್ಯಾಂಡ್ ಮೆಟಡಾರು ಸರ್ಕಿಟಿಗೆ ಹೊರಡಲು ರೆಡಿಯಿತ್ತು.

'ಈಗ ಬಂದ್ರಾ ಮಾವ?' ಡಾಕ್ಟರು ಕೇಳಿದವನೇ,

'ಈವತ್ತು ಅರ್ಧ ದಿನ ಮಾತ್ರಾ, ಬೇಗ ಬಂದ್ಬಿಡ್ತೀನಿ' ಎಂದು ಹೊರಟ. ಅವನ ಸಹಾಯಕ ಹುಡುಗ, ಒಂದೆರಡು ಗೋಣೀ ಚೀಲ, ತೂಕ ಮಾಡುವ ತ್ರಾಸು, ತೂಕದ ಕಲ್ಲುಗಳನ್ನು ಮೆಟಡರಿಗೆ ಹಾಕುವುದನ್ನು ಚೋಟು ಬಾಯಿ ಬಿಟ್ಟು ನೋಡುತ್ತಿದ್ದ. ನಮಗಂತೂ ಏನೂ ಅರ್ಥವಾಗಲಿಲ್ಲ. ಡಾಕ್ಟರಿಗೆ ಔಷಧಿ ಬಿಟ್ಟು ಇವೆಲ್ಲಾ ಯಾಕೆ ಬೇಕಾಗುತ್ತದೆ.

ಪರಮ ಹೆಮ್ಮೆಯಿಂದ ನಗುತ್ತಿದ್ದ. ತನ್ನ ಪ್ಲಾನು ತುಂಬಾ ಚೆನ್ನಾಗಿ ಕೆಲಸ ಮಾಡುತ್ತಿದೆಯೆಂದು.

'ಅಂಕಲ್, ಡಾಕ್ಟ್ರು ಬರೋವರ್ಗೂ ತಡ್ಯಕ್ಕೆ ಆಗಲ್ಲ. ಪ್ಲೀಸ್, ಇದ್ರ ಗುಟ್ಟೇನು?' ಚೋಟು ಕೇಳಿದ.

'ಹೌದು ಪರಮೇಶ್, ಪಾಪ ಅವ್ರ ಮುಂದೆ ಕೇಳಿದ್ರೆ, ಅವ್ರ ಮನಸ್ಸು ನೋಯಬಹುದು. ಅದಕ್ಕೆ ಈಗ್ಲೇ ಹೇಳಿ' ಜಯ ಕೇಳಿದಳು.

'ಅಂಗೇನಿಲ್ಲಾ ಅತ್ಗೆ, ಆದ್ರೂ ಅದು ಸರೀನ್ನಿ'

ಪರಮ ಗಂಟಲು ಸರಿ ಮಾಡಿಕೊಂಡು ಪ್ರಾರಂಭಿಸಿದ.





ದೃಷ್ಟಿ

''ಗಂಡನ ದೃಷ್ಟಿ ಪರಸ್ತ್ರೀಯ ಮೇಲೆ ಬೀಳದಿರಲಿ ಎಂದು ಹೆಂಡತಿ ಶೃಂಗರಿಸಿಕೊಳ್ಳುತ್ತಾಳೆ.''

''ಪರಸ್ತ್ರೀಯರ ದೃಷ್ಟಿ ತನ್ನ ಮೇಲೆ ಬೀಳಲಿ ಎಂದು ಗಂಡ ಶೃಂಗರಿಸಿಕೊಳ್ಳುತ್ತಾನೆ.''

ಬುದ್ಧಿವಂತ ಹುಡುಗ ಪರಮನ ಭಾಮೈದ. ಸರ್ಕಾರದವರೇ ಕರೆದುಕೊಟ್ಟ ಮೆಡಿಕಲ್ ಸೀಟು. ಅಷ್ಟರಲ್ಲಿ ಯಾವ ನಗರದಲ್ಲಿ ನೋಡಿದರೂ ಪೆಟ್ಟಿಗೆ ಅಂಗಡಿಗಳಂತಾದ ಕ್ಲಿನಿಕ್‌ಗಳು, ನರ್ಸಿಂಗ್ ಹೋಂಗಳು. ಇದರಲ್ಲಿ ಹತ್ತರಲ್ಲಿ ಹನ್ನೊಂದಾಗುವ ಭಯವಿತ್ತು. ಸ್ವಂತವಾಗಿ ಪ್ರಾಕ್ಟೀಸು ಮಾಡಲು ಬೇಕಾದ ಬಂಡವಾಳ, ಕ್ಲಿನಿಕ್ ಹೆಸರುವಾಸಿಯಾಗಲು ಬೇಕಾದ ಕಾಲ, ಎಲ್ಲವನ್ನೂ ಪರಮ ಲೆಕ್ಕಹಾಕಿದ.

'ಓದಿದ್ದಾಯ್ತು, ಈಗ ಬರ್ರೋದು ಮುಖ್ಯ. ನಾ ಹೇಳ್ದಂಗೇ ಮಾಡ್ತಿಯಾಪ್ಪ' ಒಂದು ದಿನ ಭಾಮೈದನನ್ನು ಕೇಳಿದ್ದ.

ಜಟಕಾ ಕುದುರೆಯಂತಾ, ನಿಜ ಪ್ರಪಂಚ ಅರಿಯದ ಹಳ್ಳಿಯ ಪಾಪದ ಕೂಸು. ಮಾವನೇ ದಿಕ್ಕೆಂದು ನಂಬಿತ್ತು.

ಮೊದಲು ತನ್ನ ಹಳ್ಳಿಗೆ ಬಂದವನೇ, ಪರಮ ಡಾಕ್ಟರನ್ನು ಸುತ್ತೂ ಐವತ್ತು ಹಳ್ಳಿಗೆ ಪರಿಚಯ ಮಾಡಿಸಿದ್ದ.

'ಬೆಂಗ್ಳೂರ್ನಾಗೇ ಇರ್ತೀಕೊಂತಿದ್ದ ಈ ಡಾಕ್ಟ್ರನ್ನ ಇಲ್ಲಿಗ್ಯಾಕೆ ಕರ್ಕೊಂಬಂದೆ ಗೊತ್ತಾ? ನೀವ್ರು ಸಣ್ಣ ಸಣ್ಣ ಕಾಯ್ಲೇಗೂ ಅರ್ಧ ದಿನ, ಒಂದಿನ ಕೆಲ್ಸ ಬಿಟ್ಟು ಡಾಕ್ಟ್ರ ಷಾಪಿಗೆ ಅಲೀ ಬಾರ್ದೂಂತ. ನಮ್ಮಳ್ಳಿ ಜನ ಕಷ್ಟ ಪಡ್ಬಾರ್ದು. ಇನ್ಮೇಲೆ ದೇವಸ್ಥಾನದ ದೇವ್ರೇ ನಿಂ ಬಾಗ್ಲಿಗೇ ಬರ್ತದೆ, ಪೂಜೆಗೆ. ಅಂಗೇ ಇದು, ಈಗಾಗ್ಲೇ ನಾನು ಡಾಕ್ಟ್ರಿಗೆ ಹೇಳೀವ್ನಿ. ನಮ್ಮಳ್ಳಿನಲ್ಲಿರೋವ್ರು ಬಡ ಜನ. ಅವ್ರಿಗೆ ಕಷ್ಟಾಂತ ಅನ್ನಿಸ್ದೇಯಿರೋ ತರಾ ಫೀಸು ತೊಗೋಬೇಕೂಂತ ಮೆಲ್ಲಗೆ ತನ್ನ ವರಸೆ ತೋರಿಸ್ದ.

ಅಂದಿನಿಂದ ಒಂದು ವಾರ ಡಾಕ್ಟ್ರ ಜೊತೆ

ಪ್ರತೀ ಪಕ್ಕ ತಿರುಗಿದ್ದ. ಚಿಕಿತ್ಸೆಗೆ ಪ್ರತಿಫಲವಾಗಿ ಮಪ್ಪು, ಅದಿಲ್ಲದಿದ್ದರೆ ಅದೇ ಬೆಲೆಯ ಅಕ್ಕಿ, ರಾಗಿ, ಗೋಧಿ, ಹುಣಸೇಹಣ್ಣು, ಬೆಲ್ಲ, ತೆಂಗಿನಕಾಯಿ, ಸೊಪ್ಪು, ತರಕಾರಿ, ಏನಿದ್ದರೂ ಕೊಡಬಹುದೆಂದು ಹಳ್ಳಿಯವರೆಗೆ ತಿಳಿಸಿದ್ದ.

ಮನೆ ಬಾಗಿಲಿಗೇ ಬರುವ ಡಾಕ್ಟರು, ಕೂಲಿ ನಾಲಿಗೆ ಹೋದ ಗಂಡಸರು ಬರುವವರೆಗೂ ಕಾಯ ಬೇಕಾದ ಹೆಂಗಸರು ಮಕ್ಕಳು ಇವರಿಗೆಲ್ಲಾ ತುಂಬಾ ಅನುಕೂಲವಾಯ್ತು.

ಒಂದೆರಡು ತಿಂಗಳಲ್ಲೇ ಡಾಕ್ಟರ ಗ್ರಾಮೀಣ ಸಂಚಾರಿ ಚಿಕಿತ್ಸಾಲಯ ಹೆಚ್ಚು ಪ್ರಸಿದ್ಧಿ ಪಡೆಯಿತು. ಹಾಗೇ ಆದಾಯ. ಮೊದಲು ಸೆಕೆಂಡ್ ಹ್ಯಾಂಡ್ ಮೋಟಾರ್ ಬೈಕಿನ ಮೇಲೆ ಬರುತ್ತಿದ್ದ ದಿನಸಿ ಜಾಸ್ತಿಯಾಗಿತ್ತು. ಆದಕ್ಕಾಗೇ ಮೆಟಡರ್ ಖರೀದಿಸಿದ್ದ ಪರಮ. ಜೊತೆಯ ಹುಡುಗನಿಗೆ ಬರುವ ದಿನಸಿ ತೂಕ ಮಾಡಿ ಬೇರೆ ಬೇರೆ ಚೀಲಕ್ಕೆ ತುಂಬಿಸುವ ಕೆಲಸ.

ಈಗ ಅರ್ಥವಾಗಿತ್ತು. ಪರಮ ನಮಗೆಲ್ಲಾ ಅಷ್ಟು ಶುದ್ಧವಾದ ದಿನಸಿಯನ್ನು ಕಡಿಮೆ ಬೆಲೆಯಲ್ಲಿ ಹೇಗೆ ಸರಬರಾಜು ಮಾಡುತ್ತಿದ್ದನೆಂದು. ಮಾರ್ಕೆಟನ ರೇಟಗಿಂತಾ ಕಡಿಮೆ ಬೆಲೆಗೇ, ತರಕಾರಿ ಸೊಪ್ಪು ಇತ್ಯಾದಿಗಳೆಲ್ಲಾ ಫ್ರೆಶ್ಶಾಗೇ ಬರುತ್ತಿತ್ತು. ಅದಕ್ಕಾಗೇ ಪರಮ ಎರಡು ಮೂರು ಕ್ವಿಂಟಾಲ್ ಅಕ್ಕಿ, ಒಂದೆರಡು ಕ್ವಿಂಟಾಲ್ ರಾಗಿ, ಅದೂ, ಇದೂ, ತಿಂಗಳ ಆದಾಯವೆಂದು ಹೇಳಿದ್ದು. ಹಣದ ಲೆಕ್ಕದಲ್ಲೂ ಆದಾಯ ಭರ್ಜರಿಯಾಗೇ ಇತ್ತು.

ಅಷ್ಟರಲ್ಲೇ ಗ್ರಾಮೀಣ ಚಿಕಿತ್ಸಾಲಯ ಮರಳಿ ಬಂತು.

'ಏನಯ್ಯಾ, ಹೇಗಿದೆ ವ್ಯಾಪಾರ?'

'ಈವತ್ತು ಅರ್ಧ ದಿನವಲ್ವೆ? ಮಾವ, ಆದ್ರೂ ಒಂದೆಪ್ಪತ್ತೈದು ಕೆ.ಜಿ. ಬಂದಿದೆ'.

ಅಸಿಸ್ಟೆಂಟು ಹುಡುಗ ಒಂದೊಂದೇ ಚೀಲ ತಂದು ಒಳಗಿಟ್ಟ. ಕೊನೆಯಲ್ಲಿ ಬುಟ್ಟಿ ತುಂಬಾ ತರಕಾರಿ.

ಮರು ಮಾತಾಡದೇ ಹೊರಟೆವು. ಬೇಡವೆಂದರೂ ಡಾಕ್ಟರು ದೊಡ್ಡ ಬ್ಯಾಗಿನ ತುಂಬಾ ತರಕಾರಿ, ಸೊಪ್ಪು ತುಂಬಿ ಕೊಟ್ಟರು ವಾರಕ್ಕಾಗುವಷ್ಟು.

ಬರುವಾಗ ಮೆಟಡರಿನ ಮೇಲೆ ಪರಮ ಬರೆಸಿದ ಪಟ್ಟಿಯ ಕಡೆ ನೋಡಿದೆ.

ಇಂಜಕ್ಷನ್ನಿಗೆ - 20 ರೂ. ಅಥವಾ - 2 ಕೆ.ಜಿ. ಅಕ್ಕಿ

ಬರೀ ಮಾತ್ರೆಗೆ - 10 ರೂ. ಅಥವಾ 1 ಕೆ.ಜಿ. ರಾಗಿ

ಗ್ಲೂಕೋಸ್ ಇತ್ಯಾದಿಗಳಿಗೆ - 100 ರೂ. ಅಥವಾ 20 ಕೆ.ಜಿ. ಅಕ್ಕಿ, 20 ಕೆ.ಜಿ. ರಾಗಿ ಇತ್ಯಾದಿ ಇತ್ಯಾದಿ.

ಚೋಟು ಬಂಗಾರಿಯ ಕಡೆ ನೋಡಿ ಕಿಸಕ್ಕನೆ ನಕ್ಕ.

'ಇವ್ರು ಡಾಕ್ಟ್ರಾದ್ರೆ ಇವೆಲ್ಲಾ ಬರ್ರ್ಯೋದು ಬೇಡ ಪಪ್ಪಾ'.

ಇಂಜಕ್ಷನ್ನಿಗೆ - 1 ಬ್ಲೌಸ್ ಪೀಸ್

ಮಾತ್ರೆಗೆ - ಸ್ಯಾರಿ ಫಾಲ್

ಗ್ಲೂಕೋಸ್ ಇತ್ಯಾದಿಗಳಿಗೆ - ಒಂದು ವಿಮಲ್ ಸೀರೆ ಯಾ ಚೂಡೀದಾರ್. ಬಂಗಾರಿಯ ಡ್ರೆಸ್ ಹುಚ್ಚನ್ನು ರೇಗಿಸಿದ್ದ.

ಮುಖ ಊದಿಸಿದಳು ಬಂಗಾರಿ.

ಒಂದು ಸಲ ಕೊಂಡವರು

ಗಿರಾಕಿ : ಈ ಪಾದರಕ್ಷೆಗಳು ಚೆನ್ನಾಗಿ ಬಾಳಿಕೆ ಬರುತ್ತೇನ್ರಿ?

ವ್ಯಾಪಾರಿ:ಏನು ಹಾಗೆ ಕೇಳುತ್ತೀರಿ? ನಮ್ಮ ಅಂಗಡಿಯಲ್ಲಿ ಒಂದು ಸಲ ಕೊಂಡವರು ಮತ್ತೆ ಈ ಕಡೆ ತಲೆ ಹಾಕಲ್ಲ.

–ಟಿ.ವಿ.ವಿ.

'ನೀನೇನೂ ಹೆದರ್ಕೋ ಬೇಡಮ್ಮ, ನೀನು ಕಾಲೇಜಿಗೆ ಸೇರಿ, ಡಾಕ್ಟ್ರಗೋ ಹೊತ್ಗೆ ನಿಂಗೂ ಒಳ್ಳೆ ಪ್ಲಾನ್ ಕೊಡ್ತೀನಿ' ಪರಮ ಸಂತೈಸಿದ.

'ಇನ್ಯಾವ ಮನೆ ಹಾಳು ಪ್ಲಾನೋ' ಜಯಳ ಹತ್ತಿರ ಗೊಣಗಿದ್ದೆ.

'ಪಪ್ಪಾ, ನಮ್ಮ ಫ್ರೆಂಡ್ ಹತ್ತಿರ ಒಂದು ಹಳೇ ಮೆಟಡಾರಿದೆ, ಈಗ್ಲೆ ವ್ಯಾಪಾರ ಮಾಡ್ಬಿಡಪ್ಪಾ, ನಾನಂತೂ ಒಳ್ಳೊಳ್ಳೆ ಡಿಸೈನ್ ಇರೋ ಬ್ಯಾಗು ಹೊಲಿಸ್ತೀನಿ' ಚೋಟು ಮುಂದುವರಿಸಿದ.

'ಅಕ್ಕಾ ನೀನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗೋಕೆ, ಅಂಕಲ್‌ನ ಪ್ಲಾನು ಕೇಳೆ' ಕರಾತಕ ಗೋಳು ಹೊಯ್ದುಕೊಂಡ.

'ನಾನು ದುಡಿದು ನಿಂಗೆ ದಿನ್ಸಿ ಅಂಗಡಿ ಇಟ್ಕೊಡ್ತೀನಿ' ಬಂಗಾರಿ ಸಿಡುಕಿದಳು.

ಮುಂದೆ ಒಂದು ವಾರ್ದಲ್ಲೆ ಬಂಗಾರಿ ಡಾಕ್ಟರು ಓದುವ ಆಸೆಗೆ ಎಳ್ಳು ನೀರು ಬಿಟ್ಟಳು.

'ನಮ್ಮನೇ ಡಾ. ದಿನಸಿಗೆ ಇಂತಾ ನಿರಾಸೆ' ಚೋಟು ರೇಗಿಸಿದ್ದ.


ಅಂದೇ ಕೊನೆ, ಚೋಟು ಬಂಗಾರಿ ಪರಮನ ಸಲಹೆಯನ್ನು ಕೇಳಲೇ ಇಲ್ಲ.

'ತರಕಾರಿ, ದಿನಸಿ ಬೆಲೆ ಎಷ್ಟೊಂದು ಜಾಸ್ತಿಯಾಗಿದೇರಿ!' ಒಂದು ದಿನ ಜಯ ಉದ್ಗರಿಸಿದಳು.

'ಅದಕ್ಕೇ ನಾನು ಹೇಳಿದ್ದು. ನಿನ್ನ ಮಗಳನ್ನು ದಿನಸಿ ಡಾಕ್ಟರು ಮಾಡೆಂದು' ಚೋಟು ಬಾಯಿಬಿಟ್ಟ. ಇಂಜನಿಯರಿಂಗ್ ಸೇರಿದ್ದ ಬಂಗಾರಿ ಡ್ರಾಯಿಂಗ್ ಟಿ.ಯನ್ನು ಬೀಸಿದಳು - ಕೋಪದಿಂದ.

'ಹೋಗ್ಲಿ ಬಿಡೆ, ದಿನಸಿ ಡಾಕ್ಟ್ರು ಆಗದಿದ್ರೇನು?' ಗುಜರಿ ಜೋಡ್ಸೋ ಎಂಜಿನಿಯರಾದ್ರೂ ಆಗ್ತೀಯಲ್ಲಾ' ಜಯ ಮೆಲ್ಲಗೆ ರೇಗಿಸಿದ್ದಳು.

'ಪಪ್ಪಾ, ಪರಮೇಶ್ ಅಂಕಲ್ನ ಇನ್ಮೇಲೆ ಮನೆಗೆ ಸೇರಿಸ್ಬೇಡ' ಕಿರುಚಿದಳು ಬಂಗಾರಿ. ■



ಕ್ವಿಜ್-20ರ ಬಹುಮಾನ ವಿಜೇತರು

ಕೆ.ಸುಮಾ ನಾಗರಾಜ
D/o ಎಂ.ಆರ್.ಕಾಳಿಂಗಾಚಾರಿ
ಮುತ್ತುಗದೂರು
ಹೊಳಲ್ಕೆರೆ ತಾಲ್ಲೂಕು
ಚಿತ್ರದುರ್ಗ ಜಿಲ್ಲೆ - 577 518

ಸುವರ್ಣಾ ವಿ.ಹಿರೇಮಠ
ನಂ.364, 1ನೇ ಮುಖ್ಯರಸ್ತೆ
ಮಂಜುನಾಥನಗರ
ವೆಸ್ಟ್ಆಫ್ ಕಾರ್ಡ್‌ರೋಡ್
ಬೆಂಗಳೂರು - 560 010

ಸುನೀಲ್ ಡಿಸೋಜ
S/o ಮಾರ್ತಿಸ್ ಡಿಸೋಜ
ರೇಂಜ್ ಫಾರೆಸ್ಟ್ ಆಫೀಸರ್
ನಂ.ಇ1/348, ಎಂಪಿಎಂ ಕ್ವಾರ್ಟರ್ಸ್
ಪೇಪರ್ ಟೌನ್,
ಭದ್ರಾವತಿ - 577 302

ಅನ್ನದಾನೇಶಗೌಡ ಬಸನಗೌಡ ಪಾಟೀಲ
ಹೊಳೆಹಡಗಲಿ - ಅಂಚೆ
ರೋಣ - ತಾಲ್ಲೂಕು
ಗದಗ - ಜಿಲ್ಲೆ
582 203

ಜಿ.ಆರ್.ಜಗದೀಶ್
S/o ಜಿ.ವಿ.ರಾಜಪ್ಪ
ನಂ. 647/2, 7ನೇ ಕ್ರಾಸ್
ಕೆಇಬಿ ಎಕ್ಸ್‌ಟೇನ್‌ಷನ್
ದಾವಣಗೆರೆ - 577 002

ಈ ಐದು ಜನ ಬಹುಮಾನ ವಿಜೇತರಿಗೆ ತಲಾ 100 ರೂ. ಮೌಲ್ಯದ ಪುಸ್ತಕಗಳನ್ನು ಬಹುಮಾನವಾಗಿ ನೀಡಲಾಗುವುದು.

ಕ್ವಿಜ್ - 20ರ ಸರಿಯುತ್ತರ

1. ವಸುಧೇಂದ್ರ ಸರಾಫ್
2. ಸಿದ್ದರಾಮಯ್ಯ
3. ಹರಪನಹಳ್ಳಿ
4. ಬಾಕ್ಸಿಂಗ್
5. ಲೈಫ್‌ಇನ್ಶೂರೆನ್ಸ್ ಕಾರ್ಪೊರೇಷನ್

ಸೂಚನೆಗಳು

- ಕೆಳಗೆ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯಾ ಪ್ರಶ್ನೆಯ ಕೆಳಗೆ ನೀಡಲಾದ ಸ್ಥಳದಲ್ಲಿ ಬರೆಯಿರಿ.
- ಒಬ್ಬರು ಎಷ್ಟು ಪ್ರವೇಶ ಪತ್ರಗಳನ್ನಾದರೂ ಕಳಿಸಬಹುದು. ಮುದ್ರಿತ ಕೂಪನ್ನೇ ಬಳಸಬೇಕು. ಜೆರಾಕ್ಸ್ ಪ್ರತಿ ಪರಿಗಣಿಸುವುದಿಲ್ಲ.
- ಸರಿಯುತ್ತರಗಳ ಪ್ರವೇಶ ಪತ್ರಗಳನ್ನೆಲ್ಲಾ ಸೇರಿಸಿ ಲಾಟರಿ ಮೂಲಕ ಬಹುಮಾನಗಳನ್ನು ನಿರ್ಧರಿಸಲಾಗುವುದು. ಐದು ಜನ ಬಹುಮಾನ ವಿಜೇತರಿಗೆ ತಲಾ 100 ರೂ. ಮೌಲ್ಯದ ಪುಸ್ತಕಗಳನ್ನು ಬಹುಮಾನವಾಗಿ ನೀಡಲಾಗುವುದು.
- ಪ್ರವೇಶ ಪತ್ರ ತಲುಪಲು ಅಂತಿಮ ದಿನಾಂಕ **15 -3 - 1999**

ವಿಜೇತರಿಗೆ 500 ರೂ. ಪುಸ್ತಕ ಬಹುಮಾನ

ಕ್ವಿಜ್ - 21

ಪ್ರವೇಶ ಪತ್ರ

ಹೆಸರು..
ವಿಳಾಸ..
....
....
ಪಿನ್ ಕೋಡ್......................... ದೂರವಾಣಿ.........................

1. 'ಬಿಸಿಲ ಬದುಕು' ಫೆಬ್ರವರಿ 1999 ಸಂಚಿಕೆಯಲ್ಲಿ ಪ್ರಕಟವಾದ 'ಬೆಂಗಳೂರಿನ ನಾಗರಿಕರಿಗೆ ವಿಷ ಪ್ರಾಶನ?' ಲೇಖನ ಬರೆದವರು ಯಾರು?
   ....
2. ಕ್ರಿಕೆಟ್ ಟೆಸ್ಟ್‌ನ ಒಂದೇ ಇನಿಂಗ್ಸ್‌ನಲ್ಲಿ 10 ವಿಕೆಟ್ ಪಡೆದ ಮೊದಲ ಬೌಲರ್ ಯಾರು?
   ....
3. ಟಾಟಾ ಕಂಪನಿಯವರು ಇತ್ತೀಚೆಗೆ ತಯಾರಿಸಿರುವ 1400 ಸಿ.ಸಿ. ಕಾರಿನ ಹೆಸರೇನು?
   ....
4. ಇತ್ತೀಚೆಗೆ ಪದತ್ಯಾಗ ಮಾಡಿದ ಒರಿಸ್ಸಾ ಮುಖ್ಯಮಂತ್ರಿ ಯಾರು?
   ....
5. KSFC ವಿಸ್ತೃತ ರೂಪವೇನು?
   ....

ಪ್ರವೇಶ ಪತ್ರವನ್ನು 15.3.99ರೊಳಗೆ ಕಳುಹಿಸಬೇಕಾದ ವಿಳಾಸ :
ಸಂಪಾದಕರು, ಬಿಸಿಲ ಬದುಕು, ಅಂಚೆ ಪೆಟ್ಟಿಗೆ 7951,
ಬಸವೇಶ್ವರನಗರ, ಬೆಂಗಳೂರು-79.

ಪ್ರಾಣಾಯಾಮದಿಂದ ಉತ್ತಮ ಆರೋಗ್ಯ



■ ಅರುಣ ಎಸ್. ನಂದಿಬೇವೂರು
ಎಂ.ಎ.ಡಿಪ್. ಇನ್‌ಯೋಗ
'ಅಮರೇಶ', ಶ್ರೀನಗರ,
ಧಾರವಾಡ- 580 003.

ಪ್ರಾಣ - ಎಂದರೆ ಉಸಿರು, ಚೈತನ್ಯ, ಜೀವಶಕ್ತಿ.

ಆಯಾಮ - ಎಂದರೆ ನಿಯಂತ್ರಿಸು, ಹತೋಟಿಯಲ್ಲಿರಿಸು ಎಂದು ಅರ್ಥ. ಉಸಿರನ್ನು ಹತೋಟಿಯಲ್ಲಿರಿಸುವ ಕ್ರಮವೇ ಪ್ರಾಣಾಯಾಮ, ಜೀವಂತ ಪ್ರಾಣಿಯ ದೇಹದಲ್ಲಿ ಪ್ರಾಣವೇ ಎಲ್ಲ ಚಟುವಟಿಕೆಗಳ ಮೂಲ. ಆ ಪ್ರಾಣವು ಇಲ್ಲದೇ ಹೋದಲ್ಲಿ ಮರಣವು ಸಂಭವಿಸುವುದು. ಆದುದರಿಂದ ಪ್ರಾಣದ ಪಾತ್ರ ಹೇಳಲಸದಳ. ಶಕ್ತಿ ಸ್ವರೂಪವಾದ ಈ ಪ್ರಾಣವು ಆಹಾರ, ನೀರು, ಗಾಳಿ, ಸೌರಶಕ್ತಿ ಇವುಗಳ ಮೂಲಕ ಒದಗುವುದೆಂದು ಹೇಳಬಹುದು. ಇವುಗಳಲ್ಲಿ ಅತ್ಯಂತ ಮುಖ್ಯವಾದುದು ಗಾಳಿ, ನೀರು, ಆಹಾರ ಇವುಗಳನ್ನು ತ್ಯಜಿಸಿ ಕೆಲಕಾಲ ಜೀವಿಸಬಹುದು. ಆದರೆ ಗಾಳಿಯಿಲ್ಲದೆ ಕ್ಷಣಕಾಲವೂ ಜೀವಿಸಿರಲು ಸಾಧ್ಯವಿಲ್ಲ.

ಖನಿಜಗಳಲ್ಲಿ ಜೀವದ ಸಂಕೇತ ಇಲ್ಲ ಎಂದು ಅನಿಸುತ್ತದೆ. ಆದರೆ ಅವುಗಳಲ್ಲಿಯೂ ಅತ್ಯಂತ ಸೂಕ್ಷ್ಮವಾದ ಚಟುವಟಿಕೆಗಳು ಉಂಟು ಎಂದು ಭೌತಶಾಸ್ತ್ರದ ವಿಜ್ಞಾನಿಗಳು ತಿಳಿಸಿ ಕೊಟ್ಟಿದ್ದಾರೆ. ಹೀಗೆ ವ್ಯಕ್ತ ಅವ್ಯಕ್ತ ಚರಾಚರಗಳಲ್ಲಿ ಪ್ರಾಣತತ್ವವನ್ನು ಗುರುತಿಸಬಹುದು. ಮಾನವನಲ್ಲಿ ಈ ತತ್ವ ಪ್ರಾಣಿಗಳಂತೆ ಕೇವಲ ಶಾರೀರಿಕ ಕ್ರಿಯೆ ಮತ್ತು ಚಟುವಟಿಕೆಗಳಲ್ಲಿ ಮಾತ್ರ ಗೋಚರವಾಗದೆ, ವಿಚಾರ ಶಕ್ತಿಯಿಂದಲೂ ಪ್ರಕಟವಾಗುತ್ತದೆ. ಇದೊಂದು ವಿಕಸಿತವಾದಂತಹ ಸ್ಥಿತಿ, ಪ್ರಾಣವು ಮಾನವನಲ್ಲಿ ಮನಸ್ಸಾಗಿ ಹೊರಹೊಮ್ಮಿದೆ. ಮಾನವನಿಗೆ ಇದೊಂದು ಸೃಷ್ಟಿಯಿತ್ತ ವಿಶೇಷ ಕೊಡುಗೆ.

ಪ್ರಾಣಾಯಾಮದ ಮಹತ್ವ

ಪ್ರಾಣಾಯಾಮವನ್ನು ಶ್ವಾಸೋಚ್ಛ್ವಾಸವೆಂದು ಕರೆಯಲಾಗದು. ಶ್ವಾಸೋಚ್ಛ್ವಾಸವು ಕೇವಲ ಬಹಿರಂಗ ವ್ಯಾಪಾರವಾದರೆ, ಪ್ರಾಣಾಯಾಮವು ಅಂತರಂಗ ಸಾಧನೆಯಾಗಿದೆ. ಇಂತಹ ಅನಂತ ಶಕ್ತಿ ಸ್ವರೂಪವಾದ ಪ್ರಾಣ ಶಕ್ತಿಯನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳಲು ನಮ್ಮ ಪ್ರಾಚೀನ ಋಷಿಮುನಿಗಳು ಬಹಳ ತಪಸ್ಸನ್ನು ಆಚರಿಸಿ ಅದರಲ್ಲಿ ಜಯಶೀಲರಾಗಿದ್ದಾರೆ.

ಪತಂಜಲಿಯ ಅಷ್ಟಾಂಗ ಯೋಗದಲ್ಲಿ

'ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ, ಅಷ್ಟವಂಗಾನಿ. ನಾಲ್ಕನೇಯ ಅಂಗವಾಗಿ ಪ್ರಾಣಾಯಾಮವನ್ನು ನೋಡಬಹುದು.

ಶ್ವಾಸ (ಉಸಿರಾಟ) ಪ್ರಾಣವಲ್ಲ, ಶ್ವಾಸ ಹೆಚ್ಚೆಂದರೆ ಪ್ರಾಣವಾಹಕ ಎಂದು ಕರೆಯಬಹುದು. ಶ್ವಾಸವು ಸ್ಥೂಲ ಪ್ರಕಟೀಕರಣ, ಪ್ರಾಣವು ಸೂಕ್ಷ್ಮ ಚೈತನ್ಯ. ಸ್ಥೂಲ ಶರೀರಕ್ಕೂ ಮತ್ತು ಸೂಕ್ಷ್ಮ ಶರೀರಕ್ಕೂ ಸಂಪರ್ಕ ಏರ್ಪಡಿಸುವುದೇ ಪ್ರಾಣ. ಈ ಸಂಪರ್ಕ ಕಡಿದು ಹೋದರೆ ಕೂಡಲೆ 'ಸಾವು' ಸಂಭವಿಸುವುದು. ಸೂಕ್ಷ್ಮ ಶರೀರ ಬೇರ್ಪಡುವುದು.

ಪ್ರಾಣವು ಸೂಕ್ಷ್ಮ ಚೈತನ್ಯ. ನಮ್ಮ ಶರೀರದಲ್ಲಿ ನಡೆಯುವ ಶಾರೀರಿಕ ಚಟುವಟಿಕೆಗಳು, ಮಾನಸಿಕ ಚಟುವಟಿಕೆಗಳು ಮತ್ತು ಬಹಿರಂಗ ಚಟುವಟಿಕೆಗಳು ಎಲ್ಲವೂ ಅಂದರೆ ಹೃದಯ ಬಡಿತ, ಶ್ವಾಸೋಚ್ಛ್ವಾಸ, ಪಚನ ಕ್ರಿಯೆ, ಜೀರ್ಣರಸ ಉತ್ಪತ್ತಿ, ಜೀರ್ಣಕ್ರಿಯೆ, ಮಲ-ಮೂತ್ರ, ಸ್ವೇಂದನಗಳ ವಿಸರ್ಜನೆ, ರಕ್ತ, ರಸ, ಮಾಂಸ, ಅಸ್ಥಿ ಮಜ್ಜ, ಮೇದಸ್ಸು, ವೀರ್ಯಗಳ ಉತ್ಪತ್ತಿ, ಸೀನು, ಕೆಮ್ಮು, ಆಕಳಿಕೆ, ರೆಪ್ಪೆಗಳ ಚಲನೆ - ಇತ್ಯಾದಿ ಎಲ್ಲ ಶಾರೀರಿಕ ಚಟುವಟಿಕೆಗಳು, ವಿಚಾರ, ಭಾವ, ಸ್ಮರಣೆ, ಸಂಕಲ್ಪನ ಶಕ್ತಿ, ಕಲ್ಪನಾ ಶಕ್ತಿ, ಇತ್ಯಾದಿ ಮಾನಸಿಕ ಚಟುವಟಿಕೆಗಳು, ಕೈಕಾಲು ಚಲನೆ, ವಾಣಿ, ಇತ್ಯಾದಿ ಬಹಿರಂಗ ಚಟುವಟಿಕೆಗಳು ಇವೆಲ್ಲವೂ ಪ್ರಾಣಶಕ್ತಿಯ ಪ್ರಚೋದನೆಯಿಂದಲೇ ನಡೆಯುತ್ತವೆ.

ಈ ಪ್ರಾಣವು 72,000 ನಾಡಿಗಳ ಮೂಲ ಶರೀರದಲ್ಲಿ ಸಂಚಾರವಾಗುವುದು. ಶಾರೀರಿಕ ಆರೋಗ್ಯಕ್ಕಾಗಿ ಈ ಪ್ರಾಣ ಸಂಚಾರವನ್ನು ಸುಗಮಗೊಳಿಸುವ ಪ್ರಯತ್ನವೇ ಪ್ರಾಣಾಯಾಮ.

ಈ ಪ್ರಾಣಗಳಲ್ಲಿ ಪಂಚಪ್ರಾಣಗಳು- ಪ್ರಾಣ, ಅಪಾನ, ಉದಾನ, ವ್ಯಾನ, ಸಮಾನ ಮತ್ತು ಉಪ ಪಂಚಪ್ರಾಣಗಳು ನಾಗ, ಕೂರ್ಮ, ಕೃಕರ, ದೇವದತ್ತ ಧನಂಜಯ ಇವೆಲ್ಲವೂ ಶಾರೀರಿಕ ಕ್ರಿಯೆಗಳಲ್ಲಿ ನಿರ್ಧಾರಿತ ಪಾತ್ರವನ್ನು ವಹಿಸುತ್ತವೆ.

ಮನಸ್ಸು ಮತ್ತು ಪ್ರಾಣ ಒಂದೇ ನಾಣ್ಯದ ಎರಡು ಮುಖಗಳು. ಒಂದನ್ನು ನಿಯಂತ್ರಿಸಿದರೆ ಇನ್ನೊಂದು ತಾನಾಗಿಯೇ ನಿಯಂತ್ರಿತವಾಗುವುದು. ಪ್ರಾಣಾಯಾಮವು ಮನಸ್ಸನ್ನು ಶಾಂತ ಮಾಡಲು ಪರಿಣಾಮಕಾರಿಯಾದ ಸಾಧನ ಆಗಿದೆ.

ಪ್ರಾಣಾಯಾಮದಿಂದ ಶ್ವಾಸೋಚ್ಛ್ವಾಸ ಕ್ರಿಯೆಯಲ್ಲಿ ಈ ಕೆಳಗಿನ ರೀತಿಗಳಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ.

ಪ್ರಾಣಾಯಾಮದ ಕಾರ್ಯ

ನಾವು ತೆಗೆದುಕೊಂಡ (ಉಸಿರು) ಶ್ವಾಸ

ಶ್ವಾಸನಾಳದ ಮೂಲಕ ಶ್ವಾಸಕೋಶವನ್ನು ತಲುಪುತ್ತದೆ. ಶ್ವಾಸನಾಳ ಮುಖ್ಯವಾಗಿ ಎರಡೂ ಶಾಖೆಗಳಲ್ಲಿ ಒಡೆಯುವುದು. ಒಂದು ಎಡಶ್ವಾಸ ಕೋಶಕ್ಕೆ, ಇನ್ನೊಂದು ಬಲ ಶ್ವಾಸಕೋಶಕ್ಕೆ. ಬಲ ಶ್ವಾಸ ಕೋಶದಲ್ಲಿ ಮೂರು ಉಪ ಕೋಶಗಳು, ಎಡ ಶ್ವಾಸಕೋಶದಲ್ಲಿ ಎರಡೂ ಉಪಕೋಶಗಳು ಇವೆ. ಎಡಗಡೆ ಪಾಯಃ ಹೃದಯ ಪೀಠ ಇರುವುಧರಿಂದ ಈ ಬದಲಾವಣೆ ಇರಬಹುದು. ಈ ಶಾಖೆಗಳು ಅನೇಕ ಉಪಶಾಖೆಗಳಾಗಿ ಒಡೆದು ನಂತರ ಸಣ್ಣ ಸಣ್ಣ ಸೂಕ್ಷ್ಮ ಕೋಶಗಳಲ್ಲಿ ಕೊನೆಗೊಳ್ಳುವವು. ಅದಕ್ಕೆ 'ಗಾಳಿ ಗೂಡು' ಅಥವಾ 'ಅಲ್ವಿಯೋಗಳು' ಎಂದು ಕರೆಯುವರು.(ಚಿತ್ರ 1)

ಈ (ಸೂಕ್ಷ್ಮ ಕೋಶ) ಗಾಳಿ ಗೂಡುಗಳ ಸುತ್ತ ಮುತ್ತಲೂ ಸೂಕ್ಷ್ಮ ರಕ್ತನಾಳಗಳು ಹರಿಯುವುವು. ರಕ್ತದಲ್ಲಿರುವ ಇಂಗಾಲಾಮ್ಲ ಮತ್ತು ಶ್ವಾಸದಲ್ಲಿರುವ ಆಮ್ಲಜನಕಗಳು ಪರಸ್ಪರ ಅದಲು-ಬದಲಾಗುವವು. ನಂತರ ನಿಃಶ್ವಾಸದಲ್ಲಿ ಇಂಗಾಲಾಮ್ಲ ಹೊರಬೀಳುವುದು. ರಕ್ತನಾಳಗಳು (ಧಮನಿಗಳು) ಆಮ್ಲಜನಕವನ್ನು ದೇಹದ ತುಂಬಾ ಕೊಂಡೊಯ್ಯುವವು.

ಶ್ವಾಸದ ಗತಿಯು ಸ್ವಭಾವ ಹಾಗೂ ಆಯಸ್ಸಿನ ಮೇಲೆಯೂ ಪರಿಣಾಮವನ್ನು ಬೀರುತ್ತದೆ. ಉದಾ: ಮಾನವ ಶ್ವಾಸದ ಗತಿ (ಉಸಿರಾಟ) ಒಂದು ನಿಮಿಷಕ್ಕೆ 15-20, ನಾಯಿ ಬೆಕ್ಕುಗಳಲ್ಲಿ 125 ಸಲ, ಆನೆಯು 2 ನಿಮಿಷಕ್ಕೆ ಒಂದು ಸಲ, ಆಮೆಯು 3 ನಿಮಿಷಕ್ಕೆ ಒಂದು ಸಲ ಉಸಿರಾಡುತ್ತವೆ. ನಾಯಿ ಬೆಕ್ಕುಗಳ ಶ್ವಾಸದಗತಿಯ ವೇಗ ಹೆಚ್ಚಿದಂತೆ ಅವುಗಳಲ್ಲಿ ಭಯ, ಆತಂಕ ಜಾಸ್ತಿ ಮತ್ತು ಆಯಸ್ಸು ಕಡಿಮೆ ಅಂದರೆ 10-15 ವರ್ಷ ಬದುಕುತ್ತವೆ. ಆದರೆ ಆಮೆಯ ಶ್ವಾಸದ ಗತಿ ಕಡಿಮೆ ಇದ್ದು ಶಾಂತ ಸ್ವಭಾವ ಮತ್ತು ಅದು 200 ರಿಂದ 300 ವರ್ಷ ಬದುಕುತ್ತದೆ.

ಈ ಶ್ವಾಸದ ಗತಿಯನ್ನು (ಉಸಿರಾಟದ) ಹೆಚ್ಚು ಕಡಿಮೆ ಮಾಡುವ ಅವಕಾಶ ಮಾನವನಿಗೆ ಗಮನ ಪೂರ್ವಕವಾಗಿ ಮಾಡಿಕೊಳ್ಳುವ ಶಕ್ತಿ ಉಂಟು. ಈ ಅವಕಾಶ ಮಿಕ್ಕ ಪ್ರಾಣಿಗಳಿಗೆ ಇಲ್ಲ.

ಪ್ರಾಣಾಯಾಮದಿಂದ ಹೃದಯಕ್ಕೂ ವಿಶ್ರಾಂತಿ ಸಿಗುತ್ತದೆ. ಸುಧಾರಿತ ಶ್ವಾಸದಿಂದ ಹೃದಯಬಡಿತದ ಸಂಖ್ಯೆ ಕಡಿಮೆ ಆದಾಗ, ಬಡಿತದ ನಡುವಿನ ಅವಧಿ ಹೆಚ್ಚಿ ಸ್ನಾಯುಗಳು ಹೆಚ್ಚು ವಿಶ್ರಾಂತಿ ಪಡೆಯುವವು. ಹೀಗಾಗಿ ಆ ಸ್ನಾಯುಗಳು ದೀರ್ಘ ಕಾಲದವರೆಗೆ ಆರೋಗ್ಯಯುತವಾಗಿರುವವು.

''ತಸ್ಮಿನ್ ಸತಿ ಶ್ವಾಸ್ ಪ್ರಶ್ವಾಸಯೋರ್ಗತಿ ವಿಚ್ಛೇದ ಪ್ರಾಣಾಯಾಮ''

ಉಸಿರನ್ನು ತೆಗೆದುಕೊಳ್ಳುವುದು (ಪೊರಕ) ಬಿಡುವುದು (ರೇಚಕ) ಇವುಗಳ ನಿಯಂತ್ರಣವೇ ಪ್ರಾಣಾಯಾಮ ಎಂದು ಹೇಳಿದ್ದಾರೆ ಪತಂಜಲಿಯವರು.

''ಬಾಹ್ಯ ಅಂತರ ಸ್ತಂಭ, ವೃತ್ತಿ ದೇಶ ಕಾಲ ಸಂಖ್ಯಭಿ ಪರಿದೃಷ್ಟೋ ದೀರ್ಘಸೂಕ್ಷ್ಮಿ''

ಬಾಹ್ಯ ಕುಂಭಕ (ಹೊರಗೆ ಉಸಿರನ್ನು ನಿಲ್ಲಿಸುವುದು) ಅಂತರ ಕುಂಭಕ (ಒಳಗೆ ಉಸಿರನ್ನು ನಿಲ್ಲಿಸುವುದು) ಪ್ರಯತ್ನ ರಹಿತವಾಗಿ ಉಸಿರು ಎಲ್ಲಿ ಬೇಕಲ್ಲಿ ನಿಲ್ಲುವುದೇ (ಸ್ತಂಭಕ) ಕುಂಭಕ. ಈ ಪ್ರಾಣಾಯಾಮವನ್ನು ಮಾಡುವಾಗ ದೇಹದ ಹವಾಮಾನ, ಪ್ರಕೃತಿ, ಕಾಲ ಮುಂತಾದವುಗಳನ್ನು ಅವಲೋಕಿಸಿ ನಂತರ ಅದಕ್ಕೆ ಹೊಂದುವ ಪ್ರಾಣಾಯಾಮಗಳನ್ನು ಆಚರಿಸಬೇಕು ಎಂದು ಪತಂಜಲಿಯವರು ಹೇಳಿದ್ದಾರೆ. (ಚಿತ್ರ 2)

''ಸೂರ್ಯ ಭಿದನ ಮುಜ್ಜಯಿ, ಸೀತ್ಕಾರಿ, ಶೀತಲೀ ತಥಾ


ಬಸ್ತ್ರಿಕಾ ಬ್ರಾಮರಿ ಮೂರ್ಛಾ ಪ್ಲಾವನೀತ್ಯಷ್ಟ ಕುಂಭಕಾ''

ಸ್ವಾತ್ಮ ರಾಮನವರು ಪ್ರಾಣಾಯಾಮದ ವಿಧಾನವನ್ನು ಎಂಟು ರೀತಿಯಾಗಿ ಹೇಳಿದ್ದಾರೆ. ಅವು ಇಂತಿವೆ - ಸೂರ್ಯ, ಭೇದನ, ಉಜ್ಜಾಯಿ, ಸೀತ್ಕಾರಿ, ಶೀತಲೀ, ಭಸ್ತ್ರಿಕಾ, ಬ್ರಾಮರಿ, ಮಾರ್ಛಾ, ಪ್ಲಾವನಿ.

ಪ್ರಾಣಾಯಾಮ ಮಾಡುವುದು ಎಂದರೆ ಶ್ವಾಸದ (ಉಸಿರಿನ) ನಿಯಂತ್ರಣವೆಂದು ತಿಳಿಯಿತು. ಈ ಪದ್ಧತಿಗೆ ಅನುಸಾರವಾಗಿ ಉಸಿರನ್ನು ತೆಗೆದುಕೊಳ್ಳುವುದು (ಉಚ್ಛ್ವಾಸ) ಪ್ರಾಣಾಯಾಮದ ಪೂರಕ ಕ್ರಿಯೆ, ಉಸಿರನ್ನು ಶ್ವಾಸಕೋಶಗಳಲ್ಲಿ ತಡೆ ಹಿಡಿದು ನಿಲ್ಲಿಸುವುದು ಅಂತರ ಕುಂಭಕ ಕ್ರಿಯೆ ಮತ್ತು ಉಸಿರನ್ನು ಶ್ವಾಸಕೋಶಗಳಿಂದ ಹೊರ ಹಾಕುವುದು (ನಿಶ್ವಾಸ) ರೇಚಕ ಕ್ರಿಯೆ ಶ್ವಾಸಕೋಶಗಳಿಂದ ಉಸಿರನ್ನು ಹೊರಹಾಕಿದ ನಂತರ ಕೆಲಕಾಲ ಶ್ವಾಸಕೋಶಗಳನ್ನು ವಾಯು ರಹಿತವಾಗಿರಿಸುವುದು ಬಾಹ್ಯ ಕುಂಭಕ ಕ್ರಿಯೆ. ಈ ನಾಲ್ಕು ಹಂತಗಳು ಸೇರಿ ಒಂದು 'ಶ್ವಾಸಚಕ್ರ' ವಾಗುವುದು.

ಪೂರಕ, ರೇಚಕ, ಕುಂಭಕ, ಕ್ರಿಯೆಗಳನ್ನು ಕ್ರಮವರಿತು ಆಚರಿಸುವುದರಿಂದ ಒಳ್ಳೆಯ ಫಲಪ್ರಾಪ್ತಿಯಾಗುವುದು. ಆದರೆ, ಈ

ಉಸಿರಾಡುವ ಕ್ರಮ



ಪ್ರಾಣಾಯಾಮವನ್ನು ಅರಿತ ನುರಿತ ಗುರುಗಳ ಮೂಲಕ ಮಾತ್ರವೇ ಅಭ್ಯಾಸವನ್ನು ಮಾಡಬೇಕು.

ಪ್ರಾಣಾಯಾಮದ ಉಪಯೋಗ

''ಪ್ರಾಣಾಯಾಮೇನ ಯುಕ್ತೇನ ಸರ್ವರೋಗ ಕ್ಷಯೋ ಭವೇತ್

ಆಯುಕ್ತಾಭ್ಯಾಸ ಯೋಗೇನ ಸರ್ವರೋಗ ಸಮುದ್ಭವ''

ಸ್ವಾತ್ಮ ರಾಮನವರು ತಿಳಿಸಿದಂತೆ ಕ್ರಮವರಿತ ಪ್ರಾಣಾಯಾಮದಿಂದ ಸರ್ವರೋಗಗಳು ನಿವಾರಣೆಯಾಗುವವು, ಕ್ರಮವಿಲ್ಲದ (ತಪ್ಪಿದ) ಪ್ರಾಣಾಯಾಮದಿಂದ ಸರ್ವರೋಗಗಳು ಹುಟ್ಟುತ್ತವೆ ಎಂದು ತಿಳಿಸಿದ್ದಾರೆ. ಆದ್ದರಿಂದ ನುರಿತ ಗುರುವಿನ ಉಪದೇಶದಂತೆ ಪ್ರಾಣಾಯಾಮದ ಅಭ್ಯಾಸವನ್ನು ಆಚರಿಸಬೇಕು.

ಇಂತಹ ಆಳವಾದ, ನೀಳವಾದ, ದೃಢವಾದ, ಸಮತೂಕವಾದ ಉಸಿರಾಟದ ಕ್ರಮವು ಪ್ರಾಣಾಯಾಮವಾಗಿರುವುದು. ಶಾಸ್ತ್ರೀಯವಾಗಿ ನಡೆಯುವ ಈ ಉಸಿರಾಟದಿಂದ ಶ್ವಾಸಕೋಶಗಳಿಗೆ ಹೆಚ್ಚಿನ ಆಮ್ಲಜನಕದ ಪೂರೈಕೆಯಾಗುವುದು. ಇದರಿಂದ ದೇಹವು ಕಲ್ಮಶ ರಹಿತವಾಗುವುದು. ರಕ್ತ ಪರಿಚಲನೆ ಉತ್ತಮಗೊಳ್ಳುವುದು, ಪಚನ ಶಕ್ತಿ ಹೆಚ್ಚುವುದು, ಕಫವು ಕರಗಿ ನೀರಾಗುವುದು, ನರ ಮಂಡಲವು ಉದ್ರಿಕ್ತ ಪರಿಸ್ಥಿತಿಯಿಂದ ಮುಕ್ತವಾಗುವುದು, ಸಹನಾ ಶಕ್ತಿ ಹೆಚ್ಚುವುದು, ಮನಸ್ಸು ತಿಳಿಯಾಗುವುದು, ಸಂಕಲ್ಪ ಶಕ್ತಿ, ಸೃಜನಾತ್ಮಕ ಗುಣಗಳು, ವೀರ್ಯವೃದ್ಧಿ, ಬುದ್ಧಿ ಶಕ್ತಿ ಹೆಚ್ಚುವುದು, ಸಮತ್ವದ ಭಾವನೆಗಳು ಬರುವುವು. ಇದರಿಂದ ಉತ್ತಮ ಮಾನವನಾಗಲು ಸಾಧ್ಯವಾಗುತ್ತದೆ.

ಪ್ರಾಣಾಯಾಮ ಮಾಡುವುದರಿಂದ ಆರೋಗ್ಯ ಉತ್ತಮಗೊಳ್ಳುವುದು. ಶರೀರ ಜನ್ಯ ಮಲಿನ ವಸ್ತುಗಳು ವಿಸರ್ಜಿಸಲ್ಪಡುವುದು. ಶಾರೀರಿಕ ಕ್ರಿಯೆಗಳ ವೇಗ ಹೆಚ್ಚುವ ಕಾರಣ ದೈಹಿಕ ಹಾಗೂ ಮಾನಸಿಕ ಆರೋಗ್ಯ ಭಾಗ್ಯ ಲಭಿಸುವುದು. ಮಾನಸಿಕ ಬಲ ಹೆಚ್ಚುವುದು. ಚಿತ್ತ ಚಂಚಲ್ಯಕ್ಕೆ ತಡೆಯುಂಟಾಗುವುದು. ಆದ್ದರಿಂದ ಮನಸ್ಸು ಸಂಸ್ಕರಿತ ಆಗುವುದು. ಧಾರಣ, ಧ್ಯಾನದ ಕಡೆಗೆ ಲಕ್ಷ್ಯ ಹರಿಯುವುದು.

ಪ್ರಾಣಾಯಾಮ ಮಾಡುವುದರಿಂದ ಬಿಕ್ಕಳಿಕೆ, ಕೆಮ್ಮು, ತಲೆನೋವು, ಕಣ್ಣು ನೋವು, ನರ ದೌರ್ಬಲ್ಯ ಇವೇ ಮೊದಲಾದ ರೋಗಗಳು ಪರಿಹಾರವಾಗುವುದೆಂಬುದು ಅನುಭವಿಗಳ ಅಭಿಪ್ರಾಯವಾಗಿದೆ. ಆದುದರಿಂದ ಪ್ರಾಣಾಯಾಮವು ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಅತಿ ಉಪಯುಕ್ತವಾದ ಸಾಧನ ಮಾರ್ಗವೆಂದು ತಿಳಿದು, ನಾವೆಲ್ಲರೂ ಪ್ರಾಣಾಯಾಮವನ್ನು ಆಚರಿಸುವುದು ಒಳ್ಳೆಯದು. ■

ಹೊಗಳಿಕೆ

ಈ ಪ್ರಪಂಚದಲ್ಲಿ ಎಲ್ಲಾ ಬಗೆಯ ಹಸಿವನ್ನು ಹಿಂಗಿಸಬಹುದು. ಆದರೆ 'ಹೊಗಳಿಕೆ' ಎನ್ನುವ ಹಸಿವನ್ನು ಮಾತ್ರ ಹಿಂಗಿಸಲಿಕ್ಕಾಗುವುದಿಲ್ಲ. ಮನುಷ್ಯ ತನ್ನ ಬಗೆಗೆ ಇತರರು ಆಡುವ ಪ್ರಿಯವಾದ ಮಾತುಗಳನ್ನು ಬೇಜಾರು ಪಟ್ಟುಕೊಳ್ಳದೆ ಗಂಟೆಗಂಟೆಗಳವರೆಗೆ ಕೇಳುತ್ತಾ ಕುಳಿತಿರುತ್ತಾನೆ. ಹೊಗಳಿಕೆಯೆಂದರೆ ಹೆಣದಂತಿದ್ದರೂ ಹುರುಪುದೊಟ್ಟು ನಿಲ್ಲುತ್ತಾನೆ. ಕುರುಡೀನ್ನಾ ಚೆನ್ನಕ್ಕಾ ಎಂದರೆ ಎಷ್ಟೋ ಹೆಚ್ಚಳ. ಅದೊಂದು ಮೈ ಮರೆಸುವ ಮದ್ದು.

ನ್ಯಾಯವಾದ ಪ್ರಶಂಸೆಗೂ ಮುಖಸ್ತುತಿಗೂ ಇರುವ ವ್ಯತ್ಯಾಸವನ್ನು ನಾವು ಮುಖ್ಯವಾಗಿ ಗುರುತಿಸಬೇಕು. ನ್ಯಾಯವಾದ ಹೊಗಳಿಕೆ ಅಸಲು ನಾಣ್ಯವಾದರೆ, ಮುಖಸ್ತುತಿ ಒಂದು ಖೋಟಾ ನಾಣ್ಯ. ಅದನ್ನು ಸ್ವೀಕರಿಸಿದವರು ಮಾತ್ರ ದರಿದ್ರರಾಗುತ್ತಾರೆ. ಜೋಶ್ ಬಿಲ್ಲಿಂಗ್ಸ್ ಎಂಬಾತ ಮುಖಸ್ತುತಿಯನ್ನು ಅತ್ತರಿಗೆ ಹೋಲಿಸಿ, ಅದು ಕೇವಲ ಮೂಸಲಿಕ್ಕೆ ಹೊರತು, ನುಂಗಲಿಕ್ಕಲ್ಲ ಎಂದಿದ್ದಾನೆ. ಮುಖಸ್ತುತಿ ಮಾಡುವವರ ಸಹವಾಸ ಕುರಿತು ಆಂಟಿಸ್ತಿನಿಸ್ ಎಂಬಾತ ಎಚ್ಚರಿಸುವುದು ಹೀಗೆ:

'ಹೊಗಳುಭಟ್ಟರ ನಡುವೆ ಬೀಳುವುದಕ್ಕಿಂತ ಕಾಗೆಗಳ ನಡುವೆ ಬೀಳುವುದೇ ಲೇಸು. ಏಕೆಂದರೆ ಕಾಗೆಗಳು ಸತ್ತವರನ್ನು ಮಾತ್ರ ತಿನ್ನುತ್ತವೆ. ಆದರೆ ಹೊಗಳುಭಟ್ಟರು ಜೀವಂತ ವ್ಯಕ್ತಿಗಳನ್ನೇ ನಾಶ ಮಾಡುತ್ತಾರೆ'.

ಹೊಗಳಿಕೆ ಯೋಗ್ಯತೆಯ ಅಳತೆಗೋಲೇನಲ್ಲ; ಆದರೆ ಅದಿದ್ದ ಕಡೆ ಯೋಗ್ಯತೆ ಇದ್ದರೂ ಇರಬಹುದು.

ಹೊಗಳಿಕೆ ವ್ಯಕ್ತಿಯ ಮೇಲೆ ಯಾವ ಪರಿಣಾಮವನ್ನುಂಟು ಮಾಡುತ್ತದೆ ಎಂಬುದರಿಂದ ಆತನ ಯೋಗ್ಯತೆಯನ್ನಳೆಯಬಹುದು.

ಮಿತಿಮೀರಿದ ಹೊಗಳಿಕೆಯೆಂದರೆ ಕಾಫಿಯಲ್ಲಿ ವಿಪರೀತ ಸಕ್ಕರೆ ಹಾಕಿದ ಹಾಗೆ, ಅದನ್ನು ನುಂಗಬಲ್ಲವರು ತೀರ ವಿರಳ.

ಪ್ರಶಂಸೆಗೆ ಆತ್ಯಾಸೆಪಡುವವರು ಗುಣದಲ್ಲಿ ನಾವು ಕಡಿಮೆ ಎಂಬುದನ್ನು ಎತ್ತಿ ತೋರಿಸುತ್ತಾರೆ.

ಹೊಗಳಿಕೆಯಿಂದ ಒಳ್ಳೆಯ ಮನುಷ್ಯ ಮತ್ತಷ್ಟು ಒಳ್ಳೆಯವನಾದರೆ ಕೆಟ್ಟ ಮನುಷ್ಯ ಮತ್ತಷ್ಟು ಕೆಟ್ಟವನಾಗುತ್ತಾನೆ.

ಸಾಮಾನ್ಯವಾಗಿ ಸ್ನೇಹಿತನ ಹೊಗಳಿಕೆ, ಶತ್ರುವಿನ ತೆಗಳಿಕೆ ಕೇಳುವವರ ಮೇಲೆ ಯಾವ ಪ್ರಭಾವವನ್ನೂ ಉಂಟುಮಾಡುವುದಿಲ್ಲ.

ಕೆಲವೊಮ್ಮೆ ಜನರನ್ನು ಹೊಗಳಿ ಸನ್ಮಾರ್ಗಕ್ಕೆ ತರುವುದು ಅವರನ್ನು ಬೈದು ದುರ್ಮಾರ್ಗದಿಂದ ಬಿಡಿಸುವುದಕ್ಕಿಂತ ಸುಲಭ.

ಯಾರನ್ನು ಯಾವಾಗ ಹೊಗಳಬೇಕು?

ಗುರುಗಳನ್ನು ಎದುರಿನಲ್ಲಿಯೂ, ಕೈ ಕೆಳಗಿನವರನ್ನು ಅವರ ಕೆಲಸ ಮುಗಿದ ನಂತರವೂ, ಸ್ನೇಹಿತರನ್ನು ಅವರ ಹಿಂದುಗಡೆಯಲ್ಲೂ ಹೊಗಳಬೇಕು ಎಂದು ಸುಭಾಷಿತ ಸೂಚಿಸಿದರೆ ಐರಿಷ್ ಗಾದೆಯೊಂದು-

ಹೊಸ ಕುದುರೆಯನ್ನು ನಾಳೆ ಬೆಳಿಗ್ಗೆ, ಹೊಸ ಹೆಂಡತಿಯನ್ನು ಎರಡನೇ ವರ್ಷ, ಭಾವವನ್ನು ಮೂರನೇ ವರ್ಷ ಮಾತ್ರ ಹೊಗಳಿರಿ ಎಂದು ಸೂಚಿಸಿ, ನಿಮ್ಮನ್ನು ಮಾತ್ರ ಎಂದೂ ಹೊಗಳಿಕೊಳ್ಳಬೇಡಿ ಎನ್ನುತ್ತದೆ.

ಬುದ್ಧಿವಂತ ಗಂಡಸನ್ನು ಆತನಿಲ್ಲವಾಗಲೂ ಬುದ್ಧಿವಂತ ಹೆಂಗಸನ್ನು ಅವಳೆದುರಿನಲ್ಲೂ ಹೊಗಳಬೇಕು ಎನ್ನುತ್ತದೆ ಮತ್ತೊಂದು ಸುಭಾಷಿತ.

ಆದರೆ ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾದ ಸಂಗತಿಯೆಂದರೆ ಯಾರನ್ನೇ ಆಗಲಿ ಮುಂದೆ ಹೊಗಳಿ, ಹಿಂದೆ ತೆಗಳಬಾರದು.

'ವರ್ಷಕ್ಕೊಂದು ಸಾರಿ ಬಿಡುವ ಹೂವಿನ ಹಾಗಿದ್ದರೆ ಆ ಕಾಲ ಎಂದು ಬಂದೀತೋ ಎಂದು ಕಾಯುತ್ತೇವೆ. ಎಷ್ಟು ಬೆಲೆಯಾದರೂ ಕೊಟ್ಟುಕೊಳ್ಳುತ್ತೇವೆ. ಹಾಗಿರಬೇಕು ಹೊಗಳಿಕೆ' (ತ.ರಾ.ಸು. ಕಂಬನಿಯ ಕುಯಿಲು)

ಸಿಂಪಿ ಲಿಂಗಣ್ಣನವರ ಮಾತಿನಲ್ಲೇ ಹೇಳುವುದಾದರೆ 'ಸ್ತುತಿಯೆಂದರೆ ಪ್ರಾಣದ ಸವಿದುತ್ತು. ಹೊಗಳಿಕೆಗೆ ಮೈ ಮರೆಯುವುದೇ ಪ್ರಾಣದ ಜೀವಾಳ. ಅದಕ್ಕೆ ಉಬ್ಬಿ ಹೋಗುವುದೇ ಅದರ ಹಸಿವೆ ತೃಷೆಗಳ ತೃಪ್ತಿ' (ಬಾಳ ಬಟ್ಟೆ).

ಮನುಷ್ಯ ಹೊಗಳಿಕೆಯನ್ನು ಅಪೇಕ್ಷಿಸದೆ, ಬಂದಾಗ ಅದನ್ನು ನಿರ್ವಿಕಾರ ಭಾವದಿಂದ ಸ್ವೀಕರಿಸಿದರೆ ಮಾತ್ರ ಆತನ ಸುಖ ಸಮಾಧಾನ ಹೆಚ್ಚುತ್ತದೆ.

■ ಟಿ. ವಿ. ವೆಂಕಟರಮಣಯ್ಯ

ಕಡ್ಲೆ ಹಿಟ್ಟಿನ ವಡೆ
(ಖಾರದ ವಡೆ)

ಬೇಕಾಗುವ ಸಾಮಗ್ರಿಗಳು :

ಕಡ್ಲೆ ಹಿಟ್ಟು 1/4 ಕೆ.ಜಿ. ಅಥವಾ ಕಡ್ಲೆ ಬೇಳೆ, ಹಸಿಮೆಣಸು 8-10, ಕೊತ್ತಂಬರಿ ಸೊಪ್ಪು, 1 ಈರುಳ್ಳಿ, ಕಡ್ಲೆ ಬೀಜ, ಕೊಬ್ಬರಿ, ಉಪ್ಪು ರುಚಿಗೆ ತಕ್ಕಷ್ಟು, ಟೊಮ್ಯಾಟೊ.

ಮಾಡುವ ವಿಧಾನ :

ಕಡ್ಲೆ ಬೇಳೆ 2 ತಾಸು ನೆನೆ ಇಟ್ಟು ಮಿಕ್ಸಿಯಲ್ಲಿ ರುಬ್ಬಬೇಕು. ಕಡ್ಲೆಹಿಟ್ಟು ಆದರೆ ಮಿಕ್ಸಿಯಲ್ಲಿ



ರುಬ್ಬುವ ಅವಶ್ಯಕತೆಯಿಲ್ಲ. ಆ ಮೇಲೆ ಮೆಣಸಿನ ಕಾಯಿಗಳನ್ನು ಚಿಕ್ಕ ಚಿಕ್ಕ ತುಂಡುಗಳನ್ನಾಗಿ ಕತ್ತರಿಸಿ. ಈರುಳ್ಳಿ ಟೊಮ್ಯಾಟೊ ಹೆಚ್ಚಿಟ್ಟು, ಒಗ್ಗರಣೆಗೆ ಎಣ್ಣೆಯನ್ನು ಬಾಣಲೆಯಲ್ಲಿ ಕಾಯಿಸಬೇಕು. ಕಾದಿರುವ ಎಣ್ಣೆಗೆ ಕಡ್ಲೆಬೀಜ ಹಾಕಿ ಕೆಂದು ಬಣ್ಣ ಬರುವವರೆಗೂ ಬಿಟ್ಟು, ಈರುಳ್ಳಿ ಹಸಿಮೆಣಸಿನಕಾಯಿ ಟೊಮ್ಯಾಟೊ ಹಾಕಿ ಕಲಸಬೇಕು. ಆಮೇಲೆ ರುಬ್ಬಿಟ್ಟ ಹಿಟ್ಟನ್ನು ಹಾಕಿ ಚೆನ್ನಾಗಿ ತಿರುವುತ್ತಾ ಇರಬೇಕು. ಸ್ವಲ್ಪ ನೀರು ಹಾಕಿ, ಅದರ ಮೇಲೆ ಮುಚ್ಚಿಟ್ಟು 15 ನಿಮಿಷ ಬೇಯಲು ಬಿಡಬೇಕು. ಬೆಂದ ಮೇಲೆ ಕೆಳಗೆ ಇಳಿಸಿ ಒಂದು ಬಾಣಲೆಗೆ ಹಾಕಿ ಕೊತ್ತಂಬರಿ ಸೊಪ್ಪು ಸಣ್ಣಗೆ ಎರಚಿ ಅದರ ಮೇಲೆ ಅಲಂಕರಿಸಬೇಕು.

-ಅನುಸೂಯಾ ಸೊನ್ನದ, ಗುಳೇದಗುಡ್ಡ

ತರಕಾರಿ ಭಾತು (ಕಲಸನ್ನ)

ಬೇಕಾಗುವ ಸಾಮಗ್ರಿಗಳು:

ಆಲೂಗಡ್ಡೆ 100 ಗ್ರಾಂ, ಗಜ್ಜರಿ 100 ಗ್ರಾಂ (ಕ್ಯಾರೆಟ್), ಹಸಿಬಟಾಣಿ 100ಗ್ರಾಂ, ಹುರುಳಿಕಾಯಿ 100 ಗ್ರಾಂ, ಟೊಮ್ಯಾಟೊ 100 ಗ್ರಾಂ, ಬೆಳ್ಳುಳ್ಳಿ 1 ಗಡ್ಡೆ ದೊಡ್ಡದು, ಪುದೀನ ಒಂದು ಕಟ್ಟು, ಕೊತ್ತಂಬರಿ ಒಂದು ಕಟ್ಟು, ಹಸಿಮೆಣಸಿನಕಾಯಿ 5 ಅಥವಾ 6, ಈರುಳ್ಳಿ 100 ಗ್ರಾಂ, ಕೊತ್ತಂಬರಿ ಬೀಜ (ದನಿಯ) 2 ಚಮಚ, ಏಲಕ್ಕಿ 2, ಲವಂಗ 8, ಚಕ್ಕೆ 3 ಅಥವಾ 4 ತುಂಡುಗಳು, ಅರಿಶಿಣ ಪುಡಿ ಅರ್ಧ ಚಮಚ, ಖಾರದ ಪುಡಿ 1 ಚಮಚ, ಡಾಲ್ಡ 100 ಗ್ರಾಂ (ವನಸ್ಪತಿ), ತುಪ್ಪ ಎರಡು ಚಮಚ, ಅಕ್ಕಿ 500 ಗ್ರಾಂ (ಸಣ್ಣಕ್ಕಿ), ಉಪ್ಪು ರುಚಿಗೆ ತಕ್ಕಷ್ಟು.

ಮಾಡುವ ವಿಧಾನ:

ಪುದೀನ, ಕೊತ್ತಂಬರಿ, ಹಸಿಮೆಣಸಿನಕಾಯಿ, ಬೆಳ್ಳುಳ್ಳಿಯನ್ನು ಅರೆದು ಪೇಸ್ಟ್ ತರಹ ಇಟ್ಟುಕೊಳ್ಳಬೇಕು. ದನಿಯ, ಏಲಕ್ಕಿ, ಲವಂಗ ಚಕ್ಕೆಯ ತುಂಡುಗಳನ್ನು ವನಸ್ಪತಿಯಲ್ಲಿ ಹುರಿದು ಪುಡಿ



ಮಾಡಿಟ್ಟುಕೊಳ್ಳಬೇಕು. ತರಕಾರಿಗಳನ್ನು ಚೆನ್ನಾಗಿ ತೊಳೆದು ಹೆಚ್ಚಿಟ್ಟುಕೊಳ್ಳಬೇಕು. ಒಂದು ಪಾತ್ರೆಯಲ್ಲಿ ಡಾಲ್ಡ (ವನಸ್ಪತಿ)ವನ್ನು ಹಾಕಿ ಕರಗಿಸಿದ ನಂತರ ಈರುಳ್ಳಿ ಹಾಕಿ ಕೆಂಪಗಾದ ಮೇಲೆ ಉಳಿದ ತರಕಾರಿ ಹಾಕಬೇಕು. ತರಕಾರಿ ಸ್ವಲ್ಪ ಬೆಂದ ಮೇಲೆ ಅರೆದು ಪೇಸ್ಟ್ ತರಹ ಮಾಡಿದ ಮಿಶ್ರಣ ಹಾಗು ಅರಿಶಿಣ ಪುಡಿ ಹಾಕಿ ಕಲೆಸಿಡಬೇಕು. ನಂತರ ಒಂದು ಅಳತೆ ಅಕ್ಕಿಗೆ ಎರಡು ಅಳತೆ ನೀರು ಹಾಕಬೇಕು. ನೀರು ಕುದಿಯುವಾಗ ಅಕ್ಕಿಯನ್ನು ಚೆನ್ನಾಗಿ ತೊಳೆದು ಹಾಕಬೇಕು. ಅಕ್ಕಿ ಬೆಂದು ಒಂದು ಹದಕ್ಕೆ ಬಂದಾಗ ಉಪ್ಪು ಮತ್ತು ಮಸಾಲೆ ಪುಡಿಯನ್ನು ಹಾಕಿ ಕಲೆಸಬೇಕು. ಐದು ನಿಮಿಷದ ನಂತರ ಎರಡು ಚಮಚ ತುಪ್ಪ ಹಾಕಿ ಮುಚ್ಚಿಡಬೇಕು. ಹದಿನೈದು ನಿಮಿಷಗಳ ನಂತರ ತಿನ್ನಲು ಕೊಡಬಹುದು. ಬಿಸಿ ಇರುವಾಗ ತಿನ್ನಲು ಬಹಳ ಸ್ವಾದಿಷ್ಟವಾಗಿರುತ್ತದೆ.

-ಟಿ. ಸುನಂದಮ್ಮ, ಬೆಂಗಳೂರು.

ನೀವೂ ಬರೆಯಬಹುದು

ಇದು ಎಲ್ಲರ ಅಂಕಣ. ಅಡುಗೆಯಲ್ಲಿ ಆಸಕ್ತಿಯಿರುವವರು ತಮಗೆ ಗೊತ್ತಿರುವ ಅಡುಗೆಗಳ ಬಗ್ಗೆ ಅವುಗಳನ್ನು ತಯಾರಿಸುವ ವಿಧಾನದ ಬಗ್ಗೆ ಸಂಕ್ಷಿಪ್ತವಾಗಿ ಬರೆಯಬಹುದು. ಬರಹದ ಜತೆಗೆ ತಮ್ಮದೊಂದು ಭಾವಚಿತ್ರ ಕಳಿಸಿ.

ವಿಳಾಸ :

ಸಂಪಾದಕರು, ಬಿಸಿಲ ಬದುಕು,
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ - 7951
ಬಸವೇಶ್ವರನಗರ, ಬೆಂಗಳೂರು 560 079.

ಸಬ್ಬಕ್ಕಿ ಪಾಯಸ

ಬೇಕಾಗುವ ಸಾಮಗ್ರಿಗಳು :

ಅರ್ಧ ಬಟ್ಟಲು ನೈಲಾನ್ ಸಬ್ಬಕ್ಕಿ, ಒಂದು ಬಟ್ಟಲು ಸಕ್ಕರೆ, ನಾಲ್ಕು ದೊಡ್ಡ ಚಮಚ ತುಪ್ಪ, ಎರಡು ಬಟ್ಟಲು ನೀರು, ಎರಡು ಬಟ್ಟಲು ಹಾಲು, ದ್ರಾಕ್ಷಿ, ಗೋಡಂಬಿ, ಏಲಕ್ಕಿ ಪುಡಿ.

ಮಾಡುವ ವಿಧಾನ :

ಒಂದು ದೊಡ್ಡ ಪಾತ್ರೆಯಲ್ಲಿ ತುಪ್ಪ ಬಿಸಿ



ಯಾದ ನಂತರ ಸಬ್ಬಕ್ಕಿಯನ್ನು ಹಾಕಿ. ಅವೆಲ್ಲ ಚಟಪಟವೆಂದು ಅರಳಿನಂತೆ ಅರಳಿದ ತಕ್ಷಣ ನೀರನ್ನು ಹಾಕಿ ಕುದಿಸಿ. ಆನಂತರ ಹಾಲು, ದ್ರಾಕ್ಷಿ ಗೋಡಂಬಿ ಹಾಕಿ ಕುದಿಸಿ. ಕೆಳಗಿಳಿಸಿ ಸಕ್ಕರೆ ಹಾಕಿ ಚೆನ್ನಾಗಿ ಕೈಯಾಡಿಸಿ ಏಲಕ್ಕಿ ಪುಡಿ ಹಾಕಿರಿ. ಸ್ವಲ್ಪ ಆರಿದ ನಂತರ ನೈಲಾನ್ ಸಬ್ಬಕ್ಕಿ ಪಾಯಸದ ಸವಿಯನ್ನು ಸವಿಯಿರಿ.

- ರಾಜಶ್ರೀ ವಿನಾಯಕ ಗುಮಾಸ್ತೆ, ಕೊಪ್ಪಳ

ಸೌತೆಕಾಯಿ ಇಡ್ಲಿ

ಬೇಕಾಗುವ ಸಾಮಗ್ರಿಗಳು :

1/2 ಕಿ.ಗ್ರಾಂ. ಅಕ್ಕಿ ರವೆ, 1 ಸೌತೆಕಾಯಿ, 1/4 ಕಿ.ಗ್ರಾಂ. ತೆಳುವಲಕ್ಕಿ, ತಕ್ಕಷ್ಟು ಉಪ್ಪು.

ಮಾಡುವ ವಿಧಾನ :

ಅವಲಕ್ಕಿಯನ್ನು 1 ಗಂಟೆ ನೀರಿನಲ್ಲಿ ನೆನೆಸಿ, ಸೌತೆಕಾಯಿಯನ್ನು ತುರಿದು ಎರಡನ್ನೂ ಸೇ



ರಿಸಿ ಮಿಕ್ಸರ್‌ನಲ್ಲಿ ಹಾಕಿ. ಅಕ್ಕಿರವೆಗೆ ಸೇರಿಸಿ ಬೇಕಾದಷ್ಟು ಉಪ್ಪು ಹಾಕಿ. ಇಡ್ಲಿ ತಟ್ಟೆಯಲ್ಲಿ ಬೇಯಿಸಿರಿ. ರುಚಿ ರುಚಿಯಾದ ಇಡ್ಲಿ ರೆಡಿ. ಇದರ ಜತೆಗೆ ಕಾಯಿ ಚಟ್ನಿಯನ್ನು ಹಾಕಿ ತಿನ್ನಲು ಕೊಡಿ. ಇದನ್ನು (ಇಡ್ಲಿ) ಒಂದು ಚಮಚ ಉಪ್ಪು, ಸಿಹಿ ಬೇಕಾದವರು ಬೆಲ್ಲವನ್ನು ಹಾಕಿ ಮಾಡಬಹುದು.

-ವಿಜಯಲಕ್ಷ್ಮಿ ಸುಬ್ಬರಾವ್,
ಕೈತೋಟ.

ಸಂವೇದನೆ

■ ಎಂ. ಎಸ್. ಮೂರ್ತಿ

'ವಿನ್ಯಾಸ', ನಂ. 132, 1ನೇ ಮಹಡಿ, ಗಾಂಧಿ ಬಜಾರ್ ಸರ್ಕಲ್, ಬಸವನಗುಡಿ, ಬೆಂಗಳೂರು-4

ಪ್ರೀತಿಯ ನೆರಳು

ಈಗ ತಾನೇ ಚಿಗುರೊಡೆಯುತ್ತಿರುವ ನಮ್ಮ ಪುಟ್ಟ ತೋಟದಲ್ಲಿ ಹೆಚ್ಚಾಗಿ ಬೇವಿನ ಸಸಿಗಳಿವೆ. ಅಲ್ಲಲ್ಲಿ ಸಣ್ಣ ಪೊದೆಗಳಂತೆ ಬೆಳೆದುಕೊಂಡಿರುವ ಈ ಸಸಿಗಳನ್ನು ಯಾರೂ ನೆಟ್ಟು ಬೆಳೆಸಿಲ್ಲ. ತಂತಾನೆ ಬೆಳೆದು ಗಟ್ಟಿಯಾಗಿ ಬೇರೂರಿರುವ ಈ ಬೇವಿನ ಸಸಿಗಳು ನಮಗೆ ಕಂಡದ್ದು ಇಡೀ ಜಮೀನಿನಲ್ಲಿ ಬೆಳೆದುಕೊಂಡಿದ್ದ ಗಿಡ, ಕಂಟಿಗಳು, ಪಾರ್ಥೇನಿಯಂ ಇತ್ಯಾದಿಗಳನ್ನು ತೆಗೆಯುತ್ತಿದ್ದಾಗ. ನಮ್ಮ ತೋಟದ ಹುಡುಗನಿಗೆ ಈ ಸಸಿಗಳನ್ನು ಹಾಗೇ ಪಾತಿ ಮಾಡಿ ನೀರು ಹರಿಸುವಂತೆ ಹೇಳಿದ್ದೆ. ಒಂದೆರಡು ದಿನಗಳಲ್ಲೇ ಅಲ್ಲಿರುವ ಎಲ್ಲಾ ಬೇವಿನ ಸಸಿಗಳು ಸಣ್ಣ ಸಣ್ಣ ಚಿಗುರಿನಿಂದ ಹೊಳಪ್ಪ ಹಸಿರಿನಿಂದ ಕಂಗೊಳಿಸುತ್ತಿತ್ತು. ದಿನವೂ ಬೇವಿನ ಸಸಿಗಳ ಬೆಳವಣಿಗೆಯನ್ನು ಕಾಣುವುದು ನನಗೆ ಅಭ್ಯಾಸವಾಯಿತು. ಒಂದು ದಿನ ಬಿಸಿಲಿನಲ್ಲಿ ದಣಿವಾಗಿ ಹುಣಸೆಮರದ (ಅಲ್ಲಿರುವ ಒಂದೇ ದೊಡ್ಡ ಮರ) ಕೆಳಗಿರುವ ಸಣ್ಣ ಬಂಡೆಯ ಮೇಲೆ ಕುಳಿತು ದಣಿವಾರಿಸಿಕೊಳ್ಳುವಾಗ ಹತ್ತಿರದಲ್ಲೇ ಇರುವ ಇನ್ನೊಂದು ಬಂಡೆಯ ಸಂದಿಯಲ್ಲಿ ನಮ್ಮ ಪ್ರೀತಿಗೆ ಸಿಕ್ಕಿದ ಒಂದೆರಡು ಬೇವಿನ ಗಿಡಗಳು ತಿಳಿಗೆಂಪು ಬಣ್ಣದ ಚಿಗುರೆಲೆಯೊಂದಿಗೆ ಕಂಗೊಳಿಸುತ್ತಿತ್ತು. ಒಂದೆರಡು ತಿಂಗಳ ಹಿಂದೆ ಇದ್ದ ಸೊರಗಿದ ಬಡಕಲು ಎಲೆಗಳು ಈಗಿರಲಿಲ್ಲ. ಇದು ಕಡಿಮೆ ಅವಧಿಯಲ್ಲಿ ಆದ ಬೆಳವಣಿಗೆ ಕಂಡು ಆ ದಿನ ನನಗೆ ಬಹಳ ಸಂತೋಷವಾಗಿತ್ತು.

ಜಮೀನಿನಲ್ಲಿನ ಎಲ್ಲ ಸಸಿಗಳನ್ನು ನೋಡಿ ಬಂದು ಹುಣಸೆ ಮರದ ನೆರಳಲ್ಲಿ ಕುಳಿತು ಯೋಚಿಸಿದೆ ; ಇಲ್ಲಿರುವ ಈ ಬೇವಿನ ಸಸಿಗಳಿಗೆ ಒಂದೆರಡು ವರ್ಷಗಳಾದರೂ ಆಗಿರಬೇಕು. ಸೊಂಪಾಗಿ ಬೆಳೆಯಲು ಬೇಕಾದ ಆಹಾರ ಇಲ್ಲದಿದ್ದರೂ ಇದುವರೆಗೂ ಜೀವ ಹಿಡಿದು ಬದುಕುಳಿಯುವ ಈ ಚೈತನ್ಯಕ್ಕೆ ಮನುಷ್ಯನ ಪ್ರೀತಿ ಸಿಕ್ಕ ಕೂಡಲೇ ಆತ್ಮೀಯ ವಾತಾವರಣದಲ್ಲಿ ಬೆಳೆಯುವ ಮಗುವಿನಂತೆ ಸರಸರನೆ ಎದ್ದು ನಿಲ್ಲುತ್ತದೆ. ಹೀಗೆ ಯಾವುದೇ ಗಿಡ ಭೂಮಿಯಲ್ಲಿ ತಂತಾನೆ ಬೆಳೆದು ದೊಡ್ಡ ಮರವಾಗುವ ಈ ಪ್ರಕ್ರಿಯೆಯನ್ನು ಅನುಭವಿಸುವುದು ನಿಜವಾದ ಕೃಷಿಕನಿಗೆ ಹೆಮ್ಮೆಯ ವಿಷಯ. ಈ ಗಿಡಗಳ ಬದಲಿಗೆ ನರ್ಸರಿಯಲ್ಲಿ ಹಣಕ್ಕಾಗಿ ಕೊಡ ಮಾಡಿದವುಗಳನ್ನು ಕೊಂಡು ತಂದು, ನೆಟ್ಟು, ಬೆಳೆಸಿ ಹೆಮ್ಮೆ ಪಡುವುದು ದೊಡ್ಡ ವಿಷಯವೇನಲ್ಲ. ನಾವು ಭೂಮಿಯನ್ನು ಕೊಂಡ ಮಾತ್ರಕ್ಕೆ ಅಲ್ಲಿ ಹೇಗೋ ಜೀವ ಹಿಡಿದು ನಮ್ಮ ನಿರೀಕ್ಷೆಯಲ್ಲೇ ಇರುವಂತಿರುವ ಈ ಸಸಿಗಳನ್ನು ತೆಗೆಸಲು ನನಗೆ ಮನಸ್ಸು ಬರಲಿಲ್ಲ. ಎಷ್ಟೋ ವರ್ಷಗಳಿಂದ ವಾಸಿಸಿರುವ ಹೊಂಗೆ, ಬೇವುಗಳಂತಹ ಸಸಿಗಳ ಜಾಗಕ್ಕೆ ನಾವು ಬಂದು ನಮ್ಮ ಅಧಿಕಾರ ಚಲಾಯಿಸಲು ಸಾಧ್ಯವೇ? ಇವುಗಳ ಒಂದೊಂದು ಸಣ್ಣ ಎಲೆಯಿಂದ ಸೃಷ್ಟಿಯಾಗುವ ಆನಂದಕ್ಕೆ ಯಾವ ಬೆಲೆ ಕೊಟ್ಟರೂ ಸಾಲದು. ಒಂದೊಂದು ಗಿಡ, ಮರಗಳಲ್ಲೂ ಒಂದೊಂದು ಸೌಂದರ್ಯ ಮತ್ತು ಸ್ವಾದವಿದೆ. ಹಲಸಿನ ಮರ ಬೇವಿಗಿಂತಲೂ, ಹೊಂಗೆಗಿಂತಲೂ ಒತ್ತಾದ ಕಡುನೆರಳನ್ನು ಮತ್ತು ಆರ್ಥಿಕ ಲಾಭವನ್ನು ತರುವ ಮರವಾದರೂ, ಹೊಂಗೆಯ ಮರದ ಹಿತವಾದ ತಂಪು ನೆರಳು ನೀಡಲಾರದು. ಹೊಂಗೆಯ ಹಚ್ಚ ಹಸಿರಿನ ತಿಳಿ ಚಿಗುರೆಲೆಯ ಸಂಭ್ರಮ ವಸಂತದಲ್ಲಿ ಕಾಣುವಂತೆ ಹಲಸು ಕಾಣಲಾರದು.

ಇಂತಹ ಸಹಜವಾಗಿ ಬೆಳೆದ ಮರಗಿಡಗಳಿಗೆ ನಿಜವಾದ ಅರ್ಥದಲ್ಲಿ ನಾವು ಏನನ್ನೂ ನೀಡಿರುವುದಿಲ್ಲ. ಗಾಳಿ, ನೀರು, ಬೆಳಕು ಎಲ್ಲವನ್ನು ಪ್ರಕೃತಿ ಸಹಜವಾಗಿ ನೀಡಿದೆ. ಇದನ್ನು ಹೊರತುಪಡಿಸಿ ನಾವು ಏನನ್ನು ಈ ಹಸಿರಿಗೆ ನೀಡಬಹುದು? ನೀಡಬಹುದು ಒಂದನ್ನು, ಅದು ನಮ್ಮ ಪ್ರೀತಿ. ಅನೇಕ ವರ್ಷಗಳು ದಕ್ಕಲಾಗಿದ್ದು ಎಲ್ಲಾ ಬೇಸಿಗೆಯನ್ನು ಸಹಿಸಿ ಉಳಿದಿರುವ ಈ ಪುಟ್ಟ ಹಸಿರು ಜೀವಗಳು ಪ್ರಕೃತಿ ನೀಡುವ ಗಾಳಿ, ನೀರು, ಬೆಳಕುಗಳೊಂದಿಗೆ ಮುಖ್ಯವಾಗಿ ನಮ್ಮಿಂದ ನಿರೀಕ್ಷಿಸುವುದು ನಮ್ಮ ಆತ್ಮೀಯ ಪ್ರೀತಿ. ಅದಕ್ಕಾಗಿ ನೀರಿಕ್ಷಿಸಿ ಈಗ ತೃಪ್ತಿಗೊಂಡಂತೆ ಕಾಣುತ್ತಿದ್ದ ಸಸಿಗಳನ್ನು ದಿನವೂ ಮುಟ್ಟಬೇಕೆನಿಸುತ್ತದೆ. ಹೀಗೆ ಪ್ರೀತಿಸಿಕೊಳ್ಳುವ ಈ ಶಿಶುಗಳು ನಾಳೆ ದೊಡ್ಡ ಮರಗಳಾಗುವಾಗ ಅದೆಷ್ಟು ಜನರಿಗೆ ತನ್ನ ತಂಪು ಮಡಿಲಿನ ಆಶ್ರಯ ನೀಡಬಲ್ಲದು ಇದೇ ಪ್ರೀತಿಯಿಂದ.

ನಮ್ಮ ಜನಾರಣವಾದ ಬೆಂಗಳೂರಿನಲ್ಲೂ ಮನುಷ್ಯರ ಆತ್ಮೀಯತೆ, ಪ್ರೀತಿಯ ನಿರೀಕ್ಷೆಯಲ್ಲಿ ಜೀವ ಹಿಡಿದು ಬದುಕುಳಿದಿರುವ ಅನೇಕ ಸ್ಥಳೀಯ ಮನುಷ್ಯರು ಇದ್ದಾರೆ. ಅವರೆಲ್ಲರನ್ನು ಹೊರಗಿನಿಂದ ಇಲ್ಲಿ ಜೀವನ ಮಾಡಲು ಬಂದ ಎಲ್ಲ ಜನರೂ ಗುರುತಿಸಬೇಕು. ಸ್ಥಳೀಯರೊಂದಿಗೆ ಉಳಿದು, ಬೆಳೆಯುವ ಸೌಜನ್ಯ ಉಳಿಸಿಕೊಳ್ಳಬೇಕು. ಹಾಗೇ ಸ್ಥಳೀಯರೂ ಕೂಡ ಸಿಕ್ಕ ಸಣ್ಣ ಅವಕಾಶಗಳನ್ನು ಕೂಡ ಸರಿಯಾಗಿ ಉಪಯೋಗಿಸಿಕೊಂಡು ಚಿಗುರೊಡೆಯುವ ಛಲ ಬೆಳೆಸಿಕೊಳ್ಳಬೇಕು. ಆಗ ಮಾತ್ರ ನಾವು ನಾಲ್ಕು ಜನರಿಗೆ ನೆರಳಾಗಬಹುದು. ■





ಲವ್ ಅಫೇರ್
ಹಾಸ್ಯ ಸಂಗ್ರಹ

ಲೇ: ಡಾ.ಎಚ್.ಎಸ್.ವೆಂಕಟೇಶ್
ಪ್ರ: ಅಂಕುರ ಪ್ರಕಾಶನ
473, ವಾಟರ್‌ಟ್ಯಾಂಕ್ ಬಸ್‌ಸ್ಟಾಪ್ ಬಳಿ,
ಬಸವೇಶ್ವರನಗರ, ಬೆಂಗಳೂರು - 79
ಪುಟ: 80, ಬೆಲೆ: 38/-



ಕಾವಡಿ
(ಕಥಾ ಸಂಕಲನ)

ಲೇ: ಬನವಾಸಿ ವೆಂಕಟೇಶ್ ದೀಕ್ಷಿತ್
ಪ್ರ: ಬಕುಲ ಸಾಹಿತ್ಯ ಪ್ರತಿಷ್ಠಾನ (ರಿ)
ನಿತ್ಯಾನಂದ ಮಠ ರೋಡ್,
ಶಿರಶಿ - 581402,
ಉತ್ತರಕನ್ನಡ ಜಿಲ್ಲೆ.
ಪುಟ: 104, ಬೆಲೆ: 35/-



ಗ್ರಂಥಾಲಯ ಸೂಚೀಕರಣ
ವರ್ಗೀಕೃತ ಸೂಚೀ ಸಂಹಿತೆ
ಭಾಗ ಒಂದು

ಲೇ: ಆರ್.ಎಸ್.ವೆಂಕಟರಾಜ್
ಪ್ರ: ಸಂಕೇತ ಪ್ರಕಾಶನ
813, 14ನೇ ಮುಖ್ಯರಸ್ತೆ, 3ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು - 560 010
ಪುಟ: 192, ಬೆಲೆ: 120/-



ಗ್ರಂಥಾಲಯ ಸೂಚೀಕರಣ
ವರ್ಗೀಕೃತ ಸೂಚೀ ಸಂಹಿತೆ
ಭಾಗ ಎರಡು

ಲೇ: ಆರ್.ಎಸ್.ವೆಂಕಟರಾಜ್
ಪ್ರ: ಸಂಕೇತ ಪ್ರಕಾಶನ
813, 14ನೇ ಮುಖ್ಯರಸ್ತೆ, 3ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು - 560 010
ಪುಟ: 185, ಬೆಲೆ: 120/-




ಮನೀಷೆ
(ಕಥಾ ಸಂಕಲನ)

ಲೇ: ಎಸ್.ವಸುಧೇಂದ್ರ
ಪ್ರ: ಅಂಕುರ ಪ್ರಕಾಶನ
473, ವಾಟರ್‌ಟ್ಯಾಂಕ್ ಬಸ್‌ಸ್ಟಾಪ್ ಬಳಿ,
ಬಸವೇಶ್ವರನಗರ, ಬೆಂಗಳೂರು - 79
ಪುಟ: 96, ಬೆಲೆ: 45/-




ಸಚಿತ್ರ ಮಕ್ಕಳ ಪ್ರಾಸ ಪದ್ಯಗಳು

ಲೇ: ಎಚ್.ಎಸ್.ಸೋಮಶೇಖರ
ಪ್ರ: ಮೈಲಾರೇಶ್ವರ ಪ್ರಕಾಶನ
ನಂ.56, 4ನೇ ತಿರುವು, ರಾಜೇಂದ್ರನಗರ,
ಶಿವಮೊಗ್ಗ - 577 204.
ಪುಟ: 32, ಬೆಲೆ: 15/-



ಅಬ್ಬಾಸರ ಐವತ್ತು ಕಥೆಗಳು

ಲೇ: ಅಬ್ಬಾಸ್ ಮೇಲಿನಮನಿ
ಪ್ರ: ಆಸ್ಮಾ ಪ್ರಕಾಶನ
ಹುಸೇನ್ ಪೇಟೆ,
ಗುಳೇದಗುಡ್ಡ - 587203,
ಬಾಗಲಕೋಟೆ ಜಿಲ್ಲೆ
ಪುಟ: 473, ಬೆಲೆ: 150/-




ಪುನರ್‌ಮೌಲ್ಯೀಕರಣ
(ವಿಚಾರ, ವಿಮರ್ಶೆ ಸಂಕಲನ)

ಲೇ: ಹರಿಹರಪ್ರಿಯ
ಪ್ರ: ಪುಸ್ತಕ ಮನೆ,
51, ಬನಗಿರಿನಗರ, ಬನಶಂಕರಿ 3ನೇ ಹಂತ,
ಬೆಂಗಳೂರು - 560 085.
ಪುಟ: 150, ಬೆಲೆ: 40/-



ಕೆ.ಸದಾಶಿವ
ಸಮಗ್ರ ಕತೆಗಳು
(ಪ್ರಿಸಂ ಕಥಾ ಮಾಲಿಕೆ)

ಲೇ: ಡಾ.ಜಿ.ಎಸ್.ಆಮೂರ
ಪ್ರ: ಪ್ರಿಸಂ ಪ್ರಕಾಶನ
ಬೆಂಗಳೂರು - 560 019
ಪುಟ: 232, ಬೆಲೆ: 120/-



ಕಪ್ಪು ಮರಿ ಮೀನು
(ಮಕ್ಕಳ ಮನೋವಿಕಾಸ ಕಾದಂಬರಿ)

ಲೇ: ಕೇಶವ ಮಳಗಿ
ಪ್ರ: ಅಂಕುರ ಪ್ರಕಾಶನ
473, ವಾಟರ್‌ಟ್ಯಾಂಕ್ ಬಸ್‌ಸ್ಟಾಪ್ ಬಳಿ,
ಬಸವೇಶ್ವರನಗರ, ಬೆಂಗಳೂರು - 79
ಪುಟ: 48, ಬೆಲೆ: 28/-

ವಿಡಂಬನೆ

ಟಿ. ವಿ. ಜಾಹೀರಾತಿನಿಂದಾದ ಲಾಭ

■ ಅಂಕೋಲಾ ದೇವಿದಾಸ ಸುವರ್ಣ

ನನ್ನ ಮನೆಗೆ ಟಿ.ವಿ.ಯನ್ನು ವೀಕ್ಷಿಸಲು ಬರುವ ಅಕ್ಕಪಕ್ಕದ ಮನೆಯ ಮಕ್ಕಳು ಟಿ.ವಿ.ಯಲ್ಲಿಯ ಕಾರ್ಯಕ್ರಮ ನೋಡುವುದಕ್ಕಿಂತಲೂ ಕಾರ್ಯಕ್ರಮದ ತುಂಬೆಲ್ಲ ತಲೆ ಬುಡವಿಲ್ಲದೆ ತುಂಬಿ ತುಳುಕುತ್ತಿರುವ ಜಾಹೀರಾತುಗಳನ್ನು ''ಒಂದೋ.... ಎರಡೋ... ಮೂರೋ...'' ಎಂದು ಒಕ್ಕೊರಲಿನಿಂದ ತಾಮುಂದೆ ನೀಮುಂದೆ ಎಂದು ಎಣಿಸುವುದರಲ್ಲಿಯೇ ಹೆಚ್ಚು ಖುಷಿ ಪಡುತಿದ್ದರು. ಕಾರ್ಯಕ್ರಮದ ಮಧ್ಯದಲ್ಲಿ ಜಾಹೀರಾತುಗಳು ಕಾಣಿಸಿಕೊಂಡಾಗ ನನಗೆ ಎಷ್ಟು ಸಿಟ್ಟು ಬರುತ್ತಿತ್ತೋ ಅಷ್ಟೆ ಸಿಟ್ಟು ಆ ಮಕ್ಕಳಿಗೆ ಜಾಹೀರಾತುಗಳು ಮುಗಿದು ಕಾರ್ಯಕ್ರಮ ಪ್ರಾರಂಭವಾದಾಗ ಬರುತ್ತಿತ್ತು. ಇತ್ತಿತ್ತಲಾಗಂತೂ ಟಿ.ವಿ. ತಿರುವಿದರೆ ಜಾಹೀರಾತುಗಳು ಊಟದಷ್ಟು ಪ್ರಸಾರವಾಗುತ್ತಿದ್ದರೆ, ಕಾರ್ಯಕ್ರಮಗಳು ಉಪ್ಪಿನ ಕಾಯಿಯಷ್ಟು ಪ್ರಸಾರವಾಗುತ್ತಿವೆ.

ದಿನವೂ ಈ ಮಕ್ಕಳು ಒಕ್ಕೊರಲಿನಿಂದ ಜಾಹೀರಾತುಗಳನ್ನು ಎಣಿಸುತಿದ್ದುದರಿಂದ ಎಣಿಸಲು ಬಾರದ ಎಷ್ಟೋ ಮಕ್ಕಳು ಅವರ ಜತೆ ಸೇರಿ ಎಣಿಸಿ ಎಣಿಸಿ ತಾವೂ ಸಹ ಒಂದೆರಡು ಎಣಿಸುವುದನ್ನು ಸರಾಗವಾಗಿ ಕಲಿತು ಬಿಟ್ಟದ್ದವು. ಎಷ್ಟೋ ಮಕ್ಕಳೇಕೆ?. ಎರಡನೇ ವರ್ಗದಲ್ಲಿ ಓದುತ್ತಿರುವ ನನ್ನ ಮಗ, ಒಂದರಿಂದ ನಲವತ್ತೊಂಬತ್ತರವರೆಗೆ ಸರಿಯಾಗಿ ಎಣಿಸಿ ''ನಲವತ್ತೊಂಬತ್ತೋ... ನಲವತ್ತೋ'' ಎಂದು ತಪ್ಪಾಗಿಯೇ ಎಣಿಸುತ್ತಿದ್ದ. ನಲವತ್ತೊಂಬತ್ತರ ನಂತರ ನಲವತ್ತಲ್ಲೋ ಮಹರಾಯ ಐವತ್ತು ಬರುತ್ತದೆ, ಐವತ್ತು ಎಂದು ಹಲವು ಸಾರಿ ಹೇಳಿ ಕೊಟ್ಟದ್ದರೂ ಸಹ ಆತ ರಾಗ ಎಳೆಯುತ್ತ ''ನಲವತ್ತೊಂಬತ್ತೋ... ನಲವತ್ತೋ'' ಎಂದು ತಪ್ಪಾಗಿಯೇ ಎಣಿಸುತ್ತಿದ್ದ. ಆದರೆ ಆತ ಪದೇ ಪದೇ ನಲವತ್ತೊಂಬತ್ತೊ ನಲವತ್ತೊ ಎಂದು ಎಣಿಸುವುದನ್ನು ಕೇಳಿ ಕೇಳಿ ನಲವತ್ತೊಂಬತ್ತರ ನಂತರ ಐವತ್ತು ಬರುತ್ತದೋ ಅಥವಾ ನಲವತ್ತೇ ಬರುತ್ತದೊ? ಎಂಬ ನನಗೇ ಸಂಶಯ ಬರತೊಡಗಿತು. ಆದರೆ ಆಶ್ಚರ್ಯದ ಸಂಗತಿಯೆಂದರೆ ಈ ಟಿ.ವಿ. ಜಾಹೀರಾತುಗಳನ್ನು ಎಣಿಸುವ ಪಕ್ಕದ ಮನೆಯ ಮಕ್ಕಳ ಜತೆ ನನ್ನ ಮಗನೂ ಸಹ ಜಾಹೀರಾತುಗಳನ್ನು ಎಣಿಸಿ ಎಣಿಸಿ ಆತ ಒಂದರಿಂದ ನಲವತ್ತೊಂಬತ್ತರವರೆಗೆ ಎಣಿಸಿ ನಲವತ್ತೊಂಬತ್ತು ಐವತ್ತು ಎಂದು ಎಣಿಸುವುದನ್ನು ಸರಾಗವಾಗಿ ಕಲಿತುಬಿಟ್ಟ.

ಇದರಿಂದ ಸಂತೋಷಗೊಂಡ ನಾನು ನನ್ನ ಮಗನಿಗೆ ಐವತ್ತೊಂದರಿಂದ ನೂರರವರೆಗೆ ಎಣಿಸುವುದನ್ನು ಕಲಿಸಲು ಪ್ರಾರಂಭಿಸಿದೆ: ಆದರೆ ನನ್ನ ದುರ್ದೈವಕ್ಕೆ ತೊಂಬತ್ತೊಂಬತ್ತರವರೆಗೆ ಸರಾಗವಾಗಿ ಎಣಿಸುತ್ತಿದ್ದ ಆತ ತೊಂಬತ್ತೊಂಬತ್ತೊ ತೊಂಬತ್ತೊ ಎಂದು ಪುನಃ ಎಡವಲು ಪ್ರಾರಂಭಿಸಬೇಕೆ? ಈಗ ನನ್ನ ಮಗನಿಗೆ ಎಣಿಸುವುದನ್ನು ಕಲಿಸಲು ನಾನು ಪುನಃ ಟಿ.ವಿ. ಜಾಹೀರಾತುಗಳಿಗೇ ಶರಣಾಗಬೇಕಾಯ್ತು. ಎಲ್ಲರೂ ಟಿ.ವಿ. ಹಾಕಿ ಒಳ್ಳೊಳ್ಳೆ ಕಾರ್ಯಕ್ರಮವಿರುವ ಚಾನೆಲ್‌ಗಳನ್ನು ತಿರುವುತ್ತ ಹೋದರೆ ನಾನು ಮಾತ್ರ ನನ್ನ ಮಗನಿಗೆ ಎಣಿಸುವುದನ್ನು ಕಲಿಸುವ ಸಲುವಾಗಿ ಯಾವ ಚಾನೆಲ್‌ನಲ್ಲಿ ಅತಿ ಹೆಚ್ಚು ಜಾಹೀರಾತುಗಳು ಪ್ರಸಾರವಾಗುತ್ತವೋ ಆ ಚಾನೆಲ್‌ಗಳನ್ನು ಹುಡುಕಿ ಹುಡುಕಿ ಮಗನಿಗೆ ಹಚ್ಚಿಕೊಟ್ಟು ಬದಿ ಮನೆಯ ಮಕ್ಕಳನ್ನು ಕರೆದು ನನ್ನ ಮಗನ ಜತೆಗೆ ಅವರನ್ನು ಕೂಡ್ರಿಸಿ ''ಎಣಿಸಿ ಮಕ್ಕಳೇ ಜಾಹೀರಾತು, ಎಣಿಸಿ'' ಎಂದು ನಾನೇ ಮಕ್ಕಳನ್ನು ಹುರಿದುಂಬಿಸ ತೊಡಗಿದೆ.

ರಾತ್ರಿ ವೇಳೆಯಲ್ಲಿ ಟಿ.ವಿ. ಹಚ್ಚಿಕೊಟ್ಟು ಜಾಹೀರಾತುಗಳನ್ನು ಎಣಿಸಲು ಕೂಡ್ರಿಸಿದರೆ, ಜಾಹೀರಾತು ಎಣಿಸಲು ಪಕ್ಕದ ಮನೆಯ ಮಕ್ಕಳೇ ಬೇಕು ಎಂದು ನನ್ನ ಮಗ ಹಟ ಮಾಡತೊಡಗಿದ. ರಾತ್ರಿಯ ಹೊತ್ತು ಪಕ್ಕದ ಮನೆಯ ಮಕ್ಕಳೆಲ್ಲಿ ಬರುತ್ತಾರೆ? ಈಗ ಅವನ ಜತೆ ನಾನೇ ಕುಳಿತುಕೊಂಡು ಆ ಜಾಹೀರಾತುಗಳನ್ನು ಒಂದೋ ಎರಡೋ ಎಂದು ನನ್ನ ಮಗನ ಜತೆ ಎಣಿಸಲು ಪ್ರಾರಂಭಿಸಿದೆ. ತುಳುಕುತ್ತಿರುವ ಜಾಹೀರಾತುಗಳ ಸಂಖ್ಯೆ ನೋಡಿದರೆ ನನ್ನ ಮಗನಿಗೆ ಒಂದೇ ದಿನದಲ್ಲಿ ಒಂದರಿಂದ ನೂರರವರೆಗಲ್ಲ ಸಾವಿರದವರೆಗೂ ಕಲಿಸಬಲ್ಲೆ ಎಂಬ ಹುಮ್ಮಸ್ಸು ನನಗೆ ಬರತೊಡಗಿದೆ. ■





ವಯಸ್ಕರಿಗಾಗಿ

■ ಡಾ. ವಸುಂಧರಾ ಭೂಪತಿ

ಮದುವೆ ಮುಂಚಿನ ಅನುಮಾನಗಳು

ನಾನು 26 ವರ್ಷದ ಅವಿವಾಹಿತ ಯುವಕ. ಮದುವೆಯಾಗುವ ಭಾವೀ ಪತ್ನಿಯ ವಯಸ್ಸು 19 ವರ್ಷ. ಈಗಾಗಲೇ ಎಂಗೇಜ್‌ಮೆಂಟ್ ಆಗಿದ್ದು, 1999ರ ಮಾರ್ಚ್ ಅಂತ್ಯದ ಒಳಗೆ ಮದುವೆ.

ಕನಿಷ್ಠ 3-4 ವರ್ಷ ಮಕ್ಕಳು ಬೇಡ ಎನ್ನುವ ನಿರ್ಧಾರ ಮಾಡಿದ್ದೇನೆ. ಇದಕ್ಕೆ ನನ್ನ ಭಾವೀ ಪತ್ನಿ ಕೂಡಾ ಒಪ್ಪಿ ಸಂಪೂರ್ಣ ಸಹಕರಿಸುತ್ತಾಳೆ ಎಂದು ಭಾವಿಸಿದ್ದೇನೆ. ಕುಟುಂಬ ನಿಯಂತ್ರಣ ಮಾಡಲು ನನಗೆ ನಿರೋಧ್ ಬಳಸಲು ಇಷ್ಟವಿಲ್ಲ. ಅವಳಿಗೆ ಮಾತ್ರೆಗಳನ್ನು ಸೇವಿಸಲು ಇಷ್ಟವಿಲ್ಲ. ಸೇವಿಸಿದರೂ ಅದೇನೋ ಹೊರಗೆ ಆದ ನಾಲ್ಕನೇ ದಿನದಿಂದ ಸೇವಿಸಬೇಕು ಎನ್ನುವ ನಿಯಮ, ಕೋರ್ಸ್ ಇದೆ ಅಂತೆ. ಇದು ಹೇಗೆ ಅನುಸರಿಸಲು ಸಾಧ್ಯ? ಏಕೆಂದರೆ ಆಗ ತಾನೆ ಮದುವೆ ಆಗಿರುತ್ತದೆ. ಮದುವೆ ರಾತ್ರಿ ನಮ್ಮ ಸಂಪ್ರದಾಯದಲ್ಲಿ ಪ್ರಸ್ತ ಇಟ್ಟಿರುತ್ತಾರೆ. ಈ ಕೋರ್ಸ್ ಹ್ಯಾಗೆ ಜಾರಿ ಮಾಡಿಸುವುದು?

ಗುರು-ಹಿರಿಯರು ಶೋಭಾನವನ್ನು ಒಂದು ಅಮೃತ ಘಳಿಗೆಯಲ್ಲಿ ಏರ್ಪಡಿಸಿರುತ್ತಾರೆ. ಅಂಥ ಘಳಿಗೆಯನ್ನು ನೂತನ ದಂಪತಿಗಳು ಸದುಪಯೋಗ ಪಡಿಸಿಕೊಳ್ಳಲೇಬೇಕಲ್ಲವೆ? ಅದಕ್ಕೆ ವಿಜಿನಲ್ ಕ್ಯಾಪ್ಸೂಲ್ಸ್ ಏನೋ ದೊರೆಯುತ್ತದೆ ಅಂತ ಕೇಳಿದ್ದೀನಿ. ಅವುಗಳ ಹೆಸರು ಉಪಯೋಗಿಸುವ ವಿಧಾನ, ಸಾಧಕ-ಭಾದಕಗಳನ್ನು ತಿಳಿಸಿ. ಸದರೀ ಕ್ಯಾಪ್ಸೂಲ್ ಯೋನಿಯಲ್ಲಿ ಇಟ್ಟು ಸಂಭೋಗಿಸಿದ ನಂತರ ಪುನಃ ಕೆಲವೇ ನಿಮಿಷಗಳಲ್ಲಿ ಸಂಭೋಗಿಸಬಹುದೇ? ಪುನಃ ಮತ್ತೊಂದು ಕ್ಯಾಪ್ಸೂಲ್ ಉಪಯೋಗಿಸಬೇಕೆ? ಒಂದು ಕ್ಯಾಪ್ಸೂಲ್ ಎಷ್ಟು ಅವಧಿವರೆಗೆ ತನ್ನ ಕೆಲಸ ಮಾಡುತ್ತದೆ? ಕ್ಯಾಪ್ಸೂಲ್ ಪೂರ್ತಿ ಯೋನಿ ಒಳಗೆ ಹೋದರೆ ತೊಂದರೆಯೇ? ಕ್ಯಾಪ್ಸೂಲ್ ದೇಹದ ಶಾಖಕ್ಕೆ ಕರಗಿ ಯೋನಿಯಲ್ಲಿ ದ್ರವ ರೂಪವಾಗಿ ನೀರು-ನೀರು ಆಗುತ್ತದೆ ಅಂತ ಕಚೇರಿಯ ಆಪ್ತ ಸ್ನೇಹಿತರು ಹೇಳುತ್ತಾರೆ. ದ್ರವ ಯೋನಿ ಚೀಪುವಾಗ ಬಾಯಿಯಲ್ಲಿ ಹೋದರೆ ಏನಾದರೂ ತೊಂದರೆಯೇ? ದಯವಿಟ್ಟು ಈ ಎಲ್ಲಾ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರ ನೀಡುತ್ತೀರಿ ಎಂದು ನಿರೀಕ್ಷಿಸುತ್ತೇನೆ.


-ಅಭಿಮಾನಿ ಪ್ರಿಯ ಓದುಗ, ಹೆಸರು, ಊರು ಬೇಡ.

ಸಲಹೆ

Today ಎನ್ನುವ ವೆಜೈನಲ್ ಪೇಸರಿ ದೊರೆಯುತ್ತದೆ. ಅದನ್ನು ಸಂಭೋಗಕ್ಕೆ ಐದರಿಂದ ಹತ್ತು ನಿಮಿಷ ಮುಂಚೆಯೇ ಯೋನಿಯೊಳಗಡೆ ಹಾಕಿಕೊಳ್ಳಬೇಕು. ಇದರ ಪರಿಣಾಮ ಕೇವಲ ಒಂದು ಗಂಟೆ ಮಾತ್ರ ಇರುತ್ತದೆ. ಆದ್ದರಿಂದ ಇನ್ನೊಮ್ಮೆ ಸಂಭೋಗ ಮಾಡಬೇಕೆಂದಾದರೆ ಮತ್ತೊಮ್ಮೆ *today* ಉಪಯೋಗಿಸಿಯೇ ಮಾಡಬೇಕು. ಇದರಲ್ಲಿ ವೀರ್ಯಾಣು ನಾಶಪಡಿಸುವ ರಾಸಾಯನಿಕ ವಸ್ತು ಇರುವುದರಿಂದ ಯೋನಿಯೊಳಗಡೆ ಹಾಕಿದಾಗ, ಯೋನಿದ್ರವ ಬಾಯಿಯೊಳಕ್ಕೆ ಚೀಪಬಾರದು. ಅದರಿಂದ ದೇಹಕ್ಕೆ ಹಾನಿಕರ. ಆದರೆ ಇದಕ್ಕಿಂತ ನೀವು ನಿರೋಧ್ ಬಳಸುವುದೇ ಉತ್ತಮವಾದುದು.

ವಯಸ್ಕರ

ಸಂದೇಹ ಸಲಹೆ



ಗರ್ಭಿಣಿಯಾದರೆ ಸಾವು

ನಾನೀಗ 10ನೇ ತರಗತಿಯ ವಿದ್ಯಾರ್ಥಿನಿ. ವಯಸ್ಸು ಹದಿನಾರು. ಋತುಮತಿಯಾಗಿ 2 ವರ್ಷಗಳಾಗಿವೆ. 20 ವರ್ಷದ ಹುಡುಗನನ್ನು ಪ್ರೀತಿಸುತ್ತಿದ್ದೇನೆ. ಆತ ಒಂದು ದಿನ ಲೈಂಗಿಕ ಸಂಪರ್ಕಕ್ಕಾಗಿ ಒತ್ತಾಯಿಸಿದ. ನನಗೆ ಆಸೆ ಇದ್ದರೂ ಗರ್ಭಧರಿಸುವ ಭಯದಿಂದ ಸಹಕರಿಸಲು ನಿರಾಕರಿಸಿದೆ. ಆದರೆ ಆತ ಮುಟ್ಟಾದ 20 ದಿನಗಳ ನಂತರ ಸಂಪರ್ಕ ಹೊಂದಿದರೆ ಗರ್ಭಿಣಿಯಾಗುವುದು ಸಾಧ್ಯವೇ ಇಲ್ಲವೆಂದು ಪ್ರತಿಪಾದಿಸಿದ. ಅನಂತರ 4 ಬಾರಿ ಸಂಪರ್ಕ ಹೊಂದಿದ್ದೇವೆ. ಈಗ ಗರ್ಭ ಧರಿಸಿರಬಹುದೇ ಎಂದು ಭಯವಾಗತೊಡಗಿದೆ. ಹಾಗೇನಾದರೂ ಗರ್ಭ ಧರಿಸಿದ್ದೇ ಆದರೆ ನನ್ನ ಸಾವು ಖಚಿತ! ಹಾಗೇನಾದರೂ ಗುಳಿಗೆ ನುಂಗಿ ಗರ್ಭಪಾತ ಮಾಡಿಕೊಳ್ಳಲು ಸಾಧ್ಯವಿದ್ದರೆ ತಿಳಿಸಿ.

-ಹೆಸರು ಬೇಡ, ಬೆಂಗಳೂರು.

ಸಲಹೆ

ನೀವಿನ್ನೂ ವಿದ್ಯಾರ್ಥಿನಿ. ಎಸ್.ಎಸ್.ಎಲ್.ಸಿ.ಯಲ್ಲಿ ಒಳ್ಳೆಯ ಅಂಕ ಗಳಿಸಿ ಭವಿಷ್ಯ ರೂಪಿಸಿಕೊಳ್ಳುವುದರ ಬಗೆಗೆ ಯೋಚಿಸುವುದನ್ನು ಬಿಟ್ಟು ಆರೋಗ್ಯ, ವಿದ್ಯೆ ಎರಡನ್ನೂ ಹಾಳುಮಾಡಿಕೊಳ್ಳುತ್ತಿದ್ದೀರಲ್ಲ. ಮುಟ್ಟಾದ 20 ದಿನಗಳ ನಂತರ ಲೈಂಗಿಕ ಸಂಪರ್ಕ ಮಾಡುವುದರಿಂದ ಗರ್ಭ ಧರಿಸುವ ಸಂಭವ ಸಾಮಾನ್ಯವಾಗಿ ಕಡಿಮೆ. ಆದರೆ ಕೆಲವೊಮ್ಮೆ ಗರ್ಭಧರಿಸುವ ಸಾಧ್ಯತೆ ಇದ್ದೇ ಇರುತ್ತದೆ. ನೀವು ಪ್ರೀತಿಸುವ ಹುಡುಗ ತನ್ನ ಅನುಕೂಲಕ್ಕೆ ಹಾಗೆ ಹೇಳಿರಬಹುದು. ನಾಳೆ ಏನೇ ತೊಂದರೆಯಾದರೂ ಅನುಭವಿಸಬೇಕಾದವರು ನೀವೇ ಹೊರತು ಅವನಲ್ಲ ಎಂಬುದನ್ನು ನೆನಪಿಡಿ. ಹುಡುಗರೊಂದಿಗೆ ಸ್ನೇಹ, ಸಲುಗೆ ಮಿತಿಯಲ್ಲಿದ್ದರೆ ನಿಮಗೇ ಒಳ್ಳೆಯದು. ಈ ಸಲ ತಿಂಗಳ ಮುಟ್ಟು ನಿಯಮಿತವಾಗಿ ಬಾರದಿದ್ದರೆ ಮೂತ್ರ ಪರೀಕ್ಷೆ ಮಾಡಿಸಿ ಗರ್ಭಿಣಿ ಆಗಿರುವಿರೋ ಇಲ್ಲವೊ ಎಂಬುದನ್ನು ಖಚಿತಪಡಿಸಿಕೊಳ್ಳಿ. ಆಕಸ್ಮಾತ್ ಗರ್ಭಿಣಿಯಾಗಿದ್ದರೆ ಗರ್ಭಪಾತ ಮಾಡಿಸಿಕೊಳ್ಳಬೇಕಾಗುತ್ತದೆ. ಯಾವುದೇ ಮಾತ್ರೆಯಿಂದ ಗರ್ಭಪಾತವಾಗುವುದು ಸಾಧ್ಯವಿಲ್ಲ. ಆಸ್ಪತ್ರೆಯಲ್ಲಿ ನುರಿತ ವೈದ್ಯರಿಂದ ಎಂ.ಟಿ.ಪಿ. ಮಾಡಿಸಿಕೊಳ್ಳಬೇಕಾಗುತ್ತದೆ. ಗರ್ಭಿಣಿಯಾಗಿರದಿದ್ದರೆ ಅವನೊಡನೆ ಮತ್ತೆ ಸಂಪರ್ಕ ಬೆಳೆಸದೇ ದೂರವಾಗಿರುವುದು ಕ್ಷೇಮ. ನಿಮ್ಮ ಓದು ಮುಗಿಸಿ ಮದುವೆಯಾಗುವವರೆಗೂ ಎಷ್ಟೇ ಪ್ರೀತಿಯಿದ್ದರೂ ಲೈಂಗಿಕ ಸಂಪರ್ಕ ಮಾಡಬೇಡಿ. ಇದರಿಂದ ನಿಮ್ಮ ದೈಹಿಕ

ಆರೋಗ್ಯ ಹಾಗು ಮಾನಸಿಕ ನೆಮ್ಮದಿ ಎರಡೂ ಹಾಳಾಗುತ್ತದೆ. ಈ ವಯಸ್ಸಿನಲ್ಲಿ ಗಂಡು, ಹೆಣ್ಣಿನ ಮಧ್ಯೆ ಆಕರ್ಷಣೆ ಇರುವುದು ಸಹಜ. ಆದರೆ ಆಕರ್ಷಣೆ ಅನಾಹುತಕ್ಕೆ ದಾರಿ ಮಾಡಿಕೊಡಬಾರದಲ್ಲವೆ?

ದುರ್ವಾಸನೆ ಸಮಸ್ಯೆ

ನಾನೀಗ ಪಿಯುಸಿ ದ್ವಿತೀಯ ವರ್ಷದಲ್ಲಿ ಓದುತ್ತಿದ್ದೇನೆ. ವಯಸ್ಸು 19. ನಾನು ಚಿಕ್ಕವನಿರುವಾಗಲಿಂದಲೂ ಸಂಡಾಸ ಮಾಡುವಾಗ ಗುದದ್ವಾರದಿಂದ ಗೂದಿ ಬರುತ್ತದೆ. ನಾನು ನಾಚಿಕೆಯಿಂದ ಯಾರಿಗೂ ಹೇಳಿಲ್ಲ. ವೈದ್ಯರಿಗೂ ಕೂಡ ಹೇಳಿರುವುದಿಲ್ಲ. ದಿನಕ್ಕೆ 2 ಸಾರಿ ಸ್ನಾನ ಮಾಡಿದರೂ ದೇಹದ ದುರ್ವಾಸನೆ ಕಡಿಮೆಯಾಗುವುದಿಲ್ಲ. ಈ ನನ್ನ ಸಮಸ್ಯೆಗಳಿಗೆ ಪರಿಹಾರ ನೀಡುವಿರೆಂದು ನಂಬಿರುವೆ?

-ಹೆಸರು ಬೇಡ, ಊರುಬೇಡ.

ಸಲಹೆ

ನಿಮಗೆ ಗುದದ್ವಾರದಿಂದ ಹೊರಬರುವುದು ಮೂಲವ್ಯಾಧಿ ಅಥವಾ ಫಿಶರ್ಸ್ ಅಥವಾ ಪ್ರೋಲ್ಯಾಪ್ಸ್ ಇರಬಹುದು. ಇಷ್ಟು ದಿನ ಅದಕ್ಕೆ ಚಿಕಿತ್ಸೆ ತೆಗೆದುಕೊಳ್ಳದೇ ಬಿಟ್ಟದ್ದು ತಪ್ಪು. ಆದಷ್ಟು ಬೇಗ ನೀವು ಶಸ್ತ್ರ ಚಿಕಿತ್ಸಾ ತಜ್ಞ ವೈದ್ಯ (Surgeon) ರನ್ನು ಭೇಟಿಯಾಗಿ ಚಿಕಿತ್ಸೆ ಪಡೆದುಕೊಳ್ಳಿ. ಇನ್ನು ದೇಹದ ದುರ್ವಾಸನೆಗೆ ದಿನಕ್ಕೆರಡು ಬಾರಿ ಸ್ನಾನಕ್ಕೆ ಕಡಲೆಹಿಟ್ಟು ಉಪಯೋಗಿಸಿ. ಮೈ ಚೆನ್ನಾಗಿ ಉಜ್ಜಿಕೊಂಡು ಬಿಸಿ ನೀರಿನಲ್ಲಿ ಸ್ನಾನಮಾಡಿ. ಹೆಚ್ಚಾಗಿ ಹತ್ತಿ ಬಟ್ಟೆಗಳನ್ನು ಧರಿಸಿ. ಸ್ನಾನದ ನಂತರ ಸುವಾಸನೆಯುಕ್ತ ಪೌಡರ್ ಲೇಪಿಸಿಕೊಳ್ಳಿ. ಒಳ ಉಡುಪುಗಳನ್ನು ಹಾಗೂ ಟವಲನ್ನು ಬಿಸಿ ನೀರಿನಲ್ಲಿ ಒಗೆದು ಬಿಸಿಲಲ್ಲಿ ಒಣಗಿಸಿ.

ಊಟ ಮಾಡಿದರೂ ತೆಳ್ಳಗೆ!

ನನಗೆ ಈಗ 22 ವರ್ಷ. ಎಲ್ಲರೂ ನನ್ನನ್ನು ಹಿಯಾಳಿಸುತ್ತಾರೆ. ನಾನು ತುಂಬಾ ತೆಳ್ಳಗಿದ್ದೇನೆ. ನಾನು ವಾರಕ್ಕೆ 2-3 ಬಾರಿ ಹಸ್ತ ಮೈಥುನ ಮಾಡಿಕೊಳ್ಳುತ್ತೇನೆ. ಇದನ್ನು ಬಿಟ್ಟು ನನಗೆ ಉಳಿದೇನು ಚಟ ಇಲ್ಲ. ತಾವು ಜನವರಿ 99ರ ಸಂಚಿಕೆಯಲ್ಲಿ ಇಂಥಹದೇ ಒಂದು ಪ್ರಶ್ನೆಗೆ ಸಲಹೆಯಲ್ಲಿ ಯಥೇಚ್ಛವಾಗಿ ಹಾಲು, ಹಣ್ಣು, ತರಕಾರಿ, ಮೊಟ್ಟೆ ಸೇವಿಸೋಕೆ ಹೇಳಿದ್ದೀರಿ. ಆದರೆ ನಮ್ಮ ಮನೆಯ 11 ಜನರಲ್ಲಿ ನಾನೇ ಹೆಚ್ಚು ಊಟ ಮಾಡುತ್ತೇನೆ. ಆದರೂ ನಾನು ದಪ್ಪವಾಗಿಲ್ಲ. ಆದ ಕಾರಣ ಸಲಹೆ ಕೊಡಿ?

-ಹೆಸರು, ಊರು ಬೇಡ.

ಸಲಹೆ

ಹಸ್ತಮೈಥುನದಿಂದ ಯಾರೂ ತೆಳ್ಳಗಾಗುವುದಿಲ್ಲ. ನಿಮ್ಮ ತೂಕ ಎಷ್ಟಿದೆಯೆಂದು ತಿಳಿಸಿದ್ದರೆ ಎತ್ತರ, ವಯಸ್ಸಿನಗುಣವಾಗಿ ಎಷ್ಟಿರಬೇಕೆಂದು ತಿಳಿಸಬಹುದಿತ್ತು. ಈಗಿನ ಕಾಲದಲ್ಲಿ ದಪ್ಪಗಿರುವವರು ತೆಳ್ಳಗಾಗಬೇಕೆಂದು ಏನೆಲ್ಲ ಕಸರತ್ತು ಮಾಡುತ್ತಿದ್ದಾರೆ. ನೀವು ತೆಳಗಿದ್ದೀರೆಂದು ಯೋಚನೆ ಮಾಡುವುದೇಕೆ? ಹಸಿವು, ನಿದ್ರೆ ಚೆನ್ನಾಗಿದ್ದು ಚಟುವಟಿಕೆಯಿಂದ ಕೂಡಿದ್ದು ಆರೋಗ್ಯವಂತ ವ್ಯಕ್ತಿಯಾಗಿದ್ದರೆ ಸಾಕು. ತೆಳ್ಳಗೆ ಎಂದು ಸುಮ್ಮನೆ ಕೊರಗುವುದನ್ನು ಬಿಡಿ.

ಏನಾದರೂ ಹಾನಿ?

ನನ್ನ ಶಿಶ್ನದ ಮುಂದೊಗಲಿನ ಅಡಿಯಲ್ಲಿ ಸಂಗ್ರಹವಾಗುವ Smaymaವನ್ನು ಶುಚಿಗೊಳಿಸಿಕೊಳ್ಳಲು H_2O_2ವನ್ನು ಉಪಯೋಗಿಸುತ್ತೇನೆ. ಇದರಿಂದ ಶಿಶ್ನವು ಸಂಪೂರ್ಣವಾಗಿ, ಪರಿಣಾಮಕಾರಿಯಾಗಿ ಸ್ವಚ್ಛವಾಗುತ್ತದೆ. ಆದರೆ ಇದರಿಂದ ಏನಾದರೂ ಹಾನಿಯಾಗುವುದೇ?

-ರಾಮಪ್ರಸಾದ್, ಬೆಂಗಳೂರು.

ಸಲಹೆ

ಅದು ನೀವು ಬರೆದಂತೆ Smayma ಅಲ್ಲ smegma ಎನ್ನುತ್ತಾರೆ. ಶುಚಿಗೊಳಿಸಲು H_2O_2 ಉಪಯೋಗಿಸುವುದರಿಂದ ಯಾವ ಹಾನಿಯೂ ಇಲ್ಲ. ಆದರೆ ಅದನ್ನು ಉಪಯೋಗಿಸುವ ಆವಶ್ಯಕತೆಯೂ ಇಲ್ಲ. ಬರೀ ನೀರಿನಿಂದಲೇ ಸ್ವಚ್ಛಗೊಳಿಸಿಕೊಂಡರೂ ಸಾಕು.

ಸಮಾಗಮ ಯಶಸ್ವಿಯಾಗಬಹುದೇ?

ನಾನು 21 ವರ್ಷ ವಯಸ್ಸಿನ ಯುವತಿ. ಓರ್ವ ಹುಡುಗನನ್ನು ಪ್ರೀತಿಸುತ್ತಿರುವೆ. ಮನೆಯವರ ಅನುಮತಿ ಪಡೆದೆ ಮದುವೆಯಾಗಲಿದ್ದೇವೆ. ಇದುವರೆಗೂ ನಮ್ಮಿಬ್ಬರ ನಡುವೆ ಅನೈತಿಕ ಚಟುವಟಿಕೆಗಳು ನಡೆದಿಲ್ಲ. ಆದರೆ ಇಬ್ಬರೂ ನಮ್ಮ ನಮ್ಮ ಗುಪ್ತಾಂಗಗಳನ್ನು ತೋರ್ಪಡಿಸಿಕೊಂಡಿದ್ದೇವೆ. ನನ್ನ ಪ್ರಿಯಕರ ತುಂಬಾ ದಪ್ಪಗಿದ್ದಾನೆ. ಒಮ್ಮೆ ಆತ ನನ್ನೆದುರು 'ಶಿಶ್ನ' ಉದ್ರೇಕವಾಗಿರುವುದನ್ನು ತೋರಿಸಿದ. ನಾನು ಗಾಬರಿಯಾದೆ. ಏಕೆಂದರೆ ಆತನ ಶಿಶ್ನ ತುಂಬಾ ಬಿರುಸಿದ್ದು ದಪ್ಪವಾಗಿತ್ತು. ಆದರೆ ನನ್ನ 'ಯೋನಿ' ಅತೀ ಚಿಕ್ಕದಿದೆ. ಇದರಿಂದ ನಮ್ಮೀರ್ವರ ಯಶಸ್ವಿ ಸಂಭೋಗದ ಬಗ್ಗೆ ನನಗೆ ಅನುಮಾನವಿದೆ. ಅಲ್ಲದೇ ಆತ ಪ್ರತಿನಿತ್ಯ ಲೈಂಗಿಕ ಕ್ರೀಡೆಯಾಡುವ ಇಚ್ಛೆ ವ್ಯಕ್ತಪಡಿಸಿರುತ್ತಾನೆ. ಮೊದಲ ಬಾರಿ ನನ್ನ ಯೋನಿಯೊಳಗೆ ಶಿಶ್ನ ಕಳಿಸುವಾಗ ಏನಾದರೂ ಅಪಾಯವಾಗಬಹುದೆ?

-ಅಂಬಿಕಾ, ಊರುಬೇಡ.

ಸಲಹೆ

ಯಾವುದೇ ತರದ ಅಪಾಯವಾಗುವುದಿಲ್ಲ. ನಿಮಗೆ ಅನವಶ್ಯಕ ಹೆದರಿಕೆ, ಅನುಮಾನ ಬೇಡ.

ಏಡ್ಸ್‌ಗೆ ಔಷಧಿ?

ಹೆಚ್‌ಐವಿ ಸೋಂಕು ಪೀಡಿತ ವ್ಯಕ್ತಿ. ಇದಕ್ಕೆ ಪರಿಹಾರ ಕಂಡುಕೊಳ್ಳಲು ಔಷಧಿ ಚಿಕಿತ್ಸೆಯ ಬಗ್ಗೆ ಓದುತ್ತಿರುತ್ತೇನೆ. ಮೊನ್ನೆ ಒಂದು ಪತ್ರಿಕೆಯಲ್ಲಿ ಜಾಗತಿಕ ಏಡ್ಸ್ ಸಮ್ಮೇಳನದಲ್ಲಿ ಅಬ್‌ಕಾವಿರ್ ಎಂಬ ಮದ್ದು ಹೆಚ್‌ಐವಿಯನ್ನು ನಿಗ್ರಹಿಸುತ್ತದೆ ಎಂದು ಕೇಳಿದೆ. ನನಗೆ ಇದನ್ನು ಓದಿದ ಮೇಲೆ ಎಷ್ಟು ಸಂತೋಷವಾಯಿತೆಂದರೆ ಹೇಳಲು ಅಸಾಧ್ಯ. ಅಲ್ಲದೆ ರಕ್ತೋಷ್ಣ-ಚಿಕಿತ್ಸೆ ತಂತ್ರದಿಂದ "ಹೈಪರ್-ಥರ್ಮಿಯಾ" ರೋಗಾಣು ನಾಶ ಹೊಂದುವ ಸಂಭವವಿದೆ ಎಂದು ತಿಳಿದು ಸಾಯುವ ಜೀವಕ್ಕೆ ಎರಡು ಹನಿ ನೀರು ಹಾಕಿದಂತಾಗಿದೆ. ಅದಕ್ಕಾಗಿ ಒಬ್ಬ ಹೆಚ್‌ಐವಿ ಪೀಡಿತನಾದ ನಾನು ವಿನಂತಿಸುವುದೇನೆಂದರೆ ದಯವಿಟ್ಟು ನನಗೆ ಬದುಕಲು ಆಸೆ ಹುಟ್ಟಿಸಿದ 'ಅಬ್‌ಕಾವಿರ್' ಎಂಬ ಮದ್ದಿನ ಬಗ್ಗೆ ವಿವರವಾಗಿ ತಿಳಿಸಿರಿ.

ಜೀವನದಲ್ಲಿ ತಪ್ಪೇ ಮಾಡದ ನಾನು ಒಮ್ಮೆ ಮಾತ್ರ ಎಡವಿ ತಪ್ಪೆಸಗಿ ಪಡುತ್ತಿರುವ ವೇದನೆ ಹೇಳತೀರದು. ಚಿಕಿತ್ಸೆ ಇಲ್ಲದ ರೋಗ ತಗುಲಿಸಿಕೊಂಡ ನಾನು ಪಾಪಿ, ಕೆಟ್ಟ ಮನುಷ್ಯ. ಇದಕ್ಕೆಲ್ಲಾ ಪರಿಹಾರವಾಗಿ ಈ ಲೋಕಕ್ಕೆ Good-bye ಹೇಳಿ ಬಿಡಲೇ?

-ಒಬ್ಬ ಏಡ್ಸ್ ರೋಗಿ, ನಿಮ್ಮೂರು.

ಸಲಹೆ

ಅಬ್‌ಕಾವಿರ್ ಎನ್ನುವುದು ಆಂಟಿ ವೈರಸ್ ಏಜೆಂಟ್. ಇದು ಹೊಸ ಔಷಧವೇನು ಅಲ್ಲ. ಇದನ್ನು ಏಡ್ಸ್‌ಗೆ ಮಾತ್ರವಲ್ಲ ಯಾವುದೇ ವೈರಸ್‌ನ ಧಾಳಿಯಾದಾಗ ಅದನ್ನು ತಡೆಗಟ್ಟಲು ಉಪಯೋಗಿಸುತ್ತಾರೆ. ಇದು ಹೆಚ್.ಐ.ವಿ. ರೋಗಾಣುವನ್ನು ಪರಿಣಾಮಕಾರಿಯಾಗಿ ನಿಗ್ರಹಿಸುತ್ತದೆಂದು ಯಾವುದೇ ಖಚಿತ ಮಾಹಿತಿ ಇಲ್ಲ. ನಿಮ್ಮನ್ನು ನೀವೇ ಪಾಪಿ, ಕೆಟ್ಟ ಮನುಷ್ಯ ಎಂದೇಕೆ ಕರೆದುಕೊಳ್ಳುತ್ತೀರಿ? ಆಶಾವಾದಿಗಳಾಗಿರಬೇಕೇ ಹೊರತು ನಿರಾಶಾವಾದಿಗಳಾಗಬಾರದು. ಆತ್ಮಹತ್ಯೆ ಖಂಡಿತ ಪರಿಹಾರವಲ್ಲ. ಇನ್ನಿತರ ರೋಗಗಳ ಸೋಂಕು ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಿ ರೋಗ ನಿರೋಧಕ ಔಷಧಿಗಳನ್ನು ಸೇವಿಸುತ್ತ ಯಾವುದಾದರೊಂದು ಕೆಲಸದಲ್ಲಿ ನಿಮ್ಮನ್ನು ತೊಡಗಿಸಿಕೊಂಡು ಬದುಕುವುದನ್ನು ರೂಢಿಸಿಕೊಳ್ಳಿ.

ನನ್ನ ಬಳಿ ಕಥೆಗಳಿವೆ

ಇವತ್ತಿನ ನಮ್ಮ ಕನ್ನಡ ಚಲನಚಿತ್ರರಂಗದ ದುಸ್ಥಿತಿ ಕೇಳಿ ನನಗೆ ತುಂಬಾ ದುಃಖವಾಗುತ್ತದೆ. ಒಂದು ಒಳ್ಳೆಯ ಚಿತ್ರಕ್ಕೆ ಕಥೆ ಮುಖ್ಯ. ಈಗಿನ ಚಿತ್ರಗಳಲ್ಲಿ ಕಥೆಯೇ ಸರಿಯಾಗಿರುವುದಿಲ್ಲ. ಆದ್ದರಿಂದ ನನ್ನ ಕಡೆ ಸುಮಾರು 25 ಕಥೆಗಳಿವೆ. ಅವುಗಳು ಒಂದಕ್ಕೊಂದು ವಿಭಿನ್ನ ಮತ್ತು ಹಿಂದೆ ಯಾವ ಚಿತ್ರದಲ್ಲಿಯೂ ಇಲ್ಲವಂತವು. ಆದ್ದರಿಂದ ಈ ಚಿತ್ರದ ಕಥೆಗಳನ್ನು ನಾನು ಸುಮ್ಮನೆ ಹಾಳು ಮಾಡಲು ಇಚ್ಛಿಸುವುದಿಲ್ಲ. ಯಾರನ್ನು ಸಂಪರ್ಕಿಸಬೇಕು?

- ವೆಂಕಟೇಶ, ಧಾರವಾಡ

ಸಲಹೆ

ನಿಮ್ಮ ಕಥೆಗಳನ್ನು ಸಿನಿಮಾ ನಿರ್ದೇಶಕರ ಬಳಿ ತೆಗೆದುಕೊಂಡು ಹೋಗಿ ಚರ್ಚೆ ಮಾಡಿ. ಅವರಿಗೆ ಇಷ್ಟವಾದರೆ ನಿಮ್ಮ ಕಥೆಗಳು ಚಲನಚಿತ್ರವಾಗಿ ಮೂಡಿಬರಬಹುದು.

ನಾನೇ ತಂದುಕೊಂಡ ಸಂಕಷ್ಟ

ನಾನೊಬ್ಬ ಉದ್ಯೋಗಸ್ಥ ಮಹಿಳೆ. 37 ವರ್ಷ ವಯಸ್ಸು. ನನ್ನ ಪತಿ ತುಂಬಾ ಮೃದು ಸ್ವಭಾವದ ಸಭ್ಯ ವ್ಯಕ್ತಿಯಾಗಿದ್ದ. ಅದು ನನಗೆ ಇಷ್ಟವಾಗಲಿಲ್ಲ. ನನಗೆ ತುಂಬಾ ಚುರುಕಾಗಿರುವ, ಮನಸ್ಸಂತೋಷ ಪಡಿಸುವ ಪುರುಷರು ಇಷ್ಟ. ಆದ್ದರಿಂದ ನಾನು ಅನೇಕ ಪರಪುರುಷರ ಜತೆ ಲೈಂಗಿಕ ಸಂಪರ್ಕ ಮಾಡಿದೆ. ಅದು ನನ್ನ ಪತಿಗೆ ಗೊತ್ತಾದಾಗ, ಅವನ ಮೇಲೆ ದುಷ್ಟತನದ, ಕಾಮುಕತೆಯ ಆರೋಪ ಹೊರಿಸಿ ಡೈವೋರ್ಸ್ ಮಾಡಿದೆ. ಪರಪುರುಷರೊಂದಿಗೆ ಸಂಪರ್ಕ ಮುಂದುವರಿಸಿದೆ. ನನ್ನ ಮಾಜಿ ಪತಿ ಪುನರ್ವಿವಾಹವಾಗಿ ಇಬ್ಬರು ಮಕ್ಕಳೊಂದಿಗೆ ಸುಖದಾಂಪತ್ಯ ಮಾಡುತ್ತಿದ್ದಾನೆ. ನನಗೆ ಈಗ ಸಮಾಜದಲ್ಲಿ ಗೌರವವೇ ಇಲ್ಲದಂತಾಗಿದೆ. ನನ್ನನ್ನು ಕೀಳು ದೃಷ್ಟಿಯಿಂದ ನೋಡಲಾಗುತ್ತಿದೆ. ನನ್ನ ಕಾಮಾಸಕ್ತಿಗೆ, ಸುಖಲೋಲುಪತೆಗೆ ಕಡಿವಾಣ ಹಾಕಿಕೊಳ್ಳಲು ನನ್ನಿಂದಾಗುತ್ತಿಲ್ಲ. ನಿಮ್ಮ ಸಲಹೆ ತಿಳಿಸಿ.

-ಹೆಸರು ಬೇಡ, ಬೆಳಗಾವಿ.

ಸಲಹೆ

ನಿಮ್ಮ ಕೈಯಾರೆ ನೀವೇ ಸುಂದರವಾದ ಜೀವನವನ್ನು ಹಾಳು ಮಾಡಿಕೊಂಡಿದ್ದೀರಲ್ಲ. ಕ್ಷಣಿಕ ಸುಖದ ಆಸೆಗೆ ಬಲಿ ಬಿದ್ದು ಜೀವನದ ನೆಮ್ಮದಿಯನ್ನೇ ಕಳೆದುಕೊಂಡಿದ್ದೀರಲ್ಲ. ಯೌವನ ಯಾರಿಗೂ ಶಾಶ್ವತವಲ್ಲ. ನಿಮ್ಮ ಸಂಗ ಬಯಸಿದವರು ನಿಮ್ಮಲ್ಲಿನ ಯೌವನ ಹೋದ ಮೇಲೆ ಹತ್ತಿರ ಕೂಡ ಸುಳಿಯಲಾರರು. ಅನೈತಿಕ ಸಂಬಂಧದಿಂದ ಆರೋಗ್ಯ, ನೆಮ್ಮದಿ, ಗೌರವ ಎಲ್ಲವೂ ಹಾಳಾಗುತ್ತದೆನ್ನುವ ಪರಿಜ್ಞಾನ ನಿಮಗಿರಲಿಲ್ಲವೆ? ಈಗಲಾದರೂ ಎಚ್ಚೆತ್ತುಕೊಂಡು ಅಂತಹ ಸಂಬಂಧಗಳಿಗೆ ವಿದಾಯ ಹೇಳಿಬಿಡಿ. ಕೆಲವು ದಿನಗಳಾದ ನಂತರ ನಿಮ್ಮ ಜೀವನ ಶೈಲಿಯ ಬದಲಾವಣೆ ಕಂಡು ಸಮಾಜದ ದೃಷ್ಟಿಯೂ ಬದಲಾಗಬಹುದು. ಒಂಟಿ ಜೀವನ ಬೇಸರವೆನ್ನಿಸಿದರೆ ಯಾವುದಾದರೊಂದು ಅನಾಥಮಗುವನ್ನು ತಂದು ಸಾಕಿಕೊಳ್ಳಿ, ಆ ಮಗುವಿನ ಲಾಲನೆ ಪಾಲನೆಯಲ್ಲಿ ತಲ್ಲೀನರಾದರೆ ಖಂಡಿತ ಮನಸ್ಸು ಬೇರೆಡೆಗೆ ಹರಿಯುವುದಿಲ್ಲ.

ನೀಜವೆ? ಮೂಢನಂಬಿಕೆಯೇ?

ನನಗೆ 21 ವರ್ಷ. ನಾನು ಕನ್ಯತ್ವ ಪರೀಕ್ಷೆಗೆ ಹೋಗಿದ್ದೆ. ಅವಳು ಸುಂದರವಾಗಿದ್ದಾಳೆ. ಆದರೆ ಅವಳು ಚಿಕ್ಕವಳಿದ್ದಾಗ ಅವಳ ಕೈ ಬೆರಳೊಂದು ಏನೋ ಒಂದು ಕಾರಣಕ್ಕೆ ಕತ್ತರಿಸಿ ಬಿಟ್ಟಿದೆ. ಈಗ ನಾನು ಅವಳನ್ನು ಮದುವೆ ಆಗಬೇಕೆಂದು ನಿರ್ಧರಿಸಿದ್ದೇನೆ. ಆದರೆ ನಮ್ಮ ಮನೆಯಲ್ಲಿ ಹಾಗೂ ಬಂಧುಗಳು ಆ ಕನ್ಯೆ ಬೇಡ, ಅವಳ ಕೈಬೆರಳ ಕಟ್ಟಾದ್ದರಿಂದ ಯಾವುದೇ ಮಂಗಳ ಕಾರ್ಯದಲ್ಲಿ ಕರೆದುಕೊಳ್ಳುವುದಿಲ್ಲ ಮತ್ತು ಯಾವುದೇ ಸಮಾರಂಭದಲ್ಲಿ ಆರತಿ ಬೆಳಗುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ನಾನು ಚಿಂತಿತನಾಗಿದ್ದೇನೆ. ನಾನು ಏನು ಮಾಡಲಿ. ಇದಕ್ಕೆ ಸೂಕ್ತ ಸಲಹೆ ಕೊಡಿ.

-ಅಭಿಮಾನಿ, ಗಂಗಾವತಿ.

ಸಲಹೆ

ಆಕಸ್ಮಿಕವಾಗಿ ಕೈ ಬೆರಳು ಕತ್ತರಿಸಿದ್ದರಲ್ಲಿ ಅವಳ ತಪ್ಪೇನಿದೆ? ನಿಮಗೆ ಆ ಹುಡುಗಿ ಇಷ್ಟವಾಗಿದ್ದರೆ ಖಂಡಿತ ಮದುವೆಯಾಗಿ. ನಿಮ್ಮ ಬಂಧುಗಳ ಹೇಳಿಕೆ ಕಿವಿಗೊಡಬೇಡಿ. ಮಂಗಳ ಕಾರ್ಯದಲ್ಲಿ ಪಾಲ್ಗೊಳ್ಳುವುದಕ್ಕಾಗಲೀ, ಆರತಿ ಬೆಳಗುವುದಕ್ಕಾಗಲೀ ಇದರಿಂದ ಯಾವುದೇ ರೀತಿಯ ತೊಂದರೆಯೂ ಆಗುವುದಿಲ್ಲ.

ಪ್ರೀತಿಸಿ ಕೈಕೊಟ್ಟವಳು

ನಾನು 18 ವರ್ಷದ ಯುವಕ. 10ನೇ ತರಗತಿ ಪರೀಕ್ಷೆ ಬರೆಯದೆ ಓದುವದನ್ನು ನಿಲ್ಲಿಸಿ ಬಿಡುವಿನ ವೇಳೆಯಲ್ಲಿ ಟೇಪ್ ರೆಕಾರ್ಡರ್, ರೇಡಿಯೊ ರಿಪೇರಿ ಮಾಡುತ್ತೇನೆ. ಪ್ರೀತಿ ಪ್ರೇಮ ಎಂದರೆ ಗೊತ್ತಿಲ್ಲದ ಒಬ್ಬ ಮುಗ್ಧ ಯುವಕನಿದ್ದೆ. ನನಗೆ ಪರಿಚಯವಿದ್ದ ನರ್ಸಿಂಗ್ ಓದುವ ಹುಡುಗಿ ನನ್ನನ್ನು ಕರೆದು ನಿನ್ನನ್ನು ತುಂಬಾ ಇಷ್ಟ ಪಟ್ಟಿದ್ದೇನೆ, ಮದುವೆಯಾಗುವುದಾದರೆ ನಿನ್ನನ್ನೇ ಎಂದಳು. ಆಗ ನನಗೆ ಆಶ್ಚರ್ಯವಾಯಿತು. ಆಗ ಅವಳ ಬಲವಂತದ ಮೇರೆಗೆ ಒಪ್ಪಿ ''ಪ್ರೀತಿಸಿ ಮದುವೆಯಾಗುವುದಕ್ಕಿಂತ ಪ್ರೀತಿಸಿದವರನ್ನು ಮದುವೆಯಾಗುವುದು ಲೇಸು'' ಎಂದು ಮನಬಿಚ್ಚಿ ನನ್ನ ಲೈಂಗಿಕ ಆಸೆಯನ್ನು 2 ಸಾರಿ ಈಡೇರಿಸಿಕೊಂಡೆ. ಸ್ವಲ್ಪ ದಿನಗಳ ನಂತರ ಅವರು ಊರಿಗೆ ಹೋಗಿ ಬಂದ ನಂತರ ನನ್ನನ್ನು ಮರೆತು ಬಿಡು ನಾನು ನಿನ್ನನ್ನು ಮರೆತಿದ್ದೇನೆ ಎನ್ನುತ್ತಾಳೆ. ಈಗ ನನಗೆ ಮರೆಯಲಿಕ್ಕೆ ಆಗುವುದಿಲ್ಲ. ನನಗೆ ಸರಿಯಾದ ಮಾರ್ಗದರ್ಶನ ನೀಡಿ.

-ಉಮೇಶ, ತುಮಕೂರು.

ಸಲಹೆ

ಅವಳೇ ಇಷ್ಟಪಟ್ಟು ಪ್ರೀತಿಸಿ ಮದುವೆಯಾಗುತ್ತೇನೆಂದು ತಿಳಿಸಿ ಈಗ ಮರೆತುಬಿಡು ಎಂದು ಹೇಳುತ್ತಿರುವುದಕ್ಕೆ ಏನಾದರೂ ಕಾರಣವಿರಲೇಬೇಕು. ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಹಾಗೆ ಹೇಳಿರುವ ಸಾಧ್ಯತೆಯೂ ಇರಬಹುದು. ಆದರೂ ನೀವು ಲೈಂಗಿಕ ಸಂಪರ್ಕ ಬೆಳೆಸುವವರೆಗೂ ಮುಂದುವರೆಯಬಾರದಿತ್ತು. ಈಗ ಅವಳ ವಿಷಯದಲ್ಲಿ ಹೆಚ್ಚು ತಲೆಕೆಡಿಸಿಕೊಳ್ಳದೇ ನಿಮ್ಮ ಕೆಲಸದ ಬಗ್ಗೆ ಹಾಗೂ ಓದನ್ನು ಮುಂದುವರೆಸುವ ಬಗ್ಗೆ ಗಮನ ಕೊಡಿ. ಕಾಲ ಸರಿದಂತೆ ಅವಳನ್ನು ಮರೆಯಲು ನಿಮ್ಮಿಂದಲೂ ಸಾಧ್ಯವಾಗುತ್ತದೆ. ನಿಮಗಿನ್ನೂ 18 ವರ್ಷ ವಯಸ್ಸಿರುವುದರಿಂದ ಸಧ್ಯಕ್ಕೆ 21 ವರ್ಷಗಳಾಗುವವರೆಗೆ ಮದುವೆಯ ಬಗ್ಗೆ ಯೋಚಿಸಬೇಡಿ.

ಕಪ್ಪು ಕಲೆಗಳು

ನನ್ನ ವಯಸ್ಸು 20. ನನ್ನ ಮುಖದಲ್ಲಿ ಹಾಗೂ ಕೈಯಲ್ಲಿ ಮಚ್ಚೆಯ ತರಹದ ಕೆಲವು ಕಪ್ಪು ಕಲೆಗಳು ಇವೆ. ಕೆಲವು ಸಲ ಮೊಡವೆಯು ಬರುತ್ತದೆ. ನಮ್ಮದು ಕೃಷಿ ಕುಟುಂಬವಾದ ಕಾರಣ ಬಿಸಿಲಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ಬಿಸಿಲಿನಿಂದ ರಕ್ಷಣೆ ಪಡೆಯಲು ಮುಖ ಹಾಗೂ ಕೈಗಳಿಗೆ ಯಾವುದಾದರೂ ಕ್ರೀಮ್ ಇದೆಯೆ? ಕಳೆದ ನವೆಂಬರ್ ಬಿಸಿಲ ಬದುಕು ಸಂಚಿಕೆಯಲ್ಲಿ ಮುಖದ ಕಲೆಗೆ ಪರೂಲಾಪ್ ಪುಡಿಯನ್ನು

ಮೊಸರಿನಲ್ಲಿ ಹಾಕಿ ಮುಖಕ್ಕೆ ಲೇಪಿಸಿದರೆ ಕಲೆ ಹೋಗುತ್ತದೆ ಎಂದು ನೋಡಿದ್ದೇನೆ. ಆದರೆ ಯಾವ ಕಡೆಯಲ್ಲಿ ಕೇಳಿದರೂ ಆ ಪುಡಿ ಇಲ್ಲ ಎನ್ನುತ್ತಾರೆ. ಆದ ಕಾರಣ ಬೇರೆ ಯಾವುದಾದರೂ ಕ್ರೀಮ್ ಇದೆಯೆ? ಅದನ್ನು ಎಷ್ಟು ಸಮಯ ಹಾಕಬೇಕು ಎಂದು ದಯಮಾಡಿ ತಿಳಿಸಬೇಕಾಗಿ ವಿನಂತಿ ಮಾಡುತ್ತೇನೆ. ಇತಿ ನಿಮ್ಮ ಮಗಳಿಗೆ ಸಮಾನಳಾದ.

-ವಾಣಿ ಶೆಟ್ಟಿ, ಊರು ಬೇಡ.

ಸಲಹೆ

***parolep* ಪುಡಿಯು ಆಯುರ್ವೇದ ಔಷಧಿ ಅಂಗಡಿಯಲ್ಲಿ ಮಾತ್ರ ದೊರೆಯುತ್ತದೆ. ಅದು ಸಿಗದಿದ್ದ ಪಕ್ಷದಲ್ಲಿ ನೀವು *Skinelle Ointment*ನ್ನು ಉಪಯೋಗಿಸಿ. ಇದನ್ನು ಕನಿಷ್ಠ ಮೂರು ತಿಂಗಳ ಕಾಲವಾದರೂ ಹಚ್ಚಿಕೊಳ್ಳಬೇಕು. ಬಿಸಿಲಿನಲ್ಲಿ ಕೆಲಸ ಮಾಡುವವರು ಯಾವುದೇ ಕ್ರೀಂ ಉಪಯೋಗಿಸಿದರೂ ಪ್ರಯೋಜನವಿಲ್ಲ. ಅದಕ್ಕೆ ಬದಲು ರಾತ್ರಿ ಮಲಗುವಾಗ ಅರಿಶಿಣ, ನಿಂಬೆರಸ ಮತ್ತು ಹಾಲಿನ ಕೆನೆ ಸೇರಿಸಿ ಪೇಸ್ಟ್ ತಯಾರಿಸಿಕೊಂಡು ಹಚ್ಚಿಕೊಳ್ಳುವುದು ಒಳ್ಳೆಯದು.**

ಬಾರದ ಗಡ್ಡ ಮೀಸೆ

ನನ್ನ ವಯಸ್ಸು 24. ನನಗೆ ಇನ್ನೂ ಗಡ್ಡ ಮೀಸೆಗಳೇ ಬಂದಿರುವುದಿಲ್ಲ. ಆದ್ದರಿಂದ ಹುಲುಸಾಗಿ ಗಡ್ಡ ಮೀಸೆ ಬೆಳೆಯಬೇಕಾದರೆ ದಯವಿಟ್ಟು ಪರಿಹಾರ ತಿಳಿಸಿ. ಎಲ್ಲಿಯಾದರೂ ಡಾಕ್ಟರ್ ಸಲಹೆ ಪಡೆಯಬೇಕೆಂದರೆ ಸಂಕೋಚವೆನಿಸುತ್ತದೆ. ಆದ್ದರಿಂದ ಪರಿಹಾರವನ್ನು ತಮ್ಮ ಪತ್ರಿಕೆಯಲ್ಲಿ ದಯವಿಟ್ಟು ತಿಳಿಸಬೇಕಾಗಿ ವಿನಂತಿ. ಯಾರಾದರೂ ನನ್ನ ವಯಸ್ಸನ್ನು ಕೇಳಿದರೆ ಹೇಳಲು ನಾಚಿಕೆಯೆನಿಸುತ್ತದೆ ಮತ್ತು ನಾನು ಈ ವಿಷಯದ ಸಲುವಾಗಿ ನನ್ನ ಮಿತ್ರರನ್ನು ಸಹ ಭೇಟಿಯಾಗುವುದಿಲ್ಲ. ಆದ್ದರಿಂದ ದಯವಿಟ್ಟು ಪರಿಹಾರ ತಿಳಿಸಬೇಕಾಗಿ ವಿನಂತಿ.

-ರಮೇಶ, ಧಾರವಾಡ.

ಸಲಹೆ

ವೈದ್ಯರ ಬಳಿ ಹೋಗುವುದಕ್ಕೆ ಸಂಕೋಚಪಟ್ಟರೆ ಹೇಗೆ? ಟೆಸ್ಟೋಸ್ಟಿರಾನ್ ಹಾರ್ಮೋನಿನ ವ್ಯತ್ಯಾಸದ ಕಾರಣದಿಂದ ಗಡ್ಡ, ಮೀಸೆ ಬರುವುದಿಲ್ಲ. ನೀವು *Endorcrinalogist* ರನ್ನು ಕಂಡು ಚಿಕಿತ್ಸೆ ಪಡೆಯಿರಿ.

ಲಕ್ವಾ

ನನಗೆ 21 ವರ್ಷ. ಬಿ.ಎಸ್‌ಸಿ ಓದುತ್ತಿದ್ದೇನೆ. ನಮ್ಮತಂದೆಯವರಿಗೆ ಎಡಕೈಗೆ ಹಾಗೂ ಎಡಕಾಲಿಗೆ ಲಕ್ವಾ (Stroke) ಬಂದಿರುತ್ತದೆ. ಈಗಾಗಲೇ ಎಲ್ಲಾ ಕಡೆ ತೋರಿಸಿದ್ದೇವೆ. ಆದರೆ 6 ತಿಂಗಳಾದರೂ ಇನ್ನೂ ಸರಿಯಾಗಿ ನಡೆಯಲಿಕ್ಕೆ ಆಗುತ್ತಿಲ್ಲ. ಮೊದಲಿನಂತೆ ಆಗುತ್ತಾರೋ ಇಲ್ಲವೋ? ನನಗೆ ಬಹಳ ಭಯವಾಗಿದೆ. ನನಗೆ ಓದಲಿಕ್ಕೆ ಆಗುತ್ತಿಲ್ಲ. ನನ್ನ ಮನಸ್ಸು ಅವರ ಕಡೆಯೇ ಇರುತ್ತದೆ. ನಮ್ಮ ತಂದೆಯವರು ಜೀವನ ಬೇಸರವೆಂದು ಹೇಳುತ್ತಾ ಇರುತ್ತಾರೆ. ಈ ರೋಗದ ಬಗ್ಗೆ ಪರಿಹಾರ ತಿಳಿಸಿ.

-ಶ್ರೀ ಹರಿ, ಕುಷ್ಟಗಿ.

ಸಲಹೆ

ಪೆರಾಲಿಸಿಸ್‌ಗೆ ಹಲವಾರು ಕಾರಣಗಳಿರುತ್ತವೆ. ಚಿಕಿತ್ಸೆಯ ಸಮಯ ದೀರ್ಘ ಕಾಲ ಹಿಡಿಯುವುದರಿಂದ ತಾಳ್ಮೆ ಬಹಳ ಮುಖ್ಯ. ನಿಮ್ಮ ತಂದೆಯವರಿಗೆ ಯಾವ ಕಾರಣದಿಂದ ಪೆರಾಲಿಸಿಸ್ ಆಗಿದೆ ಎಂಬುದು ವೈದ್ಯಕೀಯ ವರದಿಗಳಿಂದ ತಿಳಿಯುತ್ತದೆ. ಕೆಲವು ಸರಳ ವ್ಯಾಯಾಮಗಳು ಹಾಗೂ ಫಿಸಿಯೋಥೆರಪಿಯಿಂದಲೂ ಮೆದುಳಿಗೆ ರಕ್ತ ಚಲನೆ ಸರಾಗವಾಗಿ ಮತ್ತೆ ಮೊದಲಿನ ಸ್ಥಿತಿಗೆ ಮರಳಬಹುದು.

ನೀವು ನಿಮ್ಮ ತಂದೆಯ ಕಾಯಿಲೆಯ ಬಗ್ಗೆ ಸಂಪೂರ್ಣ ವಿವರಣೆ ನೀಡಿಲ್ಲ. ಅವರಿಗೆ ರಕ್ತದೊತ್ತಡ, ಮಧುಮೇಹಗಳ (ಸಿಹಿಮೂತ್ರರೋಗ) ತೊಂದರೆ ಇದೆಯೆ? ಹೃದಯದ ತೊಂದರೆ ಏನಾದ್ರೂ ಇದೆಯೆ? ಕೆಲವರಲ್ಲಿ ಸಾಮಾನ್ಯವಾಗಿ ಮೆದುಳಿಗೆ ರಕ್ತ ಪೂರೈಸುವ ಯಾವುದಾದರೊಂದು ರಕ್ತನಾಳದಲ್ಲಿ ಅಲ್ಪ ಪ್ರಮಾಣದಲ್ಲಿ ಹೆಪ್ಪು ಗಟ್ಟಿದರೂ ತಡೆ ಉಂಟಾಗುವುದರಿಂದ *Nerve paralylis* ಉಂಟಾಗುತ್ತದೆ. ಔಷಧಿ ಚಿಕಿತ್ಸೆಯಿಂದ ಗುಣ ಕಂಡು ಬರದಿದ್ದರೆ ಶಸ್ತ್ರಚಿಕಿತ್ಸೆಯ ಮೂಲಕ ಹೆಪ್ಪುಗಟ್ಟಿದ ರಕ್ತವನ್ನು ತೆಗೆಯಬೇಕಾಗುತ್ತದೆ. ಕಾಯಿಲೆ ಯಾರಿಗೆ ಬರುವುದಿಲ್ಲ ಹೇಳಿ? ಅವರಿಗೆ ಚಿಕಿತ್ಸೆಯನ್ನು ಕೊಡಿಸಿ ಸರಿಪಡಿಸುವುದರ ಬಗ್ಗೆ ಯೋಚಿಸುವುದನ್ನು ಬಿಟ್ಟು ಭಯಪಟ್ಟರೆ ಹೇಗೆ? ನಿಮ್ಮ ತಂದೆಯವರಿಗೂ ನೀವೇ ಧೈರ್ಯ ಹೇಳಿ ಅವರ ಬೇಸರವನ್ನು ಹೋಗಲಾಡಿಸಲು ಪ್ರಯತ್ನಿಸಿ. ಪ್ರತಿ ದಿನ ಕಾಲು, ಕೈಗಳಿಗೆ ಅಶ್ವಗಂಧ ಬಲಾ ತೈಲದಿಂದ ಮಸಾಜ್ ಮಾಡಿ ಬಿಸಿನೀರಿನ ಶಾಖ ಕೊಡಿ. ಈ ತೈಲವು ಆಯುರ್ವೇದ ಔಷಧಿ ಅಂಗಡಿಯಲ್ಲಿ ದೊರೆಯುತ್ತದೆ.

ಆಕೆ ಮುಸ್ಲಿಂ, ನಾನು ಹಿಂದೂ

ನಾನು 18 ವರ್ಷದ ಯುವಕ. ನಾನು ಮುಸ್ಲಿಂ ಜನಾಂಗದ ಹುಡುಗಿಯೊಬ್ಬಳನ್ನು ಪ್ರೀತಿಸುತ್ತಿದ್ದೇನೆ. ಅವಳು ಸಹ ನನ್ನನ್ನು ಪ್ರೀತಿಸುತ್ತಿದ್ದಾಳೆ. ನಾವು ಪ್ರೀತಿಸಿ 4 ವರ್ಷವಾದರೂ ಈ ವಿಷಯ ಯಾರಿಗೂ ಗೊತ್ತಿಲ್ಲ. ಆದರೆ ಒಂದು ತಿಂಗಳ ಹಿಂದೆ ಈ ವಿಷಯ ನಮ್ಮ ಮನೆಯವರಿಗೂ ಹಾಗೂ ಅವಳ ಮನೆಯವರಿಗೂ ಗೊತ್ತಾಗಿದೆ. ಆದರೆ ಅವಳ ಮನೆಯಲ್ಲಿ ಅವಳಿಗೆ ದಿನಾ ಹಿಂಸೆ ಕೊಡುತ್ತಿದ್ದಾರೆ. ನನ್ನ ಮುಂದೆ ಅವಳು ನಾವು ಮದುವೆಮಾಡಿಕೊಂಡು ಎಲ್ಲಾದರೂ ದೂರ ಹೋಗೋಣ ಎನ್ನುತ್ತಿದ್ದಾಳೆ. ಆದರೆ ನಾನು ಬೇಡವೆಂದು, ಏಕೆಂದರೆ ನಮಗೆ ಮದುವೆಗೆ ಇದು ಪ್ರಾಪ್ತ ವಯಸ್ಸು ಅಲ್ಲ. ಅವಳಿಗೆ ಬರೀ 16 ವರ್ಷ ಮಾತ್ರ. ಆದರೆ ಅವಳು ಕೇಳುತ್ತಿಲ್ಲ. ದಯವಿಟ್ಟು ನೀವಾದರೂ ಸ್ವಲ್ಪ ಸಮಾಧಾನಕರವಾದ ಲೇಖನದ ಮೂಲಕ ತಿಳಿಸಿ.

-ನಾಯ್ಕ, ಎಸ್.ಎಸ್.ಎನ್.

ಸಲಹೆ

ಸಧ್ಯಕ್ಕೆ ಇನ್ನು ಎರಡು-ಮೂರು ವರ್ಷ ಮದುವೆಯ ಬಗ್ಗೆ ಯೋಚಿಸಬೇಡಿ. ಅವಳಿಗೆ 18, ನಿಮಗೆ 21 ವರ್ಷವಾದ ನಂತರ ಅಲ್ಲದೇ ಮುಖ್ಯವಾಗಿ ನೀವು ಆರ್ಥಿಕ ಸ್ವಾವಲಂಬಿಗಳಾದ ನಂತರವೆ ಮದುವೆಯ ಮಾತು. ಆ ಹುಡುಗಿಗೆ ನೀವು ಇನ್ನು ಮೂರು ವರ್ಷಗಳಾದ ಮೇಲೆ ಹಿರಿಯರು ಒಪ್ಪದಿದ್ದರೂ ಖಂಡಿತ ಮದುವೆಯಾಗುವೆ ಎಂದು ಭರವಸೆ, ಧೈರ್ಯ ನೀಡಿ. ಇನ್ನು ಮೂರು ವರ್ಷಗಳ ಕಾಲ ನೀವಿಬ್ಬರೂ ಭೇಟಿಯಾಗದೇ ದೂರವಿರಿ. ಇದರಿಂದ ಅವಳಿಗೂ ಮನೆಯಲ್ಲಿ ಹಿಂಸೆ ತಪ್ಪುತ್ತದೆ. ಅಲ್ಲದೇ ಮೂರು ವರ್ಷಗಳಲ್ಲಿ ಇಬ್ಬರೂ ಚೆನ್ನಾಗಿ ಯೋಚಿಸಿ ಅಂತರ್ ಧರ್ಮದ ಮದುವೆಯಿಂದಾಗಿ ಮುಂದೆ ಬರುವ ಸಮಸ್ಯೆಗಳನ್ನು ಮತ್ತು ಸಮಾಜವನ್ನು ಎದುರಿಸುವ ಧೈರ್ಯ, ಸ್ಥೈರ್ಯ ನಿಮ್ಮಲ್ಲಿದೆಯೇ ಎಂಬುದನ್ನು ಆಲೋಚಿಸಿ ಮದುವೆಯ ಬಗ್ಗೆ ತೀರ್ಮಾನ ಕೈಗೊಳ್ಳಿ.

ನಿಮ್ಮ ಸಮಸ್ಯೆಗಳನ್ನು ಈ ವಿಳಾಸಕ್ಕೆ ಕಳಿಸಿ :
ಸಂಪಾದಕರು,
ಬಿಸಿಲ ಬದುಕು, ಅಂಕುರ ಪ್ರಕಾಶನ
ಅಂಚೆ ಪೆಟ್ಟಿಗೆ : 7951, ಬಸವೇಶ್ವರನಗರ, ಬೆಂಗಳೂರು - 560 079.

ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳಿಗೆ ನೇಮಕಾತಿ

1998-99 ನೇ ಸಾಲಿನಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳಿಗೆ ನೇಮಕಾತಿ ಮಾಡಲು ಸರ್ಕಾರ ಉದ್ದೇಶಿಸಿದೆ. ನೇಮಕಾತಿಯನ್ನು ಆಯಾ ಜಿಲ್ಲಾ ಹಂತದಲ್ಲಿ ಮಾಡಲಾಗುತ್ತಿದ್ದು, ಇದಕ್ಕಾಗಿ ಪ್ರತ್ಯೇಕ ನೇಮಕಾತಿ ಪ್ರಾಧಿಕಾರಗಳನ್ನು ರಚಿಸಲಾಗಿದೆ. ಜಿಲ್ಲಾವಾರು ಮಟ್ಟದಲ್ಲಿ ನೇಮಕಾತಿಗಾಗಿ ಈಗಾಗಲೇ ಹಲವಾರು ಜಿಲ್ಲೆಗಳಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕೋಲಾರ, ಮಂಡ್ಯ, ಬೆಳಗಾವಿ, ಚಾಮರಾಜನಗರ, ಧಾರವಾಡ, ಗದಗ, ಚಿಕ್ಕಮಗಳೂರು, ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳಲ್ಲಿ ಈಗಾಗಲೇ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಉಳಿದ ಜಿಲ್ಲೆಗಳು ಸದ್ಯದಲ್ಲಿಯೇ ಅರ್ಜಿ ಆಹ್ವಾನಿಸಲಿವೆ.

ಅರ್ಹ ಅಭ್ಯರ್ಥಿಗಳು ಸರಕಾರಿ ಮುದ್ರಣಾಲಯದ ವಿಭಾಗೀಯ ಪುಸ್ತಕ ಮಾರಾಟ ಮಳಿಗೆ ಹಾಗೂ ಸರಕಾರಿ ಮುದ್ರಣಾಲಯದಿಂದ ನೇಮಿಸಲ್ಪಟ್ಟ ಅಧಿಕೃತ ಪುಸ್ತಕ ಮಾರಾಟಗಾರರು ಅಥವಾ ಆಯಾ ಜಿಲ್ಲಾ ಉಪ ನಿರ್ದೇಶಕರ ಕಚೇರಿಯಿಂದ ಪಡೆದು ಅರ್ಹ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಆಯಾ ಜಿಲ್ಲಾ ಕಚೇರಿಗಳಿಗೆ ಸಲ್ಲಿಸಬೇಕು.

ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ನೋಂದಾಯಿಸಿರುವ ಹಾಗೂ ನೋಂದಾಯಿಸದೇ ಇರುವ ಅಭ್ಯರ್ಥಿಗಳಿಂದ (ಜಿಲ್ಲೆಯ ಸಾಮಾನ್ಯ ನಿವಾಸಿಯಾಗಿದ್ದು) ಅರ್ಜಿಗಳನ್ನು ಕರೆಯಲಾಗಿದೆ. ಅಭ್ಯರ್ಥಿಯು ದಿನಾಂಕ : 31.3.1999ಕ್ಕೆ 18 ವರ್ಷ ತುಂಬಿದ್ದು, ಗರಿಷ್ಠ ವಯೋಮಿತಿ ಸಾಮಾನ್ಯ ವರ್ಗದವರಿಗೆ 40 ವರ್ಷ, ಹಿಂದುಳಿದ ಪ್ರವರ್ಗ 2ಎ, 2ಬಿ, 3ಎ, 3ಬಿ, 43 ವರ್ಷ, ಪ್ರವರ್ಗ 1, ಪ್ರಜಾತಿ ಪಪಂ. ಅಭ್ಯರ್ಥಿಗಳಿಗೆ 45 ವರ್ಷ ಮೀರಿರಬಾರದು. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಅರ್ಜಿಯ ಜೊತೆಯಲ್ಲಿ 25.00 ರೂ.ಗಳ ಇಂಡಿಯನ್ ಪೋಸ್ಟಲ್ ಆರ್ಡರ್ ಪಜಾ, ಪ.ಪ ಹಾಗೂ ಹಿಂದುಳಿದ ಪ್ರವರ್ಗ -1 ರ ಅಭ್ಯರ್ಥಿಗಳು 10.00 ರೂ.ಗಳ ಇಂಡಿಯನ್ ಪೋಸ್ಟಲ್ ಆರ್ಡರನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಹೆಸರಿನಲ್ಲಿ ಪಡೆದು ಲಗತ್ತಿಸಬೇಕು.

ನೇಮಕಾತಿಯನ್ನು ಹಾಲಿ ಮೀಸಲಾತಿ ನಿಯಮದಡಿಯಲ್ಲಿ ಭರ್ತಿ ಮಾಡಲಾಗುವುದು. ಗ್ರಾಮೀಣ ಅಭ್ಯರ್ಥಿ, ಗೌರವ ಶಿಕ್ಷಕರು, ಅರೆಕಾಲಿಕ ದೈಹಿಕ ಶಿಕ್ಷಕರು, ಅಂಗವಿಕಲರು, ಮಾಜಿ ಸೈನಿಕರು ಇವರಿಗೆ ನಿಯಮಗಳ ಪ್ರಕಾರ ಸೌಲಭ್ಯ ಪಡೆಯಲು ಆ ಬಗ್ಗೆ ಅಗತ್ಯ ಪ್ರಮಾಣ ಪತ್ರಗಳನ್ನು ಸಲ್ಲಿಸುವುದು.

ಹೆಚ್ಚಿನ ವಿವರಗಳಿಗೆ ಆಯಾ ಜಿಲ್ಲೆಯ ನೇಮಕಾತಿ ಪ್ರಾಧಿಕಾರ ಹಾಗೂ ಉಪ ನಿರ್ದೇಶಕರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಮತ್ತು ರಾಜ್ಯ ಪತ್ರದಲ್ಲಿ ಪ್ರಕಟಣೆಯಾಗುವ ಅಧಿಸೂಚನೆಯನ್ನು ಗಮನಿಸುವುದು.

ಸರಕಾರಿ ಮುದ್ರಣಾಲಯದಿಂದ ಮುದ್ರಿಸಲ್ಪಟ್ಟ ನಿಗದಿತ ಅರ್ಜಿಯನ್ನು ಅಂಗೀಕೃತ ಪುಸ್ತಕ ಮಾರಾಟ ಮಳಿಗೆಯಿಂದ ಪಡೆದುಕೊಂಡು ಸಲ್ಲಿಸಬೇಕು. ಬೇರೆ ಅರ್ಜಿ ಪ್ರತಿ ನಮೂನೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿ ಬೆಲೆ 5 ರೂ.

ಜಾತಿ ಮತ್ತು ಆದಾಯ ಪ್ರಮಾಣಪತ್ರವನ್ನು ಜಾಹೀರಾತು ಪ್ರಕಟವಾದ ದಿನಾಂಕದ ನಂತರ ಹಾಗೂ 31.3.99ರೊಳಗೆ ಸಂಬಂಧಿಸಿದ ತಾಲ್ಲೂಕು ತಹಶೀಲ್ದಾರರಿಂದ ಪಡೆದ ಪತ್ರವನ್ನು ಸಲ್ಲಿಸುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 31.3.1999

ಅರ್ಜಿ ಸಲ್ಲಿಸಬೇಕಾದ ವಿಳಾಸ

■ ಜಿಲ್ಲಾ ಪ್ರಾಥಮಿಕ ಶಿಕ್ಷಣ ನೇಮಕಾತಿ ಪ್ರಾಧಿಕಾರ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ.

■ ಜಿಲ್ಲಾ ಪ್ರಾಥಮಿಕ ಶಿಕ್ಷಣ ನೇಮಕಾತಿ ಪ್ರಾಧಿಕಾರ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿ, ಬೆಳಗಾವಿ ಜಿಲ್ಲೆ, ಬೆಳಗಾವಿ.

■ ಜಿಲ್ಲಾ ಪ್ರಾಥಮಿಕ ಶಿಕ್ಷಣ ನೇಮಕಾತಿ ಪ್ರಾಧಿಕಾರ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿ, ಧಾರವಾಡ ಜಿಲ್ಲೆ, ಧಾರವಾಡ.

■ ಜಿಲ್ಲಾ ಪ್ರಾಥಮಿಕ ಶಿಕ್ಷಣ ನೇಮಕಾತಿ ಪ್ರಾಧಿಕಾರ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿ, ಕೋಲಾರ ಜಿಲ್ಲೆ, ಕೋಲಾರ.

■ ಜಿಲ್ಲಾ ಪ್ರಾಥಮಿಕ ಶಿಕ್ಷಣ ನೇಮಕಾತಿ ಪ್ರಾಧಿಕಾರ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.

■ ಜಿಲ್ಲಾ ಪ್ರಾಥಮಿಕ ಶಿಕ್ಷಣ ನೇಮಕಾತಿ ಪ್ರಾಧಿಕಾರ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿ, ಗದಗ ಜಿಲ್ಲೆ, ಗದಗ

■ ಜಿಲ್ಲಾ ಪ್ರಾಥಮಿಕ ಶಿಕ್ಷಣ ನೇಮಕಾತಿ ಪ್ರಾಧಿಕಾರ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿ, ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆ, ಬೆಂಗಳೂರು.

■ ಜಿಲ್ಲಾ ಪ್ರಾಥಮಿಕ ಶಿಕ್ಷಣ ನೇಮಕಾತಿ ಪ್ರಾಧಿಕಾರ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿ, ಮಂಡ್ಯ ಜಿಲ್ಲೆ ಮಂಡ್ಯ. ■

ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧರಾಗಿ

ಇತಿಹಾಸ

1. ಭಾರತದಲ್ಲಿ ಮುಸ್ಲಿಂರ ದಾಳಿ ಎಷ್ಟನೇ ಶತಮಾನದಲ್ಲಿ ಆರಂಭಗೊಳ್ಳುತ್ತದೆ?
2. ಕುತ್ಬುದ್ದೀನ್-ಐಬಕ್ ಮೂಲತಃ ಯಾವ ದೇಶದವನು?
3. ದೆಹಲಿಯನ್ನು ಎಷ್ಟು ಸಂತತಿಗಳು ಆಳಿದವು?
4. 'ಐಬಕ್'ನು ಆಟವಾಡುವಾಗ ತೀರಿಕೊಂಡ ನಂತೆ, ಅದು ಯಾವ ಆಟ?
5 ಅಬುಲ್ ಫಜಲ್‌ನು ಯಾರು?
6 'ಸುಲ್-ಎ-ಕುಲ್' ಅಂತ್ಹೇಳಿದವರು ಯಾರು?
7. ದೆಹಲಿಯನ್ನಾಳಿದ ಏಕೈಕ ಮಹಿಳೆ ಯಾರು?
8. ಉಜ್ಜೈನಿಯ ಮಹಾಕಾಳಿ ದೇವಾಲಯವನ್ನು ಧ್ವಂಸಗೊಳಿಸಿದ ದೆಹಲಿ ಸುಲ್ತಾನನಾರು?
9. ಮಂಗೋಲರ ನಾಯಕ ಯಾರು?
10. "ಖಿಲ್ಜಿ" ಯಾವ ರಾಷ್ಟ್ರದಲ್ಲಿ ಇದೆ?
11. ಕೋಶಾಕ್-ಎ-ಸಿರಿ ಇದು ದೆಹಲಿ ಸುಲ್ತಾನರ ಕಾಲದಲ್ಲಿ ಏನಾಗಿತ್ತು?
12. ಫಿರೋಜ್ ತುಘಲಕ್ ಎಷ್ಟು ವರ್ಷಗಳ ಕಾಲ ರಾಜ್ಯವಾಳಿದ?
13. ಹುಚ್ಚರಾಜ, ದುರ್ದೈವಿರಾಜ ಹಾಗೂ ಕೆಟ್ಟ ನಕ್ಷತ್ರದಲ್ಲಿ ಜನಿಸಿದ ಆದರ್ಶವಾದಿ ಎಂದು ಯಾವ ತುಘಲಕ್ ವಂಶದ ದೊರೆಯನ್ನು ಕರೆಯಲಾಗಿದೆ?
14. 'ತಾರೀಖ್-ಎ-ಹಿಂದ್' ಗ್ರಂಥ ಯಾರಿಂದ ಬರೆಯಲ್ಪಟ್ಟಿದೆ?
15. 'ಬ್ರಹ್ಮವೊಂದೇ ಸತ್ಯ ಉಳಿದೆಲ್ಲಾ ಮಿಥ್ಯ'ಇದು ಯಾರ ವಾದವಾಗಿದೆ?
16. ಸಿರಿಯಾ ಪಟ್ಟಣ ಸ್ಥಾಪಿಸಿದ ಕೀರ್ತಿ ಖಿಲ್ಜಿ ಸಂತತಿಯ ಯಾವ ದೊರೆಗೆ ಸಲ್ಲುತ್ತದೆ?
17. ಖ್ವಾಜಾ ಬಂದೇ ನವಾಜರು ಎಷ್ಟು ಗ್ರಂಥಗಳನ್ನು ಬರೆದಿದ್ದಾರೆ?
18. 'ಸಚ್ಚಾಪಾದಶಾಹ' ಎಂಬ ಬಿರುದು ಪಡೆದಿದ್ದ ಸಿಖ್ಖರ ಗುರು ಯಾರು?
19. ಚೈತನ್ಯರ ಮೊದಲ ಹೆಸರು?
20. ಹುಮಾಯುನ್ ಷಾ ತುಂಬಾ ಕ್ರೂರಿಯಾಗಿದ್ದನೆಂದು ಇತಿಹಾಸಕಾರರು ಏನೆಂದು ಕರೆದಿದ್ದಾರೆ?
21. ದೆಹಲಿಯ ಪುರಾನಾ ಕಿಲಾವನ್ನು ಯಾರು ಕಟ್ಟಿಸಿದರು?
22. ಅಕ್ಬರ್ ಮಹಾಶಯನ 3ನೇ ಮಗನಾರು?
23. ಮೊಘಲ್ ಕಾಲದಲ್ಲಿ 'ತಬಲ್-ಎ-ಅದಲ್' ಅಂದರೇನು?
24. ಉತ್ತರ ವೇದ ಕಾಲದಲ್ಲಿ ಶಿಕ್ಷಕರಿಗೆ ಏನೆಂದು ಕರೆಯಲಾಗುತ್ತಿತ್ತು?
25. 'ಆದಿವೇದ' ಎಂದರೆ ಯಾವ ವೇದ?
26. ಬ್ರಹ್ಮಸೂತ್ರ ಬರೆದವರು ಯಾರು?
27. ಮಹಾಭಾರತವನ್ನು ತೆಲುಗಿನಲ್ಲಿ ಬರೆದ ಕವಿ?
28. ವಿಜಯನಗರದ ದೊರೆಯೊಬ್ಬನಿಗೆ '3 ಸಮುದ್ರಗಳ ಒಡೆಯ' ಎಂದು ಶಾಸನಗಳು ತಿಳಿಸಿವೆ. ಆ ದೊರೆ ಯಾರು?
29. ಜೈನ ಧರ್ಮಕ್ಕೆ ಪ್ರಾಚೀನ ಕಾಲದಲ್ಲಿ ರಾಜಾಶ್ರಯ ನೀಡಿದ ರಾಜವಂಶ ಯಾವುದು?
30. 'ನಿಗುಂಥಕರು' ಅಂದರೆ ಯಾರು?
31. 'ಪರ್ಮಾನ್' ಎಂದರೆ ಏನು?
32. 'ಕ್ರಿಸ್ಟೋಫರ್ ಕೋಲಂಬಸ್' ಯಾವ ದೇಶದ ನಾವಿಕ?
33. ಹಿಜಿರಾಶಕ ಆರಂಭಗೊಂಡಿದ್ದು?
34. 2ನೇ ಪಾಣಿಪತ್ ಕದನ ನಡೆದದ್ದು?
35. ಮಂಗೋಲಿಯನ್ನರು ಭಾರತಕ್ಕೆ ಬಂದ ವರುಷ ಯಾವುದು?
36. 'ಪ್ರತಿಭಾವಂತ ಕುಡುಕ' ಎಂದು ಜನರಿಂದ ಕರೆಯಲ್ಪಟ್ಟ ಮೊಘಲ್ ದೊರೆ ಯಾರು?
37. ಬಾಬರ್‌ನ ಪೂರ್ಣ ಹೆಸರೇನು?
38. ಮರಾಠಾರಾಣಿ ಸಾಯಿಬಾಯಿ ಯಾರು?
39. ಸಿಂಧೂ ಸಂಸ್ಕೃತಿಯನ್ನು 'ಹರಪ್ಪ ಸಂಸ್ಕೃತಿ' ಎಂದು ಕರೆದವರು?
40. ಗುಪ್ತರ ಕಾಲದ ಬಂಗಾರದ ನಾಣ್ಯದ ಹೆಸರೇನು?
41. ಸಿದ್ಧಾರ್ಥ ಭಿಕ್ಷೆ ಬೇಡಿದ ಹಳ್ಳಿಯ ಹೆಸರೇನು?
42. ಅಶೋಕನ ಕಿರೀಟಧಾರಣೆಯಾಗಿ ಎಷ್ಟನೇ ವರ್ಷದಲ್ಲಿ ಕಳಿಂಗ ಸಮರ ನಡೆಯುತ್ತದೆ?
43. ಹರ್ಷನ ರಾಜಧಾನಿ ಯಾವುದಾಗಿತ್ತು?
44. ಚಾಣುಕ್ಯನ ಅರ್ಥಶಾಸ್ತ್ರ ಬರೆಯಲ್ಪಟ್ಟ ಕಾಲವೆಷ್ಟು?
45. 'ಮೃಚ್ಛಕಟ್ಟಿಕ' ನಾಟಕದ ಕರ್ತೃ?
46. ಗುಪ್ತರ ಕಾಲದಲ್ಲಿ 'ಪಿಷ್ಠಿ' ಅಂದರೆ?
47. 'ಸತ್ಯವನ್ನೇ ಹೇಳು' ಎಂಬ ವಾಕ್ಯ ಅಶೋಕನ ಎಷ್ಟನೇ ಶಾಸನದಲ್ಲಿ ಇದೆ?
48. 'ಅಗ್ನಿಬ್ರಹ್ಮ'ನು ಯಾರು?
49. ಪ್ರಥಮ ಬೌದ್ಧ ಸಮ್ಮೇಳನ ಎಂದು ಹಾಗೂ ಎಲ್ಲಿ ನಡೆಯಿತು?
50. ಗುಪ್ತ ಸಂತತಿಯ ಸಂಸ್ಥಾಪಕರು ಯಾರು?

ಉತ್ತರಗಳು

1.ಕ್ರಿ.ಶ.7ನೇ ಶತಮಾನದಲ್ಲಿ, 2.ಟರ್ಕಿ, 3.4 ಸಂತತಿಗಳು, 4.ಪೋಲೋ, 5.ಅಕ್ಬರನ ಸ್ನೇಹಿತ ಹಾಗೂ ಇತಿಹಾಸಕಾರ, 6.ಅಬ್ದುಲ್ ಲತೀಫ್, 7.ರಜಿಯಾಬೇಗಂ, 8.ಇಲ್ತಮಷ್, 9.ಚೆಂಗಿಸ್ ಖಾನ್, 10.ಅಫ್ಘಾನಿಸ್ತಾನ, 11.ಅರಮನೆ, 12.37 ವರ್ಷ, 13. ಮಹ್ಮದ್ ಬಿನ್ ತುಘಲಕ್, 14. ಅಲ್ಬೇರುನಿ, 15.ಶಂಕರಾಚಾರ್ಯರು, 16.ಅಲ್ಲಾವುದ್ದೀನ್ ಖಿಲ್ಜಿ, 17.175, 18.ಗುರು ಗೋವಿಂದ್‌ಸಿಂಗ್, 19.ವಿಶ್ವಂಭರ, 20.ಜಾಲಿಂ, 21.ಷೇರ್‌ಷಹ, 22. ಡೇನಿಯಲ್, 23.ನ್ಯಾಯಪದ್ಧತಿ, 24.ಆಚಾರ್ಯ, 25.ಋಗ್ವೇದ, 26.ಬದ್ರಾಯಾನಾ, 27. ನನ್ನಯ, 28.ಒಂದನೇ ಬುಕ್ಕರಾಯ, 29.ಗಂಗರು, 30.ಮಹಾವೀರನ ಅನುಯಾಯಿಗಳು, 31.ಅನುಮತಿ, 32.ಇಟಲಿ, 33.ಕ್ರಿ.ಶ. 622, 2ನೇಜುಲೈ, 34.1556, 35.1221ರಲ್ಲಿ, 36.ಜಹಾಂಗೀರ್, 37.ಜಹೀರುದ್ದೀನ್ ಮಹ್ಮದ್ ಬಾಬರ್, 38.ಶಿವಾಜಿಯ ಮಡದಿ, 39.ಸರ್. ಜಾನ್. ಮಾರ್ಷಲ್, 40.ದಿನಾರ್, 41.ಉರುವೇಲ, 42.8ನೇ ವರ್ಷದಲ್ಲಿ, 43.ಥಾಣೇಶ್ವರ, 44.ಕ್ರಿ.ಪೂ.350-270, 45.ಶೂದ್ರಕ, 46.ಕಾರ್ಮಿಕ, 47.2ನೇ ಗೌಣ ಶಾಸನ, 48.ಅಶೋಕ ಚಕ್ರವರ್ತಿಯ ಅಳಿಯ, 49.ಕ್ರಿ.ಪೂ.487ರಲ್ಲಿ, ರಾಜಗೃಹದಲ್ಲಿ, 50.ಶ್ರೀಗುಪ್ತ.

■ ಶಿ.ಕಾ. ಬಡಿಗೇರ

ನೀವೂ ಇಂಗ್ಲಿಷ್ ಕಲಿಯಿರಿ | ಭಾಗ-14

ಸಾಮಾನ್ಯರೂ ಸುಲಭವಾಗಿ ಇಂಗ್ಲಿಷ್ ಕಲಿಯಬಹುದಾದ ಸರಳ ಮಾರ್ಗ ಇಲ್ಲಿದೆ

(ಹಿಂದಿನ ಸಂಚಿಕೆಯಿಂದ)

ಜಾನಕಿ : ಜಾನ್, Parts of Speech ಈಗ ಪೂರ್ಣವಾಗುವುದೆ?

ಜಾನ್ : ಅಭ್ಯಾಸ ಮಾಡುವುದು, ಊಟ ಮಾಡುವುದು ನಿಧಾನವಾಗಿರ ಬೇಕು. ಅವಸರ ಮಾಡಿದರೆ ಓದಿದ್ದನ್ನು, ಊಟ ಮಾಡಿದ್ದನ್ನು ಅರಗಿಸಿಕೊಳ್ಳಲಾಗುವುದಿಲ್ಲ.

ಜಾನಕಿ : ಭಾಷಣ ಸಾಕು. ಪಾಠ ಹೇಳು.

ಜಾನ್ : ಈಗ ನೋಡೋಣ.

PREPOSITIONS - ಉಪಸರ್ಗಾವ್ಯಯಗಳು

ಇಂಗ್ಲಿಷ್‌ನಲ್ಲಿ ಸಾಮಾನ್ಯವಾಗಿ ಉಪಸರ್ಗಾವ್ಯಯಗಳನ್ನು ನಾಮಪದದ ಹಿಂದೆ ಹಚ್ಚಲಾಗುವುದು ಹಾಗೂ ಕ್ರಿಯಾಪದ, ನಾಮಪದ, ವಿಶೇಷಣ, ಕೃದ್ವಾಚಕಗಳಿಗೆ ಅವುಗಳದೇ ಆದ ಉಪಸರ್ಗಾವ್ಯಯಗಳಿರುತ್ತವೆ.

ಉಪಸರ್ಗಾವ್ಯಯಗಳು- ಉದಾ.

Under, above, among, beyond, on, upon, for, of, over, before, after, with.

ವಾಕ್ಯದಲ್ಲಿ ಹೀಗೆ ಬಳಸಬಹುದು.

i) I keep the book **on** the table.
ii) The fish is swimming **under** water.
iii) Ravana decided to pay his life **for** Sita.
iv) Menon was fond **of** tea.

ಲಕ್ಷ್ಯ ಕೊಟ್ಟು ಓದಿ, ಅಧ್ಯಯನ ಮಾಡಿ, ರೂಢಿಸಿಕೊಳ್ಳಬೇಕು.

ಜಾನಕಿ : ನಾನು ಲಕ್ಷ್ಯ ಕೊಡುವುದಿಲ್ಲ ಅನ್ನುತ್ತೀ ಏನು?

ಜಾನ್ : ಅದು ಹೇಳಿದರೆ ಸರಿ. ಇರಲಿ. ಈಗ

CONJUNCTIONS - ಸಮುಚ್ಚಾಯಕ ಅವ್ಯಯಗಳು

ಶಬ್ದಗಳನ್ನು ಅಥವಾ ವಾಕ್ಯಗಳನ್ನು ಜೋಡಿಸುವ ಕಾರ್ಯವನ್ನು ಸಮುಚ್ಚಾಯಕ ಅವ್ಯಯಗಳು ಮಾಡುತ್ತವೆ.

Conjunctions - And, But, Or, That, Where Either........ or - etc.

i) The teacher entered the class **but** there was no student.
ii) I went into the theatre **and** cinema started.
iii) **Either** study **or** go home.
iv) The teacher said **that** all should attend the function.

ವಾಕ್ಯಗಳನ್ನು ಜೋಡಿಸಿರುವ ಉದಾಹರಣೆಗಳನ್ನು ಮೇಲೆ ಕಾಣುತ್ತೇವೆ.

ಇನ್ನು ಶಬ್ದಗಳ ಜೋಡಣೆಯನ್ನು ನೋಡೋಣ.

i) Rama **and** Sita went to forest.
ii) Rama **or** Laxman should chase deer.

Compound Conjunctionsನಲ್ಲಿ ಎರಡು ಮೂರು ಶಬ್ದಗಳಿರುತ್ತವೆ.

ಉದಾ.

i) The notice was announced well in advance **so that** all should come to know.
ii) Rama **as well as** Laxman went after deer.

ಜಾನಕಿ : Conjunctions -ನಲ್ಲಿ ಎಷ್ಟು ವಿಧಗಳಿವೆ ಎನ್ನುವುದನ್ನು ಹೇಳು.

ಜಾನ್ : Classes **or** Kinds of Conjunction.

I Co-ordinating Conjunction and
II Subordinating Conjunction

I CO-ORDINATING CONJUNCTIONS -

ಇವು ಎರಡು ವಾಕ್ಯಗಳನ್ನು ಜೋಡಿಸುತ್ತವೆ. - A Co-ordinating Conjunction joins together clauses of equal rank.

i) Tortoise was slow **but** won the race.
ii) You must work hard **or** you must fail.
iii) God made the country **and** man made the town.

II SUBORDINATING CONJUNCTIONS-

ಇಲ್ಲಿ ಮುಖ್ಯವಾಕ್ಯಕ್ಕೆ ಉಪವಾಕ್ಯ ಜೋಡಿಸುವ ಕಾರ್ಯವನ್ನು Subordinating Conjunction ಮಾಡುತ್ತದೆ. - A Subordinating Conjunction joins a clause to another on which it depends for its full meaning.

ಉದಾ.

i) He ran away **because** he was afraid.
ii) I should know **why** you were absent yesterday.

Subordinating Conjunctions

i)	Time	(before, after, till, since)
ii)	Cause or Reason	(because, as)
iii)	Purpose	(that, lest)
iv)	Condition	(if, unless)
v)	Concession	(though)
vi)	Comparison	(than)

ಹೀಗೆ ಕಾಣುತ್ತೇವೆ. ಉದಾಹರಣೆ ಹೇಳ್ತೇನೆ?

ಜಾನಕಿ : ಬೇಡಪ್ಪಾ. ನಾನೇ ಹೇಳ್ತೇನೆ ಕೇಳು.

i) I returned home **after** he had gone.
ii) Many things you have happened **since** we saw each other.
iii) He failed **because** he did not study.
iv) Bhim was stronger **than** Bakasur (was).

ಜಾನ್ : Very Good. ಹೀಗೆ ನೀನು ಕಲಿತರೆ ನನ್ನ ಕೆಲಸ ಹಗುರಾಗುವುದು.
My work will be easy **if** you learn in this way ಇಲ್ಲಿ Conjunction ಯಾವುದು ಹೇಳು.

ಜಾನಕಿ : ಇಲ್ಲಿ **'If'** ಇದು Subordinating Conjunction 'ಕರಾರು' ಸೂಚಿಸುವುದು?

ಜಾನ್ : Correct. ಹಾಗಾದರೆ ಕೊನೆಯದೊಂದಿದೆ.

INTERJECTIONS - ಉದ್ಗಾರವಾಚಕ ಅವ್ಯಯಗಳು

ಉದ್ಗಾರವಾಚಕ ಅವ್ಯಯಗಳು ಒಮ್ಮಿಂದೊಮ್ಮೆಲೆ ಉಂಟಾದ ಮನೋಭಾವನೆಗಳನ್ನು ವ್ಯಕ್ತ ಮಾಡುತ್ತವೆ. ಮನೋಭಾವನೆ ಸಂತೋಷವಾಗಿರಬಹುದು, ಆಶ್ಚರ್ಯವಾಗಿರಬಹುದು ದುಃಖವಾಗಿರಬಹುದು, ನಿರಾಶೆಯಾಗಿರಬಹುದು.

An **Interjection** is a word which expresses some sudden feelings or emotions.

ಜಾನಕಿ : ಮೇಲಿನ ವಾಕ್ಯದಲ್ಲಿ **which** ಇದು Subordinating Conjunction ಅಲ್ಲವೆ?

ಜಾನ್ : ನೀನು ಇನ್ನು ಹಿಂದಿನ ಪಾಠದಲ್ಲೇ ಇದ್ದೀಯಾ?

ಜಾನಕಿ : ಇಲ್ಲವೊ ಮಹರಾಯ, ಸುಮ್ಮನೆ ಹೇಳಿದೆ.

ಜಾನ್ : Interjections - ಉದಾಹರಣೆಗಳು :

Alas!	**Hurrah!**	**Hello!**	**Oh!**
(Grief)	(Joy)	(Surprise)	(Fear)

ಕೆಳಗೆ ವಾಕ್ಯದಲ್ಲಿ ಬಳಸಲಾಗಿದೆ.
i) Alas! He was shot dead.
ii) Hurrah! We won the match.
iii) Hello! What are you doing?
iv) Oh! I was afraid.

ಕೊನೆ ಹನಿ

ಜಾನ್ : ಕೆಲವು ವಾಕ್ಯ ಹೇಳ್ತೀನೆ, Suitable Conjunctions ಉಪಯೋಗಿಸು.

i) My brother is well.	My Sister is ill.
ii) He sells oranges.	He sells apples.
iii) I honour him.	He is a brave man.
iv) It is Autumn	The leaves are falling.

ಜಾನಕಿ : ಎಷ್ಟು easy ಅದಾವೊ.

ಜಾನ್ : My brother is well **but** my sister is ill.
He sells oranges **and** he sells apples also.
I honour him **because** he is a brave man.
It is autumn **so that** the leaves are falling.

ಶಬ್ದ ಸಂಪತ್ತು

ಪ್ರತಿ ಶಬ್ದಕ್ಕೆ 4 ಅರ್ಥಕೊಟ್ಟಿದ್ದು, ಕೊಟ್ಟ ಶಬ್ದದ ಸಮಾನಾರ್ಥ ಪದ ಹುಡುಕಿರಿ, ನಂತರ ಉತ್ತರ ನೋಡಿ.

a. Hallucination -
ಅ. ಭ್ರಮೆ
ಬ. ತೂಗಾಟ
ಕ. ದೇಹದ ಸುತ್ತಲಿರುವ ಪ್ರಕಾಶ
ಡ. ಯಾವದೂ ಅಲ್ಲ.

b. Thespian -
ಅ. ವೈಯ್ಯಾರಿ
ಬ. ನಟ - ನಟಿ
ಕ. ನಾಸ್ತಿಕ
ಡ. ಆಸ್ತಿಕ

c. Loathe -
ಅ. ರೊಟ್ಟಿ ತುಣುಕು
ಬ. ಪ್ರೀತಿಸು
ಕ. ಬಹಳಷ್ಟು ಸೇರದಿರು
ಡ. ತೆಗ್ಗುತೆಗೆ

d. Felony -
ಅ. ದ್ರೋಹ
ಬ. ಬಲಾತ್ಕಾರ
ಕ. ಹಾದರ
ಡ. ಗಂಭೀರ ಅಪರಾಧ

e. Monger -
ಅ. ವ್ಯಾಪಾರಸ್ಥ
ಬ. ಸಾಲಗಾರ
ಕ. ಸಾಲ ಕೊಡುವವ
ಡ. ಮುಂಗಸಿ

f. Bevy -
ಅ. ಭಾರವಾದ
ಬ. ಮಹಿಳೆಯರ ಅಥವಾ ಹುಡುಗಿಯರ ಗುಂಪು
ಕ. ರಾಣಿ ಜೇನ್ನೊಣ
ಡ. ತೆರಿಗೆ ಅಥವಾ ಸುಂಕ

ಉತ್ತರಗಳು

a. ಅ **b.** ಬ **c.** ಕ **d.** ಡ **e.** ಅ **f.** ಬ

ಜಾನ್ : ಮುಂದಿನ ಪಾಠದಲ್ಲಿ ವಾಕ್ಯಗಳ ನಮೂನೆಯನ್ನು ಕಲಿಯೋಣ. ಇಂಗ್ಲಿಷ್‌ನಲ್ಲಿ ಮಾತಾಡಲಿಕ್ಕೆ ಸಂಭಾಷಣೆ ಮಾಡಲಿಕ್ಕೆ ಸುಲಭ ಆಗುವುದು.

ಕೆಳಗಿನ ಪುಸ್ತಕಗಳ ಲೇಖಕರಾರು

- ಅಫೆಂಟ್ ಆಫ್ ದಿ ಎವರೆಸ್ಟ್
  - ಜಾನ್ ಹಂಟ್
- ಬಾರ್ನ್‌ಫ್ರೀ
  - ಜಾಯ್ ಅಡಮನ್
- ಬಿಟ್ಟರ್ ಸ್ವೀಟ್
  - ನೋಯಲ್ ಕೋವರ್ಡ್
- ಫ್ರೆಂಡ್ಸ್ ನಾಟ್ ಮಾಸ್ಟರ್
  - ಅಯೂಬ್ ಖಾನ್
- ಲೇಡಿ ಚಟರ್ಲೀಸ್ ಲವರ್
  - ಡಿ.ಎಚ್. ಲಾರೆನ್ಸ್
- ಟೈಮ್ ಮೆಷಿನ್
  - ಹೆಚ್. ಜಿವೆಲ್ಸ್
- ದಿರೆಕ್
  - ಟಾಗೂರ
- ಜಂಗಲ್‌ಬುಕ್
  - ರುಡ್‌ಯಾರ್ಡ್‌ಕಿಪ್ಲೆಂಗ್
- ಎರೋನಾಟಿಕ್ಸ್
  - ಸರ್ ಜಾರ್ಜ್‌ಕೇಲೇ
- ಹ್ಯೂಮನ್ ಫ್ಯಾಕ್ಟರ್
  - ಗ್ರಹಾಂಗ್ರೀನ್
- ಪೆರಿಮೇಸನ್
  - ಅರ್ಲೆಸ್ಟಾಗ್ಲಿ ಗಾರ್ಡನರ್
- ದಿ ಟೈಗರ್ಸ್ ಡಾಟರ್
  - ಬಾಟಿಸೆಲ್ಲಿ
- ಎ ಹಿಸ್ಟರಿ ಆಫ್ ಅಗ್ರಿಕಲ್ಚರಲ್ ಇನ್ ಇಂಡಿಯಾ
  - ಎಂ.ಎಸ್. ರಾಂಧವ
- ನೇಚರ್‌ಕ್ಯೂರ್
  - ಮೊರಾರ್ಜಿದೇಸಾಯಿ
- ತಮಸ್
  - ಭೀಷ್ಮ ಸಾಹನಿ

ಸಂಗ್ರಹ: ಶ್ರೀಕಾಂತ ಹ. ಪಾಟೀಲ

ಶಾಸಕಾಂಗವನ್ನು ಬೇರೆ ಬೇರೆ ದೇಶಗಳಲ್ಲಿ ವಿವಿಧ ಹೆಸರುಗಳಿಂದ ಕರೆಯಲ್ಪಡುತ್ತಿದ್ದು, ಅವುಗಳ ಹೆಸರುಗಳು ಈ ಕೆಳಗಿನಂತಿವೆ.

ದೇಶ	ಶಾಸಕಾಂಗದ ಹೆಸರು
ಆಫ್‌ಘಾನಿಸ್ತಾನ	ಶೊರಾ
ಅಲ್ಬೇನಿಯಾ	ಪಿಪಲ್ಸ್ ಅಸೆಂಬ್ಲಿ
ಆಸ್ಟ್ರೇಲಿಯಾ	ನ್ಯಾಷನಲ್ ಅಸೆಂಬ್ಲಿ
ಬಾಂಗ್ಲಾದೇಶ	ಜತಿಯಾ ಸಂಗಸದ್
ಭಾರತ	ಸಂಸತ್ತು
ಭೂತಾನ್	ತ್ಸಂಗ್ಡು
ಬಲ್ಗೇರಿಯಾ	ನರೋದ್ನಾ ಸುಬ್ರೆನಿ
ಕೆನಡಾ	ಪಾರ್ಲಿಮೆಂಟ್
ಕೊಲಂಬಿಯಾ	ಕಾಂಗ್ರೆಸ್
ಡೆನ್ಮಾರ್ಕ್	ಫೋಕೆಟರಿಂಗ್
ಇಥಿಯೋಪಿಯಾ	ಕೆರಗೊ
ಐರ್ಲ್ಯಾಂಡ್	ಆಲ್‌ಥಿಂಗ್
ಇರಾನ್	ಮಜ್ಲೀಸ್
ಜಪಾನ್	ಡಯಟ್
ನೆದರ್‌ಲ್ಯಾಂಡ್	ಸ್ಟೆಟನ್ ಜನರಲ್

FORM IV

Statement about ownership and other particulars about newspaper "BISILA BADUKU" as required to be published under Section 19-D(b) of the Press and Registration of Books Act, read with Rule 8 of the registration of Newspapers (Central) Rules, 1956.

1. Place of Publication : Bangalore
2. Periodicity of Publication: Monthly
3. Printer: Chandrakanta Vaddu, Citizen of India, 473, I Cross, I Block, III Stage, Near Water Tank Bus Stop, Basaveshwarnagar, Bangalore-79.
4. Publisher: Chandrakanta Vaddu, Citizen of India, 473, I Cross, I Block, III Stage, Near Water Tank Bus Stop, Basaveshwarnagar, Bangalore-79.
5. Editor : Chandrakanta Vaddu, Citizen of India, 473, I Cross, I Block, III Stage, Near Water Tank Bus Stop, Basaveshwarnagar, Bangalore-79.
6. Printing : M.N.S. Enterprises, Bhattarahalli, Old Madras Road, Bangalore- 49.

I, Chandrakanta Vaddu, hereby declare that the particulars given above are true to the best of my knowledge and belief.

Sd/-
(Chandrakanta Vaddu)
Publisher.

Date : 28.2.99

ಕೃತಿ-ಕರ್ತೃ

1. ಪರ್ಸನಾಲಿಟಿ - ಅಶೋಕ ಮೆಹತ
2. ಪಥೇರ್ ಪಾಂಚಾಲಿ - ವಿಭೂತಿ ಭೂಷಣ
3. ಪ್ಯಾಸೇಜ್ ಟು ಇಂಗ್ಲೆಂಡ್ - ನಿರದ್ ಸಿ. ಚೌಧರಿ
4. ಪಾಸ್ಟ್ ಅಂಡ್ ಪ್ರೆಸೆಂಟ್ - ಥಾಮಸ್ ಕಾರ್ಲೈಲ್
5. ಬಿಟ್ವೀನ್ ಜಿ. ಲೈನ್ಸ್ - ಕುಲದೀಪ್ ನಯ್ಯರ್
6. ಬುದ್ಧಚರಿತಂ - ಅಶ್ವಘೋಷ
7. ಭಗವದ್ಗೀತಾ - ವೇದವ್ಯಾಸ
8. ಭಾರತ ಭಾರತಿ - ಮೈಥಿಲಿ ಶರಣಗುಪ್ತ
9. ಭೂತಯ್ಯನ ಮಗ ಅಯ್ಯು - ಗೊರೂರು ರಾಮಸ್ವಾಮಿ ಅಯ್ಯಂಗಾರ್
10. ಮಹಾಭಾರತ - ವೇದವ್ಯಾಸ
11. ಮಂಕುತಿಮ್ಮನ ಕಗ್ಗ - ಡಿ.ವಿ.ಜಿ.
12. ಮದರ್ - ಮ್ಯಾಕ್ಸಿಂ ಗಾರ್ಕಿ
13. ಮಸಣದ ಹೂವು - ತ.ರಾ.ಸು.
14. ಮಾಲ್ಗುಡಿ ಡೇಸ್ - ಆರ್.ಕೆ. ನಾರಾಯಣ
15. ಮಾಳವಿಕಾಗ್ನಿ ಮಿತ್ರ - ಕಾಳಿದಾಸ
16. ಮ್ಯಾನ್ ಅಂಡ್ ಸೂಪರ್ ಮ್ಯಾನ್ - ಬರ್ನಾರ್ಡ್‌ಷಾ
17. ಮ್ಯಾನ್ ದಿ ಅನ್‌ನೋನ್ - ಲೆವಿಸ್ ಕೆರೋಲ್
18. ಮ್ಯಾರೇಜ್ ಅಂಡ್ ಮಾರಲ್ಸ್ - ಬರ್ಟ್ರಂಡ್ ರಸೆಲ್
19. ಮಾಲತಿಮಾಧವ - ಭವಭೂತಿ
20. ಮೆರವಣಿಗೆ - ಗೊರೂರು ರಾಮಸ್ವಾಮಿ ಅಯ್ಯಂಗಾರ್
21. ಮೈಸೂರು ಮಲ್ಲಿಗೆ - ಕೆ.ಎಸ್. ನರಸಿಂಹಸ್ವಾಮಿ
22. ಮೈ ಎಕ್ಸ್‌ಪೆರಿಮೆಂಟ್ಸ್ ವಿತ್ ಟ್ರೂಥ್ - ಎಂ.ಕೆ. ಗಾಂಧಿ
23. ಯಮ - ಮಹಾದೇವಿವರ್ಮ
24. ಯಯಾತಿ - ವಿ.ಎಸ್. ಖಾಂಡೇಕರ
25. ಯಶೋದರ - ಮೈಥಿಲಿ ಶರಣಗುಪ್ತ
26. ರಘುವಂಶ - ಕಾಳಿದಾಸ
27. ರತ್ನಾವಳಿ - ಹರ್ಷವರ್ಧನ
28. ರಾಮಾಯಣ ದರ್ಶನಂ - ಕುವೆಂಪು

ಸಿಆರ್‌ಪಿಎಫ್‌ನಲ್ಲಿ ಗ್ರೂಪ್ 'ಸಿ' ಹುದ್ದೆಗಳಿಗೆ ನೇಮಕಾತಿ

ಸಿಆರ್‌ಪಿಎಫ್ ಇಲ್ಲಿ ಕೆಳಕಂಡ ಗ್ರೂಪ್ 'ಸಿ' ಹುದ್ದೆಗಳಿಗಾಗಿ ನೇಮಕಾತಿಯನ್ನು ಗ್ರೂಪ್ ಸೆಂಟರ್, ಸಿಆರ್‌ಪಿಎಫ್, ಯಲಹಂಕ, ಬೆಂಗಳೂರು. ಇಲ್ಲಿ 15.3.1999ರಂದು ನಡೆಸಲಾಗುವುದು. ವಿವರಗಳು ಇಂತಿವೆ.

ಕ್ರ.ಸಂ.	ಹುದ್ದೆಯ ಹೆಸರು	ಖಾಲಿ ಹುದ್ದೆಗಳ ಸಂಖ್ಯೆ	ಮೀಸಲಾತಿ
1.	ಕಾನ್‌ಸ್ಟೇಬಲ್ (ಫಿಟ್ಟರ್)	04	(ಓಬಿಸಿಗೆ ಎಲ್ಲಾ ಹುದ್ದೆಗಳು ಮೀಸಲು)
2.	ಕಾನ್‌ಸ್ಟೇಬಲ್ (ಕಾರ್ಪೆಂಟರ್)	01	
3.	ಕಾನ್‌ಸ್ಟೇಬಲ್ (ಪೈಂಟರ್)	01	

ಅರ್ಹತಾ ಷರತ್ತುಗಳು

ಎತ್ತರ

ಕರ್ನಾಟಕ, ಕೇರಳ, ಆಂಧ್ರಪ್ರದೇಶ, ತಮಿಳುನಾಡು, ಪಾಂಡಿಚೇರಿ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಕ್ಕೆ ಸೇರಿದ ಅಭ್ಯರ್ಥಿಗಳು 167.6 ಸೆ.ಮೀ. ಮತ್ತು ಇತರರಿಗೆ 170 ಸೆ.ಮೀ.

ತೂಕ

ಎತ್ತರಕ್ಕೆ ತಕ್ಕಂತೆ ಅಂದರೆ 167.5 ಸೆ.ಮೀ. ಗಳಿಗೆ 48.8 ಕೆ.ಜಿ (1 ಸೆ.ಮೀ. ಎತ್ತರದಲ್ಲಿ ಪ್ರತಿ ಹೆಚ್ಚಿನ ಎತ್ತರಕ್ಕೆ 0.71 ಕೆ.ಜಿ.ಯ ಹೆಚ್ಚುವರಿ ತೂಕ)

ಎದೆಯಳತೆ

80-85 ಸೆ.ಮೀ.ಗಳು (ವಿಸ್ತತಗೊಳ್ಳದಾಗ - ವಿಸ್ತೃತಗೊಂಡಾಗ)

ದೃಷ್ಟಿ

ಒಂದು ಕಣ್ಣಿನ ದೃಷ್ಟಿ 6/6ಕ್ಕಿಂತ ಕಡಿಮೆ ಇರಬಾರದು ಮತ್ತು ಇನ್ನೊಂದು 6/9ಕ್ಕಿಂತ ಕಡಿಮೆ ಇರಬಾರದು. ಅಂದರೆ ಬಲಗೈಯಲ್ಲಿ ಬರೆಯುವ ವ್ಯಕ್ತಿಯ ಬಲಗಣ್ಣಿನ ದೃಷ್ಟಿ ಕನ್ನಡಕವಿಲ್ಲದೇ 6/6 ಮತ್ತು ಎಡಗೈಲಿ ಬರೆಯುವ ವ್ಯಕ್ತಿಯ ಎಡಗಣ್ಣಿನ ದೃಷ್ಟಿ 6/6 ಮತ್ತು ಬಣ್ಣ ಗುರುತಿನಿಂದ ಮುಕ್ತವಾಗಿರಬೇಕು.

ವಿದ್ಯಾರ್ಹತೆ

ಎಸ್.ಎಸ್.ಎಲ್.ಸಿ./ಮೆಟ್ರಿಕ್ಯುಲೇಷನ್.

ತಾಂತ್ರಿಕ ವಿದ್ಯಾರ್ಹತೆ

ಕ್ರ.ಸಂ. 1ಕ್ಕೆ ಐಟಿಐನಂತಹ ಮನ್ನಣೆ ಪಡೆದ ಸಂಸ್ಥೆಯೊಂದರಿಂದ ಮೋಟಾರ್ ಮೆಕ್ಯಾನಿಕ್ ಕೋರ್ಸ್ ತೇರ್ಗಡೆಯಾಗಿರಬೇಕು. ಜೊತೆಗೆ ಒಂದು ವರ್ಷ ಪ್ರಾಯೋಗಿಕ ಅನುಭವ ಹೊಂದಿರಬೇಕು. ಕ್ರ.ಸಂ. 2ಕ್ಕೆ ಮತ್ತು 3ಕ್ಕೆ ಅವರ ವೃತ್ತಿ ಕೆಲಸವನ್ನು ಅರಿತಿರಬೇಕು.

ವಯಸ್ಸು

15-3-1999ರಂದು ಇದ್ದಂತೆ 18-26ರ ನಡುವೆ

ವಾಸಸ್ಥಾನ

ನಿರ್ಬಂಧವಿಲ್ಲ (ಅಖಿಲ ಭಾರತ ಆಧಾರಿತ)

ವೇತನಶ್ರೇಣಿ

ರೂ.3050-75-3950-80-4590 ಜೊತೆಗೆ ಕಾಲಕಾಲಕ್ಕೆ ಕೇಂದ್ರ ಸರಕಾರಿ ನೌಕರರಿಗೆ ಗ್ರಾಹ್ಯವಾದಂತೆ ಸಾಮಾನ್ಯ ಭತ್ಯೆಗಳು ಉಚಿತ ಸಮವಸ್ತ್ರ ವೈದ್ಯಕೀಯ ನೆರವು, ಸ್ಥಳಾವಕಾಶ, ಪಡಿತರ ವೆಚ್ಚ ಹಾಗೂ ಉಚಿತ ರೈಲ್ವೆ ವಾರಂಟ್/ಎಲ್‌ಟಿಸಿ ಇತ್ಯಾದಿ.

ನೇಮಕಾತಿ ಸ್ಥಳ

ಗ್ರೂಪ್ ಸೆಂಟರ್, ಸಿಆರ್‌ಪಿಎಫ್, ಯಲಹಂಕ, ಬೆಂಗಳೂರು-64.

ಸಾಮಾನ್ಯ ಷರತ್ತುಗಳು

ದೈಹಿಕ ವಿಕಲತೆಗಳಾದ ಉಗ್ಗು ಮಾತು, ಅಂಗವಿಕಲತೆ, ವೆರಿಕೋಸ್ ವೈನ್ಸ್, ತಾಗುಮಂಡಿ, ಬಾಗಿದ ಕಾಲುಗಳು, ಚಪ್ಪಟೆ ಪಾದವಿರುವಂತಹ ಅಭ್ಯರ್ಥಿಗಳು ಅರ್ಹರಾಗಿರುವುದಿಲ್ಲ.

ಆಯ್ಕೆ ಪ್ರಕ್ರಿಯೆ

ಕೆಳಕಂಡ ಪರೀಕ್ಷೆಗಳನ್ನು ನಡೆಸಲಾಗುವುದು.

(ಎ) ದೈಹಿಕ ಸಾಮರ್ಥ್ಯತಾ ಪರೀಕ್ಷೆ -8 ನಿಮಿಷಗಳಲ್ಲಿ ಒಂದು ಮೈಲಿ ದೂರ ಓಡಬೇಕು.

(ಬಿ) ವೃತ್ತಿ ಪರೀಕ್ಷೆ/ಯೋಗ್ಯತಾ ಪರೀಕ್ಷೆ.

(ಸಿ) ಎದೆಯ ಎಕ್ಸ್‌ರೇ ಸೇರಿದಂತೆ ವಿವರವಾದ ವೈದ್ಯಕೀಯ ಪರೀಕ್ಷೆ.

(ಡಿ) ಸಂದರ್ಶನ.

ಆಯ್ಕೆಯನ್ನು ಸಂಪೂರ್ಣವಾಗಿ ಪ್ರತಿಭೆ ಮೇಲೆ ಅಂದರೆ ಪಡೆದ ಅಂಕಗಳು, ದಕ್ಷತೆ ಹಾಗೂ ವಿದ್ಯಾರ್ಹತೆ ಇತ್ಯಾದಿ ಆಧಾರದ ಮೇಲೆ ಮಾಡಲಾಗುವುದು.

ಇತರೆ ಷರತ್ತುಗಳು

(ಎ) ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಆಯ್ಕೆ/ಪರೀಕ್ಷೆಗೆ ಹಾಜರಾಗಬೇಕು ಮತ್ತು ಟಿಎ/ಡಿಎ ಗ್ರಾಹ್ಯವಾಗಿರುವುದಿಲ್ಲ. ಪರೀಕ್ಷೆ/ಆಯ್ಕೆ ಸಮಯದಲ್ಲಿ ಯಾವುದೇ ಗಾಯ ಉಂಟಾದಲ್ಲಿ ಅವುಗಳಿಗೆ ಇಲಾಖೆಯು ಯಾವುದೇ ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ ಮತ್ತು ಯಾವುದೇ ಪರಿಹಾರ ನೀಡಲಾಗುವುದಿಲ್ಲ.

(ಬಿ) ಈ ಬಗ್ಗೆ ಯಾವುದೇ ಅರ್ಜಿ ಸಲ್ಲಿಸಬೇಕಾಗಿಲ್ಲ. ಓಬಿಸಿ ಪ್ರವರ್ಗ ಅಪೇಕ್ಷಿತ/ಅರ್ಹ ಅಭ್ಯರ್ಥಿಗಳು ಗ್ರೂಪ್ ಸೆಂಟರ್, ಸಿಆರ್‌ಪಿಎಫ್, ಯಲಹಂಕ, ಬೆಂಗಳೂರು (ಕರ್ನಾಟಕ) ಇಲ್ಲಿ 15-3-99ರಂದು 1000 ಗಂಟೆಗೆ ಮೂಲ ಅಗತ್ಯ ವಿದ್ಯಾ ಪ್ರಮಾಣ

ಪತ್ರ, ಹುಟ್ಟಿದ ದಿನಾಂಕ ಪ್ರಮಾಣ ಪತ್ರ, ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳ ನಾಲ್ಕು ಪ್ರತಿಗಳು, ಅನುಭವದ ಪ್ರಮಾಣ ಪತ್ರ ಮತ್ತು ತಹಸೀಲ್ದಾರ್ ದರ್ಜೆಗಿಂತ ಕಡಿಮೆ ಇಲ್ಲದ ದರ್ಜೆಯ ಸಮರ್ಥ ಅಧಿಕಾರಿಯಿಂದ ನೀಡಲ್ಪಟ್ಟ ಜಾತಿ ಪ್ರಮಾಣ ಪತ್ರದೊಂದಿಗೆ ನೇಮಕಾತಿ ಮಂಡಳಿ ಮುಂದೆ ಹಾಜರಾಗಬೇಕು.

(ಸಿ) ಅಭ್ಯರ್ಥಿಗಳು ಆಯ್ಕೆ ಪ್ರಕ್ರಿಯೆಗಾಗಿ ತಮ್ಮ ಸ್ವಂತ ವ್ಯವಸ್ಥೆಗಳಲ್ಲಿ ಎರಡರಿಂದ ಮೂರು ದಿನಗಳವರೆಗೆ ತಂಗಲು ಸಿದ್ಧರಿರಬೇಕು ಮತ್ತು ಎದೆಯ ಎಕ್ಸ್‌ರೇಗೆ ಹಣ ಪಾವತಿ ಮಾಡಬೇಕು.

(ಡಿ) ಮೇಲ್ಕಂಡ ಹುದ್ದೆಗಳಿಗಾಗಿ ಅರ್ಹತಾ ಪರೀಕ್ಷೆಯನ್ನು ಅಧಿಕಾರಿಗಳ ಮಂಡಳಿಯೊಂದು ನಡೆಸುವುದು ಮತ್ತು ಪ್ರತಿಭಾ ಪಟ್ಟಿಯನ್ನು ಸಿದ್ಧಪಡಿಸುವುದು. ಕೆಲಸದ ಪರೀಕ್ಷೆಯಲ್ಲಿ ಅರ್ಹರಾದ ಎಲ್ಲಾ ಅರ್ಹ ಅಭ್ಯರ್ಥಿಗಳು ಪ್ರತಿಭಾ ಪಟ್ಟಿ ತಯಾರಿಸಲು ವೈದ್ಯಕೀಯವಾಗಿ ಪರೀಕ್ಷೆಗೊಳಪಡಬೇಕು. ಸಂದರ್ಶನಕ್ಕೆ ಹಾಜರಾಗಬೇಕು. ಹಿರಿತನದ ಕ್ರಮಾನುಸಾರ ಅಂತಿಮ ಪ್ರತಿಭಾಪಟ್ಟಿಯಿಂದ ನೇಮಕಾತಿ ಮಾಡಲಾಗುವುದು.

(ಇ) ಅಭ್ಯರ್ಥಿಗಳನ್ನು ಭಾರತದಲ್ಲಿ ಅಥವಾ ಭಾರತದ ಹೊರಗೆ ಯಾವುದೇ ಸ್ಥಳಕ್ಕೆ ನೇಮಕ ಮಾಡಬಹುದಾಗಿದೆ.

(ಎಫ್) ಸಿಆರ್‌ಪಿಎಫ್‌ನಲ್ಲಿ ಅವರ ನೇಮಕಾತಿಗೆ ಆಯ್ಕೆಯಾದ ಅಭ್ಯರ್ಥಿಗಳು 1949ರ ಸಿಆರ್‌ಪಿಎಫ್ ಅಧಿನಿಯಮ 1955ರ ಸಿಆರ್‌ಪಿಎಫ್ ನಿಯಮಗಳು ಕಾಲಕಾಲಕ್ಕೆ ಅನ್ವಯವಾಗುವ ಕೇಂದ್ರ ಸರಕಾರದ ನಿಯಮಗಳು ಹಾಗೂ ನಿಬಂಧನೆಗಳಿಗೆ ಒಳಪಡುವರು.

ಜಿ) ಯಾವುದೇ ರೂಪದಲ್ಲಿ ಪ್ರಚಾರ ಪ್ರಭಾವ ಬೀರಿದಲ್ಲಿ ಅಥವಾ ಶಿಫಾರಸ್ಸು ತಂದಲ್ಲಿ ಅಂತಹ ಅಭ್ಯರ್ಥಿಯನ್ನು ಯಾವುದೇ ಸೂಚನೆ ನೀಡದೇ ಪರೀಕ್ಷೆಗಳಿಗೆ ಹಾಜರಾಗಲು ಅನರ್ಹಗೊಳಿಸಲಾಗುವುದು.

ಎಚ್) ಜಾಹೀರಾತುಗೊಳಿಸಲಾದ ಹುದ್ದೆಗಳನ್ನು ಆಡಳಿತದ ಅಗತ್ಯಕ್ಕೆ ತಕ್ಕಂತೆ ವ್ಯತ್ಯಾಸ ಬದಲಾವಣೆ/ ಮಾರ್ಪಾಡು ಮಾಡಬಹುದಾಗಿದೆ. ■

ಅಂಚೆ ತೆರಪಿನ ಶಿಕ್ಷಣಕ್ಕೆ ಪರೀಕ್ಷಾ ಶುಲ್ಕ

ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ಮೂಲಕ ನೋಂದಾಯಿಸಿ ಕೊಂಡಿರುವ ವಿದ್ಯಾರ್ಥಿಗಳು 1999ರ ಏಪ್ರಿಲ್, ಮೇ ಹಾಗೂ ಜೂನ್‌ನಲ್ಲಿ ನಡೆಯಲಿರುವ ಪರೀಕ್ಷೆಗೆ ಕೆಳಕಂಡಂತೆ ಪರೀಕ್ಷಾ ಶುಲ್ಕ ಪಾವತಿ ಮಾಡಬೇಕು ಎಂದು ಬೆಂಗಳೂರು ವಿಶ್ವ ವಿದ್ಯಾಲಯ ಪ್ರಕಟಣೆ ತಿಳಿಸಿದೆ.

ಬಿ.ಎ, ಬಿ.ಕಾಂ, ಮತ್ತು ಬಿ.ಬಿ.ಎಂ. ಕೋರ್ಸ್ ವಿದ್ಯಾರ್ಥಿಗಳು ದಂಡವಿಲ್ಲದೆ ಮಾರ್ಚ್ 5 ರೊಳಗೆ ಹಾಗೂ ದಂಡ ಸಹಿತ ಮಾರ್ಚ್ 16ರೊಳಗೆ ಶುಲ್ಕ ಪಾವತಿಸಬಹುದು. ಎಂ.ಎ, ಎಂ.ಕಾಂ ಮತ್ತು ಎಂ.ಎಸ್ಸಿ (ಗಣಿತ) ಹಾಗೂ ಸ್ನಾತಕೋತ್ತರ ಕೋರ್ಸ್‌ಗಳ ವಿದ್ಯಾರ್ಥಿಗಳು ಮಾರ್ಚ್ ಒಂದರೊಳಗೆ ದಂಡವಿಲ್ಲದೆ ಹಾಗೂ ಮಾರ್ಚ್ 22 ರೊಳಗೆ ದಂಡ ಸಹಿತ ಪಾವತಿಸಬೇಕು. ಹೆಚ್ಚಿನ ಮಾಹಿತಿಗೆ ನಿರ್ದೇಶಕರು, ಅಂಚೆ ಮತ್ತು ತೆರಪಿನ ನಿರ್ದೇಶನಾಲಯ, ಡಾ. ಅಂಬೇಡ್ಕರ್ ವೀಧಿ, ಈ ವಿಳಾಸದಲ್ಲಿ ಸಂಪರ್ಕಿಸಬಹುದು.

INDIAN INSTITUTE OF SCIENCE BANGALORE

ADMISSIONS FOR THE ACADEMIC YEAR 1999-2000

Indian Institute of Science, an internationally renowned Institute founded by JN Tata in 1909 admits highly talented students for Research and Post graduate program mes in frontier areas in science and Engineering on an all India basis and strictly on merit. It has excellent Laboratory computational, Library and Infrastructure facilities. It provides excellent opportunities to students to participate in exploring new horizons in Science & Engineering Research and to take up major technological challenges.

I. RESEARCH PROGRAMMES

A. REGULAR

(1) Science Faculty - Ph D

Astronomy & Astrophysics, Biochemistry, Ecological Sciences, Inorganic & Physical Chemistry, Mathematics, Microbiology & Cell Biology, Molecular Biophysics, Molecular Reproduction, Development and Genetics, Organic Chemistry, Physics, Solid State & Structural Chemistry, Theoretical Studies. Materials Research - Ph D & M Sc (Engg).

2) Engineering Faculty - Ph D & M Sc (Engg)

Aerospace, Atmospheric & Oceanic Sciences, Chemical, Civil, Computer Science & Automation, Electrical communication, Electrical, Electronics Design & Technology, High Voltage, Instrumentation, Management Studies, Mechanical, Metallurgy, Supercomputer Education & Research.

Qualification (Q.i) Science Faculty Ph D

a) Master's degree in Science in an appropriate field or agriculture or MBBS or M Pharma or MV Sc or

b) Bachelor's degree in Engineering or equivalent.

Engineering Faculty PhD

(c) Master's degree in an appropriate field of Engineering or Technology.

MSc (Engg) : One of the following with specialization as applicable to each programme -

d) Bachelor's degree in Engineering or Technology

e) Master's degree in Computer Science/ Computer Applications, Economics, Business Administration, Operations Research, Social Work, Psychology, Mathematics, Statistics, Chemistry or Geology

f) BSc (with Mathematics, Physics & Chemistry) followed by AMIE/AMAeSI/AMIIChE/ AMIIM/GRAD.IETE/ AMIETE.

(Q.ii) Candidates should have a minimum second class or equivalent grade (Pass class for SC/ST) in all the above cases.

(Q.iii) All candidates should qualify in any one of the tests - GATE or CSIR-UGC NET for JRF or IISc Entrance test scheduled on 9.5.99. However, those with a First class ME/M Tech applying for admission in Engineering Faculty need not appear in these tests.

B. INTEGRATED Ph D IN BIOLOGICAL (BS), CHEMICAL (CS) AND PHYSICAL SCIENCES (PS)

Qualification : First Class (Pass class for SC/ST) BSc under 10+2+3 system.

a) **BS** - BSc in Physical, chemical or Biological Sciences (including Pharmaceutical, Veterinary and Agricultural Sciences) with Chemistry/ Biochemistry as one of the subjects at the BSc level and Mathematics or Chemistry or Physics at the PUC/Plus 2 level.

b) **CS** - BSc with Chemistry as one of the main subjects with Mathematics at PUC/Plus 2 level.

c) PS - BSc with Physics as a main subject.

C. EXTERNAL REGISTRATION PROGRAMME FOR CANDIDATES SPONSORED BY R & D ORGANISATION/INDUSTRY ONLY.

1) Science Faculty -Ph D

Mathematics, Microbiology & Cell Biology, Organic Chemistry, Inorganic & Physical Chemistry. Materials Research - Ph D & M Sc (Engg)

2) Engineering Faculty - Ph D & MSc (Engg) programmes

All areas listed above in **I.A (2)**

Qualification : Same as indicated above in I.A (Q.1) & (Q.II) **Experience :** 2 years experience in current employment. Age : Not to exceed 45 years as on 1.4.99.

II. MASTERS DEGREE PROGRAMMES

1) ME (1 1/2 years) : Aerospace, Chemical, Civil, Computer Science & Engineering, Electrical, High voltage, Manufacturing Engineering, Mechanical, Metallurgy, Microelectronics, Signal Processing, Systems Science & Automation, Telecommunication.

Qualification : Same as for Research indicated above in I.A (Q.i) d) or f) and valid GATE score.

2) M Tech (1 1/2 years) : a) Electronics Design & Technology **b)** Instrumentation **c)** Satellite Technology & Applications and **d)** Computational Science (New Programme).

Qualification : For programmes **(a), (b) & (c)** same as for Research indicated above in **i.A (Q.1) (d) or (f) and valid GATE Score.**

However for **(a)** students with MSc Physics with Electronics and 2 years experience, for **b)** MSc Instrumentation and for **C)** MSc in Physics with Electronics or MSc Electronics are also eligible.

For Programme **d)** - BE/ B.Tech in any discipline, or MSc in Maths, Physics or Statistics, or MSc in Chemistry or Biological Sciences with Mathematics as subject at the BSc level and valid GATE score.

3) M Des (2 years) : Product Design & Engineering

Qualification : Bachelor's Degree in Engineering/Technology/Architecture or Post BSc AMIE and valid GATE or CEED score.

4) MBA (2 years) Management Studies (New programme - replaces the existing M Tech programme)

Qualification: Bachelor's degree in Engineering or Technology and valid GATE score.

5) FLEXIBLE DURATION ME PROGRAMME: High Voltage

Qualification : Same as for Research in I.A (Q.1) (d) or (f) with 2 years experience in an R & D Organisation / Industry.

Sponsored Candidates : Limited seats are available for candidates sponsored by Industries for M Tech in Electronics Design & Technology and M Des Programmes.

RESERVATION FOR SC/ST CANDIDATES : As per Government of India regulations.

Scholarships: All students receive financial support except those admitted to MBA programme.

HOW TO GET INFORMATION BROCHURE CUM APPLICATION FORM

Information brochure cum applications forms can be had from the following **CANARA BANK** Branches by **paying Rs. 350/- Bangalore** (IISc. Campus, Indiranagar, Jayanagar Complex, Majestic) **Gulbarga** (Fort Road) **Mangalore** (Hampanakatta) **Mysore** (Statue square)

Forms can also be obtained directly by sending **a draft Rs. 350/-** drawn in favour of **"Registrar, Indian Institute of Science, Bangalore"** addressed to the Assistant Registrar, Admissions Unit, Indian Institute of Science, Bangalore - 560 012 together with 2 address slips, furnishing the details of qualification and the programme to which admission is sought. Non sponsored SC/ST candidates can obtain the forms by sending a draft for Rs. 100/- alongwith a copy of attested Caste/Tribe Certificate & 2 address slips (directly from Institute only).

Candidates applying for admission under External Registration Programme should write directly to the Institute as above with a DD for Rs. 750/- drawn in favour of

**"Registrar,
Indian Institute of Science,
Bangalore".**

IMPORTANT DATES

Issue of Application forms at Banks & Institute	Friday, 5 February 1999
Last date for Issue at Banks & Institute (by post)	Wednesday, 10 March 1999
Last date for obtaining application forms in person at IISC only for regular ME/M Tech/M Des/MBA programmes	Friday, 9 April 1999
Last date for receipt of completed forms - for Research, Int. Ph D & Sponsored ME/M Tech / M Des - for regular ME/M Tech/M Des/ MBA	 Monday, 15 March 1999 Friday, 9 April 1999
IISc Entrance Test	**Sunday, 9 may 1999**

CENTRES : Bangalore, Mangalore.

Interview : M Tech 17-29 May, MBA & M Des 20-21 May, Int. PhD 14-16 June & Research 21-25 June 1999

MID YEAR JANUARY 2000 ADMISSIONS : RESEARCH ONLY
(REGULAR AND EXTERNAL REGISTRATION PROGRAMMES)
Applications will be considered for Research Programme (Ph D/MSc(Engg) in the Engineering Faculty and also in Mathematics (Ph D) in Science Faculty.

Candidates can apply for Mid Year Admission programme at any time before	**Friday 29, October 1999**

Candidates for Programmes **IA, B & II** who have not yet completed their studies and expect to complete before August 14, 1999 are also eligible to apply.


The applicants are encouraged to contact concerned Departments for more details regarding specific academic programmes. Further details can also be obtained by visiting our Home page "http://www.iisc.ernet.in", e-mail: ar@admissions.iisc.ernet.in, aradm@academic.iisc.ernet.in or fax 080-3445413 Phone 3092210. ■

ಪುಸ್ತಕಗಳು

- ಓ ಪುಸ್ತಕಗಳೇ ನೀವು ದೇವ ಮಂದಿರದ ಚಿನ್ನದ ಪಾತ್ರೆಗಳು. ಕೈಯಲ್ಲಿ ಹಿಡಿಯಬಹುದಾದ ಪ್ರಜ್ವಲಿಸುವ ಜ್ಯೋತಿಗಳು.
  - ರಿಚರ್ಡ್ ಡಿ.ಬರಿ
- ಪುಸ್ತಕಗಳು ಸಂತನಿರುವ ಅಥವಾ ಇದ್ದಾನೆಂದು ನಂಬಲಾದ ದೇವ ಮಂದಿರಗಳು.**- ಫ್ರಾನ್ಸಿಸ್ ಬೇಕನ್**
- ಪುಸ್ತಕಗಳು ಇನ್ನು ಹುಟ್ಟಲಿರುವ ಜನಾಂಗದ ಆಸ್ತಿ. **- ಜೋಸೆಫ್. ಎಡಿಸನ್**
- ಪುಸ್ತಕಗಳು ಆಯಾಕಾಲದ ಸಂಸ್ಕೃತಿಯ ಜೀವಂತ ಪ್ರತೀಕ.**- ಎಮರ್ಸನ್**
- ಶಾಸನಗಳು ಸಾಯುತ್ತವೆ ಗ್ರಂಥಗಳಿಗೆ ಸಾಪಿಲ್ಲ.**- ಬುಲ್‌ವರ ಲಿರ್ಟ**
- ಗ್ರಂಥಾಲಯ ಶಿಕ್ಷಣದ ಹೃದಯವಾಗಿದೆ.
  -ಪೌಲಬಕ್
- ಒಂದು ಉತ್ತಮವಾದ ಗ್ರಂಥವನ್ನು ನಾಶಪಡಿಸಿದರೆ, ಒಬ್ಬ ಸಜ್ಜನ ಮನುಷ್ಯನನ್ನು ನಾಶಪಡಿಸಿದಂತೆ. **-ಜಾನ್ ಮಿಲ್ಟನ್**
- ಉತ್ತಮ ಪುಸ್ತಕವು ಜ್ಞಾನಿಯ ಚಿರಂತನ ಚೈತನ್ಯ. **- ಜಾನ್ ಮಿಲ್ಟನ್**
- ಪುಸ್ತಕ ಓದುವ ಸ್ವಾತಂತ್ರ್ಯವಿಲ್ಲದಿದ್ದರೆ ನಾನು ಚಕ್ರವರ್ತಿ ಕೂಡಾ ಆಗಲಾರೆ. **-ಮೆಕಾಲೆ.**
- ಅಮರತ್ವದ ತಿಳಿವು ಪುಸ್ತಕಗಳಿಂದ ಲಭ್ಯವಾದದ್ದು. **-ಎಮರ್‌ಸನ್**
- ಪುಸ್ತಕವೆಂದರೆ ನಮ್ಮನ್ನು ಚಿಂತನೆಗೆ ತೊಡಗಿಸುವ ಒಂದು ಯಂತ್ರ. **- ಐ.ಯ.ರಿಚರ್ಡ್ಸ**
- ಪುಸ್ತಕ ಯೌವನದಲ್ಲಿ ಮಾರ್ಗದರ್ಶಿ, ವೃದ್ಧಾಪ್ಯದಲ್ಲಿ ಮನರಂಜಕ.
  - ಜೆರೆಮಿ ಶಾಲಿಯರ್
- ಅತ್ಯುತ್ತಮ ಪುಸ್ತಕಗಳು ಉತ್ತಮ ಸಂಗಾತಿಗಳು.
  - ಥಿಯೊಡೋಲ್ ಪಾರ್ಕರ್
- ಪುಸ್ತಕ ಪ್ರೇಮಿಯಲ್ಲದವನು ಹಣವಂತನಾದರೂ ದರಿದ್ರನೇ.
  - ಲಾಂಗ್ ಫರ್ಡ್

ಸಂಗ್ರಹ:
ಸಂಗಮೇಶ ನಾ. ಪೋಲೇಶಿ.

■ ಡಾ. ಎಸ್.ಸಿ. ಶರ್ಮಾ



ಮಾರ್ಗದರ್ಶಿ

ಪ್ರಾಧ್ಯಾಪಕರು,
ಆರ್.ವಿ. ಇಂಜಿನಿಯರಿಂಗ್ ಕಾಲೇಜು,
ಮೈಸೂರು ರಸ್ತೆ, ಬೆಂಗಳೂರು - 59.

ರಮೇಶ ರಾಮತೀರ್ಥ

ನಾನು ಈಗ ದ್ವಿತೀಯ ಪಿ.ಯು.ಸಿ. ಓದುತ್ತಿದ್ದೇನೆ ನಾನು TCHಗೆ ಸೇರಲು ಎಷ್ಟು ಅಂಕಗಳನ್ನು ಪಡೆಯಬೇಕು ತಿಳಿಸಿ.

ಟಿ.ಸಿ.ಹೆಚ್. ಮಾಡಲು ಪಿ.ಯು.ಸಿ.ಯಲ್ಲಿ ಕನಿಷ್ಠ ಶೇ.50 ಅಂಕಗಳನ್ನು ಪಡೆದಿರಬೇಕು.

ಶಾಷಸಾಬು, ನಾಗರಹಾಳು

ನಾನು ಬಿ.ಎ.ನಲ್ಲಿ ಶೇ.50ರಷ್ಟು ಅಂಕಗಳನ್ನು ಪಡೆದು ಉತ್ತೀರ್ಣನಾಗಿದ್ದೇನೆ. ಮುಂದೆ CIDಗೆ ಸೇರಬೇಕು. ಇದಕ್ಕೆ ಇರಬೇಕಾದ ಅರ್ಹತೆ ಏನು? ಇದರ ಆಯ್ಕೆಯ ವಿಧಾನ, ಇದಕ್ಕೆ ಪರೀಕ್ಷೆ ಇದೆಯೇ ತಿಳಿಸಿ.

ನೀವು ಸಿ.ಐ.ಡಿ. ವಿಭಾಗಕ್ಕೆ ಸೇರಬೇಕಿದ್ದರೆ ಮೊದಲು ನೀವು ಪೊಲೀಸ್ ಇಲಾಖೆ ಸೇರಬೇಕು. ಪೊಲೀಸ್ ಇಲಾಖೆ ಸೇರಲು ಮುಖ್ಯವಾಗಿ ಪದವೀಧರರಾಗಿ ಉತ್ತಮ ದೇಹದಾರ್ಢ್ಯತೆ ಹೊಂದಿರಬೇಕು. ಪೊಲೀಸ್ ಇಲಾಖೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತೇರ್ಗಡೆಯಾಗಬೇಕು.

ಹೆಸರಿಲ್ಲ

ನಾನು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿ 4 ವರ್ಷಗಳಾದವು. ನನ್ನ ಎಸ್.ಎಸ್.ಎಲ್.ಸಿ. ಅಂಕಗಳು ಬಹಳ ಕಡಿಮೆ ಬಂದಿವೆ. ಅದೇ ಅಂಕಗಳಿಂದ ನಾನು ಮುಂದೆ ಓದಿದ್ದೇನೆ. ಈಗ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಮತ್ತೆ ಬರೆಯಲು ಸಾಧ್ಯವೇ?

ನಿಮಗೆ ಬಂದಿರುವ ಅಂಕಗಳ ಆಧಾರದ ಮೇಲೆ ನೀವು ಈಗಾಗಲೇ ವ್ಯಾಸಂಗ ಮುಂದುವರೆಸಿರುವುದರಿಂದ ಮತ್ತೆ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆಯುವುದು ಅಷ್ಟು ಪ್ರಯೋಜನಕಾರಿಯಲ್ಲ. ನೀವು ಮತ್ತೆ ಪರೀಕ್ಷೆ ಬರೆಯಬಹುದು. ಹೆಚ್ಚಿನ ವಿವರಗಳಿಗೆ ಹತ್ತಿರದ ಸರ್ಕಾರಿ ಪ್ರೌಢಶಾಲೆಯನ್ನು ಸಂಪರ್ಕಿಸಿ.

ದಲ್‌ಬಂಜನ್, ಗದಗ

ನನಗೆ ಈಗ 28 ವರ್ಷ. ವಯಸ್ಸಿನ ಆಧಾರದ ಮೇಲೆ ಬಿ.ಎ., ಎಂ.ಎ. ಪದವಿಯನ್ನು ಮಾಡಬಹುದೆ?

ನಿಮಗೆ 25 ವರ್ಷಗಳಾಗಿರುವುದರಿಂದ ಹಿಂದಿನ ಯಾವುದೇ ವಿದ್ಯಾರ್ಹತೆಯಿಲ್ಲದೆ ನೀವು ಬಿ.ಎ. ಅಥವಾ ಎಂ.ಎ. ಪರೀಕ್ಷೆ ಬರೆಯಬಹುದು.

ಜಿ.ಬಿ. ರಾಜಪ್ಪ, ಬೆಂಗಳೂರು

ನಾನು ಎರಡು ವರ್ಷದ Diploma in Automobile Engineering ವಿದ್ಯಾಭ್ಯಾಸ ಮಾಡಿದ್ದೇನೆ. ಯಾವುದೇ Automobile shopಗೆ ಕೆಲಸಕ್ಕೆ ಹೋದರೆ ಟ್ರೈನಿಂಗ್ ಸರ್ಟಿಫಿಕೇಟ್ ಕೇಳುತ್ತಾರೆ. ನಾನು ಏನು ಮಾಡುವುದು. ಅಂತಹ ಸರ್ವಿಸ್ ಕ್ರೋರ್ಸ್ ಇದ್ದರೆ ತಿಳಿಸಿ. ಫೊರ್‌ಮನ್ Examination ಬರೆಯಬೇಕೆ? ಅದು ಯಾವಾಗ ಎಲ್ಲಿ ಎಂದು ತಿಳಿಸಿ.

ನೀವು ಯಾವುದಾದರು ಆಟೋಮೊಬೈಲ್ ಶಾಪ್‌ನಲ್ಲಿ ಕೆಲಸಮಾಡಿ ಅನುಭವ ಪಡೆಯಿರಿ. ನಂತರ ಬೇರೆ ಕೆಲಸಕ್ಕೆ ಪ್ರಯತ್ನಿಸಿ. ಫೋರ್‌ಮನ್‌ಟ್ರೈನಿಂಗ್ ಸೆಂಟರ್‌ನ ವಿಳಾಸ: ಫೋರ್‌ಮನ್ ಟ್ರೈನಿಂಗ್ ಸೆಂಟರ್, ಸಿ.ಎಂ.ಟಿ.ಐ.ನ ಎದುರು, ತುಮಕೂರು ರೋಡ್, ಬೆಂಗಳೂರು.

ಕೆ.ಎಂ.ಡಿ. ದಸ್ತಗೀರ್, ಮಸ್ಕಿ

ನಾನು ಈಗ ಬಿ.ಕಾಂ. ಅಂತಿಮ ವರ್ಷದಲ್ಲಿ ಓದುತ್ತಿದ್ದೇನೆ. ಬಿ.ಕಾಂ. ನಂತರ ಬಿ.ಎಡ್ ಮುಕ್ತ ವಿಶ್ವವಿದ್ಯಾಲಯದಲ್ಲಿ ಮಾಡಿದರೆ ಕೆಲಸ ಸಿಗುತ್ತದೆಯೇ? ICWA ಎಷ್ಟು ವರ್ಷದ ಕೋರ್ಸ್, ಇದರ ಕಾಲೇಜು ಎಲ್ಲಿದೆ, ಇದನ್ನು ಮಾಡಲು ಬಿ.ಕಾಂ.ನಲ್ಲಿ ಎಷ್ಟು ಅಂಕಗಳು ಪಡೆದಿರಬೇಕು. ಇದನ್ನು ಮಾಡಿದರೆ ಬಹಳ ಉದ್ಯೋಗಾವಕಾಶಗಳು ಇವೆಯೇ?

ಬಿ.ಕಾಂ. ನಂತರ ರೆಗ್ಯುಲರ್ ಬಿ.ಎಡ್. ಮಾಡಲು ಆಗುವುದಿಲ್ಲ. ಬಿ.ಎಡ್. ಮಾಡಬೇಕಿದ್ದರೆ ಅಂಚೆ ಶಿಕ್ಷಣದ ಮೂಲಕ ಮಾಡಬೇಕು. ಹೆಚ್ಚಿನ ವಿವರಗಳಿಗೆ: ಡೈರೆಕ್ಟರ್, ಡೈರೆಕ್ಟೋರೇಟ್ ಆಫ್ ಡಿಸ್ಟನ್ಸ್ ಎಜುಕೇಶನ್, ಅಣ್ಣಾಮಲೈ ಯೂನಿವರ್ಸಿಟಿ, ಅಣ್ಣಾಮಲೈನಗರ - 608 002. ಇಲ್ಲಿ ಸಂಪರ್ಕಿಸಿ.

ಐ.ಸಿ.ಡಬ್ಲ್ಯು.ಎ. ಎರಡರಿಂದ ಮೂರು ವರ್ಷದ ಕೋರ್ಸ್ ಆಗಿದ್ದು, ಇದನ್ನು ಮಾಡಲು ಪದವಿಯಲ್ಲಿ ಶೇ.50 ಅಂಕಗಳನ್ನು ಪಡೆದಿರಬೇಕು. ಹೆಚ್ಚಿನ ವಿವರಗಳಿಗೆ The Institute of cost and works Accountants of India. 12 Suddar Street, Calcutta - 700 016. ಇಲ್ಲಿ ಸಂಪರ್ಕಿಸಿ.

ಜಿ.ಎಲ್.ಹನುಮಂತರಾಯಪ್ಪ, ಎಂ. ಗೊಲ್ಲಪಳ್ಳಿ

ನಾನು ಪಿ.ಯು.ಸಿ.ಯಲ್ಲಿ ಶೇ.57 ಅಂಕಗಳನ್ನು ಪಡೆದು ಉತ್ತೀರ್ಣನಾಗಿದ್ದೇನೆ. TCHಗೆ ಸೀಟು ಸಿಗಲಿಲ್ಲ. ನಾನು SC ಆಗಿರುತ್ತೇನೆ. ನಾನು ಅನಾಥ. ದುಡಿಯಲು ಬೇರೆ ದಾರಿಯಿಲ್ಲ. ನಾನು 'ತೋಟಗಾರಿಕೆ ತರಬೇತಿ' (ಕ್ರಾಫ್ಟ್) ಮಾಡಬೇಕೆಂಬ ಆಸೆ. ಇದರಿಂದ ಉದ್ಯೋಗ ಸಿಗುತ್ತದೆಯೇ? ITI ಮಾಡಿದರೆ ಅದರಿಂದ ಉಪಯೋಗವಾಗುತ್ತದೆಯೇ ತಿಳಿಸಿ.

ನೀವು ಐ.ಟಿ.ಐ ಮಾಡಿದರೆ ಉದ್ಯೋಗ ಅವಕಾಶಗಳು ಹೆಚ್ಚು. ಹೆಚ್ಚಿನ ವಿವರಗಳನ್ನು ಹತ್ತಿರದ ಕಾಲೇಜಿನಿಂದ ಪಡೆಯಿರಿ.

ಹೇಮಂತ್ ಕುಮಾರ್, ಬೆಂಗಳೂರು

ನಾನು ಬಿ.ಎಸ್.ಸಿ. ಮಾಡಿರುತ್ತೇನೆ. ಪ್ರಥಮ ವರ್ಷದಲ್ಲಿ 48%, ದ್ವಿತೀಯ ವರ್ಷದಲ್ಲಿ 49%, ತೃತೀಯ ವರ್ಷದಲ್ಲಿ 50% ಅಂಕಗಳಿಸಿ ತೇರ್ಗಡೆಯಾಗಿರುತ್ತೇನೆ. ನಾನು ಭೌತಶಾಸ್ತ್ರದಲ್ಲಿ ಎಂ.ಎಸ್ಸಿ. ಮಾಡಬೇಕು. ಎಂ.ಎಸ್.ಸಿ. ಮಾಡಲು ಬಿ.ಎಸ್ಸಿ.ಯಲ್ಲಿ ಶೇ. ಎಷ್ಟು ಅಂಕಗಳನ್ನು ಗಳಿಸಿರಬೇಕು. ನಾನು ಗ್ರಾಮೀಣ ಪ್ರದೇಶದವನಾದ್ದರಿಂದ ನನಗೆ ಕೃಪಾಂಕಗಳೇನಾದರೂ ಸಿಗುತ್ತವೆ

ವಿಜಯಭೋರ್ಗಿ, ಯಾದಗಿರಿ

ಪಿ.ಯು.ಸಿ. ಆಧಾರದಿಂದ ಪದವಿಯನ್ನು 3 ವರ್ಷಗಳಲ್ಲಿ ಪಡೆಯಬಹುದಂತೆ ಇದು ನಿಜವೇ? (Jammu University Meerut & Patna University) ಹಾಗಾದರೆ ಯಾವ ರೀತಿ ಸಂಪರ್ಕಿಸಬೇಕು ತಿಳಿಸಿ.

ಪಿ.ಯು.ಸಿ. ಆಧಾರದಿಂದ ಪದವಿಯನ್ನು ನೇರವಾಗಿ ಮತ್ತು ಕರೆಸ್ಪಾಂಡೆನ್ಸ್‌ನಲ್ಲಿ ಮಾಡಬಹುದು. ಕರ್ನಾಟಕದಲ್ಲಿಯೇ ಮುಕ್ತ ವಿಶ್ವವಿದ್ಯಾಲಯಗಳಲ್ಲಿ ಮಾಡಬಹುದು. ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು.

ಆರ್.ಎಂ. ಜೋಶಿ, ತಾವರಗೆರೆ

ನಾನು ಪಿ.ಯು.ಸಿ. ಕಲಾ ವಿಭಾಗದಲ್ಲಿ ಓದುತ್ತಿದ್ದೇನೆ. BAMS ಮಾಡಬೇಕೆಂಬ ಆಸೆ ಇದೆ. ನಾನು ಪಿ.ಯು.ಸಿ. ಕಲಾವಿಭಾಗದಲ್ಲಿ ಮಾಡಿ ಮುಂದೆ BAMS ಮಾಡಬಹುದೇ?

ನೀವು ಕಲಾ ವಿಭಾಗದಲ್ಲಿ ಪಿ.ಯು.ಸಿ. ಓದುತ್ತಿರುವುದರಿಂದ ಬಿ.ಎ.ಎಂ.ಎಸ್. ಮಾಡಲು ಸಾಧ್ಯವಿಲ್ಲ. ವಿಜ್ಞಾನ ವಿಭಾಗದಲ್ಲಿ ಪಿ.ಯು.ಸಿ. ಓದಿದವರು ಬಿ.ಎ.ಎಂ.ಎಸ್. ಮಾಡಬಹುದು.

ಯೇ? ಒಟ್ಟಾರೆ ಶೇ.50 ಅಂಕಗಳನ್ನು ಗಳಿಸಿರಬೇಕೋ ಅಥವಾ ಯಾವ ವಿಷಯದಲ್ಲಿ ಎಂ.ಎಸ್.ಸಿ. ಮಾಡುತ್ತೇವೋ ಅದರಲ್ಲಿ ಮಾತ್ರ 50 ರಷ್ಟು ಅಂಕಗಳನ್ನು ಗಳಿಸಬೇಕೋ ತಿಳಿಸಿ.

ನೀವು ಯಾವ ವಿಷಯದಲ್ಲಿ ಎಂ.ಎಸ್ಸಿ. ಮಾಡಬೇಕೆಂದಿರುವಿರೋ ಅದರಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಿರಬೇಕು. ಕಾಂಪಿಟೀಶನ್ ಕಡಿಮೆ ಇದ್ದಲ್ಲಿ ಕಡಿಮೆ ಅಂಕಗಳಿಗೂ ಸೀಟ್ ಸಿಗಬಹುದು.

ಸುರೇಶ್ ಕೆ.ಎಂ., ಕೋಲಾರ

ನಾನು ಬಿ.ಕಾಂ. ಪದವಿಯಲ್ಲಿ ಶೇ. 42.5 ಅಂಕಗಳನ್ನು ಪಡೆದಿರುತ್ತೇನೆ. ಸರ್ಕಾರಿ ಕೆಲಸ ಸಿಗುವ ಕೋರ್ಸುಗಳನ್ನು ತಿಳಿಸಿ. LLB ಮಾಡಲೋ ಅಥವಾ ICWA ಮಾಡಲೋ ತಿಳಿಯುತ್ತಿಲ್ಲ. ICWA ಬಗ್ಗೆ ಮಾಹಿತಿ ನೀಡಿ.

1. ICWA ಮಾಡಲು ಎಷ್ಟು ಅಂಕಗಳು ಪಡೆದಿರಬೇಕು?
2. ಇದು ಎಷ್ಟು ವರ್ಷದ ಕೋರ್ಸ್?
3. ICWA ಮಾಡುವುದರಿಂದ ಸರ್ಕಾರಿ ಕೆಲಸ ಸಿಗಬಹುದೇ?
4. ICWA ಮಾಡಲು ಬೆಂಗಳೂರಿನಲ್ಲಿರುವ ಕಾಲೇಜುಗಳ ಹೆಸರು ತಿಳಿಸಿ?

ಎಲ್.ಎಲ್.ಬಿ. ಪದವಿಯ ನಂತರ 3 ವರ್ಷದ ಕೋರ್ಸ್ ಐ.ಸಿ.ಡಬ್ಲ್ಯು.ಎ: ಎರಡರಿಂದ ಮೂರು ವರ್ಷದ ಕೋರ್ಸ್ ಆಗಿದ್ದು, ಇದನ್ನು ಮಾಡಲು ಪದವಿಯಲ್ಲಿ ಶೇ.50 ಅಂಕಗಳನ್ನು ಪಡೆದಿರಬೇಕು. ಹೆಚ್ಚಿನ ವಿವರಗಳಿಗೆ The Institute of Cost and Works Accountants of India. 12 Suddar Street, Calcutta - 700 016. **ಇಲ್ಲಿ ಸಂಪರ್ಕಿಸಿ. ನಿಮಗೆ ಯಾವುದರಲ್ಲಿ ಆಸಕ್ತಿಯಿದೆಯೋ ಅದರಂತೆ ಮುಂದುವರೆಯಿರಿ.**

ರಾಜು ಆರ್., ಹರಿಹರ

ನಾನು ದ್ವಿತೀಯ ಪಿ.ಯು.ಸಿ. ಕಲಾ ವಿಭಾಗದಲ್ಲಿ ಓದುತ್ತಿದ್ದೇನೆ. ನಾನು ಮುಂದೆ ಬಿ.ಎ.ನಲ್ಲಿ Criminology ಎಂಬ ವಿಷಯವನ್ನು ತೆಗೆದುಕೊಳ್ಳಬೇಕು. ಇದರ ಬಗ್ಗೆ ಮಾಹಿತಿ ನೀಡಿ. ಈ ವಿಷಯ ಇಂಗ್ಲಿಷ್ ಹಾಗೂ ಕನ್ನಡ ಮಾಧ್ಯಮದಲ್ಲಿ ಇರುತ್ತದೆಯೇ? ಬಿ.ಎ.ನಲ್ಲಿ Criminology ಇರುವ ಕಾಲೇಜುಗಳು ಯಾವ ವಿಶ್ವವಿದ್ಯಾಲಯದಲ್ಲಿ ಇವೆ ಎಂಬುದನ್ನು ತಿಳಿಸಿ.

ಕ್ರಿಮಿನಾಲಜಿ ಅನೇಕ ಕಾಲೇಜುಗಳಲ್ಲಿ ಲಭ್ಯವಿರುತ್ತದೆ. ಈ ಕೆಳಗಿನ ಕಾಲೇಜಿನಲ್ಲಿ ವಿಚಾರಿಸಿ. ಮಹಾರಾಜ ಕಾಲೇಜ್, ಕಾಮನಬಾವಿ ಬಡಾವಣೆ, ಕೋಟೆ ಹತ್ತಿರ, ಚಿತ್ರದುರ್ಗ.

ಸ್ನಾತಕೋತ್ತರ ಕೋರ್ಸುಗಳಿಗೆ ಸೇರಲು ಕೃಪಾಂಕ ದೊರೆಯುವುದಿಲ್ಲ.

ಖಲಂದರ್

ನಾನು ಬಿ.ಕಾಂ.ನಲ್ಲಿ ಶೇ.45 ಅಂಕಗಳನ್ನು ಗಳಿಸಿ ಪಾಸಾಗಿದ್ದೇನೆ. ನನಗೆ CA ಮಾಡಬೇಕೆಂದು ಆಸೆ ಇದೆ. ಆದರೆ CA ಮಾಡಲು ಶೇ.50 ಅಂಕಗಳು ಬೇಕು. ಗ್ರಾಮೀಣ ವಿದ್ಯಾರ್ಥಿಯಾಗಿರುವುದರಿಂದ ಶೇ.5 ಕೃಪಾಂಕಗಳು ಲಭ್ಯವಿರುತ್ತವೆ. ಆದ ಕಾರಣ ಈ ಅಂಕಗಳ ಸಹಾಯದಿಂದ ನಾನು CA ಮಾಡಬಹುದೇ? ಬಿ.ಕಾಂ. ಅಂತಿಮ ವರ್ಷದಲ್ಲಿ ಶೇ. 63 ಅಂಕಗಳು ಬಂದಿವೆ. ಒಂದು ವರ್ಷದ ಅಂಕಗಳ ಆಧಾರದ ಮೇಲೆ ಸೀಟು ಸಿಗಬಹುದೇ?

ಸಿ.ಎ. ಮಾಡಲು ಪದವಿಯಲ್ಲಿ ಮೂರು ವರ್ಷಗಳಲ್ಲೂ ಸೇರಿ ಶೇ. 50 ಅಂಕಗಳನ್ನು ಪಡೆದಿರಲೇಬೇಕು. ಇದರಲ್ಲಿ ಕೃಪಾಂಕ ಸೇರಿಸುವುದಿಲ್ಲ.

ಮಹೇಶ ಎಂ. ಪಟಗಾರ

ನಾನು ಎಸ್.ಎಸ್.ಎಲ್.ಸಿ. ಪಾಸಾಗಿದ್ದೇನೆ. ನನಗೆ ಕಂಡಕ್ಟರ್ ಆಗಬೇಕೆಂಬ ಆಸೆ ಇದೆ. ಇದಕ್ಕೆ ಬೇಕಾದ ವಿದ್ಯಾರ್ಹತೆ ತಿಳಿಸಿ. ಎಸ್.ಎಸ್.ಎಲ್.ಸಿ. ಆಧಾರದ ಮೇಲೆ ನೇರವಾಗಿ ಬಿ.ಎ. ಮಾಡಬಹುದೆ? ಮಿಲಿಟರಿ ಸೇರಲು ಬೇಕಾದ ಅರ್ಹತೆ ಹಾಗೂ ಸಂಪರ್ಕಿಸಬೇಕಾದ ವಿಳಾಸ ತಿಳಿಸಿ.

ನೀವು ಕಂಡಕ್ಟರ್ ಆಗಬೇಕಾದಲ್ಲಿ ಫಸ್ಟ್ ಏಡ್ ಸರ್ಟಿಫಿಕೇಟನ್ನು ಡಾಕ್ಟರ್ ಕಡೆಯಿಂದ ಮಾಡಿಸಬೇಕು. ನಂತರ ಕಂಡಕ್ಟರ್ ಸರ್ಟಿಫಿಕೇಟನ್ನು ಸಂಬಂಧಪಟ್ಟ ಅಧಿಕಾರಿಯಿಂದ ಪಡೆದುಕೊಳ್ಳಬೇಕು. ಬಿ.ಎ.ಯನ್ನು ವಯಸ್ಸಿನ ಆಧಾರದಿಂದ ಹಿಂದಿನ ಯಾವುದೇ ವಿದ್ಯಾರ್ಹತೆ ಇಲ್ಲದೆ ಮಾಡಬಹುದು. ಮಿಲಿಟರಿ ಸೇರಲು ಪಿ.ಯು.ಸಿ. ಮುಗಿಸಿರಬೇಕು ಹಾಗು ಅವರು ನಡೆಸುವ ಪ್ರವೇಶ ಪರೀಕ್ಷೆ ಬರೆಯಬೇಕು.

ಬಿ.ಎಂ. ರಾಘವೇಂದ್ರ, ಬೆಂಗಳೂರು

ನನಗೆ ಪ್ರವಾಸೋದ್ಯಮದ ಬಗ್ಗೆ ಓದಬೇಕು ಎಂಬ ಆಸೆ ಇದೆ. ಪ್ರವಾಸೋದ್ಯಮದಲ್ಲಿ ಡಿಪ್ಲೊಮಾ ಕೋರ್ಸ್ ಇದೆ ಎನ್ನುತ್ತಾರೆ. ಈ ಕೋರ್ಸ್ ಯಾವ ಕಾಲೇಜಿನಲ್ಲಿದೆ. ಈ ಕಾಲೇಜು ಕರ್ನಾಟಕದಲ್ಲಿದೆಯೇ ತಿಳಿಸಿ.

ಪ್ರವಾಸೋದ್ಯಮವನ್ನು ಪದವಿ ಹಾಗು ಪದವಿ ಪೂರ್ವ ತರಗತಿಗಳ ಆಧಾರದಿಂದ ಮಾಡಬಹುದು. ಇದು ಎರಡರಿಂದ ಮೂರು ವರ್ಷಗಳ ಅವಧಿಯದ್ದಾಗಿದೆ. ಇದು ದೆಹಲಿ ವಿಶ್ವವಿದ್ಯಾಲಯ, ಪಾಂಡಿಚೆರಿ ವಿಶ್ವವಿದ್ಯಾಲಯ ಹಾಗು ಇನ್ನಿತರ ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿದೆ.

ಓ.ಎಸ್. ಲೋಕೇಶ್, ದೇವಸಂದ್ರ

ನಾನು ಪಿ.ಯು.ಸಿ. ಪಾಸಾಗಿದ್ದೇನೆ. ನಾನು ಕೆ.ಎಸ್.ಆರ್.ಟಿ.ಸಿ. ಇಲ್ಲವೇ ಬಿ.ಟಿ.ಎಸ್ ಕಂಡಕ್ಟರ್ ಆಗಬೇಕೆಂದು ಲೈಸನ್ಸ್ ಮಾಡಿಸಿ ಒಂದೂವರೆ ವರ್ಷವಾಯಿತು. ಅಂದಿನಿಂದ ಸುಮಾರು ಸಂದರ್ಶನಗಳು ನಡೆದು ಕಂಡಕ್ಟರ್‌ಗಳನ್ನು ತೆಗೆದುಕೊಂಡರು. ಆದರೆ ನನಗೆ ಸಂದರ್ಶನ ಯಾವಾಗ ನಡೆಯುತ್ತದೆ ಎಂಬುವುದೇ ಗೊತ್ತಾಗುವುದಿಲ್ಲ. ಸಂದರ್ಶನ ಯಾವಾಗ, ಎಲ್ಲಿ ನಡೆಯುತ್ತದೆ, ಯಾರನ್ನು ಸಂಪರ್ಕಿಸಬೇಕು ತಿಳಿಸಿ.

ನೀವು ಹೊಂದಿರುವ ಕಂಡಕ್ಟರ್ ಲೈಸನ್ಸ್‌ನ್ನು ನಿಮ್ಮ ಉದ್ಯೋಗ ವಿನಿಮಯ ನಂಬರಿನ ಜೊತೆಗೆ ಸೇರಿಸಬೇಕು. ಕೆ.ಎಸ್.ಆರ್.ಟಿ.ಸಿ.ಯವರು ಉದ್ಯೋಗ ವಿನಿಮಯ ಕಛೇರಿಯಿಂದ ಅಥವಾ ನೇರವಾಗಿ ಅರ್ಜಿಗಳನ್ನು ಆಹ್ವಾನಿಸಬಹುದು. ಆಗ ನಿಮ್ಮ ಅರ್ಜಿಯನ್ನು ಕಂಡಕ್ಟರ್ ಹುದ್ದೆಗೆ ಪರಿಗಣಿಸುತ್ತಾರೆ. ಅರ್ಹತೆ ಆಧಾರದ ಮೇಲೆ ಕಂಡಕ್ಟರ್ ಹುದ್ದೆ ಸಿಗಬಹುದು.

ವಾಸುದೇವ ಮಹಾಲೆ, ಹೊನ್ನಾವರ

ನಾನು ಈಗ ದ್ವಿತೀಯ ಪಿ.ಯು.ಸಿ. ಕಲಾ ವಿಭಾಗದಲ್ಲಿ ಓದುತ್ತಿದ್ದೇನೆ. ನನಗೆ ಈಗ 19 ವರ್ಷ. ಪಿ.ಯು.ಸಿ. ಪಾಸಾದ ನಂತರ 1999-2000 ಶೈಕ್ಷಣಿಕ ವರ್ಷದಲ್ಲಿ ಅಂತಿಮ ಬಿ.ಎ. ರೆಗ್ಯುಲರ್ ಆಗಿ ಓದಬಹುದೇ?

ಪಿ.ಯು.ಸಿ. ಮುಗಿಸಿ ನೇರವಾಗಿ ಅಂತಿಮ ಬಿ.ಎ. ಪರೀಕ್ಷೆ ಬರೆಯಲು ಆಗುವುದಿಲ್ಲ. ಮೂರು ವರ್ಷದ ಪರೀಕ್ಷೆಯನ್ನೂ ಬರೆಯಬೇಕು.

ಪುಸ್ತಕ ಪ್ರಕಟಣೆ ಉದ್ಯೋಗಾವಕಾಶಗಳು

■ ಶ್ರೀಕಾಂತ್ ಪಿ.

ಒಂದು ನಿರ್ದಿಷ್ಟ ಸಮಾಚಾರವನ್ನು ವಿಷಯವನ್ನು ಓದಲು ಬಲ್ಲ ಪ್ರತಿಯೊಬ್ಬರಿಗೂ ತಿಳಿಸಬಲ್ಲ ಅದ್ಭುತವಾದ ಮಾಧ್ಯಮ - ಪುಸ್ತಕ. ಕಳೆದ ನಾಲ್ಕು ಶತಮಾನಗಳಿಂದ ಮನುಷ್ಯನ ಬದುಕಿನ ಭಾಗವಾಗಿ ಬೆಸೆದುಕೊಂಡ 'ಪುಸ್ತಕ' ಭಾರತದಲ್ಲಿ ಸ್ವಾತಂತ್ರ್ಯ ನಂತರ ಬೃಹತ್ ಉದ್ಯಮವಾಗಿ ಬೆಳೆದಿದೆ.

ಓದುವಿಕೆಯನ್ನು ನಾವು ಯಾಂತ್ರಿಕ ಎಂದು ಪರಿಗಣಿಸಲಾಗುವುದಿಲ್ಲ. ಇದೊಂದು ಅರ್ಥಪೂರ್ಣ ಸಂಭಾಷಣೆ, ಒಂದು ಸೃಜನಶೀಲ ಬೌದ್ಧಿಕ ಕ್ರಿಯೆ ಎಂದು ಕರೆಯಬಹುದು. ರಾಷ್ಟ್ರೀಯ ಅಂತರಾಷ್ಟ್ರೀಯ ಪುಸ್ತಕ ವಹಿವಾಟು ಭಾರತದಲ್ಲಿ ಸುಮಾರು ವರ್ಷವೊಂದಕ್ಕೆ 151 ಕೋಟಿ ರೂ. ಗಳಾಗಿರುತ್ತವೆ. ವಿಸ್ತೃತಗೊಂಡ ಶಿಕ್ಷಣ ವ್ಯವಸ್ಥೆ, ಹೆಚ್ಚುತ್ತಿರುವ ಅಕ್ಷರಸ್ಥರು, ಹೊಸ ಹೊಸ ಶಾಲಾ ಕಾಲೇಜುಗಳ ಆರಂಭ, ಈ ರೀತಿ ಅನೇಕಾನೇಕ ಕಾರಣಗಳಿಂದ ಮನುಷ್ಯನ ಬದುಕಲ್ಲಿ ಪುಸ್ತಕಗಳ ಅವಶ್ಯಕತೆ ಗಣನೀಯವಾಗಿ ಬೆಳೆದಿದೆ. ಪುಸ್ತಕ ಪ್ರಕಟಣೆಯ ನೇಪಥ್ಯದಲ್ಲಿ ಜನರಿಗೆ ಉದ್ಯೋಗಾವಕಾಶಗಳು ಕೂಡಾ ಹೆಚ್ಚಾಗಿವೆ. ಪುಸ್ತಕ ಪ್ರಕಟಣೆ ವ್ಯಾಪಾರ ಇಂದು ಕೇವಲ ಒಂದು ಸಂಸ್ಥೆ ನೋಡಿಕೊಳ್ಳುವ ಕೆಲಸ ಅಲ್ಲ. ಇಲ್ಲಿ ಓದುಗ ಪ್ರಕಾಶಕನ ನಡುವೆ ಭೀಕರ ಅಂತರ್ ಸಂಪರ್ಕದ (Interrelated) ಬೃಹತ್ ಜಾಲವೇ ಇದೆ.

ಪ್ರಕಟಣಾ ಪ್ರಪಂಚದಲ್ಲಿ ಭಾರತ ಜಗತ್ತಿನಲ್ಲಿ ಎಂಟನೇ ಸ್ಥಾನದಲ್ಲಿದ್ದು, ಭಾಷಾಪರವಾಗಿ ಇಂಗ್ಲಿಷ್‌ನಲ್ಲಿ ಅಮೆರಿಕಾ ಮತ್ತು ಇಂಗ್ಲೆಂಡ್ ನಂತರ ಮೂರನೇ ಸ್ಥಾನದಲ್ಲಿದೆ. ಸುಮಾರು 15 ಭಾಷೆಗಳಲ್ಲಿ ಪುಸ್ತಕಗಳು ಪ್ರತಿವರ್ಷ ಅಚ್ಚುಗೊಳ್ಳಲಿದ್ದು ಹಿಂದಿ, ಬೆಂಗಾಲಿ ನಂತರ ಇಂಗ್ಲಿಷ್ ಮೂರನೇ ಸ್ಥಾನದಲ್ಲಿದೆ. ಭಾರತದಲ್ಲಿ ಪ್ರತಿವರ್ಷ 20,000 ಹೊಸ ಪುಸ್ತಕಗಳು ಪ್ರಕಟಗೊಳ್ಳುತ್ತಿದ್ದು ಜನಸಂಖ್ಯಾ ಪರವಾಗಿ ಇದು ತುಂಬಾ ಕಡಿಮೆಯೆಂದೇ ಹೇಳಬಹುದು. ಯುರೋಪ್‌ನಲ್ಲಿ ಒಂದು ಮಿಲಿಯನ್ ಪ್ರಜೆಗಳಿಗೆ 735 ಪುಸ್ತಕಗಳು ಪ್ರಕಟಗೊಳ್ಳುತ್ತಿದ್ದು, ಭಾರತದಲ್ಲಿ ಒಂದು ಮಿಲಿಯನ್ ಪ್ರಜೆಗಳಿಗೆ ಕೇವಲ 30 ಪುಸ್ತಕಗಳು ಪ್ರಕಟಗೊಳ್ಳುತ್ತಿವೆ.

ಪಬ್ಲಿಶರ್ಸ್

ಭಾರತದಲ್ಲಿ ಸುಮಾರು 14 ಸಾವಿರ ಪ್ರಕಾಶಕರಿದ್ದಾರೆ. ಖಾಸಗೀ ಪ್ರಕಾಶಕರೊಂದಿಗೆ ಕೇಂದ್ರ, ರಾಜ್ಯ ಸರ್ಕಾರಕ್ಕೆ ಸೇರಿದ ವಿವಿಧ ವಿಭಾಗಗಳು, ವಿಶ್ವವಿದ್ಯಾಲಯದ ಪುಸ್ತಕಗಳು, ಪಠ್ಯಪುಸ್ತಕಗಳು ಮತ್ತು ವಿವಿಧ ಅಂಶಗಳೊಂದಿಗೆ ಬಿಡಿಬಿಡಿಯಾಗಿ ಬರುತ್ತಿರುವ ವಿಜ್ಞಾನ ಪುಸ್ತಕ, ಮಕ್ಕಳ ಪುಸ್ತಕ ಪ್ರಕಾಶಕರು ಇದರಲ್ಲಿ ಬರುತ್ತಾರೆ.

ಪುಸ್ತಕ ಪ್ರಕಾಶನ ಎಂದರೆ ತಮಾಷೆ ಸಂಗತಿಯೇನಲ್ಲ, ಅದೊಂದು ಪ್ರತಿಭಾ ಸಮ್ಮಿಲನವೆಂದು ಹೇಳಬಹುದು. ಅದೊಂದು ಕ್ರಿಯಾತ್ಮಕ ಚಟುವಟಿಕೆ. ಹಸ್ತಪ್ರತಿಯ ಆಯ್ಕೆ, ಎಡಿಟಿಂಗ್, ಪ್ರಕಟಣೆಗೆ ಅನುಗುಣವಾಗಿ ಹಸ್ತಪ್ರತಿ ತಿದ್ದುಪಡಿ, ಪುಸ್ತಕದ ಆಕೃತಿ, ಸೈಜು, ಮುದ್ರಣ, ಬೈಂಡಿಂಗ್, ಮುಖಪುಟ, ಮುಖಬೆಲೆ ನಿರ್ಣಯ ಎಲ್ಲಕ್ಕೂ ಮಿಗಿಲಾಗಿ ಮಾರುಕಟ್ಟೆ ಇವೆಲ್ಲಾ ವ್ಯವಸ್ಥಿತವಾಗಿ ನಡೆದರೆ ಮಾತ್ರ ಪುಸ್ತಕ ಅಚ್ಚುಕಟ್ಟಾಗಿ ಹೊರಬರಲು ಸಾಧ್ಯ.

Editorial, Production, Marketing, ಈ ಮೂರು ಪುಸ್ತಕ ಪ್ರಕಟಣೆಯ ಪ್ರಧಾನ ಘಟ್ಟಗಳು.

ಉತ್ತಮ ಪುಸ್ತಕದ ಆಯ್ಕೆ, ಅದನ್ನು ಒಳ್ಳೆಯ ಪುಸ್ತಕವನ್ನಾಗಿ ಅಚ್ಚುಮಾಡುವುದು ಸಂಪಾದಕನ ಪ್ರತಿಭೆಗೆ ಸಾಕ್ಷಿ. ಶೈಕ್ಷಣಿಕ ಹಿನ್ನೆಲೆ, ಪ್ರತಿಭಾವಂತ ಲೇಖಕರ ಆಯ್ಕೆ, ಹಸ್ತಪ್ರತಿ ತಿದ್ದುವುದರೊಂದಿಗೆ ಟ್ರೆಂಡ್‌ಗೆ ತಕ್ಕಂತೆ ಮಾರ್ಪಡಿಸಬಲ್ಲ ಜಾಣ್ಮೆಯುಳ್ಳವರು ಉತ್ತಮ ಎಡಿಟರ್ ಆಗಬಲ್ಲ. ದೊಡ್ಡ ಪ್ರಕಟಣಾ ಸಂಸ್ಥೆಗಳಲ್ಲಿ ಒಬ್ಬರೋ ಇಬ್ಬರೋ ಸಂಪಾದಕರಿರುವುದಿಲ್ಲ. ಎಡಿಟರ್, ಜನರಲ್ ಎಡಿಟರ್, ಸೈನ್ಸ್‌ಟೆಕ್ನಾಲಜಿ ಎಡಿಟರ್, ಪೊಲಿಟಿಕಲ್ ಎಡಿಟರ್, ಎಕನಾಮಿಕ್ಸ್ ಎಡಿಟರ್‌ಗಳಂತಹ ಹುದ್ದೆಗಳಿರುತ್ತವೆ. ಇದರೊಂದಿಗೆ 'ಅಸಿಸ್ಟೆಂಟ್ ಎಡಿಟರ್, ಕಾಪಿ ಎಡಿಟರ್‌ಗಳಂತಹ ಹುದ್ದೆಗಳನ್ನು ಪದವಿ, ಸ್ನಾತಕೋತ್ತರ ಪದವಿಯವರಿಗೆ ಆದ್ಯತೆ ನೀಡುತ್ತಾರೆ. ಕೆಲವು ಸಂಸ್ಥೆಗಳಲ್ಲಿ ಎಡಿಟಿಂಗ್ ಅನುಭವದೊಂದಿಗೆ ಪತ್ರಿಕೋದ್ಯಮದ ಹಿನ್ನೆಲೆ ಉಳ್ಳವರಿಗೂ ಆದ್ಯತೆ ನೀಡುತ್ತಾರೆ.

ನಂತರ ಬರುವುದು Production Department - ಎಡಿಟಿಂಗ್ ನಂತರ ಪುಸ್ತಕ ನೇರವಾಗಿ ಇಲ್ಲೇ ಬರುತ್ತದೆ. ಪುಸ್ತಕ ಸಂಪೂರ್ಣ ರೂಪಕ್ಕೆ ಬರುವುದು ಇಲ್ಲಿಯೇ. ಪುಸ್ತಕದ ಆಕಾರ, ಸೈಜು, ಮುಖಪುಟ ವಿನ್ಯಾಸಗಳಂತಹ ಫಿನಿಶಿಂಗ್ ವರ್ಕ್ಸ್ ಇಲ್ಲಿ ನಡೆಯುತ್ತವೆ. ಈ ವಿಭಾಗವು ಪ್ರಿಂಟರ್ಸ್‌ರೊಂದಿಗೆ, ಕಾಗದ ಮಾರಾಟಗಾರರು, ಬೈಂಡರ್ಸ್, ಡಿಸೈನರ್ಸ್‌ರೊಂದಿಗೆ ನಿರಂತರ ಸಂಬಂಧ ಹೊಂದಿರುತ್ತದೆ. ಪ್ರಕಟಣೆಗೆ ಸಂಬಂಧಪಟ್ಟ ಕಾಗದ ಕೊಳ್ಳುವಿಕೆ, ಮುದ್ರಣದ ಖರ್ಚು ವೆಚ್ಚಗಳಂತಹವುಗಳನ್ನು ಈ ವಿಭಾಗ ನೋಡಿಕೊಳ್ಳುತ್ತದೆ. ಇವೆಲ್ಲಾ ಪುಸ್ತಕದ ಮುಖಬೆಲೆ ನಿರ್ಣಯಿಸುವುದರಲ್ಲಿ ಮತ್ತು ಮಾರ್ಕೆಟಿಂಗ್‌ಗೆ ಸಹಾಯವಾಗುತ್ತದೆ. ಇಲ್ಲೂ ಮಾರ್ಕೆಟಿಂಗ್ ಹಿನ್ನೆಲೆಯವರಿಗೆ ಸಾಕಷ್ಟು ಉದ್ಯೋಗಾವಕಾಶಗಳಿವೆ.

ನಂತರ ಮುದ್ರಣ - ಈ ವಿಭಾಗದಲ್ಲಿ ಮುದ್ರಣಕ್ಕೆ ಸಂಬಂಧಪಟ್ಟಂತೆ ತಾಂತ್ರಿಕ ಹಿನ್ನೆಲೆ ಉಳ್ಳವರಿಗೆ ಅವಕಾಶಗಳು ಹೆಚ್ಚು. ಪ್ರಿಂಟಿಂಗ್ ಟೆಕ್ನಾಲಜಿ ಕೋರ್ಸನ್ನು ಈಗ ಬಿ.ಇ. ಹಾಗು ಡಿಪ್ಲೊಮಾ ಸ್ಥಾಯಿಯಲ್ಲಿ ಕಲಿಯಬಹುದು. ಹೈದರಾಬಾದಿನ ಜವಹರ್‌ಲಾಲ್ ಟೆಕ್ನಾಲಜಿಕಲ್ ಯೂನಿವರ್ಸಿಟಿ ಬಿ.ಟೆಕ್ ಪ್ರಿಂಟಿಂಗ್ ಟೆಕ್ನಾಲಜಿಯನ್ನು ಕಲಿಸುತ್ತಿದೆ. ಸಿಕಂದ್ರಾಬಾದ್‌ನಲ್ಲಿ ಗೌರ್ನ್‌ಮೆಂಟ್ ಆಫ್ ಪ್ರಿಂಟಿಂಗ್ ಟೆಕ್ನಾಲಜಿ, ಡಿಪ್ಲೊಮಾ ಇನ್ ಪ್ರಿಂಟಿಂಗ್ ಟೆಕ್ನಾಲಜಿ (3 ವರ್ಷದ ಕೋರ್ಸು) ಕಲಿಸುತ್ತಿದೆ - 10ನೇ ತರಗತಿ ಪಾಸಾದ ವಿದ್ಯಾರ್ಥಿಗಳಿಗೆ ಈ ಕೋರ್ಸನ್ನು CEEP ಆಧಾರವಾಗಿ ಕಲಿಸಲಾಗುತ್ತಿದೆ. ಜೊತೆಗೆ ಬುಕ್‌ಬೈಂಡಿಂಗ್ ಮತ್ತು ಆಫ್‌ಸೆಟ್ ಪ್ರಿಂಟಿಂಗ್‌ದಂತಹ ಕೋರ್ಸನ್ನು ಐ.ಟಿ.ಐ.ಗಳಲ್ಲಿ

ಕಲಿಸಲಾಗುತ್ತದೆ.

ಪತ್ರಿಕೆಗಳಲ್ಲಿ ಕಲಾವಿದರಾಗಿ ಬಯಸುವವರು ಸಂಬಂಧಪಟ್ಟ ಕ್ಷೇತ್ರದಲ್ಲಿ ಡಿಗ್ರಿ, ಡಿಪ್ಲೊಮಾ ಅಥವಾ ಸರ್ಟಿಫಿಕೆಟ್ ಕೋರ್ಸ್ ಪಡೆದಿರಬೇಕು. ಪತ್ರಿಕಾರಂಗದಲ್ಲಿ ಸಾಧಾರಣವಾಗಿ ಎಲ್ಲಾ ಪತ್ರಿಕೆಗಳಲ್ಲಿ ಅಪ್ಲೈಡ್ ಆರ್ಟಿಸ್ಟ್, ಗ್ರಾಫಿಕ್ಸ್ ಡಿಸೈನರ್ಸ್, ಫೋಟೋಗ್ರಾಫರ್ಸ್‌ರೊಂದಿಗೆ ಡಿಸೈನ್ ಡಿಪಾರ್ಟ್‌ಮೆಂಟ್ ಇರುತ್ತದೆ. ಬೆಂಗಳೂರಿನ ಜೆ.ಸಿ. ಪಾಲಿಟೆಕ್ನಿಕ್, ಗದಗದಲ್ಲಿ ಡ್ರಾಯಿಂಗ್ ಮಾಸ್ಟರ್ ಕೋರ್ಸ್, ದಾವಣಗೆರೆ, ಗುಲ್ಬರ್ಗಾದಲ್ಲಿ ಫೈನ್ ಆರ್ಟ್ಸ್‌ನಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಯನ್ನು ಕೊಡಲಾಗುತ್ತದೆ. ಅರ್ಹತೆ : ಹತ್ತನೇ ತರಗತಿ ಹಾಗೂ ಪಿ.ಯು.ಸಿ. ಯಾವುದೇ ವಿಷಯ. ಇನ್ನೂ ಫೈನ್ ಆರ್ಟ್ಸ್ ಅನ್ನು ಹೈದರಾಬಾದಿನ ಜೆ.ಎನ್.ಟಿ.ಯು. ವೆಂಕಟೇಶ್ವರ ಕಾಲೇಜ್ ಆಫ್ ಆರ್ಟ್ಸ್, ವಿಶಾಖಪಟ್ಟಣದಲ್ಲಿ ಡಿಗ್ರಿ ಹಾಗೂ ಪಿ.ಜಿ. ಕೋರ್ಸ್‌ಗಳನ್ನು ಪಿ.ಯು.ಸಿ. ಮತ್ತು ಎಸ್.ಎಸ್.ಎಲ್.ಸಿ. ಅರ್ಹತೆ ಮೇಲೆ ಕಲಿಸಲಾಗುತ್ತದೆ.

ಇನ್ನು ಮೂರನೇಯದಾಗಿ 'ಮಾರ್ಕೆಟಿಂಗ್' - ಪುಸ್ತಕ ಎಷ್ಟೇ ಉತ್ತಮವಾಗಿದ್ದರೂ ಸರಿಯಾದ ಮಾರ್ಕೆಟಿಂಗ್ ಹಾಗು ಅಡ್ವಟೈಸಿಂಗ್ ಇಲ್ಲದಿದ್ದರೆ ಜನರಿಗೆ ಪುಸ್ತಕದ ಬಗ್ಗೆ ತಿಳಿಯುವುದು ಕಷ್ಟ. ಪುಸ್ತಕ ವ್ಯಾಪಾರಿಗಳ ವಿವರ, ಶಾಲಾ ಕಾಲೇಜುಗಳ ವಿವರ, ವಿಶ್ವವಿದ್ಯಾಲಯಗಳು, ಗ್ರಂಥಾಲಯಗಳ ವಿವರ, ಸರಕಾರಿ ಸಂಸ್ಥೆಗಳಿಗೆ ಒದಗಿಸುವ ಕಂಟ್ರಾಕ್ಟು, ಬೆಲೆ, ಅಂದಾಜು ಪಟ್ಟಿ ಇಲ್ಲಿ ಸಿದ್ಧ ಪಡಿಸುತ್ತಾರೆ. ಆರ್ಡರ್ ಪಡೆಯುವುದು, ಮಾರುಕಟ್ಟೆಯಲ್ಲಿ ಪುಸ್ತಕದ ಮಾರಾಟ ಯೋಜನೆಗಳಂತಹ ಕೆಲಸ ಈ ವಿಭಾಗದಲ್ಲಿ ನಡೆಯುತ್ತದೆ. ಸಾಧಾರಣವಾಗಿ ದೊಡ್ಡ ಪ್ರಕಟಣಾ ಸಂಸ್ಥೆಗಳು ಈ ಎಲ್ಲಾ ಕೆಲಸಗಳನ್ನು ತಮ್ಮ ಪ್ರಾದೇಶಿಕ, ಸ್ಥಳೀಯ ಕಛೇರಿಗಳ ಮೂಲಕ ನಿರ್ವಹಿಸುತ್ತವೆ. ಪುಸ್ತಕ ಪ್ರಕಟಣೆಗಳ ಆಸಕ್ತಿಯೊಂದಿಗೆ ಪುಸ್ತಕ ಕುರಿತ ಸರಿಯಾದ ಅವಗಾಹನೆ, ಬದಲಾಗುತ್ತಿರುವ ಓದುಗರ ಅಭಿರುಚಿಗಳ ಬಗ್ಗೆ ಆಸಕ್ತಿ ಜ್ಞಾನವಿದ್ದವರು ಈ ಕ್ಷೇತ್ರದಲ್ಲಿ ಕೆಲಸ ಮಾಡಬಹುದು. ಮಾರ್ಕೆಟಿಂಗ್‌ನಲ್ಲಿ ಡಿಗ್ರಿ, ಡಿಪ್ಲೊಮಾದೊಂದಿಗೆ ಸಂಬಂಧಿತ ವಿಷಯಗಳಲ್ಲಿ ಅನುಭವವಿದ್ದವರಿಗೆ ಈ ಕ್ಷೇತ್ರದಲ್ಲಿ ಆದ್ಯತೆ ಕೊಡುತ್ತಾರೆ.

ಭಾರತದಲ್ಲಿ ಕೆಲವು ವಿಶ್ವವಿದ್ಯಾಲಯಗಳು ಬುಕ್ ಪಬ್ಲಿಶಿಂಗ್‌ನಲ್ಲಿ ಪಿ.ಜಿ. ಡಿಪ್ಲೊಮಾ ಕಲಿಸುತ್ತಿವೆ. ಕೆಲವೊಂದು ಪ್ರಕಟಣಾ ಸಂಸ್ಥೆಗಳು ಕೆಲವು Short term ಕೋರ್ಸುಗಳನ್ನು ಸಹಿತ ಕಲಿಸುತ್ತಿವೆ. ಪ್ರಕಟಣಾಕ್ಷೇತ್ರದಲ್ಲಿ ಪ್ರಕಾಶಕರ ಪಾತ್ರ, ಆಡಳಿತ, ಸಂಪರ್ಕ, ಬೆಲೆ ನಿಗದೀಕರಣ, ನಾಣ್ಯತೆ, ಗುಣಮಟ್ಟಗಳಂತಹ ಪಠ್ಯಾಂಶಗಳನ್ನು ಇಲ್ಲಿ ಕಲಿಸುತ್ತಾರೆ.

'ಯೂನಿವರ್ಸಿಟಿ ಆಫ್ ಡೆಲ್ಲಿ ಬುಕ್ ಪಬ್ಲಿಶಿಂಗ್' ನಲ್ಲಿ ಎರಡು ವರ್ಷದ ಕೋರ್ಸನ್ನು ಕಲಿಸುತ್ತಿದೆ. ಎಕನಾಮಿಕ್ಸ್, ಇತಿಹಾಸ, ಕಾಮರ್ಸ್, ಪೊಲಿಟಿಕಲ್ ಸೈನ್ಸ್‌ದೊಂದಿಗೆ ಬುಕ್ ಪಬ್ಲಿಶಿಂಗ್‌ನಲ್ಲಿ ಬಿ.ಎ.ಒಕೇಶನಲ್ ಕೋರ್ಸನ್ನು 10+2 ಉತ್ತೀರ್ಣರಾದವರಿಗೆ, ಡಿಪ್ಲೊಮಾ 'ಇನ್ ಬುಕ್ ಪಬ್ಲಿಶಿಂಗ್ 2 ವರ್ಷದ ಕೋರ್ಸನ್ನು ಪದವೀಧರರಿಗೆ ಕಲಿಸುತ್ತಿದೆ. ಮಹಾತ್ಮಾಗಾಂಧಿ ವಿಶ್ವವಿದ್ಯಾಲಯ, ಕೊಟ್ಟಾಯಂ ವಿಶ್ವವಿದ್ಯಾಲಯ ಕೂಡಾ ಮೇಲಿನ ಕೋರ್ಸನ್ನು ಕಲಿಸುತ್ತಿದೆ.

'ವಿಶ್ವ ವಿದ್ಯಾಲಯಗಳಲ್ಲದೆಯೇ ನ್ಯಾಶನಲ್ ಬುಕ್ ಟ್ರಸ್ಟ್' (ದೆಹಲಿ) ಬುಕ್ ಪಬ್ಲಿಶಿಂಗ್‌ನಲ್ಲಿ 13 ವಾರಗಳ ಕೋರ್ಸನ್ನು, ಶಂಕರ್ಸ್ ಅಕಾಡೆಮಿ ಆಫ್ ಆರ್ಟ್ಸ್ ಅಂಡ್ ಬುಕ್ ಪಬ್ಲಿಶಿಂಗ್ (ದಿಲ್ಲಿ) ಆರ್ಟ್ಸ್ ಬುಕ್ ಇಲಸ್ಟ್ರೇಶನ್ ಅಂಡ್ ಗ್ರಾಫಿಕ್ಸ್‌ನಲ್ಲಿ 2 ವರ್ಷದ ಕೋರ್ಸನ್ನು ಪಿ.ಯು.ಸಿ. ಅಥವಾ ತತ್ಸಮಾನ ಅರ್ಹತೆಯಿಂದ ಕಲಿಸುತ್ತಿದೆ. ಇದೇ ಸಂಸ್ಥೆಯ 3 ತಿಂಗಳ ಬುಕ್ ಪಬ್ಲಿಶಿಂಗ್ ಸ್ನಾತಕೋತ್ತರ ಪದವಿಗೆ ಯಾವುದೇ ಪದವೀಧರರು ಅರ್ಜಿ ಸಲ್ಲಿಸಬಹುದಾಗಿದೆ.

(ಕ್ಷಮಿಸಿ. ಪುಸ್ತಕ ಪ್ರಕಟಣೆಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಕಲಿಸಿಕೊಡುವ ಕಾಲೇಜು, ವಿಶ್ವವಿದ್ಯಾಲಯಗಳ ಮಾಹಿತಿ ಸರಿಯಾಗಿ ದೊರೆತಿಲ್ಲ) ■

ಯಾರಿಂದ ಏನು ಕಲಿಯಬೇಕು?

ನೀರಿನಿಂದ	- ಸಮತೆ
ಹೂಗಳಿಂದ	- ರಸಿಕತೆ
ಹಾಲಿನಿಂದ	- ಸ್ನೇಹ
ಸೂರ್ಯಚಂದ್ರರಿಂದ	- ನಿಯಮಿತ ತನ
ನಿಸರ್ಗದಿಂದ	- ಪರೋಪಕಾರ
ಹವೆಯಿಂದ	- ಸುಕೃತ ಶೀಲ
ಸಿಂಹದಿಂದ	- ಶೌರ್ಯ
ಎತ್ತಿನಿಂದ	- ದುಡಿತ
ನಾಯಿಯಿಂದ	- ಕೃತಜ್ಞತೆ
ಹಸುವಿನಿಂದ	- ವಾತ್ಸಲ್ಯ
ಎಳೆಯರಿಂದ	- ಮನಸ್ಸಿನ ನಿರ್ಮಲತೆ
ಇರುವೆಯಿಂದ	- ಸತತೋದ್ಯೋಗ
ಆಕಾಶದಿಂದ	- ಶುಚಿತ್ವ
ಪ್ರಕೃತಿಯಿಂದ	- ಸಹನೆ ಶೀಲತೆ
ಪಕ್ಷಿಗಳಿಂದ	- ಒಗ್ಗಟ್ಟು

ಸಂಗ್ರಹ : ಭದ್ರೇಶ್ವರಿ ವೀ. ಜವಳಿ

ಚಲನಚಿತ್ರ ತರಬೇತಿ

ಕರ್ನಾಟಕ ಚಲನಚಿತ್ರ ತಾಂತ್ರಿಕ ತರಬೇತಿ ಕೇಂದ್ರ, ಮಾರ್ಚ್ 15ರಿಂದ ಚಲನಚಿತ್ರ ನಿರ್ದೇಶನ, ಛಾಯಾಗ್ರಹಣ, ಸಂಕಲನ, ಅಭಿನಯ, ನೃತ್ಯ ಹಾಗೂ ಮೇಕಪ್ ವಿಭಾಗಗಳಲ್ಲಿ ಪರಿಣಿತರಿಂದ ಉನ್ನತ ಮಟ್ಟದ ಅಲ್ಪಾವಧಿ ಪ್ರಾಯೋಗಿಕ ತರಗತಿಗಳನ್ನು ನಡೆಸಲಿದೆ.

ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಮಾರ್ಚ್ 13ರ ಒಳಗೆ

ಕರ್ನಾಟಕ ಚಲನಚಿತ್ರ ತಾಂತ್ರಿಕ ತರಬೇತಿ ಕೇಂದ್ರ, ನಂ.46/1, 2ನೇ ಮಹಡಿ, 8ನೇ ಅಡ್ಡರಸ್ತೆ, ವಿಲ್ಸನ್‌ಗಾರ್ಡನ್, ಬೆಂಗಳೂರು - 27

(ದೂರವಾಣಿ : 2222534)

ಬೇಸಿಗೆ ತರಬೇತಿ

ಬೆಂಗಳೂರು ವಿಜ್ಞಾನ ಫೋರಂ ಪಿ.ಯು.ಸಿ. ಹಾಗೂ ಪದವಿ ವಿದ್ಯಾರ್ಥಿಗಳಿಗೆ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಸಮಾಜ ವಿಜ್ಞಾನದ ಬೇಸಿಗೆ ಶಿಬಿರವನ್ನು ನಡೆಸಲಿದೆ.

ಶಿಬಿರವು ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ 15 ದಿನಗಳ ಕಾಲ ಬೆಳಗ್ಗೆ 8.30ರಿಂದ ನಡೆಯುವುದು. ನುರಿತ ಉಪನ್ಯಾಸಕರು ಚರಿತ್ರೆ, ಸಮಾಜವಿಜ್ಞಾನ, ಅರ್ಥಶಾಸ್ತ್ರ, ಮನಶಾಸ್ತ್ರ ಹಾಗು ರಾಜ್ಯಶಾಸ್ತ್ರದ ಬಗ್ಗೆ ಉಪನ್ಯಾಸ ನೀಡಲಿದ್ದಾರೆ. ಪ್ರವೇಶ ಶುಲ್ಕ 80 ರೂಪಾಯಿಗಳು ಆಸಕ್ತರು ಪ್ರೊ. ಎಚ್. ಕೆ. ಮಹೇಶ್ ಅಥವಾ ಜಿ.ಎನ್. ವೇಣುಗೋಪಾಲ್ ಅವರನ್ನು ಮಾರ್ಚ್ 31ರೊಳಗೆ ಸಂಪರ್ಕಿಸಲು ಕೋರಲಾಗಿದೆ.

ಉಚಿತ ವರ್ಗೀಕೃತ ಜಾಹೀರಾತು

ಹುಟ್ಟುಹಬ್ಬದ ಶುಭಾಶಯ

ಪ್ರೀತಿಯ ತಂದೆಗೆ- ಫೆಬ್ರವರಿ ಐದರಂದು ಬರುವ ನಿಮ್ಮ ಹುಟ್ಟು ಹಬ್ಬದ ಶುಭ ಸಂದರ್ಭದಲ್ಲಿ ನಿಮ್ಮ ಪ್ರೀತಿಯ ಮಗಳಾದ ನಾಗಶ್ರೀಯ ಹಾರ್ದಿಕ ಶುಭಾಶಯಗಳು.

- ಎಂ. ನಾಗಶ್ರೀ, ಬೆಂಗಳೂರು.

ಯುಗಾದಿ ಶುಭಾಶಯಗಳು

ಸಿದ್ದೇಶ್, ರಾಕೇಶ್, ಲತ, ಸೌಮ್ಯ, ಶ್ವೇತ ಹಾಗೂ ಸರ್ವರಿಗೂ ಹೊಸ ವರ್ಷ ಹಾಗೂ ಯುಗಾದಿಯು ಸುಖ ಸಂತೋಷವನ್ನು ನೀಡಲಿ ಎಂದು ಹಾರೈಸುವ.

-ಟಿ. ಎಂ. ರುದ್ರಮುನಿ, ಶ್ರೀ ಶೈಲ ಮೆಡಿಕಲ್ಸ್ ಮತ್ತು ಜನರಲ್ಸ್, ಅರಸೀಕೆರೆ.

ವಿವಾಹ ಬಂಧನ

14.2.1999ರಂದು ನನ್ನ ನಲುಮೆಯ ಗೆಳೆಯ ವಿವಾಹ ಬಂಧನದಲ್ಲಿ ಸಿಲುಕಿರುವ ರಾಜಾಭಕ್ಷಿ ಮತ್ತು ಗೌಸಿಯಾಬೇಗಂ ಈ ದಂಪತಿಗಳು ಸುಖ ಸಂತೋಷದ ಜೀವನವನ್ನು ತಮ್ಮದಾಗಿಸಿಕೊಳ್ಳಲಿ ಎಂದು ಹಾರೈಸುವ. ನಲುಮೆಯ ಗೆಳೆಯ

-ಬಸವರಾಜ ವೀರಪ್ಪ ಲಾಲಪಡಿ, ಮುಂಡರಗಿ.

ಪ್ರೀತಿ

ಆರತಿ ನೀನು ನನ್ನ ಬಿಟ್ಟು ಹೋಗಿ ಮಾರ್ಚ್ 29 ರಂದು 1 ವರ್ಷವಾಗುತ್ತದೆ. ಈಗಲೂ ನಾನು ನಿನ್ನನ್ನು ಮೊದಲಿನಷ್ಟೆ ಪ್ರೀತಿಸುತ್ತೇನೆ. I Love you.

-ನಿನ್ನ ಪ್ರೇಮಿ

-ರವಿ, ನಿಪ್ಪಾಣಿ.

ಶುಭಾಶಯ

ಹಾವೇರಿ ಜಿಲ್ಲೆ ಶಿಗ್ಗಾಂವ ತಾಲೂಕು ಗಂಜಿಗಟ್ಟಿ ಗ್ರಾಮದಲ್ಲಿ ನಡೆಯುತ್ತಿರುವ ಕುಂಡಲಿನಿ ಯಾಗಕ್ಕೆ ಹಾರ್ದಿಕ ಶುಭಾಶಯಗಳು. Jyothi Ceramics (Tiles Agency), 204, Prashant Hotel Complex, Laxmeshwar-582116.

- **D.P. Malavadkar,** Laxmeshwar.

ಹುಟ್ಟು ಹಬ್ಬ

ನನ್ನ ಪ್ರೀತಿಯ ಚಿಕ್ಕಮ್ಮ ಗೀತಾಳಿಗೆ (ದಿನಾಂಕ ಫೆಬ್ರವರಿ 23ರಂದು) ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.

-ಕೆ.ಕವಿತ, ರಾಮು ಕೆ., ಬೆಂಗಳೂರು.

ಹೊಸ ವರ್ಷ

ಜ್ಯೋತಿ, ಸೀತಾ, ಪೂರ್ಣಿಮ ಇವರಿಗೆಲ್ಲ ಹೊಸ ವರ್ಷದ ಶುಭಾಶಯಗಳು.

-ರವಿ ಎಂ.,

ಬಸ್‌ಸ್ಟ್ಯಾಂಡ್ ಪಾನ್ ಷಾಪ್, ಕೆರೂರು.

ಧನ್ಯವಾದಗಳು

ಸಿಂಧನೂರು ತಾಲೂಕಿನ ಮಲ್ಲದಗುಡ್ಡ ಗ್ರಾಮದಲ್ಲಿ ವೇಗದೂತ ಬಸ್ಸುಗಳ ನಿಲುಗಡೆ ಮಾಡಿದ್ದಕ್ಕಾಗಿ ಸಿಂಧನೂರು ಬಸ್ ಡಿಪೋ ಮೇನೇಜರ್ ಎಂ. ನಂಜುಂಡಸ್ವಾಮಿಯವರಿಗೆ, ಈ ಬಗ್ಗೆ ಹೋರಾಟ ಮಾಡಿದ ತಾಲೂಕು ಬಿಜೆಪಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೆ. ಮಲ್ಲಯ್ಯ ಅವರಿಗೂ ಗ್ರಾಮಸ್ಥರ ಪರವಾಗಿ ಅಭಿನಂದನೆಗಳು ಮತ್ತು ಧನ್ಯವಾದಗಳು.

-ಕೆ. ವೀರಪ್ಪ, ಅಧ್ಯಕ್ಷರು,

ಶ್ರೀ ಕನಕ ಗುರು ಯುವಕ ಸಂಘ (ರಿ),

ಮಲ್ಲದಗುಡ್ಡ.

ಶುಭಾಶಯ

ಸರ್ವರಿಗೂ ಯುಗಾದಿ ಮತ್ತು ಬಕ್ರೀದ್ ಹಬ್ಬದ ಶುಭಾಶಯಗಳು.

- ಅಬ್ದುಲ್ ರಹಮಾನ್ ದಾದಾವೇರಶೇಖ ಮತ್ತು ಮಂಜುನಾಥ ಎಚ್. ಬಾಲೆಹೊಸೂರು.

ಶಾಕೀರಾ ಎಂಟರ್ ಪ್ರೈಸಸ್, ಯಲ್ಲಾಪುರ.

ಅಭಿನಂದನೆ

ಈ ಬಾರಿಯ ಗಣರಾಜ್ಯೋತ್ಸವದ ವಿಶಿಷ್ಟ ಹಾಗೂ ಶ್ಲಾಘನೀಯ ಸೇವೆಗಾಗಿ ರಾಷ್ಟಪತಿಯವರ ಪ್ರಶಸ್ತಿ ಪಡೆದ ಡಾ.ಜಾನ್ ಜೊಸೆಫ್‌ರವರು (ಉಪ ನಿರ್ದೇಶಕರು) ಕಂದಾಯ ಗುಪ್ತಚರ ನಿರ್ದೇಶನಾಲಯ, ಬೆಂಗಳೂರು. ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.

-ಜಿ.ಬಿ. ಜಗದೀಶ.

ಕೇಂದ್ರ ಅಬಕಾರಿ ಹಾಗೂ ಸೀಮಾ ಶುಲ್ಕ ಅಧೀಕ್ಷಕರು, ಬೆಂಗಳೂರು.

ವಿಶ್ವ ಮಹಿಳಾ ದಿನ

ಮಾರ್ಚ್ 8 ರಂದು ಆಚರಿಸುವ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭ ದಿನದಂದು ನನ್ನ ಆತ್ಮೀಯ ಮಹಿಳಾ ಬಂಧುಗಳಿಗೆಲ್ಲಾ ಹಾರ್ದಿಕ ಶುಭಾಶಯಗಳು. ನಮ್ಮೆಲ್ಲರ ಬಾಳು ಸುಗಮವಾಗಿ ಸಾಗಲೆಂದು ದೇವರಲ್ಲಿ ಪ್ರಾರ್ಥಿಸುವೆ.

-ಶಾರದಾ ಬೇಗಾರ, ಜಂಬಲ ದಿನ್ನಿ.

ವಿವಾಹ ವಾರ್ಷಿಕೋತ್ಸವ

ನಾಗರಾಜ ಎನ್. ಕೊಂಡಕುಂದಿ ಹಾಗೂ ಸೀತಾ ದಂಪತಿಗಳಿಗೆ, ಇವರ ತೃತೀಯ ವಿವಾಹ ವಾರ್ಷಿಕೋತ್ಸವ (1999 ಫೆಬ್ರವರಿ 10) ಸಂದರ್ಭದಲ್ಲಿ ಶುಭ ಹಾರೈಸುತ್ತೇನೆ.

- ಅಮೀರ ಅಲಿ ಬಿ.ಎ.,

ತಾವರಗೇರಾ.

ಹುಟ್ಟುಹಬ್ಬ

ಪ್ರೀತಿಯ ಅಪೂರ್ವಳಿಗೆ (ದಿನಾಂಕ 4ನೇ ಮಾರ್ಚ್ 1999) ಒಂದನೇ ವರ್ಷದ ಹುಟ್ಟು ಹಬ್ಬದ ಶುಭಾಶಯಗಳು. ದೇವರು ಆಕೆಗೆ ಆರೋಗ್ಯವನ್ನು ಕೊಟ್ಟು ಕಾಪಾಡಲೆಂದು ಹಾರೈಸುವ ಕುಟುಂಬದ ಸದಸ್ಯರು ಹಾಗೂ ಮಿತ್ರರು.

- ಶ್ರೀಮತಿ ಅನಿತಾ ಹರೀಶ, ಹುಣಸಗಿ.

ವಿಶ್ವ ಅರಣ್ಯದಿನ

ಮಾಚ್ 21 ವಿಶ್ವ ಅರಣ್ಯದಿನ. ವಿನಾಶದ ತುಟ್ಟ ತುದಿಯಲ್ಲಿ ನಿಂತಿರುವ ಅರಣ್ಯವನ್ನು ಉಳಿಸಿ, ಬೆಳೆಸಿ, ಪೋಷಿಸಿ, ಮನುಕುಲವನ್ನು ರಕ್ಷಿಸೋಣ ಎಂದು ಎಲ್ಲರಿಗೂ ವಿನಂತಿಸುವ.

-ಸಂತೋಷ ಸುಭಾಸ ಬಂಡೆ, ನಾಗಠಾಣ.

ಹುಟ್ಟುಹಬ್ಬ

ನನ್ನ ಪ್ರೀತಿಯ ತಮ್ಮ ವೀರೇಶನಿಗೆ 12ನೇ ವರ್ಷದ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.

-ಜಿ.ವಿ. ಚೈತ್ರಾ, ಬಿ. ಚಿತ್ತಾನಹಳ್ಳಿ.

ವಿವಾಹ ವಾರ್ಷಿಕೋತ್ಸವ

ಮಹಾನಂದಾ ಹಾಗೂ ಸೋಮಶೇಖರ ದಂಪತಿಗಳಿಗೆ ಇವರ ಹದಿನೆಂಟನೇ ವಿವಾಹ ವಾರ್ಷಿಕೋತ್ಸವ ಸಂದರ್ಭದಲ್ಲಿ ಶುಭ ಹಾರೈಕೆಗಳು ಹಾಗೂ ದೇವರು ಅವರಿಗೆ ಯಾವಾಗಲೂ ಸುಖ ಸಂತೋಷ ನೀಡಲಿ ಎಂದು ಕೋರುತ್ತೇನೆ.

-ಅರ್ಚನಾ ಜಿ. ಮಠಪತಿ, ಗುಲ್ಬರ್ಗಾ.

ಜಾತ್ರೆಗೆ ಸ್ವಾಗತ

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಡಣಾಪೂರಿ ಗ್ರಾಮದಲ್ಲಿ ಈ ತಿಂಗಳ 6,7ನೇ ತಾರೀಖಿಗೆ ಶ್ರೀ ಶರಣ ಬಸವೇಶ್ವರ ಜಾತ್ರಾಮಹೋತ್ಸವ ನಡೆಯುತ್ತದೆ. ಎಲ್ಲಾ ಸದ್ಭಕ್ತರು, ನನ್ನ ಗೆಳೆಯರು, ಜಾತ್ರೆಯಲ್ಲಿ ಪಾಲ್ಗೊಂಡು ದರ್ಶನ ಪಡೆದು ನಮ್ಮ ಮನಸ್ಸನ್ನು ಸಂತೋಷ ಪಡಿಸಬೇಕೆಂದು ಕೋರುವ.

-ಡಾ.ಎಚ್. ಪ್ರಕಾಶಗೌಡ M.B.H.S (dot)

ಡಣಾಪೂರ.

ಯುಗಾದಿ ಶುಭಾಶಯ

ನಮ್ಮ ಎಲ್ಲಾ 'ಬದುಕು' ಓದುಗರಿಗೂ ಮತ್ತು ನಮ್ಮಲ್ಲಿ ಕೆಲಸ ಮಾಡಿಸುವ ಕಾರ್ಪೆಂಟರ್ ಮತ್ತು ಮಾಲೀಕರಿಗೂ ಹೊಸ ವರ್ಷ ಮತ್ತು ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು.

-ಟಿ. ಆರ್. ಸತೀಶ್, ದಾವಣಗೆರೆ ವುಡ್ ಪ್ಲೇನಿಂಗ್ ವರ್ಕ್ಸ್, ರಾಣೆಬೆನ್ನೂರು.

ಉಚಿತ ವರ್ಗೀಕೃತ ಜಾಹೀರಾತು

ಉರುಸಿಗೆ ಸ್ವಾಗತ

ರಾಯಚೂರು ಜಿಲ್ಲೆಯ ಲಿಂಗಸೂಗೂರ ತಾಲೂಕಿನ ಮಟ್ಟೂರ ಗ್ರಾಮದಲ್ಲಿ ಜರುಗುವ ಶ್ರೀ ದಾವಲ್ ಮಲ್ಲಿಕ್ ಉರುಸಿಗಾಗಿ ಭಕ್ತವೃಂದಕ್ಕೆಲ್ಲ ಹಾರ್ದಿಕ ಶುಭ ಹಾರೈಕೆಗಳೊಂದಿಗೆ ಆದರದ ಸ್ವಾಗತ.

-ಹನುಮಂತರಾವ್ ಭಜಂತ್ರಿ,
ಮುಖ್ಯ ಗುರುಗಳು, ಮಟ್ಟೂರ.

ಹೊಸ ವರ್ಷ

ಹೊಸ ವರ್ಷದ ಹಾರ್ದಿಕ ಶುಭಾಶಯಗಳು. ಹೊಸ ವರ್ಷವು ಸದಾ ನಮ್ಮ ದೇಶದ ಹೆಸರು ಕೀರ್ತಿ ಬೆಳಗಲಿ ಎಂದು ಹಾರೈಸುವ.

-ಕು. ರೇಣುಕಾ
ಕೊಡೆಗುಂಟ ಹಣ್ಣಿನ ಅಂಗಡಿ, ಮಸ್ಕಿ.

ಅಭಿನಂದನೆ

ಮುಸ್ಲಿಂಜಮಾತ ಗೊಬ್ಬುರ (ಬಿ) ಜಿ. ಗುಲ್ಬರ್ಗಾ ಇದರ ಹೊಸ ಅಧ್ಯಕ್ಷರಾದ ಮೌಲಾಸಾಬ ಎಂ., ಉಪಾಧ್ಯಕ್ಷರಾದ ಇಮೊಮಸಾಬ ಎ., ಸದಸ್ಯರುಗಳಾದ ಡಾ. ಸಲಾವುದ್ದಿನ್ ಸಾಹೇಬಲಾಲ ಸಿ., ತಾಜೋದ್ದಿನ್ ಕೆ., ಹಬೀಬ ಕೆ., ದಾವಲ್‌ಸಾಬ ಎ., ಲಾಯಕ್ ಆಲಿ ಎ., ಸಲೀಂ ಎ., ನಸಿರುದ್ದೀನ್ ಬಿ, ಎಲ್ಲರಿಗೂ ಸಮಸ್ತ ಊರಿನ ಪರವಾಗಿ ಅಭಿನಂದನೆ.

- ಎ.ಅಬ್ದುಲ್ ಸತ್ತಾರ, ಆವರಳ್ಳಿ.

ವಿವಾಹ ವಾರ್ಷಿಕೋತ್ಸವ

1999ರ ಜನವರಿ 31ಕ್ಕೆ ವಿವಾಹ ವಾರ್ಷಿಕೋತ್ಸವ ಆಚರಿಸಿರುವ ಗೋಪಾಲಕೃಷ್ಣ ಕೊಂಪಲ್ ಮತ್ತು ಶ್ರೀಮತಿ ಸುನಂದಾ ಗೋಪಾಲಕೃಷ್ಣ ಕೊಂಪಲ್ ದಂಪತಿಗಳಿಗೆ ಶುಭ ಹಾರೈಕೆಗಳು.

-ಲಕ್ಷ್ಮೀಕಾಂತ ಕೊಂಪಲ್, ಲಿಂಗಸೂಗೂರು.

ಹೊಸ ವರ್ಷ

ಹೊಸ ವರ್ಷವು ಹೊಸತು ತರಲಿ, ಎಲ್ಲಾದರೂ ಇರು ಹಳೆ ವರ್ಷದ ನೆನಪು ಮರೆಯದಿರು. ಹೊಸ ವರ್ಷವು ನಿಮಗೆ ಒಳ್ಳೆಯದನ್ನು ತರಲಿ. ವಿಜಯಲಕ್ಷ್ಮಿ ಅವರ ತಾಯಿ ತಂದೆಯವರಿಗೆ ನನ್ನ ಶುಭಾಶಯಗಳು. ಸೌದಾಗರ ಕುಟುಂಬದಿಂದ

- ಬಿ.ಎನ್. ಸೌದಾಗರ, ಇಂಡಿ.

ಹುಟ್ಟು ಹಬ್ಬ

ಪ್ರೀತಿಯ ಮುದ್ದು ಅಳಿಯ ಶರಭನಗೌಡನಿಗೆ ಹುಟ್ಟು ಹಬ್ಬದ ಶುಭಾಶಯಗಳು. ಅವನು ಆರೋಗ್ಯದಿಂದ ಇರಲಿ ಎಂದು ಹಾರೈಸುವ,

- ಎಸ್.ಬಿ. ಗಿರೀಶ್ ಗೌಡ, ಸೋಮುಸಮುದ್ರ.

ಹಾರ್ದಿಕ ಶುಭಾಶಯಗಳು

ಪ್ರೀತಿಯ ಅಕ್ಷತಾಳಿಗೆ ತಂದೆ-ತಾಯಿ, ಕಾಕಾ-ಕಕ್ಕಿಗಳು, ಅತ್ತೆ, ಅಕ್ಕಳಾದ ಚಂದ್ರಿಕಾ, ದೊಡ್ಡಪ್ಪಂದಿರು ಹಾಗೂ ಕುಟುಂಬದ ಎಲ್ಲಾ ಸದಸ್ಯರು ತಿಳಿಸುವ ಹಾರ್ದಿಕ ಶುಭಾಶಯಗಳು.

-ಉಮೇಶ್ ಮು.ದೈವಜ್ಞ
ಅಸಿಸ್ಟೆಂಟ್ ಪ್ರೊಫೆಸರ್ ಇನ್ ಮೆಕ್ಯಾನಿಕಲ್ ಇಂಜಿನಿಯರಿಂಗ್, ಶ್ರೀ ತರಳಬಾಳು ಜಗದ್ಗುರು ತಾಂತ್ರಿಕ ಮಹಾವಿದ್ಯಾಲಯ, ರಾಣೆಬೆನ್ನೂರು.

ಹಾರೈಕೆ

ಬಿಸಿಲ ಬದುಕು ಓದುಗರಿಗೆ ಹಬ್ಬದ ಶುಭಾಶಯಗಳು ಮತ್ತು ಪಿ.ಎಸ್. ಹಿಪ್ಪರಗಿ ನಮ್ಮ ಶಾಲೆಯ 1999 ಫೆಬ್ರವರಿ ತಿಂಗಳಲ್ಲಿ ವರ್ಗದ ಪ್ರತಿನಿಧಿಯಾಗಿದಕ್ಕೆ ಧನ್ಯವಾದಗಳು. ಪಿ.ಎಸ್.ಹಿಪ್ಪರಗಿ ಮುಂದಿನ ವರ್ಷದ ಪ್ರಧಾನಮಂತ್ರಿಯಾಗಲೆಂದು ಹಾರೈಸುತ್ತೇವೆ.

-ರವಿಚಂದ್ರ ಮುತ್ತಪ್ಪ ಭಜಂತ್ರಿ, ಬೆಳಗಲಿ.

ಯುಗಾದಿ ಶುಭಾಶಯಗಳು

ಬಿಸಿಲ ಬದುಕು ಓದುಗರಿಗೆ ಚಂದ್ರಮಾನ ಯುಗಾದಿಯ ಶುಭಾಶಯಗಳು ಮತ್ತು ಬಿಸಿಲ ಬದುಕು ಮಾಸಪತ್ರಿಕೆಯ ಸಂಪಾದಕರಾದ ಚಂದ್ರಕಾಂತ ವಡ್ಡು ಇವರಿಗೆ, ಬದುಕು ಸರ್ವಮಂಡಳಿಗೆ ಹೊಸ ವರ್ಷದ ಮತ್ತು ಚಂದ್ರಮಾನ ಯುಗಾದಿಯ ಶುಭಾಶಯಗಳು.

- ಮಹಾಕೂಟೇಶ ನಂದವಾಡಗಿ, ಹುನಗುಂದ.

ಹಾರೈಕೆ

ಜಿಳಿದೇಗುಲು ಶ್ರೀ ಬೈರವೇಶ್ವರ ಗ್ರಾಮಾಂತರ ಬಾಲಕಿಯರ ಕಾಲೇಜಿನಲ್ಲಿ ದ್ವಿತೀಯ ಪಿ.ಯು.ಸಿ. ಮತ್ತು ಪ್ರೌಢಶಾಲೆಯ 10ನೇ ತರಗತಿಯ ವಿದ್ಯಾರ್ಥಿನಿಯರು ರಾಜ್ಯಮಟ್ಟದ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದು ಉತ್ತೀರ್ಣರಾಗಲಿ ಎಂದು ಹಾರೈಸುವ.

-ಹೊಳಲು ಜಿ. ಮಹೇಶ ಬಿ.ಎಸ್ಸಿ, ಬಿ.ಇಡಿ.
ಗಣಿತ ಶಿಕ್ಷಕರು, ಶ್ರೀ ಬೈರವೇಶ್ವರ ಗ್ರಾಮಾಂತರ ಬಾಲಕಿಯರ ಪ್ರೌಢಶಾಲೆ, ಜಿಳಿದೇಗಲು.

ಶಿವರಾತ್ರಿ ಶುಭಾಶಯಗಳು

ಬಿಸಿಲ ಬದುಕು ಓದುಗರಿಗೆ, ನಾಡಿನ ಕನ್ನಡ ಜನತೆಗೆ ಸುಖ ಶಾಂತಿ ಸಿಗಲೆಂದು ಶಿವರಾತ್ರಿ ಹಾಗೂ ಹೊಸ ವರ್ಷದ ಶುಭಾಶಯಗಳು.

-ಬಸಣ್ಣ ನಾ. ವಡ್ಡರ, ಕಾರ್ಯದರ್ಶಿ,
ಜೈ ಹನುಮಾನ ತರುಣ ಸಂಘ,
ಅತ್ತನೂರ.

ನಿಶ್ಚಿತಾರ್ಥ

ನನ್ನ ನೆಚ್ಚಿನ ಮಿತ್ರ ಯಶವಂತ ಪಾಟೀಲನ ಮದುವೆಯ ನಿಶ್ಚಿತಾರ್ಥಕ್ಕೆ ನನ್ನ ಶುಭಾಶಯಗಳು. ಮುಂಬರುವ ದಿನಗಳಲ್ಲಿ ಅವನ ಭಾವೀ ಜೀವನ ಸುಖಕರವಾಗಲೆಂದು ಹಾರೈಸುವ.

-ಎಸ್.ಪಿ. ಹದ್ದಣ್ಣವರ ಹಾಗೂ ಟಿ.ಸಿ.ಎಚ್.
ದ್ವಿತೀಯ ವರ್ಷದ ಶಿಕ್ಷಕ ವಿದ್ಯಾರ್ಥಿಗಳು, ಶಿರಹಟ್ಟಿ.

ಹಬ್ಬದ ವಿಶೇಷ

ಕುಂದಾಪುರ ತಾಲೂಕಿನ ಅಸೋಡು ಬೆಂಕಿಕಾನ್ ನಂದಿಕೇಶ್ವರ ದೇವಸ್ಥಾನದಲ್ಲಿ ಮಾರ್ಚ್ 30-31ಕ್ಕೆ ನಡೆಯುವ ಗಂಡಸೇವೆ ಮತ್ತು ಢಕ್ಕೆ ಬಲಿ ಹಬ್ಬಕ್ಕೆ ಭಕ್ತಾದಿಗಳು ತುಂಬು ಹೃದಯದಿಂದ ಸಹಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಿ,

- ಎ. ಅಶೋಕ ಅಸೋಡು, ಬೆಂಗಳೂರು.

ಚಿರ ಋಣಿ

ಆತ್ಮೀಯ ಶ್ರೀ ಓ.ಎಲ್. ನಾಗಭೂಷಣ ಸ್ವಾಮಿ ಅವರಿಗೆ ವಂದನೆಗಳು. ಹಂಪಿಯ ಕಮ್ಮಟದಲ್ಲಿ ತಾವುಗಳು, ನಮಗೆ ಒಳ್ಳೆ ಕವಿತೆ ಬರೆಯಲು ಹಾಗೂ ತಮ್ಮ ಜೊತೆ ಹೊಸ ಸಂಬಂಧ ಬೆಳೆಯಲು ಸಹಕಾರಿಯಾಗಿದೆ. ಕನ್ನಡ ವಿಶ್ವವಿದ್ಯಾಲಯ ಹಂಪಿ ಹಾಗೂ ಅಮರೇಶ ನುಗಡೋಣಿಯವರಿಗೂ ನಾನು ಚಿರಋಣಿಯಾಗಿದ್ದೇನೆ.

-ಪ್ರವೀಣರಾಜು ಶಿ.ಸೊನ್ನದ, ಮುದ್ದೇಬಿಹಾಳ.

ಕಾರ್ನಾಡರಿಗೆ ಅಭಿನಂದನೆ

ಕನ್ನಡದ ಪ್ರಸಿದ್ಧ ನಾಟಕಕಾರ, ನಟ, ನಿರ್ದೇಶಕರಾದ ಕಾರ್ನಾಡ್‌ರ ಸಾಹಿತ್ಯ ಸೇವೆಯನ್ನು ಗುರುತಿಸಿ, 1998ರ ಜ್ಞಾನಪೀಠ ಪ್ರಶಸ್ತಿ ನೀಡುತ್ತಿರುವುದು ಇಡೀ ಕನ್ನಡಿಗರೆಲ್ಲರೂ ಹೆಮ್ಮೆ ಪಡುವಂತಹ ಸಂಗತಿ. ಸಮಸ್ತ ಕನ್ನಡಿಗರ ಪರವಾಗಿ ಗಿರೀಶರಿಗೆ ಅಭಿನಂದನೆಗಳು.

-ಶಿವಾನಂದ ಶಂಕರಪ್ಪ
ಬೈಯಾಪೂರ ಎಂ.ಎ. ಬಿ.ಈಡಿ, ಕೋಳೂರ.

ಪ್ರೇಮಿಗಳ ದಿನ

ಪ್ರೇಮಿಗಳ ದಿನವಾದ ಫೆಬ್ರವರಿ 14, ನನ್ನ ಗೆಳತಿ (SRHD) ಮತ್ತು ನನ್ನ ಗೆಳೆಯರಿಗೂ ಹಾಗೂ ನನ್ನ ಕನ್ನಡ ಕುಲಕೋಟಿಯ ಸಕಲ ಪ್ರೇಮಿಗಳಿಗೂ ನನ್ನ ತುಂಬು ಹೃದಯದ ಹಾರ್ದಿಕ ಶುಭಾಶಯಗಳು.

-ಪರಶುರಾಮ ಮ. ಓಲೇಕಾರ, ಹಿರೇಕೆರೂರು.

ಅಭಿನಂದನೆ

ಬೆಂ.ವಿ.ವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದಲ್ಲಿ ರ್‍ಯಾಂಕ್ ವಿಜೇತರಾಗಿರುವ ನನ್ನ ಆತ್ಮೀಯ ಮಿತ್ರರಾದ ಕಾವೇರಿಸ್ವಾಮಿ ಹಾಗೂ ಚಿನ್ನದ ಪದಕ ಪಡೆದ ಕೃಷ್ಣ ಅವರಿಗೆ ತುಂಬು ಹೃದಯದ ಅಭಿನಂದನೆಗಳು.

-ಎ.ಎಂ. ಸುರೇಶ್, ಬೆಂಗಳೂರು.

ಉಚಿತ ಜಾಹೀರಾತು ಕೂಪನ್!

ಜಾಹೀರಾತು ನೀಡಲು ಹಣ ಕೊಡಬೇಕು ಎಂಬುದು ನಿಮಗೆಲ್ಲಾ ಗೊತ್ತಿರುವ ಸತ್ಯ. ಆದರೆ ಈಗ ನಿಮ್ಮ ಈ ನಂಬಿಕೆಯನ್ನೇ ಸುಳ್ಳು ಮಾಡುತ್ತಿದ್ದೇವೆ! ನೀವು ಒಂದು ಪೈಸೆಯನ್ನೂ ಖರ್ಚು ಮಾಡದೆ 'ಬದುಕು' ಮಾಸ ಪತ್ರಿಕೆಗೆ ವರ್ಗೀಕೃತ ಜಾಹೀರಾತು ನೀಡಬಹುದು.

ಜಾಹೀರಾತಿನ ವಿಷಯ

ಮದುವೆ, ಹುಟ್ಟುಹಬ್ಬ, ವಿದೇಶ ಪ್ರಯಾಣ, ಹಬ್ಬ, ಹೊಸವರ್ಷ, ವಿವಾಹ ವಾರ್ಷಿಕೋತ್ಸವ, ಪರೀಕ್ಷೆಯ ಯಶಸ್ಸು, ವ್ಯಾಪಾರದಲ್ಲಿ ಯಶಸ್ಸು, ಪ್ರಶಸ್ತಿ-ಪುರಸ್ಕಾರ.... ಹೀಗೆ ಯಾವುದೇ ಸಂದರ್ಭದಲ್ಲಿ ನೀವು ನಿಮ್ಮ ಆಪ್ತರಿಗೆ, ಗೆಳೆಯರಿಗೆ, ಸಂಬಂಧಿಕರಿಗೆ, ಪರಿಚಿತರಿಗೆ ಶುಭಾಶಯ ಕೋರಲು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಉಚಿತ ಜಾಹೀರಾತು ಕೂಪನ್‌ನ್ನು ವೈಯಕ್ತಿಕ ಜಾಹೀರಾತುಗಳಿಗೆ ಮಾತ್ರ ಉಪಯೋಗಿಸಿ. ವ್ಯಾಪಾರ, ವೈವಾಹಿಕ ವಿಷಯಗಳಿಗೆ ಈ ಉಚಿತ ಸೌಲಭ್ಯ ಲಭ್ಯವಿಲ್ಲ.

ಹೇಗೆ ಕಳಿಸುವುದು?

ಈ ಕೆಳಗಿನ ಕೂಪನ್‌ನಲ್ಲಿ ಜಾಹೀರಾತು ವಿಷಯವನ್ನು 20 ಶಬ್ದಗಳಿಗೆ ಮೀರದಂತೆ ಬರೆದು 'ಬದುಕು' ವಿಳಾಸಕ್ಕೆ ಕಳಿಸಿದರೆ ನಿಮ್ಮ ಕೆಲಸ ಮುಗಿಯಿತು.

ಮಂದಿನ ತಿಂಗಳ ಸಂಚಿಕೆಯಲ್ಲಿ ನೀವು ನಿಮ್ಮ ಜಾಹೀರಾತನ್ನು ನೋಡಿ ಆನಂದಿಸಬಹುದು. ಜಾಹೀರಾತಿನ ವಿಷಯ ಕನ್ನಡ ಅಥವಾ ಇಂಗ್ಲಿಷ್‌ನಲ್ಲಿರಬಹುದು. ಹಾಂ! ನೆನಪಿಡಿ! ನಮ್ಮ ಕಚೇರಿಯನ್ನು ತಲುಪುವ ಮೊದಲ 50 ಜಾಹೀರಾತುಗಳಿಗೆ ಮಾತ್ರ ಈ ಅವಕಾಶ ಸಿಗುತ್ತದೆ. ಆದ್ದರಿಂದ ತಡ ಮಾಡದೆ ತಕ್ಷಣ ಕೂಪನ್ ಭರ್ತಿ ಮಾಡಿ ಇಂದೇ ಕಳಿಸಿಕೊಡಿ.

ಕೂಪನ್ ಕಳಿಸಬೇಕಾದ ವಿಳಾಸ

'ಬಿಸಿಲ ಬದುಕು' ಮಾಸಪತ್ರಿಕೆ, ಅಂಚೆಪೆಟ್ಟಿಗೆ: 7951, ಬಸವೇಶ್ವರನಗರ, ಬೆಂಗಳೂರು - 560 079.

ಉಚಿತ ಜಾಹೀರಾತು ಕೂಪನ್

ದಯವಿಟ್ಟು ಈ ಕೆಳಗಿನ ವರ್ಗೀಕೃತ ಜಾಹೀರಾತನ್ನು ಏಪ್ರಿಲ್ 99ರ 'ಬಿಸಿಲ ಬದುಕು' ಮಾಸಪತ್ರಿಕೆಯಲ್ಲಿ ಪ್ರಕಟಿಸಲು ಕೋರಿಕೆ.

1	2	3	4
5	6	7	8
9	10	11	12
13	14	15	16
17	18	19	20

ಜಾಹೀರಾತು ನೀಡುವವರ ಪೂರ್ಣ ವಿಳಾಸ..

....

....

ಪಿನ್‌ಕೊಡ್....................................... ದೂರವಾಣಿ ಸಂಖ್ಯೆ..

ಜಾಹೀರಾತುದಾರರ ಸಹಿ

ಗಿರೀಶ್ ಕಾಸರವಳ್ಳಿ



ಕನ್ನಡ ಮಾಧ್ಯಮದಲ್ಲಿ ಹತ್ತನೆಯ ತರಗತಿಯವರೆಗೆ ಓದಿ, ನಂತರ ಪಿ.ಯು.ಸಿ.ಗೆ ಸೇರಿದ ತಕ್ಷಣ ವಿದ್ಯಾರ್ಥಿಗಳಿಗೆ ಒಂದು ಭಯಂಕರ 'ಭೂತ' ಕಾಟ ಕೊಡಲು ಶುರುಮಾಡಿ ಬಿಡುತ್ತದೆ. ಅದೇ ಇಂಗ್ಲೀಷ್ ಭಾಷೆ.

ಕ್ಲಾಸಿನಲ್ಲಿ ಹೇಳುವುದು ಅರ್ಥವಾಗುವುದಿಲ್ಲ. ಪುಸ್ತಕವನ್ನಾದರೂ ಓದೋಣವೆಂದರೆ ಒಂದೆರಡು ಪುಟವನ್ನು ಓದುವುದರೊಳಗೆ ನೂರು ಬಾರಿ ನಿಘಂಟನ್ನು ತೆಗೆದು ಸುಸ್ತಾಗಿ ಬಿಡುತ್ತದೆ, ಪರೀಕ್ಷೆಗಳಲ್ಲಿ ವಿಷಯ ಗೊತ್ತಿದ್ದರೂ ಬರೆಯಲು ತೋಚದೆ ತಬ್ಬಿಬ್ಬಾಗುತ್ತದೆ, ಪರೀಕ್ಷೆಯಲ್ಲಿ ಕೊಟ್ಟ ಪ್ರಶ್ನೆ ಅರ್ಥವಾಗದೆ ಹಾಗೇ ಬಿಟ್ಟು ಹೊರಗೆ ಬಂದ ಮೇಲೆ ಆ ಪ್ರಶ್ನೆಯೇನೆಂದು ಯಾರಾದರು ಹೇಳಿದ ಮೇಲೆ 'ಅರೆರೆ.... ನನಗೆ ಅದಕ್ಕೆ ಉತ್ತರ ಚೆನ್ನಾಗಿ ಗೊತ್ತಿತ್ತು' ಎಂದು ಅಳು ಬರುವಂತಾಗುತ್ತದೆ. ಕ್ಲಾಸಿನಲ್ಲಿ ಏನಾದರೂ ಪ್ರಶ್ನೆ ಕೇಳಬೇಕೆಂದರೂ ಮಾತನಾಡಲು ಸಾಧ್ಯವಾಗುವುದಿಲ್ಲ. 'ಇಂಗ್ಲಿಷಿನ ಜೊತೆಗೆ ಸ್ವಲ್ಪ ಕನ್ನಡದಲ್ಲೂ ಪಾಠ ಹೇಳಿ ಕೊಡಿ ಸಾರ್' ಎಂದು ಉಪಾಧ್ಯಾಯರನ್ನು ಕೇಳಿದರೆ ಅವರು ಮೈಲಿಗೆ ಹತ್ತಿದಂತೆ ಮೂಗು ಮುರಿಯುತ್ತಾರೆ.. ಹತ್ತನೆಯ ತರಗತಿಯವರೆಗೆ ಬುದ್ಧಿವಂತರೆನಿಸಿಕೊಂಡಿದ್ದವರು ಈಗ ಒಮ್ಮಿಂದೊಮ್ಮೆಲೆ ದಡ್ಡರಾಗಿ ಬಿಟ್ಟೆವೇನೋ ಎಂಬ ಅನುಮಾನ ಶುರುವಾಗುತ್ತದೆ. ಇಷ್ಟೇ ಸಾಲದೆಂಬಂತೆ ಗಾಯದ ಮೇಲೆ ಉಪ್ಪು ಸವರುವಂತೆ ಆಂಗ್ಲ ಮಾಧ್ಯಮದಿಂದ ಬಂದ ವಿದ್ಯಾರ್ಥಿಗಳು ತಾವು ಮಹಾಪುರುಷರೇನೋ ಎಂಬಂತೆ ವರ್ತಿಸಲಾರಂಭಿಸುತ್ತಾರೆ. ಇಷ್ಟೆಲ್ಲಾ ಸಮಸ್ಯೆಗಳು ಕೇವಲ 'ಇಂಗ್ಲಿಷ್' ಎನ್ನುವ ಒಂದು ಭಾಷೆಯಿಂದಾಗಿ ಎಂದು ನಿಮಗೆ ಅರ್ಥವಾಗಿ ನಿಜಕ್ಕೂ ಇಂಗ್ಲಿಷ್ ಭಾಷೆ ಒಂದು ಭಯಂಕರ ಭೂತವೆನ್ನಿಸಿ ಬಿಡುತ್ತದೆ. ಎಷ್ಟೋ ವಿದ್ಯಾರ್ಥಿಗಳು ಇದಕ್ಕಾಗಿ ಹೆದರಿಕೊಂಡು ಕಂಗೆಡುವುದು ಕಾಣುತ್ತೇವೆ. ತಂದೆ-ತಾಯಿಗಳಿಗೂ ಮಕ್ಕಳ ಈ ವಿಚಿತ್ರ ಸಮಸ್ಯೆಗೆ ಹೇಗೆ ಸಹಾಯ ಮಾಡಬೇಕೆಂದು ಗೊತ್ತಾಗುವುದಿಲ್ಲ.

ಆದರೆ ನಿಲ್ಲಿ! ಹೆದರಬೇಡಿ !! ಕಂಗೆಡಬೇಡಿ!!!

ಈ ಸಮಸ್ಯೆಗಳನ್ನು ಅನುಭವಿಸುತ್ತಿರುವವರು ನೀವೇ ಮೊದಲಿಗರಲ್ಲ. ಇಂದು ಅತ್ಯಂತ ಪ್ರತಿಭಾವಂತರೆನಿಸಿಕೊಂಡವರು ಕೂಡಾ ಈ ಸಮಸ್ಯೆಗಳನ್ನು ಎದುರಿಸಿ, ದಾಟಿ ಬಂದಿದ್ದಾರೆ. ಇದು ಕೇವಲ ಒಂದು ತಾತ್ಕಾಲಿಕ ಸಮಸ್ಯೆ. ನೀವು ಈ ಸಮಸ್ಯೆಯನ್ನು ಯಾವ ರೀತಿಯಲ್ಲಿ ಪರಿಹಾರ ಮಾಡಿಕೊಳ್ಳಬೇಕೆಂದು ತಿಳಿದುಕೊಂಡು ಅದಕ್ಕಾಗಿ ಶ್ರಮಿಸಿ ನಿಮ್ಮ ದಾರಿಯನ್ನು ಸುಗಮವಾಗಿಸಿ ಕೊಳ್ಳಬೇಕೇ ಹೊರತು, ಅದಕ್ಕಾಗಿ ಹೆದರಿಕೊಳ್ಳುವ ಅವಶ್ಯಕತೆಯಿಲ್ಲ. ನಿಮ್ಮ ಬುದ್ಧಿಶಕ್ತಿಯನ್ನು ಒಂದು ಯಃಕಶ್ಚಿತ್ ಭಾಷೆ ಕಡಿಮೆ ಮಾಡಲು ಸಾಧ್ಯವಿಲ್ಲ.

ಭಾಷೆ ಕೇವಲ ಜ್ಞಾನವನ್ನು ಒಬ್ಬರಿಗೊಬ್ಬರು ಹಂಚಿಕೊಳ್ಳಲು ಬಳಸಿಕೊಳ್ಳುವ ಒಂದು ಮಾಧ್ಯಮ, ಅಷ್ಟೇ! ನಮ್ಮ ಮಾತೃಭಾಷೆಯಲ್ಲಿಯೇ ಉನ್ನತ ವಿದ್ಯಾಭ್ಯಾಸವನ್ನು ಮುಂದುವರಿಸುವ ಪರಿಸ್ಥಿತಿಯಿದ್ದಿದ್ದರೆ ಈ ಹಂತದಲ್ಲಿ ನೀವು ಈ ಸಮಸ್ಯೆಯನ್ನು ಎದುರಿಸುವ ಅವಶ್ಯಕತೆ ಇರುತ್ತಿರಲಿಲ್ಲ. ಆದರೆ ಇಂದು ಉನ್ನತ ವ್ಯಾಸಂಗಕ್ಕೆ ಬೇಕಾದ ಜ್ಞಾನದ ಮಾಹಿತಿಗಳು ಆಂಗ್ಲ ಭಾಷೆಯಲ್ಲಿಯೇ ಹೆಚ್ಚಾಗಿರುವುದರಿಂದ, ಸದ್ಯಕ್ಕೆ ಉನ್ನತ ವ್ಯಾಸಂಗಕ್ಕಾಗಿ ಇಂಗ್ಲಿಷ್ ಭಾಷೆಯನ್ನು ನಮ್ಮ ಜ್ಞಾನಾರ್ಜನೆಯ ಮಾಧ್ಯಮವಾಗಿ ಬಳಸಿಕೊಳ್ಳುವ ಅವಶ್ಯಕತೆಯಿದೆ.

ಇಂತಹ ಪರಿಸ್ಥಿತಿಯನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸವನ್ನು ಕೊಡುವ ಸಲುವಾಗಿ ಹಲವಾರು ಗಣ್ಯರೊಡನೆ ಮಾತಾಡಿ, ಹಿಂದೊಮ್ಮೆ ಅವರು ಇದೇ ತರಹದ ಸಮಸ್ಯೆಗಳನ್ನು ಎದುರಿಸಿದ ರೀತಿ ಮತ್ತು ಅವರು ನಿಮ್ಮ ಈ ಸಮಸ್ಯೆಗೆ ನೀಡಿರುವ ಸಲಹೆಗಳನ್ನು ನಿಮಗಾಗಿ ನೀಡುತ್ತಿದ್ದೇವೆ.

ಈ ಬಾರಿ ಕನ್ನಡಿಗರೆಲ್ಲರ ಹೆಮ್ಮೆಯ ಚಲನಚಿತ್ರ ನಿರ್ದೇಶಕರಾದ ಗಿರೀಶ್ ಕಾಸರವಳ್ಳಿಯವರು ತಮ್ಮ ಅಭಿಪ್ರಾಯಗಳನ್ನು ನೀಡಿದ್ದಾರೆ. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಗಿರೀಶ್ ಕಾಸರವಳ್ಳಿಯವರು ಕೂಡಾ ನಮ್ಮ ನಿಮ್ಮಂತೆ ಕನ್ನಡ ಮಾಧ್ಯಮದಲ್ಲಿ ಓದಿ, ಪಿ.ಯು.ಸಿ.ಯಲ್ಲಿ ಇಂಗ್ಲಿಷ್ ಎಂಬ ಭೂತದ ಕಾಟದಿಂದ ಒದ್ದಾಡಿದ್ದಾರೆ. ಆದರೆ ಇಂದು ಅದನ್ನೆಲ್ಲಾ ದಾಟಿ ಈ ಮಟ್ಟವನ್ನು ತಲುಪಿದ್ದಾರಲ್ಲವೆ?

ಅಂದ ಮೇಲೆ ನೀವು ಈ ಸಮಸ್ಯೆಯನ್ನು ಕೇವಲ ತಾತ್ಕಾಲಿಕವೆಂದು ಒಪ್ಪಿಕೊಳ್ಳುತ್ತೀರಲ್ಲವೆ? ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡು ಕಷ್ಟಪಟ್ಟು ಓದಿ ಭಾಷೆ ಜ್ಞಾನಾರ್ಜನೆಗೆ ಅಡ್ಡಿಯಲ್ಲ ಎಂಬುದನ್ನು ನಿರೂಪಿಸುತ್ತೀರಲ್ಲವೆ? ಆಂಗ್ಲ ಮಾಧ್ಯಮದಿಂದ ಬಂದು ಡೋಂಗಿ ಹೊಡೆಯುವ ವಿದ್ಯಾರ್ಥಿಗಳಿಗಿಂತ ನೀವು ಯಾವುದೇ ರೀತಿಯಿಂದಲೂ ಕಡಿಮೆಯಿಲ್ಲವೆಂಬುದನ್ನು ತೋರಿಸಿ ಕೊಡುತ್ತೀರಲ್ಲವೆ?

ಹೆಸರು : ಗಿರೀಶ್ ಕಾಸರವಳ್ಳಿ

ವೃತ್ತಿ : ಚಲನ ಚಿತ್ರ ನಿರ್ದೇಶಕ

ಜನನ : 3. 12. 1950

ಸ್ಥಳ : ಕಾಸರವಳ್ಳಿ - ತೀರ್ಥಹಳ್ಳಿ ತಾಲ್ಲೂಕು

ವಿದ್ಯಾಭ್ಯಾಸ : B. Pharmacy

ಪ್ರಾಥಮಿಕ ಶಿಕ್ಷಣ : ಕನ್ನಡ- -ಕಮ್ಮರಡಿ -ಕೊಪ್ಪ ತಾಲ್ಲೂಕು

ಮಾಧ್ಯಮಿಕ ಶಿಕ್ಷಣ : ಕನ್ನಡ- -ಕಮ್ಮರಡಿ - ಕೊಪ್ಪ ತಾಲ್ಲೂಕು

ಹೈಸ್ಕೂಲು : ಕನ್ನಡ - ಶಿವಮೊಗ್ಗ

ಡಿಗ್ರಿ : ಇಂಗ್ಲಿಷ್ - ಮಣಿಪಾಲ.

ಪ್ರಶಸ್ತಿಗಳು

20 ವರ್ಷಗಳಲ್ಲಿ ಆರು ಅಂತರಾಷ್ಟ್ರೀಯ ಪ್ರಶಸ್ತಿಗಳನ್ನು, 16 ರಾಷ್ಟ್ರ ಪ್ರಶಸ್ತಿಗಳನ್ನು, 32 ರಾಜ್ಯ ಪ್ರಶಸ್ತಿಗಳನ್ನು ಪಡೆದ 8 ಕಥಾ ಚಿತ್ರಗಳನ್ನು ಮಾಡಿರುತ್ತೇನೆ. ಇದರೊಂದಿಗೇ ಹಲವಾರು ಜನಪ್ರಿಯ ಧಾರಾವಾಹಿ ಹಾಗೂ ಪ್ರಶಸ್ತಿ ವಿಜೇತ ಚಿತ್ರಗಳಿಗೆ ಚಿತ್ರಕತೆ ಬರೆದಿರುತ್ತೇನೆ.

ಇಂಗ್ಲಿಷ್ ಮಾಧ್ಯಮಕ್ಕೆ ಸೇರಿದ ಹೊಸತರಲ್ಲಿ ನಿಮ್ಮ ಅನುಭವಗಳೇನು?

ನಾನು ಕನ್ನಡ ಮಾಧ್ಯಮ ಬಿಟ್ಟು ಇಂಗ್ಲಿಷ್ ಮಾಧ್ಯಮದಲ್ಲಿ ಓದಬೇಕಾಗಿ ಬಂದದ್ದು ಪಿ.ಯು.ಸಿ. ಸೇರಿದಾಗ. ಆಗೆಲ್ಲ ಪಿ.ಯು.ಸಿ. ಒಂದು ವರ್ಷ ಅವಧಿಯದಾಗಿತ್ತು. ಹಾಗಾಗಿ ಎರಡು ಮುಖ್ಯ ಸವಾಲುಗಳೆದುರಾದವು. ಒಂದು ಮಾಧ್ಯಮ ಬದಲಾಗಿದ್ದರಿಂದ ಹೇಳುತ್ತಿದ್ದ ಪಾಠಗಳು ಅರ್ಥವಾಗದೇ ಹೋದದ್ದು. ಎರಡು ಪಿ.ಯು.ಸಿ. ಒಂದು ನಿರ್ಣಾಯಕ ಹಂತ ವಾದ್ದರಿಂದ, Public ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಪಡೆಯಲೇ ಬೇಕಾದ ಒತ್ತಡ ಇದ್ದದ್ದು. ಈ ಸ್ಥಿತಿಯಿಂದಾಗಿ ಅರ್ಥವಾಗದ ಪಾಠಗಳನ್ನು ಬಾಯಿಪಾಟ ಮಾಡಿ ಒಪ್ಪಿಸಬೇಕಾದ ದುರಂತಕ್ಕೆ ಸಿಕ್ಕಿ ಬಿದ್ದೆವು. ಎಸ್.ಎಸ್.ಎಲ್.ಸಿ.ಯ ತನಕ ಕನ್ನಡ ಮಾಧ್ಯಮದಲ್ಲಿ ನಮ್ಮ ಓದಿನಿಂದ ಬಂದ ಗ್ರಹಿಕೆಗೆ ತಕ್ಕಂತೆ ಸ್ವಂತ ಉತ್ತರ ಬರೆಯುತ್ತಿದ್ದ ನಾವು, ಪಿ.ಯು.ಸಿ.ಯಲ್ಲಿ ಗೈಡ್‌ಗಳನ್ನು ಓದಿ, ವಾಂತಿ ಮಾಡಿಕೊಳ್ಳುವ ಅಭ್ಯಾಸ ರೂಢಿಸಿ ಕೊಂಡೆವು. ಆಗ lecturers ಕೂಡಾ ಕನ್ನಡ ಮಾಧ್ಯಮದಿಂದ ಬಂದವರ ಬಗ್ಗೆ ಸಹನೆ ಇರುತ್ತಿರಲಿಲ್ಲ. ಇಂಗ್ಲಿಷ್ ಮಾಧ್ಯಮದಲ್ಲೇ SSLC ವರೆಗೆ ಓದಿದ ಸಹ ವಿದ್ಯಾರ್ಥಿಗಳಿಗೆ ತಾವು ಉತ್ತಮರು ಎಂಬ ಹೆಮ್ಮೆಯೂ ಇತ್ತು. ಹೀಗಾಗಿ ಕನ್ನಡ ಮಾಧ್ಯಮದಿಂದ ಬಂದವರಿಗೆ ಕೀಳರಿಮೆ ಹುಟ್ಟುವಂತಹ ಸ್ಥಿತಿ ನಿರ್ಮಾಣವಾಯಿತು.

ಅಂದು ಎದುರಾದ ಸಮಸ್ಯೆಗಳನ್ನು ಹೇಗೆ ನಿವಾರಿಸಿಕೊಂಡಿರಿ?

ಅಂದು ಎದುರಾದ ಸಮಸ್ಯೆಗಳು ಎಷ್ಟು ಶೀಘ್ರವಾಗಿ ನಿವಾರಣೆ ಆಗಬೇಕಿತ್ತೋ ಅಷ್ಟು ಶೀಘ್ರವಾಗಿ ನಿವಾರಣೆ ಆಗಲಿಲ್ಲ. ಪಿ.ಯು.ಸಿ. ಕಳೆದು, ನಂತರ Pharmacy College ಗೆ ಸೇರಿದ ನಂತರ ಬೇರೊಂದು ವಾತಾವರಣ ಸೃಷ್ಟಿ ಯಾದಾಗ, ಈ ಕಹಿ ವಾತಾವರಣ ಮರೆಯಾದಾಗ ಸಮಸ್ಯೆಗಳೂ ತಿಳಿಯಾದವು. ಹಳ್ಳಿಯಿಂದ ಬಂದ ಅನೇಕ ವಿದ್ಯಾರ್ಥಿಗಳ ಮುಖ್ಯ ಸಮಸ್ಯೆ ಕೇವಲ ಮಾಧ್ಯಮ ಬದಲಾದದ್ದಷ್ಟೆ ಆಗಿರಲಿಲ್ಲ. ಇಂಗ್ಲಿಷ್ ಶಿಕ್ಷಣ ಇಲ್ಲದೇ ಇದ್ದದ್ದೂ ಕಾರಣವಾಗಿತ್ತು. ಇಂಗ್ಲಿಷ್ ಮೇಷ್ಟುಗಳ ಅಭಾವ ಇದ್ದ ಅನೇಕ ಶಾಲೆಗಳಲ್ಲಿ, ಪರೀಕ್ಷೆಗೆ ಬರಬಹುದಾದ ಹತ್ತಾರು ಪ್ರಶ್ನೆಗಳಿಗೆ ಉತ್ತರ ಬರೆಯಿಸಿ ಉರು ಹೊಡಿಸಿ ಪಾಸ್ ಮಾರ್ಕ್ಸ‌ಗಳಿಸುವಷ್ಟು ಸಿದ್ಧ ಮಾಡಿರು ತ್ತಿದ್ದರು. ಹಾಗಾಗಿ ಪಿ.ಯು.ಸಿ.ಗೆ ಬಂದಾಗ ಗೊತ್ತಿದ್ದ ವಿಷಯವನ್ನು ಬರೆಯಲೂ ಇಂಗ್ಲಿಷ್ ಭಾಷಾ ಜ್ಞಾನ ಸಾಲುತ್ತಿರಲಿಲ್ಲ. ಈ ಸಮಸ್ಯೆ ನಿಭಾಯಿಸಲಿಕ್ಕೆ ಮೊದಲು ಇಂಗ್ಲಿಷ್ ಭಾಷೆಯಲ್ಲಿ, ವಾಕ್ಯ ಹೇಗೆ ರಚನೆ ಮಾಡುತ್ತಾರೆ ಎನ್ನುವುದರಿಂದ ಆರಂಭಗೊಂಡು, ಶಬ್ದ ಭಂಡಾರ ಬೆಳೆಸುವುದು, Physics, Chemistry, Biology ಯ ವಿಷಯಗಳನ್ನು ಹೇಗೆ ಬರೆಯಬಹುದು ಇತ್ಯಾದಿ ಎಲ್ಲವನ್ನು ಒಂದೇ ವರ್ಷದಲ್ಲಿ ಕಲಿಯುವುದು ಭೀಮ ಸಾಹಸವೇ ಆಯಿತು.

ಈಗ, ನಿಮ್ಮ ಆ ದಿನಗಳ ಸಮಸ್ಯೆಗಳನ್ನು ನೆನಪಿಸಿಕೊಂಡರೆ ಏನನ್ನಿಸುತ್ತದೆ?

ಅನಗತ್ಯವಾಗಿ ಒಂದು ವರ್ಷ ಮಾನಸಿಕ ಯಾತನೆಯನ್ನು ಅನುಭವಿಸಿದ್ದಷ್ಟೇ ನೆನಪಿದೆ. ಪರೀಕ್ಷೆ ಅನ್ನುವುದು ವಿದ್ಯಾರ್ಥಿಯ ಭಾಷಾ ಮಟ್ಟವನ್ನು ಅಳೆಯುವ ಸಾಧನವಾಗದೇ ಜ್ಞಾನ ಮಟ್ಟವನ್ನು ಅಳೆಯುವುದೇ ಆಗಿದ್ದರೆ, ಉತ್ತರ ಯಾವ ಭಾಷೆಯಲ್ಲಾದರೂ ಬರೆಯಿರಿ ಎಂದು ಆದೇಶ ಹೊರಡಿಸಬಹುದಲ್ಲ ಎಂದು ನಾವು ಸ್ನೇಹಿತರುಗಳು ಸೇರಿ ವಾದ ಮಾಡುತ್ತಿದ್ದದ್ದರಲ್ಲಿ, ಸತ್ಯ ಇದೆ ಅನ್ನಿಸುತ್ತದೆ. ಕನ್ನಡ ಮಾಧ್ಯಮದಿಂದ ಬಂದ ವಿದ್ಯಾರ್ಥಿ ಕನ್ನಡಾಂಗ್ಲದಲ್ಲಿ ಉತ್ತರ ಬರೆಯುತ್ತಾ ತನ್ನ ತೊಡಕನ್ನು ನಿವಾರಿಸಿಕೊಂಡು ಉತ್ತಮ ಶ್ರೇಣಿಯನ್ನು ಪಡೆಯುತ್ತಿದ್ದ ಎನ್ನುವು ದಂತೂ ಸತ್ಯ. SSLC ಯ ವರೆಗಿದ್ದ Self Confidence ಇಂಗ್ಲಿಷ್ ಮಾಧ್ಯಮದಲ್ಲಿ PUC ಓದಬೇಕಾಗಿ ಬಂದಾಗ ತಮ್ಮ ಶಕ್ತಿಯ ಬಗ್ಗೆ ಅಪನಂಬಿಕೆ ಹುಟ್ಟಿಸಿ, ಒಂದು Complex ಸೃಷ್ಟಿ ಮಾಡಿದ್ದರ ಬಗ್ಗೆ ಈಗಲೂ ದುಃಖವಿದೆ. ಪ್ರಾಥ ಮಿಕ ಶಿಕ್ಷಣ ಮಾತೃ ಭಾಷೆಯಲ್ಲಿರಲಿ, ಅನಂತರದ ಶಿಕ್ಷಣದ ಮಾಧ್ಯಮ ಬದಲಾದರೆ ಚಿಂತೆಯಿಲ್ಲ ಎಂದು ಹೇಳುವವರು, ಹಾಗೆ ಮಾಧ್ಯಮ ಬದಲಾದಾಗ ಧುತ್ತೆಂದು ಎದುರಾಗುವ ಈ ಸಮಸ್ಯೆಯನ್ನೂ ಗಮನದಲ್ಲಿಟ್ಟುಕೊಂಡರೆ ಅವರ ಮಾತುಗಳು ಸ್ವಲ್ಪ ಬದಲಾಗಬಹುದು.

ಇಂದು ಇದೇ ಸಮಸ್ಯೆಗಳನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳಿಗೆ ನಿಮ್ಮ ಸಲಹೆ ಏನು?

ತತ್ತರಿಸದಿರಿ - ಎಂದಷ್ಟೇ ಹೇಳಬಲ್ಲೆ. ಏಕೆಂದರೆ ಗಾಬರಿ ಬೀಳಬೇಡಿ ಎಂದರೆ ಅದೊಂದು ಪೊಳ್ಳು ಉಪದೇಶವಾದೀತು. ಆದರೆ. ಒಂದು ಮಾತು ಸತ್ಯ. ಇವತ್ತಿನ ವಿದ್ಯಾರ್ಥಿ ಪ್ರಾಯಶಃ ನಾವು ಅನುಭವಿಸಿದಷ್ಟು ತೀವ್ರವಾದ ಗೊಂದಲಕ್ಕೆ ಸಿಕ್ಕಿರಲಾರ. ಒಂದು ವರ್ಷ ಕಾಲಾವಧಿಯ ಪಿ.ಯು.ಸಿ. ಎರಡು ವರ್ಷವಾಗಿ ದ್ದರಿಂದ ಇಂಗ್ಲಿಷ್ ಭಾಷೆಯ ಸಂಭಾಳಿಸಲಿಕ್ಕೆ ಹೆಚ್ಚಿನ ಸಮಯ ಸಿಗುತ್ತದೆ. ಹಾಗೆಯೇ ಬೇರೆ ಬೇರೆ ಸುದ್ದಿ ಮಾಧ್ಯಮಗಳಿಂದಾಗಿ ಮತ್ತು ಇವತ್ತಿನ ವಿದ್ಯಾರ್ಥಿಯ ಮನೆಯ ಜನರ ವಿದ್ಯಾ ಮಟ್ಟವು ಬೆಳೆದಿರುವುದರಿಂದ ಇಂಗ್ಲಿಷ್ ಭಾಷೆ ನಮಗೆಷ್ಟು ಪರಕೀಯ ಅನ್ನಿಸುತ್ತೆ ಅಷ್ಟು ಅನ್ನಿಸಿರಲಾರದು. ಹಾಗಾಗಿ ಆತ ಸಹಜವಾಗಿ ಹೆಚ್ಚು ವಿಶ್ವಾಸದಿಂದ ಈ ಮಾಧ್ಯಮ ಪಲ್ಲಟವನ್ನು ಎದುರಿಸಿಯಾರು.

ಪ್ರಾಥಮಿಕ ಶಿಕ್ಷಣ ಯಾವ ಭಾಷೆಯಲ್ಲಿದ್ದರೆ ಒಳ್ಳೆಯದೆಂದು ನೀವು ಭಾವಿಸುತ್ತೀರಿ?

ಮಾತೃ ಭಾಷೆಯಲ್ಲಿರುವುದು ಆದರ್ಶ ವಾದದ್ದು ನಿಜ. ಆದರೆ ಇಂದಿನ ಸ್ಪರ್ಧಾತ್ಮಕ ದಿನಗಳಲ್ಲಿ ನಾವು ಭಾಷೆಗೆ ಹೊಸ ಕಸುವು ತುಂಬದೇ, ಎಲ್ಲ ರೀತಿಯ ವಿಜ್ಞಾನ ತಾಂತ್ರಿಕ, ವಿಷಯಗಳಿಗೆ ಸಂಬಂಧಿಸಿದ ಪಠ್ಯ ಮತ್ತು ವಸ್ತು ವಿಷಯಗಳು ಈ ಭಾಷೆಯಲ್ಲೇ ವಿದ್ಯಾರ್ಥಿಗೆ ಸಿಗುವಂತೆ ಮಾಡದೇ ಇದ್ದರೆ, ಆಗ ಆ ಆದರ್ಶವೇ ಉರುರಾಗಬಹುದು. ಕನ್ನಡ ಭಾಷೆಯಲ್ಲಿ ಇಂತಹ ಶೋಚನೀಯ ಸ್ಥಿತಿ ಇದೆ. ಅನ್ಯ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ನೀಡಿದರೆ ಮಕ್ಕಳ ಗ್ರಹಣ ಶಕ್ತಿ ಕುಂದುತ್ತದೆ ಎಂಬ ಮಾತನ್ನು ನಾವು ಸದಾ ಕೇಳುತ್ತಿರುತ್ತೇವೆ. ಆದರೆ ಇವತ್ತು ಎಲ್ಲ ನಗರಗಳಲ್ಲಿ ಪ್ರಾಥಮಿಕ ಶಿಕ್ಷಣ ಆಂಗ್ಲ ಭಾಷೆಯಲ್ಲೇ ಇರುತ್ತದೆ. ಮಕ್ಕಳ ಗ್ರಹಣ ಶಕ್ತಿಯ ಮೇಲೆ ಅದರ ಪರಿಣಾಮ ಏನು ಎಂದು ಯಾರಾದರೂ ಯಾವುದೇ ಪೂರ್ವಾಗ್ರಹ ಇಲ್ಲದೇ ಸಮೀಕ್ಷೆ ನಡೆಸಿದರೆ ಆ ಮಾತಿನ ಸತ್ಯಾಸತ್ಯತೆ ತಿಳಿಯುತ್ತದೆ.

■ **ವಸುಧೇಂದ್ರ**


ಮತಾಂತರ ಒಂದು ಸಮಸ್ಯೆಯೆ?

ಅಭಿಪ್ರಾಯಗಳಿಗೆ ಆಹ್ವಾನ

ಇತ್ತೀಚೆಗೆ ದೇಶದಲ್ಲಿ ಮತಾಂತರದ ಪ್ರಶ್ನೆ ಬೃಹದಾಕಾರವಾಗಿ ಬೆಳೆದು ನಿಂತಿದೆ. ಈ ಕುರಿತು ಆರೋಗ್ಯಕರ ಚರ್ಚೆ ನಡೆದು ವಾತಾವರಣವನ್ನು ತಿಳಿಗೊಳಿಸುವ ಅಗತ್ಯ ತುಂಬಾ ಇದೆ. ಆಸಕ್ತ ಓದುಗರು, ಈ ವಿಷಯದ ಬಗ್ಗೆ ತಮ್ಮ ಅಭಿಪ್ರಾಯವನ್ನು ಬರೆದು ಕಳಿಸಬಹುದು. ನಿಮ್ಮ ಅಭಿಪ್ರಾಯಗಳು ಮುಂದಿನ ಸಂಚಿಕೆಯಲ್ಲಿ ಪ್ರಕಟಗೊಳ್ಳುತ್ತವೆ.

ಭಾರತ ದೇಶ ಅಹಿಂಸಾ ಮಾರ್ಗದಿಂದ ಸ್ವಾತಂತ್ರ್ಯ ಪಡೆದು ವಿಶ್ವಕ್ಕೆ ಮಾದರಿಯಾಗಿತ್ತು. ನಾವು ಸ್ವಾತಂತ್ರ್ಯ ಪಡೆದು 50 ವರುಷವಾದರೂ ನಮ್ಮ ಸಮಸ್ಯೆಯನ್ನು ಪರಿಹರಿಸಿಕೊಳ್ಳಲಾರದೆ ಒದ್ದಾಡುತ್ತಿದ್ದೇವೆ. ನಾಶವಾದ ಜಪಾನ್ ದೇಶವು 20 ವರುಷದಲ್ಲಿ ಪ್ರಬಲ ರಾಷ್ಟ್ರವಾಯಿತು. ನಾವು ದಿನೇ ದಿನೇ ಅನಾಗರಿಕರಾಗುತ್ತಿದ್ದೇವೆ. ನಮ್ಮ ಕಣ್ಣ ಮುಂದೆ ನಡೆದ ಕೆಲವು ಘಟನೆಗಳಿಂದ ನಾವು ಅತೀ ಶ್ರೇಷ್ಠವಾದ ಮಾನವ ಧರ್ಮವನ್ನು ಮರೆಯುತ್ತಿದ್ದೇವೆ ಅನ್ನಿಸುತ್ತದೆ. ನಾನು 5 ನೇ ತರಗತಿ ಓದುತ್ತಿದ್ದಾಗ ನನ್ನ ತಾಯಿ ನನ್ನನ್ನು ಕಟೀಲು ದೇವಸ್ಥಾನಕ್ಕೆ ಕರೆದುಕೊಂಡು ಹೋದರು. ನಾವು ದೇವಾಲಯಕ್ಕೆ ಹೋಗಿ ಹಣ್ಣುಕಾಯಿ ಮಾಡಿ ದೇವರಿಗೆ ಪೂಜೆ ಸಲ್ಲಿಸಿ ಅಂಗಳದಲ್ಲಿ ಕುಳಿತಿದ್ದೆವು. ನಾನು ಹಸಿವು ತಾಳಲಾರದೆ ಅಮ್ಮ ನಾವು ಹೋಟೆಲಲ್ಲಿ ಊಟ ಮಾಡೋಣ ಎಂದೆ. ಸ್ವಲ್ಪ ತಾಳು, ಇಲ್ಲಿ ದೇವರ ಪ್ರಸಾದ ರೂಪದಲ್ಲಿ ಊಟ ಕೊಡುತ್ತಾರೆ ಇದನ್ನು ಸ್ವೀಕರಿಸಬೇಕು ಎಂದರು. ಹಸಿವು ತಾಳಲಾರದೆ ಅತ್ತಿತ್ತ ಕಣ್ಣು ಹಾಯಿಸಿದಾಗ ಎದುರಿನ ಕೋಣೆಯೊಂದರಲ್ಲಿ ಕೆಲವು ಮಂದಿ ಊಟ ಮಾಡುತ್ತಿದ್ದರು. ಅಮ್ಮ ಅಲ್ಲಿ ಎಲ್ಲರೂ ಊಟ ಮಾಡುತ್ತಿದ್ದಾರೆ. ನಾವು ಅಲ್ಲಿಗೆ ಹೋಗೋಣ ಎಂದೆ. ಅದು ಬ್ರಾಹ್ಮಣರು ಊಟ ಮಾಡೋದು. ಅವರು ಊಟ ಮಾಡಿದ ಮೇಲೆಯೇ ನಾವು ಊಟ ಮಾಡಬೇಕು ಎಂದರು. ಹಿಂದುಗಳು ನಾವೆಲ್ಲರೂ ಒಂದೆ ಎನ್ನುತ್ತಾರಲ್ಲ, ಮತ್ತೆ ಈ ತಾರತಮ್ಯವೇಕೆ? ಎಂದು ತಾಯಿಯನ್ನು ಕೇಳಿದೆ. ಅದು ನಿನಗೆ ಬೇಡ ಸುಮ್ಮನೆ ಕುಳಿತುಕೋ ಎಂದರು. ಆ ಘಟನೆ ನಡೆದು 10 ವರುಷ ಸಂದರೂ ನನ್ನ ಪ್ರಶ್ನೆಗೆ ಉತ್ತರ ದೊರೆಯಲಿಲ್ಲ. ಒಂದು ದಿನ ನಮ್ಮ ಮನೆಗೆ ಹರಿಜನ ಹೆಂಗಸು ಕೆಲಸಕ್ಕೆ ಬಂದಳು. ನಾನು ಅವಳ ಜೊತೆ ಕೆಲಸ ಮಾಡಲು ಹೋದೆ. ನಮ್ಮೂರಿನಲ್ಲಿ ಹರಿಜನರನ್ನು, ಇತರೆ ಹಿಂದೂಗಳು ಏಕವಚನದಿಂದ ಕರೆಯುವ ಸಂಪ್ರದಾಯವಿದೆ. ಅಂತೆಯೇ ನಾನು ಸಹ ನನ್ನ ತಾಯಿಯ ಪ್ರಾಯದವಳಾದ ಅವಳನ್ನು ಏಕವಚನದಿಂದ ಕರೆಯುತ್ತಿದ್ದೆ. ನಾವು ಕೆಲಸ ಮಾಡುತ್ತಿರುವಾಗ ನೋಡು ನಿನ್ನ ಬೆನ್ನ ಮೇಲೆ ಒಂದು ಇರುವೆ ಇದೆ ನಾನು ತೆಗೆಯುತ್ತೇನೆ ಎಂದೆ. ಅಯ್ಯೋ ದೇವರೆ ನೀವು ನನ್ನನ್ನು ಮುಟ್ಟಬೇಡಿ ಎಂದು ಮಾರು ದೂರ ಓಡಿ ಹೋದಳು. ನಾವು ಹರಿಜನರು ನಿಮ್ಮನ್ನು ಮುಟ್ಟಿದರೆ ನಿಮಗೆ ಮೈಲಿಗೆಯಾಗುತ್ತದೆ ಎಂದಳು. ಹರಿಜನರಾದರೂ ನೀವು ಹಿಂದುಗಳೇ. ಮೈಲಿಗೆ ಏನೂ ಇಲ್ಲ ಎಂದು ಹೇಳಿದರೂ, ಅವಳೂ ನನ್ನ ಹತ್ತಿರ ಸುಳಿಯಲಿಲ್ಲ. ನಮ್ಮನ್ನು ತಾಯಿ ಕಾಫಿ ಕುಡಿಯಲು ಕರೆದರು. ನಮ್ಮ ಕೆಲಸದಾಕೆ ಹಟ್ಟಿಯಲ್ಲಿ ಕಾಫಿ ಕುಡಿಯಲು ಕುಳಿತಳು. ಅವಳನ್ನು ನಮ್ಮ ಮನೆಯ ಜಗಲಿಯ ಮೇಲೆ ಕಾಫಿ ಕುಡಿಯಲು ಕರೆಯುವಂತೆ ತಾಯಿಯನ್ನು ಒತ್ತಾಯ ಮಾಡಿ ಒಪ್ಪಿಸಿದೆ. ಆದರೆ ನನ್ನ ತಾಯಿ ಎಷ್ಟೇ ಕರೆದರೂ ಆಕೆ ಜಗಲಿಯ ಮೇಲೆ ಕಾಫಿ ಕುಡಿಯಲು ಬರಲೆ ಇಲ್ಲ. ಸ್ವಲ್ಪ ಸಮಯದ ನಂತರ ನಮ್ಮ ಮನೆಗೆ ರೀತಾ ಎಂಬ ಹೆಸರಿನ ಹೆಂಗಸು ಕೆಲಸಕ್ಕೆ ಬಂದಳು. ಅವಳು ಹಿಂದು ಧರ್ಮದ ಹರಿಜನ ಜಾತಿಯಿಂದ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದವಳು. ಅಮ್ಮ ಇವಳನ್ನು ಬಹುವಚನದಿಂದ ಕರೆಯಬಹುದೆ? ಎಂದು ತಾಯಿಯಲ್ಲಿ ಕೇಳಿದಕ್ಕೆ ಮಗಳೇ ಧರ್ಮ ಬದಲಾದರೆ ಸಾಲದು. ಮಾನವನ ಮನಸ್ಸು ಬದಲಾಗಬೇಕು. ನಾವು ಕೊಟ್ಟ ಗೌರವವನ್ನು ಅವರು ಸ್ವೀಕರಿಸಬೇಕು. ಪ್ರತಿಯಾಗಿ ಗೌರವ ಕೊಡಲು ಗೊತ್ತಿರಬೇಕು, ನಮ್ಮ ಮನೆಗೆ ಹರಿಜನ ವಿದ್ಯಾವಂತರಾದ ಅಧಿಕಾರಿಗಳು ಬಂದರೆ ನಾವು ಅವರನ್ನು ಬಹುವಚನದಲ್ಲಿ ಕರೆಯುವುದಿಲ್ಲವೆ? ಅವರನ್ನು ಗೌರವಿಸುವುದಿಲ್ಲವೆ? ಗೌರವ ಕೊಡುವುದಕ್ಕೆ ಜಾತಿ ಅಡ್ಡಿಯಾಗಲಾರದು ಎಂದರು. ನನಗೆ ರೀತಾಳು ಹಿಂದು ಧರ್ಮದಿಂದ ಯಾಕೆ ಮತಾಂತರ ಹೊಂದಿದಳೆಂದು ತಿಳಿಯುವ ಕುತೂಹಲದಿಂದ ಅವಳನ್ನು ಪ್ರಶ್ನಿಸಿದೆ. ನೀನು ಯಾಕೆ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದೆ ಎಂದು ಕೇಳಿದೆ. ನೋಡಿ ಅಮ್ಮಾ ನಾವು ಬಡವರು ಇಂದು ದುಡಿದರೆ ಮಾತ್ರ ನಮ್ಮ ಹೊಟ್ಟೆ ತುಂಬುತ್ತದೆ. ರೋಗ ಬಂದರೆ ಔಷಧಿ ತರ ನಮ್ಮಲ್ಲಿ ಹಣವಿಲ್ಲ ನನ್ನ ಗಂಡ ದುಡಿದುದನ್ನೆಲ್ಲ ಕುಡಿದು ಮನೆಗೆ ಬಂದು ಜಗಳ ಮಾಡುತ್ತಾನೆ. ಕ್ರೈಸ್ತ ಧರ್ಮಕ್ಕೆ ಸೇರಿದರೆ ಕಷ್ಟಕಾಲದಲ್ಲಿ ಸಹಾಯ ಮಾಡುತ್ತಾರೆ ಎಂದು ಕೇಳಿ ಕ್ರೈಸ್ತ ಧರ್ಮಕ್ಕೆ ಸೇರಿದೆ, ನಾನು ಪ್ರತಿ ವಾರ ಚರ್ಚಿಗೆ ಹೋಗಿ ಪ್ರಾರ್ಥನೆ ಮಾಡುತ್ತೇನೆ. ನನ್ನ ಗಂಡನು ಚರ್ಚ್‌ಗೆ ಹೋಗುತ್ತಾರೆ. ಈಗ ಕುಡಿಯುವುದನ್ನು ಕಡಿಮೆ ಮಾಡಿದ್ದಾರೆ. ನನ್ನ ಮಕ್ಕಳನ್ನು ಚರ್ಚ್ ಶಾಲೆಗೆ ಸೇರಿಸಿದ್ದೇನೆ. ಅಲ್ಲಿ ಉತ್ತಮ ರೀತಿಯಲ್ಲಿ ಪಾಠ ಹೇಳಿ ಕೊಡುತ್ತಾರೆ. ನಮಗೆ ಚರ್ಚಿನಲ್ಲಿ ಉಚಿತವಾಗಿ ಹಾಲಿನ ಹುಡಿ ಕೊಡುತ್ತಾರೆ ಮತ್ತು ನಮ್ಮ ಕಷ್ಟ ಕಾಲದಲ್ಲಿ ಸಹಾಯ ಮಾಡುತ್ತಾರೆ ಎಂದಳು. ನೀವು ಚರ್ಚಿನಲ್ಲಿ ಇತರ ಕ್ರೈಸ್ತರ ಜೊತೆಗೆ ಒಟ್ಟಿಗೆ ಪೂಜೆ ಮಾಡುತ್ತೀರಾ ಎಂದು ಕೇಳಿದ್ದಕ್ಕೆ, ಹೌದು ಅವರು ನಮ್ಮನ್ನು ಇತರ ಕ್ರೈಸ್ತರಂತೆ ಕಾಣುತ್ತಾರೆ ಎಂದಳು. ನನಗೆ ಬಹಳ ಆಶ್ಚರ್ಯವಾಯಿತು. ವಿಶ್ವದ ಅತೀ ದೊಡ್ಡ ಧರ್ಮವಾದ ಕ್ರೈಸ್ತ ಧರ್ಮವು ಸಮಾಜದಲ್ಲಿ ತುಳಿತಕ್ಕೆ ಒಳಗಾದ ಇವರನ್ನು ತನ್ನ ಧರ್ಮಕ್ಕೆ ಸೇರಿಸಿ ಅವರ ಕಷ್ಟ ಸುಖದಲ್ಲಿ ಭಾಗಿಗಳಾಗಿರುವುದು ತುಂಬ ಪ್ರಶಂಸಾರ್ಹ. ಇವರನ್ನು ಮತಾಂತರಿಗಳು ಎನ್ನುವುದಕ್ಕಿಂತ ಸಮಾಜ ಸುಧಾರಕರೆಂದು ಹೇಳುವುದು ಉತ್ತಮ. ಸಮಾಜ ಸುಧಾರಣೆಯ ಹೆಸರಿನಲ್ಲಿ ಬಡವರನ್ನು ಸುಲಿಗೆ ಮಾಡುವ ರಾಜಕಾರಣಿಗಳಿಗಿಂತ ಇವರು ಉತ್ತಮರಲ್ಲವೆ? ಮತಾಂತರ ಮಾಡಿಸುತ್ತಾರೆ ಎಂದು ಚರ್ಚ್‌ಗಳ ಮೇಲೆ, ಧರ್ಮ ಪ್ರಚಾರಕರ ಮೇಲೆ ಹಲ್ಲೆ ಮಾಡುವುದು ಅನಾಗರಿಕ ಲಕ್ಷಣ. ಇದಕ್ಕೆ ಪ್ರತಿಯಾಗಿ ಕ್ರೈಸ್ತರು ನಮ್ಮ ದೇವಾಲಯಗಳಲ್ಲಿ ಮಠಾಧೀಶರ ಮೇಲೆ ದಾಳಿ ಮಾಡಿದರೆ ನಮ್ಮ ದೇಶ ಹೊತ್ತಿ ಉರಿಯುದಿಲ್ಲವೆ. ಕೆಲವು ಸಮಾಜಘಾತಕ ಶಕ್ತಿಗಳು ಮಾಡುವ ತಪ್ಪಿಗೆ ಇಡೀ ದೇಶವೆ ಬೆಲೆ ತೆರಬೇಕಾಗುತ್ತದೆ. ಆದರೆ ಕ್ರೈಸ್ತ ಬಾಂಧವರು ಒಂದು ಕೆನ್ನೆಗೆ ಹೊಡೆದರೆ ಮತ್ತೊಂದು ಕೆನ್ನೆ ಕೊಡು ಎಂಬ ಅವರ ಧರ್ಮದ ಮಾನವೀಯ ಮೌಲ್ಯವನ್ನು ಎತ್ತಿ ಹಿಡಿದು, ಸಣ್ಣ ಪುಟ್ಟ ವಿಷಯಕ್ಕೆ ಸದಾ ಕಚ್ಚಾಡುವ ಹಿಂದೂ ಮುಸಲ್ಮಾನರಿಗೆ ಮಾದರಿಯಾಗಿದ್ದಾರೆ. ಹಿಂದೂ ಧರ್ಮದ ಬಗ್ಗೆ ನಿಜವಾದ ಕಾಳಜಿಯುಳ್ಳವರು ಚರ್ಚ್‌ಗಳ ಮೇಲೆ ದಾಳಿ ಮಾಡುವುದಿಲ್ಲ. ದಾಳಿ ಮಾಡುವ ಬದಲು ತಮ್ಮ ಧರ್ಮದಲ್ಲಿರುವ ತಾರತಮ್ಯಗಳನ್ನು ದೂರಮಾಡಿ ನಾವೆಲ್ಲವರೂ ಒಂದೇ ತಾಯಿಯ ಮಕ್ಕಳು ಎಂದು ಕಾಣುವಂತಾಗಲಿ.

■ಕುಮಾರಿ ವೀಣಾ. ಪುಂಜಾಲಕಟ್ಟೆ



ಶಿಕ್ಷಣ ಕ್ಷೇತ್ರ ದಿಗ್ಗಜ

ಪ್ರೊ. ಎನ್. ವಜ್ರಕುಮಾರ್

ಧಾರವಾಡದ ಜೆ.ಎಸ್.ಎಸ್. ಕಾಲೇಜಿನ ಪ್ರಾಚಾರ್ಯ ಪಟ್ಟದಿಂದ ನಿವೃತ್ತರಾದ ಮೇಲೆ (31.5.98) ಇದೀಗ ಇಡಿಯಾಗಿ ಶಿಕ್ಷಣ ರಂಗದ ಏಳ್ಗೆಯಲ್ಲಿ ಪ್ರವೃತ್ತರಾಗಿರುವ ಪ್ರೊ. ಎನ್. ವಜ್ರ ಕುಮಾರ್ ನಮ್ಮ ನಡುವಣ ಅಸಾಮಾನ್ಯ ಸಂಘಟಕ, ಅಸದೃಶ ಯೋಜನೆಗಳ ಪ್ರವರ್ತಕ.

ಉಡುಪಿಯ ಎಂ.ಜಿ.ಎಂ. ಕಾಲೇಜಿನ ಪ್ರಾಧ್ಯಾಪಕರಾಗಿದ್ದ ವಜ್ರಕುಮಾರರು ಧಾರವಾಡಕ್ಕೆ ಬಂದುದು ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಅಪೇಕ್ಷೆ ಮೇರೆಗೆ. ಅಲ್ಲಿನ ಜೆ.ಎಸ್.ಎಸ್ ಕಾಲೇಜು ಆರ್ಥಿಕವಾಗಿ ಕುಸಿದಿದ್ದ ಕಾಲದಲ್ಲಿ, ಕಾಯಕಲ್ಪ ಚಿಕಿತ್ಸೆ ನೀಡಲೆಂದೇ ಬಂದ ಅವರು, ಸುಮಾರು ಎರಡೂವರೆ ದಶಕಗಳ ಕಾಲ ಅದರ ಪ್ರಾಂಶುಪಾಲರಾಗಿ ಪ್ರಗತಿ ಪಥದಲ್ಲಿ ಮುನ್ನಡೆಸಿದರು. ಜನತಾ ಶಿಕ್ಷಣ ಸಮಿತಿಯ ಕಾರ್ಯದರ್ಶಿಯಾಗಿ ಹತ್ತು ಹಲವು ಕಾಲೇಜುಗಳನ್ನು ಕಟ್ಟಿ ಬೆಳೆಸಿದರು.

ಉಡುಪಿ ಸನಿಹದ ನಂದಿ ಕೂರಿನಲ್ಲಿ ಜನಿಸಿದ (29.5.1940) ವಜ್ರಕುಮಾರ್ ಅವರದು ಜೈನಧರ್ಮ. ಅರಸು ಮನೆತನ. ಆಳಾಗಿ ದುಡಿಯುವ ಸರಳತನ. ಅರ್ಥಶಾಸ್ತ್ರದಲ್ಲಿ ಎಂ.ಎ. ಮಾಡಿರುವ ಅವರು ನಾಲ್ಕು ಗೋಡೆಗಳ ನಡುವೆ ನಿಂತು ಕೇವಲ ಬೋಧನೆಯಲ್ಲಿ ತೊಡಗಲಿಲ್ಲ. ಕಿರಿಯರ ಕನಸುಗಳನ್ನು ನನಸಾಗಿಸಲು ಹೇಗೆಲ್ಲಾ ಸಾಧ್ಯ ಎಂಬುದರ ಶೋಧನೆಯಲ್ಲಿ ತೊಡಗಿದರು. ಜೆ.ಎಸ್.ಎಸ್. ಕಾಲೇಜು ಅವರ ಪ್ರಯೋಗ ಶಾಲೆಯಾಯಿತು. ಧಾರವಾಡದ ನೆಲ ರಂಗ ಸ್ಥಳವಾಯಿತು ವಿದ್ಯಾಗಿರಿಯಲ್ಲಿ ವಿದ್ಯಾಧಿದೇವತೆಯ ನರ್ತನ ನಿರಂತರವೆನಿಸಿತು. ಕರ್ನಾಟಕ ವಿಶ್ವವಿದ್ಯಾನಿಲಯ ಸಂಪನ್ನಗೊಂಡಿತು.

ಡಾ. ವೀರೇಂದ್ರ ಹೆಗ್ಗಡೆಯವರ ರಕ್ಷೆ. ವಜ್ರಕುಮಾರ್‌ರ ನೀಲ ನಕ್ಷೆ. ಜನತಾ ಶಿಕ್ಷಣ ಸಮಿತಿಯ ಹದಿಮೂರು ವಿದ್ಯಾಸಂಸ್ಥೆಗಳು ಉದಿಸಿ ಬಂದವು. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶೈಕ್ಷಣಿಕ ಸಂಸ್ಥೆಯ ಪ್ರತಿನಿಧಿಯಾಗಿ ದುಡಿದರು. ಎಸ್.ಡಿ.ಎಂ. ಇಂಜಿನಿಯರಿಂಗ್ ಮತ್ತು ದಂತ ವಿಜ್ಞಾನ ಕಾಲೇಜುಗಳನ್ನು ಅದ್ಭುತವಾಗಿ ಮುನ್ನಡೆಸಿದರು. ಫಿಜಿಯೊಥೆರಪಿ ಕಾಲೇಜು ವಿಶಿಷ್ಟವಾದುದು. ದಂತ ವಿಜ್ಞಾನ ಕಾಲೇಜು ದಕ್ಷಿಣ ಏಷ್ಯಾದಲ್ಲೇ ಅತ್ಯುತ್ತಮ. ಉತ್ತರ ಕರ್ನಾಟಕ ಭಾಗದಲ್ಲಿ ಕೆ.ಎಲ್.ಇ. ಸೊಸೈಟಿಯ ಶಿಕ್ಷಣ ಸಂಸ್ಥೆಗಳು ಸುಪ್ರಸಿದ್ಧ. ಇತರ ಖಾಸಗಿ ಶಿಕ್ಷಣ ಸಂಸ್ಥೆಗಳು ಅನೇಕ ಇವೆ. ಅಹಿತಕರ ಪೈಪೋಟಿಗೆ ಅವಕಾಶ ನೀಡದೆ, ಅತ್ಯುತ್ತಮ ಶಿಕ್ಷಣ ಸಂಸ್ಥೆಗಳನ್ನು ಸುವ್ಯವಸ್ಥಿತವಾಗಿ ಮುನ್ನಡೆಸಿದವರು ವಜ್ರಕುಮಾರ್.

ತುಳು, ಕನ್ನಡ, ಆಂಗ್ಲ ಭಾಷೆಗಳಲ್ಲಿ ಪ್ರಭುತ್ವ ಹೊಂದಿರುವ ಶ್ರೀಯುತರ ಬಾಳಸಂಗಾತಿ ಸುಮನಾ. ಪ್ರತಿಫಲಾಪೇಕ್ಷೆ ಇಲ್ಲದ ಬದುಕು. ಮಕ್ಕಳಿಲ್ಲದ ಕೊರಗನ್ನು ಮುಚ್ಚಿಟ್ಟು ಸಾವಿರಾರು ಕಿರಿಯರ ಬಾಳನ್ನು ಅರಳಿಸುವುದರಲ್ಲೇ ಬದುಕಿನ ಸಾರ್ಥಕತೆ ಕಂಡುಕೊಳ್ಳುತ್ತಿದ್ದಾರೆ. ಉಡುಪಿಯಲ್ಲಿ ಉದಿಸಿ, ಧಾರವಾಡದಲ್ಲಿ ನೆಲೆಸಿ, ಶಿಕ್ಷಣ ರಂಗದ ಉನ್ನತಿಗಾಗಿ ಇಡೀ ಬಾಳನ್ನು ಸವೆಸಿ, ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಿ, ವಜ್ರದಂತೆ ಮಿಂಚುತ್ತಿರುವ ವಜ್ರಕುಮಾರ್ ಅಜಾತ ಶತ್ರು. ಅವರಿಲ್ಲದ ಸಾಹಿತ್ಯಕ, ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕ ಕಾರ್ಯಕ್ರಮಗಳನ್ನು, ಸಮಾರಂಭಗಳನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ.


ಜೆ.ಎಸ್.ಎಸ್. ಕ್ಯಾಂಪಸ್ ಇತರ ಕಾಲೇಜು ಕ್ಯಾಂಪಸ್‌ಗಳಿಗಿಂತ ಭಿನ್ನ. ಇಲ್ಲಿನ ಶಿಸ್ತು, ಒಪ್ಪ ಓರಣ, ಶಿಕ್ಷಕರ ಸಹೃದಯತೆ, ವಿದ್ಯಾರ್ಥಿ ಸಮುದಾಯದ ಪ್ರಸನ್ನತೆ... ಎಲ್ಲವೂ ವಿಶಿಷ್ಟ; ವಿಶೇಷ. ಗ್ರಂಥಾಲಯ, ಆಟದ ಬಯಲು, ಬಯಲು ನಾಟ್ಯಮಂದಿರ, ಕೈಗಾರಿಕಾ ಸಂಸ್ಥೆಗಳು, ರಾಷ್ಟ್ರೀಯ ಸೇವಾ ಯೋಜನೆಗಳು, ಗ್ರಾಮೀಣ ಅಭಿವೃದ್ಧಿಯ ಪರಿಕಲ್ಪನೆಗಳು, ಸ್ವಉದ್ಯೋಗ ಯೋಜನೆಯ ನೀಲ ನಕ್ಷೆಗಳು... ಪ್ರತಿಯೊಂದರಲ್ಲೂ ನವೀನತೆ; ರೋಚಕತೆ. ಇದರ ಹಿಂದಿರುವ ಶಕ್ತಿ ಪ್ರೊ. ವಜ್ರಕುಮಾರ್ ಎಂಬುದು ಎಲ್ಲರಿಗೂ ಗೊತ್ತು.

ಅರವತ್ತನ್ನು ಸಮೀಪಿಸುತ್ತಿರುವ ವಜ್ರ ಕುಮಾರ್‌ರ ಬದುಕು ಅರಳುತ್ತಿದೆ. ಅನುಭವದ ಪಾತಳಿಯ ಮೇಲೆ ಶಿಕ್ಷಣ ದೇಗುಲಗಳನ್ನು ನಿರ್ಮಿಸುತ್ತಿದ್ದಾರೆ. ಕಠಿಣ ಕಲ್ಲುಗಳನ್ನು ಕೆತ್ತಿ ಸುಂದರ ವಿಗ್ರಹಗಳನ್ನಾಗಿಸುತ್ತಿದ್ದಾರೆ. ಸಮರ್ಥ ಆಡಳಿತಗಾರನಿದ್ದರಷ್ಟೇ ಶಿಕ್ಷಣ ಸಂಸ್ಥೆಗಳು ಮಿಂಚಬಲ್ಲವು. ಅದಲ್ಲವಾದರೆ ಕೆಟ್ಟ ರಾಜಕಾರಣ ನುಸುಳಿ ಗೊಂದಲದ ಗೂಡಾಗುವ ಅಪಾಯ ಉಂಟು. ವಜ್ರಕುಮಾರ್ ಶಿಸ್ತಿನಿದರು ವಜ್ರಕ್ಕಿಂತ ಕಠಿಣ. ಮುಗ್ಧತೆಯೆದುರು ಹೂವಿಗಿಂತ ಮೃದು. ಹೀಗಾಗಿ ಇವರು ಸೋಲು ಕಾಣದ ಸರದಾರ. ಶಿಕ್ಷಣ ಪ್ರೇಮಿಗಳು, ಪಾಲಕರು, ಬಾಲಕರು ಇವರ ಮೇಲಿರಿಸಿರುವ ಪ್ರೀತಿ, ವಿಶ್ವಾಸ, ನಂಬಿಕೆ ಅಪಾರ.

ಸದ್ದುಗದ್ದಲವಿಲ್ಲದೆ ಮೌನವಾಗಿ ಕೆಲಸ ಮಾಡುವ ಶ್ರೀಯುತರು- ಬುದ್ಧಿಜೀವಿಗಳು, ಸುದ್ದಿಜೀವಿಗಳು ಸಕತ್ತಾಗಿ ಸಿಗುವ ಧಾರವಾಡವನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡಿರುವುದು ಒಂದು ವಿಶೇಷ. ತಾಳ್ಮೆ, ಜಾಣ್ಮೆ, ಮೇಳೈಸಿರುವುದರಿಂದಾಗಿ ಜೆ.ಎಸ್.ಎಸ್. ಜಯಿಸಿತು. ವ್ಯಕ್ತಿತ್ವ ವಿಕಸನದ ಕೈಂಕರ್ಯ ಫಲಿಸಿತು. ವಿದ್ಯಾಗಿರಿಯ ಈ ತ್ರಿವಿಕ್ರಮನೆದುರು ಇನ್ನೂ ಹಲವಾರು ಯೋಜನೆಗಳಿವೆ. ಇವು ಅನುಷ್ಠಾನಕ್ಕೆ ಬಂದಾಗ ಉತ್ತರ ಕರ್ನಾಟಕದ ಯುವ ಪೀಳಿಗೆಯ ಕಣ್ಣುಗಳಲ್ಲಿ ಭರವಸೆಯ ಹೊಸ ಮಿಂಚು ಪ್ರಜ್ವಲಿಸಲು ಸಾಧ್ಯ.

ವಜ್ರಕುಮಾರರಿಗೆ ''ನಿವೃತ್ತಿ'' ಎಂಬುದೇ ಇಲ್ಲ. ನಾಡು ಕಟ್ಟುವ ಪ್ರವೃತ್ತಿಗೆಲ್ಲಿಯ ನಿವೃತ್ತಿ? ಹುಬ್ಬಳ್ಳಿ- ಧಾರವಾಡದ ಶೈಕ್ಷಣಿಕ ಪರಿಸರ, ಸಾಂಸ್ಕೃತಿಕ ವಾತಾವರಣವನ್ನು ಸಂಪನ್ನ, ಸಮೃದ್ಧ, ಸುಮಧುರ ಗೊಳಿಸುತ್ತಿರುವ ಈ ಶಿಕ್ಷಣ ತಜ್ಞ- ಅಪರೂಪದ ಆಡಳಿತಗಾರ. ಧಾರವಾಡದ ಸಾರಸ್ವತಪುರದಲ್ಲಿ ನೆಲೆಸಿ, ವಿದ್ಯಾದೇವಿ ಸರಸ್ವತಿಯ ಆರಾಧನೆಯಲ್ಲಿ ತೊಡಗಿರುವ ವಜ್ರಕುಮಾರರದು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಕಾಯಕ, ಯೋಜನೆ, ಚಿಂತನೆ ಎಲ್ಲವೂ ವಿಧಾಯಕ.

■ ಆರೂರು ಲಕ್ಷ್ಮಣ್ ಶೇಟ್



■ ಕೋ. ಚೆನ್ನಬಸಪ್ಪ
ನಿವೃತ್ತ ನ್ಯಾಯಾಧೀಶರು
127, ಪಶ್ಚಿಮ ಕಾರ್ಡ್ ರಸ್ತೆ,
ಮಹಾಲಕ್ಷ್ಮಿಪುರ, ಬೆಂಗಳೂರು - 86

ಪಲ್ಲಕ್ಕಿ ಉತ್ಸವದ ಕಾಮಪೀಡಿತ ಜಗದ್ಗುರುಗಳು!

"ದಿನಾಂಕ 21, 22 ಹಾಗೂ 23ರಂದು ಹರಿಹರದಲ್ಲಿ ಪಂಚಪೀಠಾಧೀಶ್ವರ ಅಡ್ಡಪಲ್ಲಕ್ಕಿ ಉತ್ಸವ ಹಾಗೂ ಧರ್ಮಸಭೆ ವೈಭವದಿಂದ ಜರುಗಲಿದ್ದು, ಇದರ ಸವಿನೆನಪಿಗಾಗಿ ಸ್ಮರಣ ಸಂಚಿಕೆಯನ್ನು ಪ್ರಕಟಿಸಬೇಕೆಂಬ ಅಪೇಕ್ಷೆ... ಆದುದರಿಂದ ತಾವು ಕೂಡಾ ವೀರಶೈವ ಧರ್ಮ ಅಥವಾ ವೀರಶೈವ ಸಾಹಿತ್ಯಕ್ಕೆ ಸಂಬಂಧಿಸಿದಂತೆ, ವಸ್ತುಸ್ಥಿತಿ, ಆಚರಣೆಗಳು, ಪರಂಪರೆ, ವೀರಶೈವ ಧರ್ಮ ಮತ್ತು ವೈಚಾರಿಕತೆ.... ಮೊದಲಾದ ತತ್ಸಂಬಂಧೀ... ಲೇಖನವೊಂದನ್ನು ಬರೆದುಕಳಿಸ ಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇವೆ" ಎಂದು ಬರೆದ ಪತ್ರವೊಂದು ನನಗೆ ಬಂತು. ಅದನ್ನು ಕಳಿಸಿದವರು ಸ್ಮರಣ ಸಂಚಿಕೆ ಸಮಿತಿಯ ಪ್ರಧಾನ ಸಂಪಾದಕರು.

ಈ ಪತ್ರವನ್ನು ಒಂದಲ್ಲ, ಎರಡಲ್ಲ ಮೂರುನಾಲ್ಕು ಬಾರಿ ಓದಿದೆ. ನನಗೆ ಬಂದ ಸಂದೇಹ: ವೀರಶೈವ ಧರ್ಮಕ್ಕೂ ಈ ಅಡ್ಡಪಲ್ಲಕ್ಕಿ ಉತ್ಸವಕ್ಕೂ ಏನು ಸಂಬಂಧ? ಅಡ್ಡಪಲ್ಲಕ್ಕಿ ಉತ್ಸವಕ್ಕೂ ವೈಚಾರಿಕತೆಗೂ ಏನು ಸಂಬಂಧ? ಈ ಪತ್ರವನ್ನು ಓದಿದಂತೆಲ್ಲ ಅದನ್ನು ಕುರಿತು ಯೋಚಿಸಿದಂತೆಲ್ಲ ದಿಕ್ಕು ತಪ್ಪಿ ಕತ್ತಲೆಯಲ್ಲಿ ತಡವರಿಸಿದಂತಾಯಿತು. ಅಡ್ಡಪಲ್ಲಕ್ಕಿ ಉತ್ಸವದಲ್ಲಿ ವೈಚಾರಿಕತೆ ಏನಾದರೂ ಇದೆಯೆ ಎಂದು ಗಾಢವಾಗಿ ಯೋಚಿಸಿದೆ. ಯಾವ ವೈಚಾರಿಕತೆಯೂ ನನಗೆ ಒಂದಿಷ್ಟು ಹೊಳೆಯಲಿಲ್ಲ. ಬಹುಶಃ ನನ್ನ ಅಜ್ಞಾನವೊ ಪೂರ್ವಾಗ್ರಹ ಪೀಡಿತ ಭಾವನೆಯೊ ಎಂಬ 'ಸಂದೇಹವುಂಟಾಯಿತು. ಯಾಕೆಂದರೆ ಶ್ರೀಶ್ರೀಶ್ರೀ ಜಗದ್ಗುರು ಪಂಚ ಪೀಠಾಧೀಶ್ವರರು ಅಡ್ಡಪಲ್ಲಕ್ಕಿಯಲ್ಲಿ ಕುಳಿತು ಮೆರವಣಿಗೆ ಮಾಡಿಸಿಕೊಳ್ಳುತ್ತಾರೆಂದ ಮೇಲೆ ವೀರಶೈವ ಧರ್ಮಕ್ಕೂ ಈ ಅಡ್ಡಪಲ್ಲಕ್ಕಿಗೂ ತಾತ್ವಿಕ, ವೈಚಾರಿಕ, ಧಾರ್ಮಿಕ ಅರ್ಥ ಇರಲೇಬೇಕು. ಅದು ನನಗೆ ತಿಳಿದಿರಲಿಕ್ಕಿಲ್ಲ. ಆದ್ದರಿಂದ ಶ್ರೀಶ್ರೀಶ್ರೀ ಪಂಚಪೀಠಾಧೀಶ್ವರರು ಹೇಳುವಂತೆ ವೀರಶೈವ ಧರ್ಮ ಗ್ರಂಥಗಳಾದ ಶ್ರೀಕರ ಭಾಷ್ಯ, 'ಸಿದ್ಧಾನ್ತಾ ಶಿಖಾಮಣಿ', 'ರೇಣುಕ ವಿಜಯ್' ಮುಂತಾದ ಗ್ರಂಥಗಳನ್ನು ತಿರುವಿ ಹಾಕಿದೆ.

'ಶ್ರೀಕರ ಭಾಷ್ಯ'ದ ಬಗ್ಗೆ ಡಾ. ಹಯವದನ ರಾಯರೆಂಬ ಮಹಾ ವಿದ್ವಾಂಸರು ಬರೆದ ಪ್ರಥಮ ಭಾಗ - 900 ಪುಟಗಳ ಬೃಹತ್ ಗ್ರಂಥದ ಹಾಳೆಗಳನ್ನು ತಿರುವಿಹಾಕಿದೆ (ಅದನ್ನು ಮೂವತ್ತು-ನಾಲ್ವತ್ತು ವರ್ಷಗಳ ಹಿಂದೆ ಕೆಲಸವಿಲ್ಲದಾಗ ಓದಿದ್ದೆ). ಆದರೆ ಆ ಗ್ರಂಥದ ಯಾವ ಪುಟದಲ್ಲೂ ಶ್ರೀಪತಿ ಪಂಡಿತ ಅಡ್ಡಪಲ್ಲಕ್ಕಿ ಉತ್ಸವ ವೀರಶೈವ ಧರ್ಮದ ಅಂಗತಾರಾಂಗ ಎಂದು ಕಾಣಿಸಲಿಲ್ಲ. ಬಹುಶಃ ಶ್ರೀಪತಿ ಪಂಡಿತರ ಗಮನಕ್ಕೆ ಬಾರದಿರುವ ಈ ಅಡ್ಡಪಲ್ಲಕ್ಕಿ ಉತ್ಸವದ ವೈಚಾರಿಕತೆ 'ಸಿದ್ಧಾನ್ತ ಶಿಖಾಮಣಿ'ಯಲ್ಲಿ ಸಿಕ್ಕ ಬಹುದೇ ಎಂದು ಆ ವೀರಶೈವ ಧರ್ಮಶಾಸ್ತ್ರ ಗ್ರಂಥವನ್ನು ಮತ್ತೆ ಅವಲೋಕಿಸಿದೆ. ಇದರಲ್ಲೂ ಈ ಅಡ್ಡಪಲ್ಲಕ್ಕಿ ಉತ್ಸವ ವೀರಶೈವ ಧರ್ಮಗುರುಗಳ ವಿಧಿ ಎಂದು ಕಾಣಿಸಿದ್ದು ಕಂಡುಬರಲಿಲ್ಲ.

ಬಹುಶಃ ಈ ಅಡ್ಡಪಲ್ಲಕ್ಕಿ ಉತ್ಸವ, ವೀರಶೈವ ಧರ್ಮ ಸಂಸ್ಥಾಪಕರೆಂದು ಹೇಳಿಕೊಳ್ಳುವ ಆದಿ ಜಗದ್ಗುರುಗಳ ಕಾಲದಲ್ಲಿ ಪ್ರಚಾರದಲ್ಲಿ ಇಲ್ಲದ, ಆದರೆ ಅವರ ತರುವಾಯ ಆಗಿ ಹೋದ 1008 ಜಗದ್ಗುರುಗಳು ವೀರಶೈವ ಧರ್ಮ ಪ್ರಚಾರಾರ್ಥವಾಗಿ ಆಚರಣೆಯಲ್ಲಿ ಬಂದಿರಬಹುದಾದ ವೈಚಾರಿಕ ಉತ್ಸವ ಆಗಿರಬಹುದೆ ಎಂದು ವಿದ್ವಾಂಸರು ಬರೆದ ಲೇಖನಗಳನ್ನು ಓದಿದೆ. ಆ ಲೇಖನಗಳಲ್ಲಿಯೂ ಈ ಅಡ್ಡಪಲ್ಲಕ್ಕಿಯ ಪ್ರಸ್ತಾಪ ಕಂಡುಬರಲಿಲ್ಲ. ಅಂದ ಮೇಲೆ 'ಶೂನ್ಯ ಸಂಪಾದನೆ'ಯಲ್ಲಾಗಲೀ 'ವಚನ ಶಾಸ್ತ್ರಸಾರ'ದಲ್ಲಿಯಾಗಲಿ, 'ವಚನಶಾಸ್ತ್ರ ರಹಸ್ಯ' ಮುಂತಾದ ವೀರಶೈವ ಧರ್ಮಕ್ಕೆ ಸಂಬಂಧಿಸಿದ ಗ್ರಂಥಗಳಲ್ಲಿ ಅಡ್ಡಪಲ್ಲಕ್ಕಿ ಉತ್ಸವದ ವೈಚಾರಿಕ ಪ್ರಸ್ತಾಪ ಇರುವುದು ಅಸಂಭವ.

ಇನ್ನು ಈ ಪ್ರಾಚೀನ ಅರ್ವಾಚೀನ ವೀರಶೈವ

ಈ ಪತ್ರವನ್ನು ಒಂದಲ್ಲ, ಎರಡಲ್ಲ ಮೂರುನಾಲ್ಕು ಬಾರಿ ಓದಿದೆ. ನನಗೆ ಬಂದ ಸಂದೇಹ : ವೀರಶೈವ ಧರ್ಮಕ್ಕೂ ಈ ಅಡ್ಡಪಲ್ಲಕ್ಕಿ ಉತ್ಸವಕ್ಕೂ ಏನು ಸಂಬಂಧ? ಅಡ್ಡಪಲ್ಲಕ್ಕಿ ಉತ್ಸವಕ್ಕೂ ವೈಚಾರಿಕತೆಗೂ ಏನು ಸಂಬಂಧ? ಈ ಪತ್ರವನ್ನು ಓದಿದಂತೆಲ್ಲ ಅದನ್ನು ಕುರಿತು ಯೋಚಿಸಿದಂತೆಲ್ಲ ದಿಕ್ಕು ತಪ್ಪಿ ಕತ್ತಲೆಯಲ್ಲಿ ತಡವರಿಸಿದಂತಾಯಿತು. ಅಡ್ಡಪಲ್ಲಕ್ಕಿ ಉತ್ಸವದಲ್ಲಿ ವೈಚಾರಿಕತೆ ಏನಾದರೂ ಇದೆಯೆ ಎಂದು ಗಾಢವಾಗಿ ಯೋಚಿಸಿದೆ. ಯಾವ ವೈಚಾರಿಕತೆಯೂ ನನಗೆ ಒಂದಿಷ್ಟು ಹೊಳೆಯಲಿಲ್ಲ.

ಧರ್ಮಕ್ಕೆ ಸಂಬಂಧಿಸಿದ ಗ್ರಂಥವನ್ನು ಬಿಟ್ಟು ಸ್ವತಃ ಆಲೋಚಿಸಿ ಈ ಅಡ್ಡಪಲ್ಲಕ್ಕಿ ಉತ್ಸವದ ಅರ್ಥ, ಅಗತ್ಯ ವೈಚಾರಿಕತೆಯನ್ನು ಕಂಡುಕೊಳ್ಳಲು ಪ್ರಯತ್ನಿಸಿವೆ. ಶ್ರೀಶ್ರೀಶ್ರೀ ಪಂಚಪೀಠಾಧೀಶ್ವರರೂ ಹೇಳುವಂತೆ ಲಿಂಗಾಯತ ಧರ್ಮ ಎಂದರೆ, ಅಷ್ಟಾವರಣಗಳೆಂಬ ಗುರುಲಿಂಗ, ಜಂಗಮ, ಮಂತ್ರ, ವಿಭೂತಿ, ರುದ್ರಾಕ್ಷಿ, ಪದೋದಕ, ಪ್ರಸಾದ ಎಂಬ ಎಂಟು ಆವರಣಗಳ ಸಹಾಯದಿಂದ ಪಂಚಾಚಾರ ಮಾರ್ಗವಿಡಿದು, ಷಟ್ಸ್ಥಲಗಳಲ್ಲಿ ಭಕ್ತ ಸ್ಥಲದಿಂದ ಐಕ್ಯಸ್ಥಲದವರೆಗೆ ಮುಂದುವರಿದು ಲಿಂಗಾಂಗ ಸಾಮರಸ್ಯ ಪಡೆಯುವುದು. ಹಾಗಾದರೆ ಲಿಂಗಾಯತ ಸಾಧಕನಿಗೆ ಅತ್ಯಗತ್ಯವಾಗಿಯೂ ಅನಿವಾರ್ಯವಾಗಿಯೂ ಬೇಕಾದ ಅಷ್ಟವರಣಗಳೆಂಬ ಸಹಾಯಕ ವಸ್ತುಗಳಲ್ಲಿ - ಗುರು, ಲಿಂಗ, ಜಂಗಮ...ಇ... - ಯಾವ ಆವರಣಕ್ಕೆ ಅಡ್ಡಪಲ್ಲಕ್ಕಿ ಉತ್ಸವ ಅಗತ್ಯ ಹಾಗೂ ಅನುಗುಣವಾಗಿದೆ? ಹಾಗೆಯೆ ಪಂಚಾಚಾರಗಳ ಮಾರ್ಗದಲ್ಲಿ ಈ ಅಡ್ಡಪಲ್ಲಕ್ಕಿ ಆಗಲೇ ಬೇಕೆಂದು ಎಲ್ಲಿ ಕಾಣಿಸಿದೆ? ಅಥವಾ ಲಿಂಗವಂತರು, ಲಿಂಗದ ಉಪಾಸನೆ, ಲಿಂಗಧ್ಯಾನ, ಲಿಂಗಪ್ರೇಮ (ಅರ್ಥಾತ್ ಭಕ್ತಿ) ಮಾಡುವಾಗ ಈ ಅಡ್ಡಪಲ್ಲಕ್ಕಿ ಉತ್ಸವವನ್ನು ಯಾವಾಗಲಾದರೂ ಆಚರಿಸಬೇಕೆ? ಇಲ್ಲವೆ ಸಾಧಕನ ಪ್ರಥಮ ಸ್ಥಲ-ಭಕ್ತ ಸ್ಥಲದಲ್ಲಿ ಆಗಲಿ, ಅವನು ಸಾಧನೆಯ ಮಾರ್ಗದಲ್ಲಿ ಕ್ರಮೇಣ ಪ್ರಗತಿ ಪಥದಲ್ಲಿ ಮುಂದುವರಿದು ಐಕ್ಯಸ್ಥಲ ಮುಟ್ಟಿದಾಗ ಆಗಲಿ, ಈ ಅಡ್ಡಪಲ್ಲಕ್ಕಿ ಉತ್ಸವದಲ್ಲಿ ತಾನಾಗಲಿ, ತನ್ನ ಗುರುವಾಗಲಿ, ತನ್ನ ಲಿಂಗವಾಗಲಿ, ಚಲಿಸುವ ಲಿಂಗರೂಪಿ ಜಂಗಮನಾಗಲಿ ಭಾಗವಹಿಸಬೇಕೆಂದು ಯಾವ ಶಾಸ್ತ್ರಗ್ರಂಥವೂ ಉಲ್ಲೇಖವಿಲ್ಲ; ಪ್ರತಿಪಾದಿಸುವ ಮಾತು ಇನ್ನೆಲ್ಲಿಂದ ಬರಬೇಕು?

ಹಾಗಾದರೆ ಮತ್ತೆ ಅದೇ ಸಂದೇಹ ಬಂತು? ಈ ಅಡ್ಡಪಲ್ಲಕ್ಕಿ ಉತ್ಸವಕ್ಕೂ ಲಿಂಗವಂತ ಧರ್ಮಕ್ಕೂ 'ಎತ್ತಣಿಂದೆತ್ತಣ ಸಂಬಂಧ?' ನಾನು ಕಣ್ಣಾರ ಕಂಡ ಕೆಲವು ವೀರಶೈವ ಸ್ವಾಮಿಗಳು ಮುರುಘಾಮಠದ ಮೃತ್ಯುಂಜಯ ಮಹಾಸ್ವಾಮಿಗಳು, ಮುರುಗೋಡು ಅಜ್ಜನವರು, ನಾಗನೂರು ಮಠಾಧ್ಯಕ್ಷರು ಮುಂತಾದ ಶಿವಶರಣರು ಎಂದೂ ಪಲ್ಲಕ್ಕಿಯಲ್ಲಿ ಕುಳಿತು ಮೆರೆದವರಲ್ಲ. ಹಾಗೆ ಹೇಳಬೇಕೆಂದರೆ 'ಎನಗಿಂತ ಕಿರಿಯರಿಲ್ಲ; ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂಬ ಭಕ್ತಸ್ಥಲದ ಮಹಾಪದವಿ ಪಡೆದವರೆಂದೂ ಪಲ್ಲಕ್ಕಿಯಲ್ಲಿ ಮೆರೆಯಲಿಲ್ಲ. ಒಮ್ಮೆ ವಿಜಾಪುರದಲ್ಲಿ ಒಂದು ಮಹೋತ್ಸವ ಜರುಗಿತು. ಆ ಉತ್ಸವ ಯಾವ ಪಂಚಪೀಠೇತರ ಜಗದ್ಗುರುಗಳ ನೇತೃತ್ವದಲ್ಲಿ ನಡೆದಿತ್ತೊ ಅವರ ಬಗ್ಗೆ ನನಗೆ ಗೌರವವಿತ್ತು; ಭಕ್ತಿಯಿತ್ತು. ಮೂರು ದಿನ ನಡೆಯಲಿದ್ದ ಆ ಉತ್ಸವದ ಕೊನೆಯ ದಿನ ಪಲ್ಲಕ್ಕಿ ಮೆರವಣಿಗೆಯ ಕಾರ್ಯಕ್ರಮವಿತ್ತು. ನಾನು ಆ ಗುರುಗಳಿಗೆ ಭಿನ್ನಹ ಮಾಡಿದ್ದೆ. ಒಂದು ದಿನ ಅವರು ನಮ್ಮ ನಿವಾಸದಲ್ಲಿ ಲಿಂಗ ಪೂಜೆ ಮಾಡಿದರು. ಆಗ ನಾನವರನ್ನು ಈ ಪಲ್ಲಕ್ಕಿ ಉತ್ಸವದ ಔಚಿತ್ಯವನ್ನು ಕುರಿತು ಪ್ರಶ್ನಿಸಿದೆ: ಅವರಿಗೆ ನನ್ನ ಬಗ್ಗೆ ಪ್ರೀತಿಯಿತ್ತು; ಸ್ವಲ್ಪ ಅಭಿಮಾನ, ಗೌರವವೂ ಇತ್ತು.

'ಇದನ್ನು ಹಮ್ಮಿಕೊಂಡಿದ್ದಾರೆಂದು ನಮಗೆ ಮೊದಲೇ ತಿಳಿದಿದ್ದರೆ ಬೇಡವೆಂದು ನಿಲ್ಲಿಸುತ್ತಿದ್ದವು.... ಆದರೆ ಈ ಮೂರ್ಖರು...' ಎಂದು ಅವರಿಗೆ ಸಹಜವಾದ ಕಡು ನಿಷ್ಠುರ ಮಾತನಾಡಿದರು.

'ಈಗಲಾದರೂ ಅದನ್ನು ರದ್ದುಪಡಿಸುವುದು ಒಳ್ಳೇದು' ಎಂದೆ.

'ಹಮ್ಮಿಕೊಂಡ ಉತ್ಸವಬಿಟ್ಟರೆ ಅವರಿಗೆ ಅಸಮಾಧಾನ. ಅವರ ಉತ್ಸಾಹಕ್ಕೆ ಭಂಗ ಬರಬಹುದು. ನಾವು ಬೇಡವೆಂದರೂ ಅವರು ಬಿಡುವುದಿಲ್ಲ...'


'ತಾವೀಗ ಶಿಷ್ಯರ ಸೆರೆಯಾಳಾದಂತಾಗಿದೆ' ಎಂದು ನಕ್ಕೆ. ಅವರೂ ನಕ್ಕರು. ಕಡೆಗೆ ಅವರು ಮಧ್ಯಮಾರ್ಗ ಅನುಸರಿಸುವ ಆಲೋಚನೆ ಮಾಡಿದರು. ಪಲ್ಲಕ್ಕಿಯಲ್ಲಿ ತಾವು ಕುಳಿತುಕೊಳ್ಳದೆ ಅವರ ಪಕ್ಕದಲ್ಲಿ ನಡೆದುಕೊಂಡು ಹೋಗುವುದಾಗಿ ಹೇಳಿದರು. ಕಾರ್ಯಕ್ರಮ ಹೇಗಾಯಿತೊ ನನಗೆ ನೆನಪಿಲ್ಲ. ನಾನು ಅಲ್ಲಿಗೆ ಹೋಗಲಿಲ್ಲ. ಆ ತರುವಾಯ ಪ್ರತಿವರ್ಷವೂ ಆಗುತ್ತಿರುವ ಉತ್ಸವಗಳಲ್ಲಿ ಈ ಪಲ್ಲಕ್ಕಿ ಉತ್ಸವದ ಕಾರ್ಯಕ್ರಮವನ್ನು ಕೈಬಿಟ್ಟರು. ಅವರು ಲಿಂಗೈಕ್ಯರಾಗುವವರೆಗೆ ಅವರೆಂದೂ ಪಲ್ಲಕ್ಕಿ ಉತ್ಸವ ನಡೆಸಲಿಲ್ಲ.

ಅಂದಮೇಲೆ ವೀರಶೈವ ಧರ್ಮಗ್ರಂಥಗಳಲ್ಲಾಗಲಿ, ನಿಜವಾದ ಲಿಂಗವಂತ ಮಹಾಸ್ವಾಮಿಗಳ ಜೀವನದಲ್ಲಿ ಆಗಲಿ ಅಡ್ಡಪಲ್ಲಕ್ಕಿ ಉತ್ಸವಕ್ಕೆ ಯಾವ ಸ್ಥಾನವೂ ಇಲ್ಲ ಎಂದೇ ಕಾಣುತ್ತದೆ. ಹಾಗಾದರೆ ಈ ಧರ್ಮಾಧಾರ, ಶಾಸ್ತ್ರಾಧಾರವಿಲ್ಲದ ಕಾರ್ಯ ಅರ್ಥಹೀನ. ಆಡಂಬರದ ಆಚರಣೆ ಯಾಕೆ ರೂಢಿಯಲ್ಲಿದೆ? ಅದಕ್ಕೆ ಕಂಡುಬರುವ ಒಂದೇ ಕಾರಣ ಅಡ್ಡಪಲ್ಲಕ್ಕಿಯಲ್ಲಿ ಕೂತು ಮೆರವಣಿಗೆ ಮಾಡಿಸಿಕೊಳ್ಳುವವರ 'ಅಹಂ' ಆಧಿಕ್ಯ. ಅವರ ಶಿಷ್ಯರೆಂಬ ಜನ ಅವರನ್ನು ಪಲ್ಲಕ್ಕಿಯಲ್ಲಿ ಮೆರೆಸಿ ತಾವು ಖಿಲ್ಲತ್ತು ಪಡೆಯುವ ಮೋಹ! ಇದರಲ್ಲಿ ಧರ್ಮವೂ ಇಲ್ಲ. ಧರ್ಮಾಭಿವೃದ್ಧಿಯೂ ಇಲ್ಲ; ಸಾಧನೆಯೂ ಇಲ್ಲ; ಸಾಧಾರಣ ಸದ್ವರ್ತನೆಯೂ ಇಲ್ಲ. ಉತ್ಸವದಲ್ಲಿ ಭಾಗವಹಿಸುವ ಸಾಧಾರಣ ಜನರಿಗೆ ಲಿಂಗದಲ್ಲಿ ಭಕ್ತಿಯಾಗಲಿ, ಜಂಗಮರಲ್ಲಿ ಶ್ರದ್ಧೆಯಾಗಲಿ, ಮಂತ್ರದಲ್ಲಿ ನಿಷ್ಠೆಯಾಗಲಿ, ಪಾದೋದಕ ಪ್ರಸಾದದಲ್ಲಿ ನಂಬಿಕೆಯಾಗಲೀ ಕಿಂಚಿತ್ತೂ ಉಂಟಾಗುವುದಿಲ್ಲ. ಬದಲಾಗಿ ಕೋಲಾಹಲ, ಪರಾಕು, ಬಿರುದು ಬಾವಲಿಗಳ ಮೆರವಣಿಗೆ. ಮೆರವಣಿಗೆ ಮಾಡಿಸಿ ಕೊಳ್ಳುವವರ ಆತ್ಮಹಾನಿ. ಮಾಡುವವರ ಧನ ಹಾನಿ. ಅಡ್ಡಪಲ್ಲಕ್ಕಿಯ ಬಗ್ಗೆ ನಾನು ಮೂವತ್ತೈದು ವರ್ಷಗಳ ಹಿಂದೆ ಬರೆದಿದ್ದ ಈ ಕೆಳಗಿನ ಕವಿತೆಯು ಈಗಲೂ ಸತ್ಯವನ್ನೇ ಸಾರುತ್ತದೆ.

ಓ ಜಗದ್ಗುರುಗಳೆ
ಓ ಶ್ರೀಮತ್ ಸಿಂಹಾಸನಾಧೀಶ್ವರರೇ!
ಓ ಪರಮಪೂಜ್ಯ ಶ್ರೀಪಾದ ತೀರ್ಥರುಗಳ್ಳೇ!
ಪಲ್ಲಕ್ಕಿ ಉತ್ಸವದ ಕಾಮಪೀಡಿತರೇ!
ನಿಮಗಾವ ಹಿರಿಬೇನೆ ಬಡಿದಿಹುದು?
ಮಡದಿಮಕ್ಕಳ ಬಿಟ್ಟು
ಕಡವರವನೆ ಬಿಸುಟು
ಕಾವಿಕಾಷಾಯವನು ಹೊದ್ದ ನಿಮಗೆ
ಅಡ್ಡಪಲ್ಲಕ್ಕಿಯಲಿ ಮೆರೆವ ಹಿರಿಬೇನೆ!
ಎಂಥ ಆತ್ಮ ವಿಪತ್ತು!
ವಾಸಿಯಾಗದ ಕುತ್ತು!
ಭವರೋಗಕೌಷಧಿ ಕೊಡುವ ವೈದ್ಯರು ಎಂದು
ಬದ್ಧ ಜೀವರು ನಿಮ್ಮ ಪಾದಕೆರಗೆ
ಅಯ್ಯೋ! ಅಯ್ಯಯ್ಯೋ!!
ನಿಮ್ಮ ಪಾದವೆ ಕೊಳೆತು ಹುಳಬಿದ್ದಿದೆ!
ಅದಕೆ ನಡೆಯಲು ನಿಮಗೆ ಬರದಾಗಿದೆ
ಹೊರಿಸಿ ಕೊಳ್ಳುವಿರಿ ಕೂತು ಜೀವಹೆಣದಂತೆ!
....
ಸತ್ಯವಿಲ್ಲದ ನಿಮ್ಮ ಹೊತ್ತು ಚಲಿಸಲು ಬೇಕು!
ಅಯ್ಯೋ! ಎಂಥ ದುರ್ಗತಿ ಬಂತು
ಓ ಜಗದ್ಗುರುವೆ.*

('ಹೃದಯ ನೈವೇದ್ಯ' ಎಂಬ ಕವಿತಾ ಸಂಕಲನದಿಂದ)

*ಅಡ್ಡಪಲ್ಲಕ್ಕಿ ಉತ್ಸವದ ಸ್ಮರಣ ಸಂಚಿಕೆಯಲ್ಲಿ ಈ ಲೇಖನವನ್ನು ಯಥಾರೀತಿ ಒಂದಕ್ಷರವನ್ನೂ ಬಿಡದೆ ಪ್ರಕಟಿಸಲು ಅನುಮತಿ ಕೊಟ್ಟಿದ್ದೇನೆ. ■



ಹೆಜ್ಜೆ - 20

■ ಕೃಶಾಂಗ

ಹೆಣ್ಣು - ಗಂಡು ಪರಸ್ಪರ ಆಕರ್ಷಣೆಯ ಹಿನ್ನೆಲೆ

ನಿಸರ್ಗವು ನಿಷ್ಪಕ್ಷಪಾತವಾಗಿದೆ. ಎಲ್ಲ ಜೀವಿಗಳ ಜೀವಿತಕಾಲದಲ್ಲಿಯೂ ಅದು ವಸಂತವನ್ನು ಸೃಷ್ಟಿಸಿ ಆಗ ಅವು ಅತ್ಯಂತ ಸುಂದರವಾಗಿ ಕಾಣುವಂತೆ ವರ ನೀಡಿದೆ. ಲೈಂಗಿಕ ಚೋದಕಗಳು ಗಂಡು ಹೆಣ್ಣುಗಳಲ್ಲಿ ಸೂಕ್ತ ಸಮಯದಲ್ಲಿ ಸ್ರವಿಸಿ ಅವರು ಪರಸ್ಪರರಿಗೆ ಅತ್ಯಂತ ಆಕರ್ಷಕವಾಗಿ ಕಾಣುವಂತೆ ನಿಸರ್ಗ ಯೋಜಿಸಿದೆ. ಈ ಸಮಯದಲ್ಲಿ ಒಡೆದು ಕಾಣುವ ಸ್ತ್ರೀ-ಪುರುಷ ಲಕ್ಷಣಗಳು ವಿರುದ್ಧ ಜಾತಿಗಳನ್ನು ಹತ್ತಿರ ಸೆಳೆಯುತ್ತವೆ. ಇಂಥದೇ ಲಕ್ಷಣ ಪುರುಷನನ್ನು ಸ್ತ್ರೀಯೆಡೆಗೆ ಅಥವಾ ಸ್ತ್ರೀಯನ್ನು ಪುರುಷನೆಡೆಗೆ ಸೆಳೆಯುತ್ತದೆ ಎಂದು ಬೆರಳಿಟ್ಟು ತೋರಿಸುವುದು ಕಷ್ಟದಾಯಕ. ಪ್ರತಿ ಪುರುಷ -ಸ್ತ್ರೀಯ ಅಭಿಪ್ರಾಯ ತೀರ ವ್ಯಕ್ತಿಗತವಾಗಿರುವುದರಿಂದ ಅದನ್ನು ಸಾರ್ವತ್ರಿಕಗೊಳಿಸಲಾಗದು. ಆದರೂ ಕೆಲವು ಒಲವುಗಳನ್ನು ನಿರೂಪಿಸಲು ಸಾಧ್ಯ.

ಪುರುಷರು ಸ್ತ್ರೀಯರಲ್ಲಿ ಬಯಸುವ ಗುಣಗಳು ಸ್ವಚ್ಛ , ಸ್ವಸ್ಥ ನುಣುಪಾದ ಚರ್ಮದ, ತನಗಿಂತ ತೆಳ್ಳಗಿರುವ, ಗಿಡ್ಡವಿರುವವಳು ಬೇಕು. ಇದು ಆತನ 'ಅಹಂ'ಗೆ ತೃಪ್ತಿ ತರುವುದು. ಕೋಮಲ ಆದರೆ ನಿರೋಗಿ ಶರೀರ, ಸ್ನೇಹಪೂರ್ಣ ಮುಖ, ಜೀವನದ ದುಗುಡಗಳನ್ನೆದುರಿಸಲು ಅಗತ್ಯವಾದ ದೃಢ ಮನಸ್ಸುಗಳನ್ನು ಆಕೆ ಹೊಂದಿರಬೇಕು.

ಸ್ನೇಹಿತೆಯ ಅಥವಾ ಹೆಂಡತಿಯ ಆಯ್ಕೆಗೆ ಕೇವಲ ಬೌದ್ಧಿಕ ಸೌಂದರ್ಯ ಅಳತೆಗೋಲಲ್ಲ. ದಡ್ಡ ಹೆಂಗಸು ಯಾರಿಗೂ ಬೇಡ. ಆದರೆ ಇಲ್ಲಿ ಗಮನಿಸಿ. ತನಗಿಂತ ಸ್ವಲ್ಪ ಹೆಚ್ಚೇ ಜಾಣಳಾದ, ಆದರಿಂದ ತನಗೆ ಕಿರಿಕಿರಿ ಮಾಡುವ ಜೊತೆಗಾತಿಯನ್ನು ಪುರುಷರು ಬಯಸರು.



ಗಂಡಿನ ತಪ್ಪನ್ನು ಎತ್ತಿ ತೋರದವಳು, ಅಂಥ ಪ್ರಸಂಗಗಳಿಂದ ಉಪಾಯವಾಗಿ ಜಾರಿಕೊಳ್ಳುವವಳು, ಪರರ ಮಾತಿಗೆ ಲಕ್ಷ್ಯಪೂರ್ವಕ ಕಿವಿಗೊಡುವವಳು, ಹಿತಮಿತವಾಗಿ ಸಂಭಾಷಿಸುವವಳು, ಸ್ನೇಹಪರತೆ ಕ್ರೀಡಾಮನೋಭಾವ ಹೊಂದಿದವಳು ಮತ್ತು ಸಮಾಜ ಪ್ರೀತಿ ತೋರಿಸುವ ಸ್ತ್ರೀ, ಪುರುಷರಿಗೆ ಇಷ್ಟ.

ಸ್ತ್ರೀಯರು ಪುರುಷರಲ್ಲಿ ಬಯಸುವ ಗುಣಗಳು: ಹೆಣ್ಣಿನ ಕಣ್ಣು ಪುರುಷನ ಚರ್ಮದ ವರ್ಣಕ್ಕಿಂತ ಆತನ ಬಟ್ಟೆಯ ಗುಣ ಮತ್ತು ಪೋಷಾಕಿನ ಶೈಲಿಯ ಮೇಲೆ. ಇವುಗಳ ಮೂಲಕ ಆತನ ಅಭ್ಯಾಸಗಳ ಪರಿಚಯ ಮಾಡಿಕೊಳ್ಳಲು ಸಾಧ್ಯ. ಸುಂದರ ಮುಖಕ್ಕಿಂತ, ಮುಖದ ಮೇಲೆ ಸ್ಪಷ್ಟವಾಗಿರುವ ದಯಾಭಾವ, ಸ್ನೇಹಪರತೆಗೆ ಅವರ ಮತ. ಇಂದು ಪುರುಷನ ಯಶಸ್ಸಿಗೆ ದೇಹಬಲಕ್ಕಿಂತ ಬುದ್ಧಿ ಬಲಕ್ಕೆ ಹೆಚ್ಚಿನ ಪ್ರಾಶಸ್ತ್ಯ. ಆದುದರಿಂದ ತನ್ನ ಕನಸಿನ ಪುರುಷ ಬಲಶಾಲಿಯೇ ಆಗಿರಬೇಕೆಂಬುದಿಲ್ಲ. ಆದರೆ ಆತ ತನಗಿಂತ ಗಿಡ್ಡನಿರಬಾರದು ಎಂಬ ಬೇಡಿಕೆಯಿದೆ. ಸಾಧನೆಯ ಮೂಲ ಶಕ್ತಿ ಹಾಗೂ ಶಕ್ತಿಯ ಮೂಲ ಆರೋಗ್ಯವಾದುದರಿಂದ ಆರೋಗ್ಯ ಸೂಸುವ ದೇಹ ಮತ್ತು ಹಾವಭಾವಗಳನ್ನು ಅವರು ಪುರುಷರಲ್ಲಿ ಇಷ್ಟಪಡುವರು.

ವ್ಯಕ್ತಿತ್ವ ವಿಕಾಸ

ಕುಟುಂಬ ನಿರ್ವಹಣೆ ಪುರುಷನ ಹೊಣೆ ಎಂದು ತಿಳಿಯುವ ಸ್ತ್ರೀ ಆತನ ಶಿಕ್ಷಣ ಮಟ್ಟ, ಬುದ್ಧಿವಂತಿಕೆ, ವೇತನಗಳನ್ನು ಗಮನಿಸುತ್ತಾಳೆ. ಇವೆಲ್ಲವುಗಳಲ್ಲಿಯೂ ಆಕೆ ಎರಡನೆಯವಳಾಗಲೂ ಹಿಂಜರಿಯುವುದಿಲ್ಲ. ಪರರ ಸದಭಿರುಚಿಗಳನ್ನು ಗುರುತಿಸಿ, ಗೌರವಿಸಿ, ಉತ್ತೇಜಿಸುವ ಪುರುಷರಿಂದ ಅವರು ಪ್ರಭಾವಿತರು.

ತನ್ನ ಜೊತೆಗಾರ ಸ್ವಾವಲಂಬಿ ಮತ್ತು ಸ್ವತಂತ್ರ ವೈಚಾರಿಕ ಶಕ್ತಿ ಹೊಂದಿದವ ಎಂಬುದು ಅವರಿಗೆ ಆನಂದ ತರುತ್ತದೆ.

ಪುರುಷರಷ್ಟು ಸಲೀಸಾಗಿ ಸ್ತ್ರೀಯರು ವೈವಾಹಿಕ ಸಾಮಾಜಿಕ ಕಟ್ಟುಪಾಡುಗಳನ್ನು ಮೀರುವುದಿಲ್ಲ. ಇದಕ್ಕೆ ಕಾರಣ ಅಂಜುಬುರುಕತನವೋ ದೂರದರ್ಶಿತ್ವವೋ ಅಥವಾ ಆತ್ಮಸಂಯಮವೋ ಆಗಿರಬಹುದು. ಆದುದರಿಂದ ತಮ್ಮ ವಿಷಯದಲ್ಲಿ ಪುರುಷನ ಪ್ರಾಮಾಣಿಕತೆ, ವಿಧೇಯತೆ, ಶ್ರದ್ಧೆ, ವಿಶ್ವಾಸಗಳಿಗೆ ಗ್ರಹಣ ಹಿಡಿದಾಗಲೆಲ್ಲ ಅವರು ಕೆಂಡವಾಗುತ್ತಾರೆ.

ನಮ್ಮ ಮನೆ, ಪಾಠಶಾಲೆಗಳು, ಸಮಾಜ, ಹಿರಿಯರು, ಸ್ತ್ರೀ ಪುರುಷರಲ್ಲಿ ಅನುಚಿತ ಭೇದ ಕಲ್ಪಿಸುತ್ತಿರುವಂತೆ ಬಹಳ ಸಲ ನಮಗೆ ತೋರುತ್ತದಲ್ಲವೇ? ಮನೆಯಲ್ಲಿ ಇದರ ಪ್ರಾರಂಭ. ಗಂಡಿನ ಎಲ್ಲ ಬೇಕು ಬೇಡಗಳಿಗೂ ಅವಾಸ್ತವ ಪ್ರಾಶಸ್ತ್ಯ; ಹೆಣ್ಣಿನ ಬೇಕು ಬೇಡಗಳತ್ತ ಅಸಡ್ಡೆ, ನಿರ್ಲಕ್ಷ್ಯ, ಕಲಿಕೆ, ಕ್ರೀಡೆಗಳಲ್ಲಿ ಗಂಡು ಹೆಣ್ಣುಗಳನ್ನು ಪ್ರತ್ಯೇಕಿಸುವುದು. ಹಿರಿಯರೂ ಇದನ್ನು ಪುಷ್ಟೀಕರಿಸುವಂತೆ ನಡೆದುಕೊಳ್ಳುವುದು. ಇವೆಲ್ಲವುಗಳ ಪರಿಣಾಮ; ತಾವು ಶ್ರೇಷ್ಠರೆಂದು ಗಂಡೂಗಳೂ, ಗಂಡುಗಳ ಮಟ್ಟಕ್ಕೆ ನಾವೆಂದೂ ಏರಲಾರೆವೆಂದು ಹೆಣ್ಣುಗಳೂ ತಿಳಿಯುವುದು. ತಮ್ಮ ಪ್ರಭುತ್ವ ಸ್ಥಾಪಿಸಲು ಗಂಡು ಹೆಣ್ಣನ್ನು ಕೀಳಾಗಿ ಕಾಣುತ್ತ ಹೋಗುವುದು, ಸ್ವಂತದ ಬಗ್ಗೆ ಮತ್ತು ಸ್ವಜಾತಿಯ ಇತರರ ಬಗೆಗೆ ದೋಷಪೂರ್ಣ ದೃಷ್ಟಿಕೋನ ಹೆಣ್ಣಿನಲ್ಲಿ ಸ್ಥಿರಗೊಳ್ಳುವುದು ನಡೆದುಬಂದಿದೆ. ಗಂಡು ಹೆಣ್ಣೊಂದನ್ನು ಚುಡಾಯಿಸಿದರೆ ಸಹಿಸುವ ಸಮಾಜ ಅದನ್ನೇ ಹೆಣ್ಣು ಮಾಡಿದರೆ 'ಅಸಾಂಸ್ಕೃತಿಕ ನಡತೆ' ಎಂಬ ಮುದ್ರೆಯನ್ನೊತ್ತುತ್ತದೆ. ಇಬ್ಬರೂ ತಮ್ಮ ಅಲೌಕಿಕ ಕನಸುಗಳನ್ನು ಮುಂದುವರೆಯಿಸುತ್ತಾರೆ. ಹೆಣ್ಣಿನ ಮನಸ್ಸು ಆತ್ಮಗೌರವಗಳು ಮಾಯದ ಗಾಯದ ಗೂಡುಗಳಾಗುತ್ತವೆ. ದೈಹಿಕವಾಗಿ ನಿಯಮಿತವಾಗಿ ಅವರನ್ನು ಕಾಡುವ ಋತುಚಕ್ರದಂಥ ತೊಂದರೆಗಳು ತಮ್ಮ ಬಗೆಗೆ ಅವರೇ ಕೀಳುಭಾವನೆ ತಂದುಕೊಳ್ಳುವಂತೆ ಪ್ರಚೋದಿಸುತ್ತವೆ. ಇಂಥ ಗಾಯದ ಪರಿಣಾಮಗಳನ್ನು ಸುತ್ತಲೂ ಕಾಣುತ್ತೇವೆ; ಹೆಣ್ಣಿನಿಂದ ಬೇರೆ ಹೆಣ್ಣಿನ, ಹೆಣ್ತನದ ದ್ವೇಷ; ಕೆಲವು ವೃತ್ತಿರಂಗಗಳಲ್ಲಿ ಹೆಣ್ಣಿನ ಪ್ರವೇಶ ನಿಷಿದ್ಧ ಎಂಬ ಪೂರ್ವಾಗ್ರಹ ವರ್ಧನೆ, ಹೆಣ್ಣು ಬೇರೊಂದು ಹೆಣ್ಣಿನ ಆಳಾಗಲು ನಿರಾಕರಣೆ.



ಮಾನ್ಯರು ತಮಗೆ ಪತ್ರಿಕೆಗಳಿಂದ ಬಂದ ವಿಷಾದ ಪತ್ರಗಳನ್ನು ಸಂಗ್ರಹಿಸುತ್ತಲೇ ವಿಷಾದದಿಂದ ನಿಧನರಾದರು ಇದಕ್ಕಾಗಿ ನಾವು ವಿಷಾದಿಸುತ್ತೇವೆ!.......

ಸ್ತ್ರೀ ಪುರುಷರಲ್ಲಿ ಇಂಥ ಮೂಲಭೂತ ಭೇದ ಕಲ್ಪಿತವಾದರೂ ಪ್ರಥಮ ದರ್ಶನ ಪ್ರೇಮಾಂಕುರವೆಂಬುದೊಂದಿದೆಯಲ್ಲ ಎಂಬ ಆಶ್ಚರ್ಯವುಂಟಾಗುತ್ತದೆಯಲ್ಲವೇ? ಸಂಬಂಧಿಸಿದ ಸ್ತ್ರೀ ಪುರುಷರಿಬ್ಬರೂ ಒಬ್ಬರಿಗಾಗಿನ್ನೊಬ್ಬರು ಸೃಷ್ಟಿಗೊಂಡವರು ಎಂಬ ನಂಬುಗೆಗೆ ಇಂಥ ಪ್ರೇಮಾಂಕುರ ಇಂಬುಗೊಟ್ಟಿತ್ತು. ಆದರೆ ತತ್‌ಕ್ಷಣದ ಇಂಥ ಅನುರಕ್ತಿಗೆ ವ್ಯಕ್ತಿತ್ವ ವೈಶಿಷ್ಟವೇ ಕಾರಣವಾಗಿರಬೇಕಿಲ್ಲ. ನೀವು ತಾರುಣ್ಯ ಸೂಸುವ ವ್ಯಕ್ತಿ ಎಂದು ಕಲ್ಪಿಸಿಕೊಳ್ಳಿ. ಕೆಲಕಾಲದ ಹಿಂದೆ ನೀವು ಬೇರೊಬ್ಬರ ಬಗೆಗೆ ಮೃದು ಭಾವನೆ ತಾಳಿದ್ದೀರಿ. ಕಾಲಾಂತರದಲ್ಲಿ ಅದು ಅಳಿಸಿ ಹೋಗಿದೆ. ಇಂದು ಒಂದು ಸಂದರ್ಭ. ನೀವು ಒಬ್ಬರನ್ನು ಎದುರಿಸಿದಿರಿ. ಆ ಒಬ್ಬರು ತೊಟ್ಟ ಬಟ್ಟೆಯ ವರ್ಣ ಧ್ವನಿಯ ಏರಿಳಿತ, ವಿಶಿಷ್ಟ ಹಾವಭಾವ ಇವೆಲ್ಲವುಗಳ ಒಟ್ಟು ಪರಿಣಾಮ ನಿಮ್ಮಲ್ಲಿ ಅಳಿಸಿಹೋದ ಆ ಮೃದುಭಾವನೆಯ ಪುನರಾವತಾರ. ಇಂಥ ಪುನರಾವರ್ತನೆಗೆ ಕಾರಣರಾದವರ ಬಗೆಗೆ ನಿಮಗೆ ತತ್‌ಕ್ಷಣದ, ತಡೆಹಿಡಿದಿಡಲಾಗದ ಆಕರ್ಷಣೆಯುಂಟಾಯಿತು!

> **ಹಾಯಾಗಿದೆ**
>
> ''ಏನೇ ರಾಣಿ... ಈಗ ನಿನ್ನ ಸಂಸಾರ ಹೇಗಿದೆ?''
>
> ''ಈಗ ತುಂಬಾ ಹಾಯಾಗಿದ್ದೀನಿ ಕಣೇ''
>
> ''ಗುಟ್ಟು ಏನು ಅಂತ ನನಗೂ ಸ್ವಲ್ಪ ಹೇಳೆ''
>
> ''ಏನು ಇಲ್ಲ ಕಣೇ! ಡೈವೋರ್ಸ್ ತೆಗೆದುಕೊಂಡೆ''.
>
> –ಟಿ. ವಿ. ವಿ.

ಆಕರ್ಷಣೆ ಅಷ್ಟೇ ಬೇಗನೆ ಒಲವಾಯಿತು!

ಆದರೆ ಈ ಒಲವು ತಾತ್ಕಾಲಿಕವೂ ಆಗುವ ಭಯವೂ ಇದೆ. ನೀವು ಸಮೀಪಿಸಿದ ಆ ವ್ಯಕ್ತಿ ನಿಮಗೆ ಪ್ರಿಯವಾದ, ಪ್ರಿಯವಾಗದ ಗುಣಗಳ ಸಂಗಮ ಎಂಬುದು ಗೊತ್ತಾಗುತ್ತಲೇ ನೀವು ಆ ವ್ಯಕ್ತಿಯಿಂದ ದೂರವಾಗ ಬಯಸುತ್ತೀರಿ. ಪ್ರಥಮ ದರ್ಶನ ಪ್ರೇಮಾಂಕುರವನ್ನೇ ಆಧರಿಸಿ ವಿವಾಹ ನಿಶ್ಚಿತಗೊಳಿಸಿಕೊಳ್ಳುವುದು ಎಂಥ ಜೂಜಾಟ ಎಂದು ತಿಳಿಯಿತಲ್ಲವೇ?

ಹಾಗಾದರೆ ಲೈಂಗಿಕ ಚಟುವಟಿಕೆಗಳ ಬಗೆಗೆ ನಿಖರವಾಗಿ ಸೂಕ್ತ ವಯಸ್ಸಿನಲ್ಲಿ ತಿಳಿದುಕೊಳ್ಳಬೇಕೆಂದಾಯಿತು. ಸಂಪ್ರದಾಯ, ಪರಂಪರೆ, ಧರ್ಮ ಮತ್ತು ಕಾನೂನು ಏರಲಾರದ ಈ ಬಲಿಷ್ಠ ಗೋಡೆಗಳತ್ತ ದೃಷ್ಟಿ ಹಾಯಿಸಿದರೆ, ನಾಡು ಮಾನವನ ಬದುಕಿಗೂ, ಸ್ವತಂತ್ರ, ಸ್ವಚ್ಛಂದವಾದ ಮಾನವನ ಬದುಕಿಗೂ ಇರುವ ಭಿನ್ನತೆ ಅರ್ಥವಾಗುತ್ತದೆ. ಸ್ತ್ರೀಪುರುಷರಲ್ಲಿಯ ಲೈಂಗಿಕ ಸಂಬಂಧಗಳ ಶಾಸ್ತ್ರೋಕ್ತ ಅಭ್ಯಾಸ ಲೈಂಗಿಕ ಶಾಸ್ತ್ರದ ವಸ್ತುವಾಗಿದೆ. ಸಮಾಜದಲ್ಲಿ ಕಾಲಕಾಲಕ್ಕೆ ಈ ಸಂಬಂಧಗಳಿಗೆ ಹೊಸ ವ್ಯಾಖ್ಯೆಗಳು ಕಡಿವಾಣಗಳು ಹುಟ್ಟಿಕೊಳ್ಳುತ್ತವೆ. ಸಮಾಜದ ಸದಸ್ಯರ ಲೈಂಗಿಕ ಚಟುವಟಿಕೆಗಳು ಸಮಾಜದ ಹದ್ದಿನ ಕಣ್ಣಿಗೆ ಒಳಪಡುತ್ತವೆ. ನೀವು ಮಾನವ ನಿರ್ಮಿತ ಗೋಡೆಗಳನ್ನು ಏರಲು ಪ್ರಯತ್ನಿಸುವ ವೇಗದಲ್ಲಿಯೇ ನಿಮ್ಮ ಸಾಮಾಜಿಕ ಪ್ರತಿಷ್ಠೆ ಇಳಿಯತೊಡಗುತ್ತದೆ. ಸರ್ವಮಾನ್ಯ ನಿಯಮಗಳ ಉಲ್ಲಂಘನೆ ಸಾರ್ವಜನಿಕ ಪ್ರತಿಭಟನೆಗೆ ದಾರಿತೋರಿಸುತ್ತದೆ. ಸಂಬಂಧಿಸಿದವರು ಮಾನಸಿಕ ಒತ್ತಡಕ್ಕೆ ಸಿಲುಕುತ್ತಾರೆ. ನಮ್ಮ ವ್ಯಕ್ತಿತ್ವದ ಮೇಲೆ ನಾವು ಮಾಡಿದ

ತಪ್ಪುಗಳ ಕಪ್ಪು ಚುಕ್ಕೆಗಳು ಅಚ್ಚಳಿಯದೆ ಉಳಿಯುತ್ತವೆ. ಲೈಂಗಿಕತೆಯ ಬಗೆಗೆ ನಾವು ತಾಳುವ ಅನಾರೋಗ್ಯಕರ ಮನೋಭಾವದ ದುಷ್ಪರಿಣಾಮವೇ ನಾವು ಇಡುವ ತಪ್ಪು ಹೆಜ್ಜೆಗಳು. ಇದಕ್ಕೆ ಯಾರು ಹೊಣೆ? ಹಿರಿಯರು ಮತ್ತು ಕಿರಿಯರು, ಪ್ರಮುಖವಾಗಿ ತಮಗೆ ತಿಳಿದೋ, ತಿಳಿಯದೆಯೋ ತಂದೆ ತಾಯಿಗಳು ಮಕ್ಕಳಲ್ಲಿ ಕುತೂಹಲ ಹುಟ್ಟಿಸುತ್ತಾರೆ. ತಮ್ಮಿಂದ ಏನನ್ನೋ ಹಿರಿಯರು ಮುಚ್ಚಿಡುತ್ತಿದ್ದಾರೆ ಎಂದು ಕಿರಿಯರು ಸಂದೇಹಿಸುತ್ತಾರೆ. ಮುಚ್ಚಿದ ಬಾಗಿಲುಗಳನ್ನು ತೆರೆದು ನೋಡುವ ಭರದಲ್ಲಿ ಹಸ್ತವೇ ಇಲುಕಬಹುದು; ಬೆರಳುಗಳು ಇಲಿಕಬಹುದು. ಅಲ್ಲವೇ?

ಲೈಂಗಿಕ ಬಯಕೆಗಳ ಬಗೆಗೆ ಈಗ ತಿಳಿಯೋಣ. ಇವು ಹುಟ್ಟಿನಿಂದಲೇ ಬಂದಿರುತ್ತವೆಯೆಂಬುದು ನಿಜ. ಸಹಜ ಪ್ರಮಾಣದ ಲೈಂಗಿಕ ಬಯಕೆಯ ತೃಪ್ತಿ ಆದರ್ಶಪ್ರಾಯವಾದ ಆರೋಗ್ಯಸ್ಥಿತಿಯನ್ನು ಹೊಂದಲು ಸಹಾಯಕವೆಂಬುದನ್ನು ಒಪ್ಪಬಹುದು. ಆದರೆ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಲೈಂಗಿಕ ಬಯಕೆಯ ತೃಪ್ತಿ ಅನಿವಾರ್ಯ ಎಂಬುದನ್ನೊಪ್ಪವುದು ಕಷ್ಟ ಯಾವನೊಬ್ಬ ವ್ಯಕ್ತಿ ಲೈಂಗಿಕ ಬಯಕೆಗಳನ್ನು ತ್ಯಜಿಸಿದ, ಆರೋಗ್ಯಕರ ವಿಧಾನಗಳ ಮೂಲಕ ಲೈಂಗಿಕ ಚಟುವಟಿಕೆಗಳನ್ನು ನಿಯಂತ್ರಿಸಿದ ಮಾತ್ರಕ್ಕೇ ತೊಂದರೆ ಪಟ್ಟುಕೊಳ್ಳುತ್ತಾನೆಂದುಕೊಳ್ಳುವುದು ಅಶಾಸ್ತ್ರೀಯ. ಸಾಮಾನ್ಯ ಲೈಂಗಿಕ ಜೀವನ ಸಾಧ್ಯವಿದ್ದ ವ್ಯಕ್ತಿಗೆ ಸಾಂದರ್ಭಿಕವಾಗಿ ಅಂಥ ಅವಕಾಶ ತಪ್ಪಿದಾಗ ಅಥವಾ ಸೂಕ್ತ ಕಾರಣಗಳಿಲ್ಲದೇ ಲೈಂಗಿಕ ಚಟುವಟಿಕೆಗಳನ್ನು ಹತ್ತಿಕ್ಕುವ ಸಂದರ್ಭವೊದಗಿದರೆ ಲೈಂಗಿಕ ಆತಂಕಸ್ಥಿತಿ ನಿರ್ಮಾಣವಾಗಿ ನರದೌರ್ಬಲ್ಯದ ಮೂಲಕ ದುಃಖ, ನಿರಾಶೆಗಳು ಕವಿಯಬಹುದು. ಆ ವ್ಯಕ್ತಿಯ ಸಾಮಾಜಿಕ ಹೊಂದಾಣಿಕೆ, ಕೆಲಸದಲ್ಲಿ ಮಗ್ನತೆ ಇವುಗಳಲ್ಲಿ ಸಮಸ್ಯೆಗಳು ತೋರಬಹುದು. ಆ ವ್ಯಕ್ತಿ ಅಸಹಜ ಲೈಂಗಿಕ ಚಟುವಟಿಕೆಗಳತ್ತ ಹೊರಳಬಹುದು. ಇದು ಲೈಂಗಿಕ ಬಯಕೆಯ ನಿರಾಕರಣೆ ಮಾತ್ರವಲ್ಲ; ಅದರ ದುರುಪಯೋಗವೂ ಕೂಡ. ಇದರ ಫಲವಾಗಿ ಕಾಮೋತ್ತೇಜಕ ಹಗಲುಗನಸು–ಗಾರಿಕೆ, ಸ್ವಯಂಕಾಮತೃಪ್ತಿಯ ಪ್ರಯತ್ನ ರೂಢಿಗೊಳ್ಳಬಹುದು. ವ್ಯಕ್ತಿ ಸಾಮಾಜಿಕವಾಗಿ ಅನುಚಿತವಾದ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗಲು ಪ್ರೇರೇಪಿಸುವ ಇತರ ಕಾರಣಗಳು ಇವೆ. ಉದಾಹರಣೆಗಾಗಿ ಹದಿಹರೆಯದವರು ದೀರ್ಘಕಾಲದವರೆಗೆ ಸ್ವಜಾತೀಯರಷ್ಟೇ ಅಭ್ಯಸಿಸುವ ಶೈಕ್ಷಣಿಕ ಸಂಸ್ಥೆಗಳಲ್ಲಿ ಅಭ್ಯಸಿಸುವುದು, ರಕ್ಷಣಾ ಸೇವೆಯಲ್ಲಿರುವವರು ಕುಟುಂಬದಿಂದ ದೂರದಲ್ಲಿ ಏಕಾಂಗಿಯಾಗಿ ಜೀವನ ಸವೆಯಿಸುವುದು; ಇತರ ಸೇವೆಗಳಲ್ಲಿಯೂ ದೂರದೂರಿನಲ್ಲಿ ಒಬ್ಬರೇ ವಾಸಿಸುವುದು; ಜೈಲಿನಲ್ಲಿ ಕೊಳೆಯುತ್ತಿರುವುದು ಇತ್ಯಾದಿ.

ಸಾಮಾಜಿಕ ನಿಯಮಗಳಿಗೆ ಒಪ್ಪುವ ರೀತಿಯಲ್ಲಿ ತಮಗೆ ಲಾಭದಾಯಕವಾಗುವಂತೆ ಇಂಥ ಚಟುವಟಿಕೆಗಳನ್ನು ತೋರ್ಪಡಿಸಲು ಸಾಧ್ಯವಿಲ್ಲದವರು ವ್ಯಕ್ತಿತ್ವವನ್ನು ಕಳಾಹೀನಗೊಳಿಸುವ ಇಂಥ ಚಟುವಟಿಕೆಗಳನ್ನು ಗೌಣಗೊಳಿಸುವದೊಳಿತು. ಅದು ಹೇಗೆ? ಸ್ವ ಸುಧಾರಣೆ ಮತ್ತು ಸುಖಗಳತ್ತ ನಮ್ಮನ್ನು ಕೊಂಡೊಯ್ಯಬಲ್ಲ ಇನ್ನೊಂದು ಪ್ರಬಲ ಆಸಕ್ತಿಯನ್ನು ಬೆಳೆಯಿಸಿಕೊಂಡು ಮೊದಲಿನದನ್ನು ಮೊದಲು, ಮೂಲೆಗೊತ್ತಿ ನಂತರ ಕ್ರಮೇಣ ಉಚ್ಚಾಟಿಸಿ ಬಿಡಿ.

ಹಲವರ ದೃಷ್ಟಿಯಲ್ಲಿ ಲೈಂಗಿಕ ಚಟುವಟಿಕೆಗಳ ನಿಷೇಧ ಮತ್ತು ಅವುಗಳ ಬಗೆಗೆ ಸಮಾಜದ ಕಣ್ಗಾವಲು ಅತಿಯಾಯಿತೆನ್ನಿಸಬಹುದು. ಇಂಥ ಚಟುವಟಿಕೆಗಳಿಗೆ ಸಂಪೂರ್ಣ ಸ್ವಾಭಾವಿಕ ಅಭಿವ್ಯಕ್ತಿಯ ಅವಕಾಶವಿರಬೇಕೆಂದೂ ಕೆಲವರು ಪ್ರತಿಪಾದಿಸಬಹುದು. ಆದರೆ ಇಂಥ ಚಟುವಟಿಕೆಗಳು ಮೇರೆ ಮೀರಿದಾಗಲೆಲ್ಲ ತಾತ್ಪೂರ್ತಿಕವಾಗಿ, ಸಂಬಂಧಿಸಿದ ವ್ಯಕ್ತಿಗಳ ದೈಹಿಕ ಶಕ್ತಿ ಕುಂದುವದು ಕಂಡು ಬಂದಿದೆ. ಇವು ಅನಿರ್ಬಂಧಿತವಾಗಿ ಮುಂದುವರೆದರೆ ವ್ಯಕ್ತಿ ಶಕ್ತಿ ಶಾಶ್ವತವಾಗಿ ಕ್ಷೀಣಿಸಬಹುದು.

ಮೂಲನಿವಾಸಿಗಳು ಅದೇ ಸ್ಥಿತಿಯಲ್ಲಿಯೇ ಶತಮಾನಗಳವರೆಗೆ ಏಕೆ ಉಳಿದರು ಎಂಬುದಕ್ಕೆ ಈ ಹಿನ್ನೆಲೆಯಲ್ಲಿ ಉತ್ತರ ಕಂಡುಕೊಳ್ಳಬಹುದು. ಆಗಿನ ಸಮಾಜ ಲೈಂಗಿಕ ಚಟುವಟಿಕೆಗಳಿಗೆ ನಿರಂತರ, ಮುಕ್ತ ಮತ್ತು ಅನಿರ್ಬಂಧಿತ ಅವಕಾಶ ನೀಡಿದ್ದರಿಂದಲೇ ನಾಗರಿಕತೆಯನ್ನು ಕಟ್ಟಲು ಅವಶ್ಯಕವಾದ ಶಕ್ತಿಯಿಲ್ಲದೆ, ಸಾಧನ ಸಂಪತ್ತುಗಳನ್ನು ಆರ್ಜೈಸಿಕೊಳ್ಳಲು, ಸದುಪಯೋಗಪಡಿಸಿಕೊಳ್ಳಲು, ನಿಯಂತ್ರಿಸಲು ಅಸಮರ್ಥನಾಗಿ ಮಾನವ ಜೀವನದ ಸುಖ ಸಾಧನಗಳಾದ ಮನೆ, ರಸ್ತೆ ನಿರ್ಮಿಸಲು, ವನ್ಯಪಶುಗಳನ್ನು ಕೈವಶಮಾಡಿಕೊಳ್ಳಲು ಬಹಳ ಕಾಲ ಸಾಧ್ಯವಾಗದೇ ಹೋಯಿತು.


ನಮಗೆಲ್ಲ ಕೇವಲ ಕುತೂಹಲ ಕೆರಳಿಸುವ, ಮನೋರಂಜಕವಾದುದೆಂದೆನಿಸುವ ಈ ವಿಷಯ ನಿಜವಾಗಿ ಎಷ್ಟು ಅಗಾಧ ಮತ್ತು ಕ್ಲಿಷ್ಟವಾದುದಾಗಿದೆಯಲ್ಲವೇ? ಆದುದರಿಂದ ಈ ಪಯಣದಲ್ಲಿ ಇಷ್ಟು ಸಾಕು. ■

ಎಂ.ಸಿ. ಛಗಲಾ ಕೇಳಿದ ಒಂದು ಅತ್ಯುತ್ತಮ ಭಾಷಣ

ಛಗಲಾರವರು ನ್ಯಾಯವಾದಿಗಳಾಗಿ, ನ್ಯಾಯಾಧೀಶರಾಗಿ, ರಾಜ್ಯಪಾಲರಾಗಿ, ರಾಯಭಾರಿಗಳಾಗಿ, ಸಚಿವರಾಗಿ ಹೀಗೆ ಅನೇಕ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಆಕ್ಸ್‌ಫರ್ಡ್ ಇಂಡಿಯನ್ ಮಜ್‌ಲಿಸ್‌ನ ಅಧ್ಯಕ್ಷರಾಗಿದ್ದಾಗಿನ ಅವರ ಒಂದು ಅನುಭವ:

ಒಂದು ಸಲ ನನ್ನನ್ನು ಮಜ್‌ಲಿಸ್ ಅಧ್ಯಕ್ಷನನ್ನಾಗಿ ಚುನಾಯಿಸಿದರು. ಪ್ರತಿಭಾವಂತರ ಭಾಷಣಗಳನ್ನೇರ್ಪಡಿಸುವುದು ನನ್ನ ಒಂದು ಕಾರ್ಯವಾಗಿತ್ತು. ಒಮ್ಮೆ ಸರೋಜಿನಿ ನಾಯ್ಡುರವರು ಇಂಗ್ಲೆಂಡಿಗೆ ಭೇಟಿ ನೀಡಿದಾಗ ಆಮಂತ್ರಣ ನೀಡಿದೆ. ಸಂತೋಷದಿಂದ ಒಪ್ಪಿದ ಅವರನ್ನು ಯಾವ ವಿಷಯ ಕುರಿತು ನಿಮ್ಮ ಭಾಷಣ ಎಂದೆ. ನಂತರ ತಿಳಿಸುವುದಾಗಿ ಹೇಳಿದ ಅವರನ್ನು ಸಭೆಯ ದಿನ ರೈಲು ನಿಲ್ದಾಣಕ್ಕೆ ಸ್ವಾಗತಿಸಲು ಹೋದಾಗ ಮತ್ತೆ ನೆನಪಿಸಿದೆ. ಸಾಯಂಕಾಲ ಹೇಳುತ್ತೇನೆ ಎಂದರು. ಅಲ್ಲಿಯ ರೂಢಿಯಂತೆ ಊಟಕ್ಕೆ ಕರೆದಾಗ ವಿನಂತಿಸಿದೆ. ನೀ ನಿಮ್ಮನ್ನು ಪರಿಚಯಿಸುವಾಗ (ಪ್ರಾಸ್ತಾವಿಕವಾಗಿ) ಸಭಿಕರಿಗೆ ವಿಷಯ ತಿಳಿಸ ಬೇಕಲ್ಲವೆ?... ಛಾಗ್ಲಾ, ಊಟಮಾಡು ಸಂತೋಷಪಡು. ನೀನು ಸೂಚಿಸಿದ ವಿಷಯ ಕುರಿತು ಮಾತಾಡುವೆ.. ಸಾಯಂಕಾಲ ಸಭೆ ಪ್ರಾರಂಭವಾಯಿತು. ಸಂಪ್ರದಾಯದಂತೆ ಅವರನ್ನು ಅವಶ್ಯವಿಲ್ಲದಿದ್ದರೂ ಪರಿಚಯಿಸಿದೆ ಮತ್ತು ಯಾವ ವಿಷಯ ಅನ್ನುವುದು ಅವರಿಗೂ ಗೊತ್ತಿಲ್ಲ. ಅಂದರೆ ನಿರ್ಣಯಿಸಿಲ್ಲ. ಈಗ ವಿಷಯವನ್ನು ನಾನೇ ಹೇಳಬೇಕು ಎನ್ನುತ್ತಾ ಮುಖವನ್ನೊರೆಸಿ ಕೊಂಡೆ. ಅಂತೂ ನಾನೇ ಒಂದು ವಿಷಯ ಸೂಚಿಸಿದೆ. ವಿಷಯ ನೆನಪಿಲ್ಲವಾದರೂ ಅವರ ವಾಗ್ಝರಿ, ಹರಿತ ನಾಲಿಗೆ, ಹೇಳಿದ ಹಾಸ್ಯಭರಿತ ಘಟನೆಗಳು ಇನ್ನೂ ಹಸಿರಾಗಿವೆ. ನನ್ನ ಜೀವಮಾನದಲ್ಲಿ ಕೇಳಿದ ಭಾಷಣಗಳಲ್ಲಿ ಆ ವೈಚಾರಿಕ ಪ್ರವಾಹಕ್ಕೆ ಸಮನಾದವು ಒಂದೆರಡು ಮಾತ್ರ ಇರಬಹುದು.. ಕವಯಿತ್ರಿ ಮಾತ್ರ ಎಂದು ತಿಳಿದಿದ್ದೆ. ಆದರೆ ಯಾವ ಪೂರ್ವ ತಯಾರಿ ಇಲ್ಲದೆ ಸುಮಾರು 45 ನಿಮಿಷ ವಿವರಿಸಿದ ಮಾತಿನ ಚಾತುರ್ಯ, ವಿಷಯದ ಆಳ, ಸುಂದರ ಶೈಲಿ, ವಿಷಯಕ್ಕೆ ತಕ್ಕ ಗಂಭೀರ ಶಬ್ದಗಳು ಸ್ಮರಣೆಯಿಂದ ಅಳಿಸಲಾರವು.

ದುರ್ಬಲರಾಗುತ್ತಿರುವ ದೈತ್ಯರು



ಹೌದು! ವಿಂಡೀಸನ್ನು ಕ್ರಿಕೆಟ್‌ನಲ್ಲಿ 'ದೈತ್ಯರು' ಎಂದು ಪರಿಗಣಿಸಲ್ಪಡುತ್ತಿದ್ದ ದಿನಗಳು ಹಿಂದಿತ್ತು. ವಿಂಡೀಸ್‌ರೆದುರು ಆಡುವ ಯಾವುದೇ ತಂಡ ಗೆಲುವನ್ನು ಸಂಪಾದಿಸುವುದೆಂದರೆ ದುಸ್ಸಾಧ್ಯವಾಗಿದ್ದ ಕಾಲವದು. ಆದರೆ ಪ್ರಸ್ತುತ ವೆಸ್ಟ್ ಇಂಡೀಸ್ ತಂಡದ ಪರದಾಟ ನಿಜಕ್ಕೂ ಶೋಚನೀಯವಾಗಿದೆ.

ಬ್ಯಾಟಿಂಗ್‌ನಲ್ಲಿ ಗ್ಯಾರಿ ಸೋಬರ್ಸ್, ಕ್ಲೈವ್ ಲಾಯ್ಡ್, ವಿವಿಯನ್ ರಿಚರ್ಡ್ಸ್, ಡೆಸ್ಮಂಡ್ ಹೇಯ್ನ್ಸ್..... ಬೌಲಿಂಗ್‌ನಲ್ಲಿ ವೆಸ್ಲಿಹಾಲ್, ಮಾಲ್ಕಂಮಾರ್ಷಲ್... ಕೀಪಿಂಗ್‌ನಲ್ಲಿ ಡ್ಯೂಜನ್ ಹೀಗೆ ವಿಂಡೀಸ್‌ನ ಕ್ರಿಕೆಟಿಗರ ಹೆಸರು ಇಂದಿಗೂ ಚಿರಸ್ಥಾಯಿ. ಒಬ್ಬೊಬ್ಬರ ಸಾಧನೆಯೂ ಶ್ಲಾಘನೀಯ. ಇಂತಹ ಶ್ರೇಷ್ಠ ಮಟ್ಟದ ಆಟಗಾರರನ್ನು ಕಂಡಿದ್ದ ವಿಂಡೀಸ್ ತಂಡದಲ್ಲಿ ಇದೇ ರೀತಿಯ ಪ್ರದರ್ಶನಗೈದ ಓರ್ವ ಆಟಗಾರ ಕೂಡ ಇಂದು ಕಾಣ ಸಿಗುತ್ತಿಲ್ಲ.

ಕಳೆದ ಡಿಸೆಂಬರ್ ತಿಂಗಳಲ್ಲಿ ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿ ವಿಂಡೀಸ್ ಸಂಪೂರ್ಣ ವಾಶೌಟ್ ಆಗಿ ಮುಖಭಂಗ ಅನುಭವಿಸಿದ್ದು ಎಂದೆಂದಿಗೂ ಮರೆಯಲಾಗದ ಘಟನೆ. ಆಡಿದ 5 ಟೆಸ್ಟ್‌ಗಳಲ್ಲೂ ವಿಂಡೀಸರು ದಕ್ಷಿಣ ಆಫ್ರಿಕಾ ತಂಡದಿಂದ ಹೀನಾಯವಾಗಿ ಸೋತರು. ದೀರ್ಘ ಕ್ರಿಕೆಟ್ ಇತಿಹಾಸವಿರುವ ಈ ತಂಡಕ್ಕೆ ಇಂತಹ ಅವಹೇಳನಕಾರಿ ಸೋಲುಗಳು ಶೋಭೆ ತರುವಂತದ್ದಲ್ಲ.

ದಕ್ಷಿಣ ಆಫ್ರಿಕಾ ಪ್ರವಾಸಕ್ಕೂ ಪೂರ್ವದಲ್ಲಿ ಬ್ರಿಯಾನ್‌ಲಾರ ಮತ್ತು ಕಂಪೆನಿ ಆಟಗಾರರ ಸಂಭಾವನೆಯ ವಿಷಯದಲ್ಲಿ ಭುಗಿಲೆಬ್ಬಿಸಿದ್ದ ಬಂಡಾಯ ವಿಂಡೀಸ್ ಕ್ರಿಕೆಟ್ ಮಂಡಳಿಯನ್ನು ಚಿಂತಾಕ್ರಾಂತರನ್ನಾಗಿಸಿತ್ತು. ಕೊನೆಗೂ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಿದ ಲಾರಾ ಜಯಿಸಿದರು. ಆದರೆ ಅದೇ ಜಯ ದಕ್ಷಿಣ ಆಫ್ರಿಕಾದೆದುರು ಮೈದಾನದಲ್ಲಿ ಪಡೆದಿದ್ದರೆ ಅದಕ್ಕೊಂದು ಹೊಸ ಅರ್ಥ ಬರುತ್ತಿತ್ತು.

ವಿಂಡೀಸ್ ಸತ್ವ ಕಳೆದುಕೊಂಡಿರುವ 'ಮುದಿ ಹುಲಿ'ಯಾಗಿರಲು ಕಾರಣವೇನು? ಎಂಬುದೊಂದು ಪ್ರಶ್ನೆಯಾಗಿಯೇ ಉಳಿದಿದೆ. ಶ್ರೇಷ್ಠ ಓಪನಿಂಗ್ ಬ್ಯಾಟಿಂಗ್ ಹಾಗು ಬೌಲಿಂಗ್ ಜೋಡಿಯನ್ನು ವಿಂಡೀಸ್ 80ರ ದಶಕದಲ್ಲಿ ಹೊಂದಿತ್ತು. ಆದರೆ ಅದೇ ಮಟ್ಟವನ್ನು ಪ್ರಸ್ತುತ ತಂಡ ಕಾಯ್ದುಕೊಂಡಿಲ್ಲ.


ವೆಸ್ಟ್ ಇಂಡೀಸ್ ಕ್ರಿಕೆಟ್‌ಗೆ ಸ್ಮರಣೀಯ ಕೊಡುಗೆ ನೀಡಿರುವ ಬೌಲರ್‌ಗಳಾದ ಕೋರ್ಟ್ನಿ ವಾಲ್ಶ್ ಹಾಗು ಕರ್ಟ್ಲಿ ಆ್ಯಂಬ್ರೋಸ್‌ರ ದಾಳಿ ಇತ್ತೀಚೆಗೆ ಮೊನಚು ಕಳೆದುಕೊಂಡಿದೆ. ಇನ್ನೋರ್ವ ಹೊಸಮುಖ ಮರ್ವಿನ್ ಡಿಲ್ಲಾನ್ ಕೂಡ ಪರಿಣಾಮಕಾರಿಯಾಗಿಲ್ಲ. ಸ್ಪಿನ್ ದಾಳಿಯಲ್ಲಿ ಲೂಯಿಸ್ ಹಾಗು ಆರ್ಥರ್ಟನ್ ಪರವಾಗಿಲ್ಲ ಎನಿಸಿದರೂ ಪಳಗಬೇಕಿದೆ.

ಲಾರರ ನೇತೃತ್ವ ಸರಿಯಿಲ್ಲ ಎಂಬುದಕ್ಕಿಂತಲೂ ಅವರ ಬ್ಯಾಟಿಂಗ್‌ನಲ್ಲಿ ತೀವ್ರತೆಯಿಲ್ಲ ಎನ್ನುವುದೇ ಸೂಕ್ತ. ಏಕೆಂದರೆ ವಿಂಡೀಸ್ ನೆಚ್ಚಿಕೊಂಡಿರುವುದೇ ಈ ವಿಶ್ವದಾಖಲೆ ಹೊಂದಿರುವ ಆಟಗಾರನ ಬ್ಯಾಟಿಂಗ್‌ನ್ನು. ಆದರೆ ಲಾರಾರ ವೈಫಲ್ಯ ದೊಡ್ಡ ಚಿಂತೆಯಾಗಿ ಪರಿಣಮಿಸಿದೆ. ಸದ್ಯಕ್ಕೆ ಶಿವನಾರೈನ್ ಚಂದ್ರಪಾಲ್ ಹಾಗು ಕಾರ್ಲ್ ಹೂಪರ್ ರೇ ವಿಂಡೀಸ್‌ನ ಮಾನ ಕಾಪಾಡುತ್ತಿದ್ದಾರೆ.

ಏನೇ ಇದ್ದರೂ ಇಂದಿನ ದಿನಗಳಲ್ಲಿ ವಿಂಡೀಸ್ ದುರ್ಬಲವಾಗುತ್ತಿರುವುದು ದುರ್ದೈವ. ಇದಕ್ಕೆ ತಂಡದ ಸಾಂಘಿಕ ಹೋರಾಟದಲ್ಲಿನ ಹಿಂಜರಿತವೇ ಪ್ರಧಾನ ಕಾರಣ ಎನ್ನಬಹುದು. ಅಭದ್ರ ಆಡಿಪಾಡಿ, ಮೊನಚು ಕಳೆದುಕೊಂಡ ಬೌಲಿಂಗ್ ಹಾಗು ಪರಿಣಾಮಕಾರಿಯಲ್ಲದ ಬ್ಯಾಟಿಂಗ್ ವಿಂಡೀಸ್‌ನ್ನು ವಿನಾಶದಂಚಿಗೆ ತಳ್ಳುತ್ತಿವೆ. ಈ ದೌರ್ಬಲ್ಯಗಳನ್ನೆಲ್ಲ ಕಳಚಿಕೊಂಡು ನವೀನತೆಯನ್ನು ಮೈಗೂಡಿಸಿಕೊಂಡಾಗ ಮಾತ್ರ ವಿಂಡೀಸ್ ಕ್ರಿಕೆಟ್‌ಗೆ ನವಚೈತನ್ಯ ದೊರೆಯಬಹುದು.

■ಗರ್ತಿಕೆರೆ ವಿ. ಪ್ರಕಾಶ್

ಪದ ಬಂಧ 14



ಪದಬಂಧ 13ರ ಸರಿಯುತ್ತರ

ಎಡದಿಂದ ಬಲಕ್ಕೆ

1. ಹಾವಾಡಿಗ 4. ರಾಷ್ಟ್ರಪತಿ 6. ಮತ 8. ನಗ 9. ರತ್ನ 10. ಕನಸು 12. ನಾಯಿ 15. ಚಂಡಮಾರುತ 18. ಜಾದು 19. ಅವಧಿ 21. ರಿಗ 22. ತಿಥಿ 23. ರಸ 25. ಸಹಕಾರ 26. ತಿದ್ದುಪಡಿ.

ಮೇಲಿನಿಂದ ಕೆಳಕ್ಕೆ

2. ವಾರದ ರಜೆ 3. ಗಮ 4. ರಾಗ 5. ಪರಿಚಯಿಸು 7. ತವಕ 8. ನಮಿಸು 11. ನವಮಾನವ 13. ಪ್ರಚಂಡ 14. ನೂತನ 16. ಪ್ರಜಾ ಸಮೂಹ 17. ಸಾಗರದೀಪ 19. ಅತಿಥಿ 20. ಧಿಕ್ಕಾರ 22. ತಿರ 24. ಸತಿ.

ಎಡದಿಂದ ಬಲಕ್ಕೆ

1. ಉಗ್ರ ರೂಪಿಯಾದ ಈತ, ದಷಬ್ರಹ್ಮನನ್ನು ಸಂಹಾರ ಮಾಡಲು ಹುಟ್ಟಿ ಬಂದ .... (4)
4. ಕುಡಿಕೆಯಲ್ಲಿ ಕೂಡಿಟ್ಟ ಚಿಲ್ಲರೆ ಹಣ .... (4)
6. ಆಡಂಬರದ ಮದುವೆಯಲ್ಲಿ ನಾಪತ್ತೆಯಾದ ಮದುವೆ ಗಂಡು ... (2)
8. ಅವಸರದಲ್ಲಿ ಕಳೆದುಕೊಂಡ ಮುತ್ತಿನ ಮಾಲೆ .... (2)
9. ಅವತಾರ ಪುರುಷರು ಆಶ್ರಯಿಸಿದ ತೋಟ .... (2)
10. ಕಂದಕದಲ್ಲಿ ಬಿದ್ದಾಗ ಉಂಟಾದ ನಡುಕ .... (3)
12. ಸಂಬಳ ಸಿಗದಿದ್ದಾಗ ನಡೆದ ಮುಷ್ಕರ .... (2)
15. ಹುಣ್ಣಿಮೆ ನಂತರ ಬಣ್ಣ ಆಡುವ ಐದನೇಯ ದಿನ .... (5)
18. ಭಯದಿಂದ ಓಡಿ ಹೋದ ಕುದುರೆ........ (2)
19. ಕಸರತ್ತು ಮಾಡಿ ಹೊತ್ತು ಸಾಗಿಸ್ಸಿದ ಸಾಮಗ್ರಿ ಸರಂಜಾಮು. .... (3)
21. ಅಂಗಳ ತುಂಬ ಓಡಾಡಿ ಲಾಗ ಹಾಕಿದ ಕೋತಿ .... (2)
22. ಕನಿಕರ ತೋರದೆ ವಸೂಲಿ ಮಾಡುವ ಸುಂಕ .... (2)
23. ಕನ್ನಡಿಯಲ್ಲಿ ಕಾಣುವ ನಯನ........ (2)
25. ಪಂಪ ಕವಿಯು ಮರೆಯಲಾರದ ಐತಿಹಾಸಿಕ ಊರು .... (4)
26. ಹರಿಕೆ ತೀರಿಸಿಕೊಳ್ಳಲು ಕುಳಿತು ಕೇಳಿದ ಶಿವ ಚರಿತ್ರೆ........ (4)

ಮೇಲಿನಿಂದ ಕೆಳಕ್ಕೆ

2. ಅಂಗಾಂಗ ರಕ್ಷಣೆಗಾಗಿ ತೊಟ್ಟ ಯುದ್ಧದ ಉಡುಗೆ .... (5)
3. ಘನರೂಪದಂತದ್ದಲ್ಲ. ತೆಳುವಾದ ನೀರಿನಂತಹುದು .... (2)
4. ಮಹಾಪುರುಷರು ನಿರ್ಮಿಸಿದ ಪಟ್ಟಣ .... (2)
5. ಗಾರದ ನಡುವೆ ಅಳಿದು ಹೋದ ಹವೆಯಲ್ಲಿಯ ಶಿಖರ .... (5)
7. ಕಂಗೆಟ್ಟರೂ ಬಿಡದೇ ಕಬ್ಬಿಣ ಕೆಲಸ ಮಾಡುವವ 'ತಿರುಗಿದ್ದಾನೆ.... (3)
8. ಸಮಾಜದಲ್ಲಿ ಹೆಚ್ಚು ಕಡಿಮೆಯೆನ್ನದೆ ನಡೆದುಕೊಂಡ ಒಂದೇ ರೀತಿ. (3)
11. ಮನೆಯ ಕಟಾಂಜನದಲ್ಲಿ ಕಟ್ಟಿದ ಹಕ್ಕಿಯ ಬಲೆ .... (5)
13. ಸುಲಭ ಸಂಚಾರಕ್ಕೆ ಗುಡ್ಡ ಕೊರೆದು ನಿರ್ಮಿಸಿದ್ದು .... (3)
14. ಕಾಮುಕರಿಗೆ ಕನಸ್ಸಿನಲ್ಲಿ ಬರುವ ನಲ್ಲೆ .... (3)
16. ಸಮರಸದಿಂದ ಬೆರೆತು ಒಂದಾಗಿ ಕೂಡಿ ನಡೆಸಿದ ಬಾಳ್ವೆ........ (5)
17. ಅಂಗ ಧರಿಸಿ ಜೋಪಾನದಿಂದ ನೋಡಿಕೊಂಡ ಮೈಗಾವಲುಗಾರ (5)
19. ಅಸಮರ್ಥರೂ ಸಹ ಭಾಗ ವಹಿಸಿದ ದೊಡ್ಡ ಯುದ್ಧ .... (3)
20. ಕುರುಡನಾದರೂ ಈತ ಮದ್ಯಪಾನ ವ್ಯಸನ ಉಳ್ಳವ........ (3)
22. ಕತ್ತರಿಸಿದ ರೆಂಬೆಯನ್ನು ಬೇರೆ ರೆಂಬೆಗೆ ಜೋಡಿಸಿದ ಹೊಸ ವಿಧಾನ. (2)
24. ಮಣ್ಣಿನಲ್ಲಿ ಹುಟ್ಟಿ ಬಂದರೂ ಇದು ಅತ್ಯಂತ ಸಿಹಿ ಉಳ್ಳ ಫಲ ತಿರುಗಿದೆ (2)

■ ಜವಳಿ ವೀರಣ್ಣ

(ಉತ್ತರ : ಮುಂದಿನ ಸಂಚಿಕೆಯಲ್ಲಿ)

ನೀವು ಕಥೆಗಾರರಾಗಬೇಕೆ?..................

ನಿಮಗೂ ಕಥೆಗಾರರಾಗಬೇಕೆಂಬ ಆಸೆ ಇರಬಹುದಲ್ಲವೆ? ನಿಮ್ಮಂತಹ ಚಿಗುರು ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಲಿಕ್ಕಾಗಿಯೇ ಈ ಅಂಕಣ ಮೀಸಲು. ನೀವು ಮಾಡಬೇಕಾದುದಿಷ್ಟೇ; ಈ ಕೆಳಗೆ ನಾವೊಂದು ಕಥೆ ನೀಡಿದ್ದೇವೆ. ಆದರೆ ಅದು ಅಪೂರ್ಣ. ಅದನ್ನು ಪೂರ್ಣಗೊಳಿಸಬೇಕಾದವರು ನೀವೇ!

ಅಪೂರ್ಣ ಕತೆ

ಅಂಬಾಜಿ ದುರ್ಗದ ಮಹಾಕೈಲಾಸಗಿರಿ ಕ್ಷೇತ್ರವನ್ನು ನೋಡಲು ನಂದಿಯ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ಮಕ್ಕಳು ತಮ್ಮ ಗುರುಗಳ ಜತೆ ಒಂದು ದಿನದ ಪ್ರವಾಸ ಕೈಗೊಂಡಿದ್ದರು.

ಮಕ್ಕಳೆಲ್ಲಾ ಉತ್ಸಾಹದಿಂದ ಬಸ್‌ನಲ್ಲಿ ಕೇಕೇ ಹಾಕುತ್ತಾ ಕುಣಿದು ಕುಪ್ಪಳಿಸಿ ಸಂತೋಷದಿಂದ ಹೊರಟರು. ಸುಮಾರು 25-30 ಜನರ ಶಾಲಾಪ್ರವಾಸ ತಂಡ ತಮ್ಮ ನಿಗದಿತ ಕಾರ್ಯಕ್ರಮದಂತೆ ಮಹಾಕೈಲಾಸಗಿರಿ ಕ್ಷೇತ್ರದಲ್ಲಿರುವ ಶಿವನ ದೇವಸ್ಥಾನವನ್ನು ನೋಡಿಕೊಂಡು ನಂತರ ಸ್ವಲ್ಪ ದೂರದಲ್ಲಿರುವ ಕೈವಾರವನ್ನು ನೋಡಲು ಹೊರಟರು. ಅಲ್ಲಿಯ ಪ್ರಸಿದ್ಧ ದೇವಸ್ಥಾನಗಳನ್ನೆಲ್ಲಾ ವೀಕ್ಷಿಸಿ ಮಕ್ಕಳೆಲ್ಲಾ ತಿಂಡಿ ತಿಂದು ಪಾರ್ಕ್‌ನಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು.

ಆದರೆ ತುಂಟ ಹುಡುಗನಾದ ಮನೋಜ್ ಬೆಟ್ಟದಲ್ಲಿ ಭೀಮನ ಹೆಜ್ಜೆಯ ಗುರುತುಗಳಿವೆ ಎಂದು ತಾತ ಹೇಳಿದ ಕಥೆಯನ್ನು ಜ್ಞಾಪಿಸಿಕೊಂಡು...

ಸೂಚನೆಗಳು :

- ಹತ್ತನೆಯ ತರಗತಿಯವರೆಗಿನ ವಿದ್ಯಾರ್ಥಿಗಳು ಮಾತ್ರ ಈ ಕಥೆಯನ್ನು ಪೂರ್ಣಗೊಳಿಸಿ ಕಳುಹಿಸಲು ಅರ್ಹರು.
- ನಿಮ್ಮ ಬರವಣಿಗೆ ಅರ್ಧ ಫೂಲ್‌ಸ್ಕೇಪ್ ಹಾಳೆ ಮೀರದಿರಲಿ.
- ಆ ಹಾಳೆಯ ಹಿಂಬದಿಯಲ್ಲಿ 'ಕಿಲ ಕಿಲ ಕೂಪನ್' ಅಂಟಿಸಿರಬೇಕು.
- ಮುಂದಿನ ಸಂಚಿಕೆಯಲ್ಲಿ ಫಲಿತಾಂಶ.
- ನಿಮ್ಮ ಬರವಣಿಗೆ ನಮಗೆ ತಲುಪಲು ಅಂತಿಮ ದಿನಾಂಕ 15. 3. 1999

ಕಿಲ ಕಿಲ ಕೂಪನ್ – (ಮಾರ್ಚ್ 99)

ಹೆಸರು...

ತರಗತಿ........................... ವಯಸ್ಸು.....................

ತಂದೆ...

ತಾಯಿ...

ವಿಳಾಸ...

....

....

....

ಶರಾವತಿ

ಬಳುಕುತ ಕುಣಿಯುತ ವಯ್ಯಾರದಲಿ
ಗುಡ್ಡ ಬೆಟ್ಟ ಕೊರಕಲಲಿ ಬರುತಿಹಳು

ಹೆಜ್ಜೆ ಇಟ್ಟಡಿಯಲಿ ನೆಲವು ಅರಳುತಲಿ
ಹಸಿರ ಪೈರನುಟ್ಟಿಹಳು ಸಂಭ್ರಮದಲಿ

ವಿದ್ಯುತ್ ಯಂತ್ರಕೆ ನೀನಾದೆ ಮಂತ್ರ
ಕೈಗಾರಿಕೆಗೆ ನೀನಾದೆ ರಾಗ ತಾಳ ತಂತ್ರ

ಸಾಸಿರ - ಸಾಸಿರ ಕನಸುಗಳ ಕಥನವು
ಭಾವನೆಗಳ ಮನೆ - ಮಠ ಮಂದಿರ
ತ್ಯಾಗವಾಗಿಹವು

ಲಿಂಗನಮಕ್ಕಿ ಅಣೆಕಟ್ಟೆವಿನಂದು
ನೀ ಚೆಲ್ಲಿದೆ ಬೆಳಕ ಈ ಜಗಕಂದು

ಅಂಬುತೀರ್ಥದೊಳು ಜನ್ಮತಾಳಿದೆ
ಸಹ್ಯಾದ್ರಿ ನಾಡೊಳು ತಂಪನ್ನೆರದೆ

ಜೋಗದ ಸಿರಿಯೊಂದಿಗೆ
ಶ್ರೀಗಂಧದ ಮೆರಗು ತಂದೆ ಈ ನಾಡಿಗೆ

ಸಮೀಪವು ಅಡಿಕೆ ತೆಂಗುಗಳು ನಿನ್ನಂಘಿಗೆ
ಹಕ್ಕಿ - ಪಕ್ಕಿ ಕಾಕ - ಪಿಕ ಬಯಸುತಿಹವು
ನಿನ್ನೆಳಿಗೆ

ನಿನ್ನೊಲವಿನ ಸಿಂಗರದ ನಲಿವ ನೋಟ
ಈ ನಾಡಿನ ಜಗಕೆ ಹರುಷದಾ ನೋಟ

ನೀನಾದೆ ಕನ್ನಡಕೆ ಬತ್ತದಾ ಗಂಗೆ
ಭಾಗ್ಯದ ನಿಧಿ ತಂದೆ ಈ ನಾಡಿಗೆ

ಕರ್ನಾಟಕಕೆ ನೀ ಮುಕುಟವಾದೆ
ಕನ್ನಡ ತಾಯ್ಗೊರಳ ಸರದಲಿ ಪದಕವಾದೆ.

- ಪ್ರಕಾಶ್ ಆರ್. ಕಮ್ಮಾರ
ಸಾಗರ

ಕಳೆದ ತಿಂಗಳ ಅಪೂರ್ಣ ಕಥೆಯ ಮುಕ್ತಾಯ

1

ಕಾಯಿ ಕಿತ್ತು ಕೆಳಗೆ ಇಳಿಯಬೇಕೆನ್ನುವಷ್ಟರಲ್ಲಿ ಅವನಿಗೆ ಬಾವಿಗೆ ಬಿದ್ದೇ ಬೀಳುತ್ತೇನೆಂಬ ಭಯವಾಯಿತು. ಕೈಯಲ್ಲಿದ್ದ ತೆಂಗಿನಕಾಯಿ ಬಾವಿಯೊಳಗಿನ ನೀರಿಗೆ ದುಘುಂ ಎಂದು ಬಿದ್ದು ಬಿಟ್ಟಿತು. ತೆಂಗಿನ ಮರದ ಗರಿಗಳ ನಡುವೆ ಏರಿ ಗಟ್ಟಿಯಾಗಿ ಕುಳಿತುಕೊಂಡು, ನಾಲ್ಕೂ ದಿಕ್ಕುಗಳಿಗೆ ಕೇಳುವಂತೆ ಅತ್ತು ಬೊಬ್ಬಿಟ್ಟನು. ಆಗ ಆ ತೋಟದ ಕೆಲಸದ ಆಳು ಸನಿಹಕ್ಕೆ ಬಂದು ವಿಚಾರಿಸಿ, ವಿಷಯವನ್ನೆಲ್ಲಾ ಅರ್ಥ ಮಾಡಿಕೊಂಡನು. ಒಂದು ದೊಡ್ಡದಾದ ಹುರಿಹಗ್ಗದ ಸಹಾಯದಿಂದ ಅತಿ ಜಾಗರೂಕತೆಯಿಂದ ವೀರೇಶನು ಕೆಳಗಿಳಿಯುವಂತೆ ಮಾಡಿದನು. ಮರದಲ್ಲಿ ಉಳಿದಿದ್ದ ಕಾಯಿಯನ್ನು ಕೊಯ್ದು ಅವನ ಕೈಗಿತ್ತು, ಹೋಗು, ಶಾಲೆಯಲ್ಲಿ ಪೂಜೆಯ ಹೊತ್ತು ಮೀರುತ್ತಾ ಇರಬಹುದು. ಬೇಗನೇ ಹೋಗು ಎಂದನು.

-ವರ್ಷಾ, ಮೈಸೂರು.

2

ಆತನು ಕಾಲು ಜಾರಿ ಬಿದ್ದು ತನ್ನ ಜೀವವನ್ನು ಕಳೆದುಕೊಂಡನು. ಮುಖ್ಯಗುರುಗಳು ವೀರೇಶನ ತಂದೆ ತಾಯಿಗಳಿಗೆ ಈ ವಿಷಯ ತಿಳಿಸಿ, ಮುಂದಿನ ಕಾರ್ಯಕ್ಕೆ ಎಲ್ಲ ಸಿದ್ಧತೆಗಳನ್ನು ಮಾಡಿದರು. ಬುದ್ಧಿವಂತ, ಜಾಣನಾದ ವೀರೇಶನ ಆತ್ಮಕ್ಕೆ ಶಾಂತಿ ಸಿಗಲಿಯೆಂದು ಮುಖ್ಯಗುರುಗಳು, ಶಿಕ್ಷಕರು ಹಾಗೂ ಆತನ ಸಹಪಾಠಿಗಳು ಮೌನ ಆಚರಿಸಿದರು.'ಆಸೆಯಿರಬೇಕೆ ವಿನಃ ದುರಾಸೆ ಇರಬಾರದು' ಎಂಬ ನುಡಿ ಮಾತನ್ನು ನಾನು ಹೇಳಬಯಸುತ್ತೇನೆ.

-ಸಂಗಮೇಶ ನಂದವಾಡಗಿ, ಹುನಗುಂದ.

3

ವೀರೇಶ ಇಳಿಯಬೇಕೆನ್ನುವಷ್ಟರಲ್ಲಿ ಕಾಯಿ ಜಾರಿ ಬಾವಿಗೆ ಬಿತ್ತು. ಮೊದಲೇ ದುರಾಸೆಯ ವೀರೇಶ ಹಿಂದು ಮುಂದು ನೋಡದೆ ಬಾವಿಗೆ ಜಿಗಿದು ಕಾಯಿ ಹಿಡಿದು ಕೊಂಡು ಮೇಲೆ ಬರಲು ನೋಡುತ್ತಾನೆ. ಆ ಬಾವಿಗೆ ಮೆಟ್ಟಿಲು ಇರುವುದಿಲ್ಲ. ಅಷ್ಟರಲ್ಲಿ ಕಾಯಿ ತರಲು ಹೋದ ವೀರೇಶ ಇನ್ನೂ ಬರಲಿಲ್ಲ ಎಂದು ಗುರುಗಳು ಅಂಗಡಿಯಲ್ಲಿ ವಿಚಾರಿಸಿದರು. ಅಂಗಡಿಯವನು ಆತ ಮರದ ಕಡೆ ಕಾಯಿ ತರಲು ಹೋಗಿದ್ದಾನೆ ಎಂದು ಹೇಳಿದಾಗ, ಗುರುಗಳು ಬಾವಿ ಕಡೆಗೆ ಹೋಗಿ ನೋಡಿದರು. ಬಾವಿಯಲ್ಲಿ ವೀರೇಶನನ್ನು ನೋಡಿದ ಗುರುಗಳು ತಕ್ಷಣ ಹಗ್ಗದ ಸಹಾಯದಿಂದ ಮೇಲೆ ತಂದರು. ವೀರೇಶನು ನಡೆದ ಕತೆಯನ್ನು ಗುರುಗಳ ಮುಂದೆ ಹೇಳಿದನು. 'ಅತಿ ಆಸೆ ಗತಿ ಗೆಡಿಸುತ್ತದೆ' ಎಂದು ತಿಳಿಸಿ ಹೇಳಿದರು.

-ಶಿವಾನಂದ ಬಿ., ಗಲಗಲಿ.

4

ಕಾಯಿ ಕಿತ್ತು ಕೆಳಗೆ ಇಳಿಯಬೇಕೆನ್ನುವಷ್ಟರಲ್ಲಿ ತೋಟದ ಯಜಮಾನ ಬಂದಿರಬಹುದು. ಅವನನ್ನು ನೋಡಿದ ಕೂಡಲೇ ವೀರೇಶ ಭಯದಿಂದ ಇಳಿಯುವಾಗ ಬಾವಿಯಲ್ಲಿ ಬಿದ್ದಿರಬಹುದೆಂದು ನನ್ನ ಅನಿಸಿಕೆ. 'ಅವಸರವೇ ಅಪಾಯಕ್ಕೆ ಕಾರಣ' ಈ ಕಥೆಗೆ ಇದು ನೂರರಷ್ಟು ಹೊಲಿಕೆಯಾಗುತ್ತದೆ.

-ಸುರೇಶ್ ಕುಮಾರ್, ಉಡುಪಿ.

5

ಚುರುಕು ಬುದ್ಧಿಯ ವೀರೇಶ ಕಾಯಿಯನ್ನು ಕಿತ್ತು ಬಾವಿಯಿಂದ ಸ್ವಲ್ಪ ದೂರಕ್ಕೆ ಎಸೆದನು. ಧೈರ್ಯದಿಂದ ನಿಧಾನವಾಗಿ ಇಳಿದು, ಶಾಲೆಯಲ್ಲಿ ನಡೆಯುವ ಪೂಜೆಗಾಗಿ ಸರಿಯಾದ ಸಮಯಕ್ಕೆ ಕಾಯಿಯನ್ನು ತಂದು ಕೊಟ್ಟು ಗುರುಗಳಿಂದ ಭೇಷ್ ಅನ್ನಿಸಿಕೊಳ್ಳುವನು. ಅತೀ ಚಾಣಾಕ್ಷ ಬುದ್ಧಿಯನ್ನು ಉಪಯೋಗಿಸಿದ ಕಾರಣ ಗುರುಗಳು ಕೊಟ್ಟ ರೂ. 5/- ನ್ನು ಉಳಿಸಿ ಸಿಹಿ ತಿಂಡಿ ತಿನ್ನುವ ಆಸೆಯನ್ನು ಪೂರೈಸಿಕೊಂಡನು.

-ಎಂ. ನಾಗಶ್ರೀ, ಬೆಂಗಳೂರು.

6

ಅವನು ಕೆಳಗೆ ಇಳಿಯಬೇಕೆನ್ನುವಷ್ಟರಲ್ಲಿ ಕೈ ಜಾರಿ ಬಾವಿಯಲ್ಲಿ ಬಿದ್ದನು. ಕಾಪಾಡಿ, ಕಾಪಾಡಿ ಎಂದು ಕೂಗಿಕೊಂಡನು. ತೋಟದಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರರು ವೀರೇಶನನ್ನು ಬಾವಿಯಿಂದ ಮೇಲಕ್ಕೆತ್ತಿ ರಕ್ಷಿಸಿದರು. ಹಣ ಉಳಿಸಿ ಸಿಹಿ ತಿಂಡಿಗಳನ್ನು ತಿನ್ನಬೇಕೆನ್ನುವ ಆಸೆ ಈ ಗತಿ ತಂದಿತು. 'ಅತಿಯಾಸೆ ಗತಿ ಗೆಡಿಸಿತು' ಎಂಬ ಗಾದೆ ಮಾತು ಸತ್ಯವಾಯಿತು. ಇದರಿಂದ ವೀರೇಶನು ಇನ್ನು ಮುಂದೆ ಯಾವಾಗಲೂ ಹೀಗೆ ಮಾಡಬಾರದು ಎಂಬ ಪಾಠವನ್ನು ಕಲಿತನು.

-ಗಣೇಶ ವಿ. ಹೆಗಡೆ, ಕಾರವಾರ.

7

ಅರ್ಧ ಬಾವಿಯ ತುಂಬ ನೀರನ್ನು ಕಂಡ ವೀರೇಶ ದಿಗ್ಭ್ರಮೆಗೊಂಡ. ಸರಿಯಾಗಿ ಮರವನ್ನೇ ಏರಲು ಬಾರದ ವೀರೇಶನಿಗೆ, ಈಜು ಕೂಡ ಬರುತ್ತಿರಲಿಲ್ಲ. ವೀರೇಶ ಅಮ್ಮಾ ಎನ್ನುತ್ತಾ ತನ್ನ ಎಡಗೈಯನ್ನು ಕೈ ಬಿಟ್ಟಾಗ, ಬಾವಿಯ ಆಳಕ್ಕೆ ಧುಮುಕಿದನು. ಆ ಶಬ್ದವನ್ನು ಕೇಳುತ್ತಲೇ ಪಕ್ಕಿ ಪಕ್ಷಿಗಳು ಹಾರಾಡಿದವು. ಸ್ವಲ್ಪ ದೂರದಲ್ಲಿ ಗಾಳಿಪಟವನ್ನು ಹಾರಿಸುತ್ತಿದ್ದ ರಾಮು ಹಕ್ಕಿಗಳ ಹಾರಾಟದ ಗುಟ್ಟನ್ನು ತಿಳಿಯಲೆಂದು ಹೋಗಿ ಬಾವಿಯಲ್ಲಿರುವ ವೀರೇಶನನ್ನು ಕಂಡನು. ಕೂಡಲೇ ಓಡಿ ಹೋಗಿ ಪಕ್ಕದ ಅಂಗಡಿಯ ಶಂಕರಣ್ಣನಿಗೆ ತಿಳಿಸಿದ. ಶಂಕರಣ್ಣ ಹಕ್ಕಿಗಳ ಸಾಲನ್ನು ಹಿಂಬಾಲಿಸಿ, ತಕ್ಷಣ ಬಾವಿಗೆ ಜಿಗಿದು ವೀರೇಶನನ್ನು ಸಾವಿನ ದವಡೆಯಿಂದ ಮುಕ್ತಗೊಳಿಸಿದ.

-ಎ. ಸುರೇಶ, ಹಗರಿಬೊಮ್ಮನಹಳ್ಳಿ.

8

ವೀರೇಶ ತುಂಬಾ ಬುದ್ಧಿವಂತ. ವಿದ್ಯಾವಂತನಾದರೂ ಜಿಪುಣತನಕ್ಕೆ ಹೆಸರುವಾಸಿ ಎಂದು ಹೇಳಬಹುದು. ಪ್ರಪಂಚದಲ್ಲಿ ಎಲ್ಲರೂ ಆಶಾವಾದಿಗಳೇ, ಆದರೆ ಆದಕ್ಕೆ ಒಂದು ಮಿತಿ ಇರಬೇಕು. ಒಂದು ತೆಂಗಿನಕಾಯಿಯ ಗರಿಷ್ಠ ಬೆಲೆ 4 ರೂಪಾಯಿ. ಆ 4 ರೂ.ಗಳ ಸಲುವಾಗಿ ತನ್ನ ಜೀವವನ್ನೇ ಕಳೆದುಕೊಂಡನು. 'ಅತಿ ಆಸೆ ಗತಿಗೆಡಿಸಿತು' ಎಂಬ ಮಾತು ಸತ್ಯ.

-ವೀರೇಶ ಬಿ. ಕನ್ನೂರ, ಮುದ್ದೇಬಿಹಾಳ.

9

ವೀರೇಶನು ಕಾಯಿ ಕಿತ್ತು ಕೆಳಗಿಳಿಯಬೇಕೆನ್ನುವಷ್ಟರಲ್ಲಿ, ಕೈ ಜಾರಿ ಬಾವಿಗೆ ಬೀಳುತ್ತಿದ್ದ. ಅಷ್ಟರಲ್ಲಿ ಒಂದು ಕೊಂಬೆಯನ್ನು ಹಿಡಿದು ನೇತಾಡ ತೊಡಗಿದ. ಆಗ ವೀರೇಶ ನನ್ನನ್ನು ಯಾರಾದರೂ ಕಾಪಾಡಿ ಎಂದು ಕಿರುಚ ತೊಡಗಿದ. ಇದನ್ನು ಕೇಳಿದ ಒಬ್ಬ ವ್ಯಾಪಾರಿ ಅವನ ಸಹಾಯಕ್ಕೆ ಬಂದನು. ದಾರಿಯಲ್ಲಿ ಹೋಗುತ್ತಿದ್ದ ವ್ಯಾಪಾರಿ ಮರದ ಹತ್ತಿರ ಬಂದು ಉಪಾಯದಿಂದ ವೀರೇಶನನ್ನು ಕೆಳಗೆ ಇಳಿಸಿದನು. ತಕ್ಷಣ ವೀರೇಶ ಕಾಯಿಯನ್ನು ತೆಗೆದುಕೊಂಡು ಶಾಲೆಗೆ ಓಡಿದನು.

-ಗಿರಿಜಾ ಪಂಚಾಕ್ಷರಿ, ಬೆಂಗಳೂರು.

ಸಿನಿಮಾದೊಳಗೊಂದು ಸಿನಿಮಾ



ಉಪೇಂದ್ರ, ಧಾಮಿನಿ - ಚಿತ್ರ ಉಪೇಂದ್ರ

ಇದು ಕನ್ನಡ ಚಿತ್ರರಂಗದಲ್ಲಿ ಚಾಲ್ತಿಯಲ್ಲಿರುವ ಇತ್ತೀಚಿನ ಟ್ರೆಂಡ್. ಇದಕ್ಕೆ ಕಾರಣ ಮಿಕ್ಕೆಲ್ಲಾ ಫಾರ್ಮುಲಾಗಳು ನೆಲಕಚ್ಚಿರುವುದು.

ನೀವು ಹೆಚ್ಚೇನೂ ಹಿಂದೆ ಹೋಗಬೇಕಿಲ್ಲ. ಕೇವಲ ಮೂರು ವರ್ಷಗಳ ಹಿಂದಿನ ಚಿತ್ರಗಳನ್ನು ನೆನಪಿಸಿಕೊಳ್ಳಿ. ಆಗ ಸೆಂಟಿಮೆಂಟ್ ಚಿತ್ರಗಳದ್ದೇ ಸಾಮ್ರಾಜ್ಯ. 'ತವರಿನ ತೊಟ್ಟಿಲು' ನಿಂದ ಹಿಡಿದು 'ಮಿನುಗುತಾರೆ' ತನಕ ಬರೀ ಕಣ್ಣೀರ ಚಿತ್ರಗಳದ್ದೇ ಸರಮಾಲೆ. ಈ ಎಲ್ಲಾ ಚಿತ್ರಗಳಲ್ಲೂ ನಾಯಕಿಗೇ ಅಗ್ರ ಪೀಠ. ಯಾಕೆಂದರೆ ಹೆಣ್ಮಕ್ಕಳು ಚಿತ್ರ ಮಂದಿರಕ್ಕೆ ಬಂದು ಅಳುತ್ತಾ ವಾಪಸಾಗಬೇಕಲ್ಲ. ಕಥಾವಸ್ತು ತುಂಬಾ ಸರಳ. ನಾಯಕಿಗೆ ಮದುವೆಯಾಗುತ್ತದೆ. ಗಂಡ ಶ್ರೀಮಂತ, ಆದರೆ ತವರುಮನೆಯವರು ಕಡು ಬಡವರು. ನಾಯಕಿ ಸುಖದ ಸುಪ್ಪತ್ತಿಗೆಯಲ್ಲಿದ್ದರೂ ತವರುಮನೆಯದ್ದೇ ಚಿಂತೆ. ಇದು ಅತ್ತೆ ಮಾವನಿಗಿಷ್ಟವಿಲ್ಲ. ಇಲ್ಲಿಂದ ದುಃಖದ ಅಧ್ಯಾಯ ಶುರು.

ಈ ವಿಭಾಗದಲ್ಲೂ ಉಪವಿಭಾಗಗಳಿವೆ. ನಾಯಕಿಯ ಅಪ್ಪ, ಆಕೆಯ ಮದುವೆಯಾಗುವ ಹೊತ್ತಿಗೇ ಕೈಲಾಸವಾಸಿಯಾಗಿದ್ದಾನೆ. ಅಣ್ಣನೆಂದರೆ ಈಕೆಗೆ ಇಷ್ಟ. ಆತ ಬಡವನಾದರೂ ಸ್ವಾಭಿಮಾನಿ. ತಂಗಿಯರ ಮದುವೆಯಾಗದೆ ತಾನು ತಾಳಿ ಕಟ್ಟೋದಿಲ್ಲ ಎಂದು ಪ್ರತಿಜ್ಞೆ ಮಾಡಿದ ತ್ಯಾಗಮಯಿ. ಇದು ಬೇಡ ಅಂದರೆ ನಾಯಕಿಯನ್ನು ವಿಧವೆಯಾಗಿಸಬೇಕು. ಆಕೆ ತವರುಮನೆಗೆ ವಾಪಸಾಗಿ ಅತ್ತಿಗೆಯ ವ್ಯಂಗ್ಯದ ಮಾತಿಗೆ ಬಲಿಯಾಗಬೇಕು.

ಸೆಂಟಿಮೆಂಟ್ ಚಿತ್ರಗಳಿಗೆ 'ಎ' ಸೆಂಟರ್‌ನಲ್ಲಿ ಅಂಥಾ ಡಿಮ್ಯಾಂಡ್ ಇಲ್ಲದೇ ಇದ್ದರೂ 'ಬಿ, ಸಿ' ಸೆಂಟರ್‌ಗಳಲ್ಲಿ ಗಲ್ಲಾಪೆಟ್ಟಿಗೆ 'ಝಣ ಝಣ' ಎನ್ನುತ್ತಿತ್ತು. ಆ ಕಾರಣಕ್ಕೆ ನಾರಾಯಣ್, ಮಹೇಂದರ್, ಶಿವಮಣಿಯಂಥಾ ನಿರ್ದೇಶಕರಿಗೂ ತಾರಾಮೌಲ್ಯ ಬಂತು.

ಯಶಸ್ಸಿನ ಬಾಲಕ್ಕೆ ಜೋತು ಬೀಳುವ ನಿರ್ಮಾಪಕರ ಸಂಖ್ಯೆ ಜಾಸ್ತಿಯಾಗುತ್ತಿದ್ದಂತೇ, ಸೆಂಟಿಮೆಂಟ್ ಚಿತ್ರಗಳು ಫ್ಲಾಪ್ ಆಗೋದಕ್ಕೆ ಶುರುವಾಯಿತು. ರಂಜನೆಯೆಂದರೆ ಬರೀ ಕಣ್ಣೀರಲ್ಲ ಅಂತ ಪ್ರೇಕ್ಷಕರಿಗೆ ಜ್ಞಾನೋದಯವಾಯಿತು. ತವರಿನ ಶೀರ್ಷಿಕೆ ಹೊತ್ತ ಚಿತ್ರಗಳು ಒಂದೇ ವಾರಕ್ಕೆ ಜಾಗ ಖಾಲಿ ಮಾಡುವ ಪರಿಸ್ಥಿತಿ ಸೃಷ್ಟಿಯಾಯಿತು. ಇದರಿಂದ ನಷ್ಟವಾಗಿದ್ದು ಶ್ರುತಿ ಎಂಬ ಕಣ್ಣೀರ ಒಡತಿಗೆ. ಸೆಂಟಿಮೆಂಟ್ ಚಿತ್ರಗಳ ಪತನದ ಜೊತೆ ಜೊತೆಗೇ ಶ್ರುತಿಯ ವೃತ್ತಿ ಬದುಕು ಜಾರ ತೊಡಗಿತು. 'ಹೀಗಾಗುತ್ತೆ ಅಂತ ನನಗೆ ಮೊದಲೇ ಗೊತ್ತಿತ್ತು. ಆದರೆ ನಿರ್ಮಾಪಕರು ನನ್ನನ್ನು ಇದೇ ರೀತಿಯ ಪಾತ್ರಗಳಿಗಷ್ಟೇ ಕರೀತಾ ಇದ್ದರು' ಎಂದು ಶ್ರುತಿ ಹೇಳುವ ಹೊತ್ತಿಗೆ ಕಾಲ ಮೀರಿತ್ತು.

ಸೆಂಟಿಮೆಂಟ್ ಚಿತ್ರಗಳಿಗೆ ಬೇಡಿಕೆಯಿಲ್ಲ ಎಂದು ಗೊತ್ತಾದಾಕ್ಷಣ ಗಾಂಧಿನಗರ ಆ್ಯಕ್ಷನ್ ಚಿತ್ರಗಳತ್ತ ಹೊರಳಿತ್ತು. ಈ ವಿಭಾಗದಲ್ಲಿ ತಜ್ಞರೆನಿಸಿದ ಥ್ರಿಲ್ಲರ್ ಮಂಜು, ಓಂ ಪ್ರಕಾಶ್, ಆನಂದರಾಜ್ ಮೊದಲಾದ ನಿರ್ದೇಶಕರಿಗೆ ಕೈ ತುಂಬಾ ಕೆಲಸ. ಆದರೆ ಇಲ್ಲೂ ಬೇಡಿಕೆ ಸರಬರಾಜು ನಿಯಮ ಜಾರಿಗೆ ಬಂದ್ರಾಗ, ಕಳಕೊಂಡವರ ಸಂಖ್ಯೆ ಜಾಸ್ತಿಯಾಯಿತು. 'ಪೊಲೀಸ್ ಸ್ಟೋರಿ' ಯಂಥ ಒಂದು ಚಿತ್ರದ ಯಶಸ್ಸು 'ಧೈರ್ಯ', 'ಸೆಂಟ್ರಲ್ ಜೈಲ್', 'ಪೊಲೀಸ್ ಬೇಟೆ' ಯಂಥಾ ಹತ್ತಾರು ಚಿತ್ರಗಳಿಗೆ ಮುನ್ನುಡಿ ಬರೆದರೂ ಕೊನೆಗೆ ಎಲ್ಲವೂ ಒಂದೇ ಪಾಕದಂತೆ ಪ್ರೇಕ್ಷಕನಿಗೆ ಅನಿಸತೊಡಗಿತು. ಅದರ ಪರಿಣಾಮ ಒನ್‌ಮ್ಯಾನ್ ಆರ್ಮಿ, ಅಮರ್ ಅಕ್ಬರ್ ಆಂಥೋನಿ, ಥ್ರಿಲ್ಲರ್ ಕಿಲ್ಲರ್ ಚಿತ್ರಗಳು ಸೂಪರ್ ಫ್ಲಾಪ್ ಆದವು. ಶಿವರಾಜ್ ಕುಮಾರ್ ಅವರಂಥ ಹೀರೋಗಳೇ ಸೋಲಿನ ಕಹಿ ಉಣ್ಣಬೇಕಾಯಿತು.

ಸಿನಿಮಾದಲ್ಲಿ ಈ ತನಕ ಚಾಲ್ತಿಯಲ್ಲಿರುವ

ವಿಭಾಗಗಳೆಂದರೆ ಕೌಟುಂಬಿಕ ಚಿತ್ರ, ಸೆಂಟಿಮೆಂಟ್, ಆ್ಯಕ್ಷನ್ ಹಾಗೂ ಹಾಸ್ಯಚಿತ್ರ. ಆ್ಯಕ್ಷನ್ ಟ್ರೆಂಡ್‌ನಲ್ಲಿ ಮಿಂಚಿದ ಸಾಯಿಕುಮಾರ್ ತಮ್ಮೂರಿಗೆ ವಾಪಸಾಗುತ್ತಿದ್ದಂತೇ, ಹಾಸ್ಯ ಚಿತ್ರಗಳ ಟ್ರೆಂಡ್ ಶುರುವಾಯಿತು. 'ಉಲ್ಟಾಪಲ್ಟಾ' ಕ್ಲಿಕ್ ಆಯಿತು. ಜೊತೆಗೆ ಜಗ್ಗೇಶ್ ಕಾಮೆಡಿಗೆ ಮೊದಲ ನಾಲ್ಕು ವಾರ ಪ್ರೇಕ್ಷಕರು ಬಂದೇ ಬರ್ತಾರೆ ಎನ್ನುವುದೂ ನಿರ್ಮಾಪಕರಿಗೆ ಗೊತ್ತಾಯಿತು. ಜನರನ್ನು ನಗಿಸೋದಕ್ಕೆ ಎಲ್ಲಾ ರೀತಿಯ ಪ್ರಯತ್ನಗಳೂ ನಡೆದವು. ಈ ಪ್ರಕ್ರಿಯೆಯಲ್ಲಿ ಹಲೋಯಮದಂಥಾ ಮೂರನೇ ದರ್ಜೆಯ ಚಿತ್ರವೂ ಬಂಪರ್ ಹೊಡೆಯಿತು. ಟೆನ್ನಿಸ್ ಕೃಷ್ಣ, ಸಾಧುಕೋಕಿಲರಂಥ ಹಾಸ್ಯನಟರು ರಾತ್ರೋರಾತ್ರಿ ಹೀರೋಗಳಾದರು. ವರ್ಷಗಟ್ಟಲೆ ನಿರುದ್ಯೋಗಿಯಾಗಿದ್ದ ಎ.ಆರ್. ಬಾಬುರಂತಹ ನಿರ್ದೇಶಕರ ಮನೆ ಮುಂದೆ ನಿರ್ಮಾಪಕರು ಅಲೆದಾಡತೊಡಗಿದರು.

ಆದರೆ ಅತಿಯಾದರೆ ಸಿಹಿಯೂ ಕಹಿಯಾಗುತ್ತದೆ ಎಂಬ ಮಾತು ಮತ್ತೆ ನಿಜವಾಗಿದೆ. 'ಯಮಲೋಕದಲ್ಲಿ ವೀರಪ್ಪನ್' ಚಿತ್ರದಿಂದ ಶುರುವಾಗಿ ಕುಬೇರನ ತನಕ ಎಲ್ಲಾ ಕಾಮೆಡಿ ಚಿತ್ರಗಳೂ ಒಂದೇ ವಾರಕ್ಕೆ ಪ್ರೇಕ್ಷಕನ ಸಿಟ್ಟಿಗೆ ಬಲಿಯಾಗಿವೆ.

ಚಲಾವಣೆಯಲ್ಲಿರೋ ಎಲ್ಲಾ ಸೂತ್ರಗಳು ವಿಫಲವಾದ ನಂತರ ಗಾಂಧಿನಗರ ಶರಣಾಗಿದ್ದು ಉಪೇಂದ್ರರ ತಂತ್ರಕ್ಕೆ. ಅದೇ 'ಸಿನಿಮಾದೊಳಗೊಂದು ಸಿನಿಮಾ' ಎಂಬ ಗಿಮಿಕ್. ಉಪೇಂದ್ರ ಇದನ್ನು ಶುರು ಹಚ್ಚಿಕೊಂಡಿದ್ದು 'ಶ್' ಚಿತ್ರದಲ್ಲಿ. ಆ ಚಿತ್ರಕ್ಕೆ ಪ್ರೇರಣೆಯಾಗಿದ್ದು ಹಿಂದಿ ಚಿತ್ರ 'ಖಾಮೋಶ್'. ಆದರೆ ಕನ್ನಡದ ಮಟ್ಟಿಗೆ ಇದು ಹೊಸದಾಗಿದ್ದರಿಂದ 'ಶ್' ಯಶಸ್ಸು ಕಂಡಿತು.

'ಎ' ಚಿತ್ರದಲ್ಲೂ ಉಪೇಂದ್ರ ಅದೇ ತಂತ್ರವನ್ನು ಜಾಣ್ಮೆಯಿಂದ ಬಳಸಿದರು. ಇಲ್ಲಿ ಸಿನಿಮಾದೊಳಗೊಂದು ಸಿನಿಮಾ ಪ್ರತ್ಯಕ್ಷವಾಗುವುದರ ಜೊತೆಗೆ ಸಿನಿಮಾ ನಿರ್ದೇಶಕನ ನೋವನ್ನು ಉಪೇಂದ್ರ ಉಣಬಡಿಸಿದರು. ಇದು ನೈಜ ಕಥೆಯೇ ಇರಬೇಕು ಅಂತ ಪ್ರೇಕ್ಷಕರು ಅಂದುಕೊಂಡರು. ಪ್ರೀತಿ ಪ್ರೇಮವೆಂಬ ಬದನೆಕಾಯಿ ಬಗ್ಗೆ ಉಪೇಂದ್ರ ಆಡಿದ ಮಾತುಗಳೆಲ್ಲಾ ಪಡ್ಡೆ ಹುಡುಗರಿಗೆ ಇಷ್ಟವಾದವು. ಸಿನಿಮಾ ನಾಯಕಿಯೆಂದರೆ ಮೋಸಗಾತಿ ಎಂಬ ತೀರ್ಮಾನಕ್ಕೂ ಕೆಲವರು ಬಂದರು.

'ಎ' ಚಿತ್ರದ ಯಶಸ್ಸಿನ ಕಾರಣವನ್ನು ಪತ್ತೆ ಹಚ್ಚಿದವರು ಪತ್ರಿಕಾ ಛಾಯಾಗ್ರಾಹಕ ಪ್ರವೀಣ್ ಕುಮಾರ್. 'ಎ' ಚಿತ್ರ ಉಪೇಂದ್ರ - ಪ್ರೇಮಾ ಪ್ರಣಯ ಪ್ರಸಂಗದ ಪೋಸ್ಟ್‌ಮಾರ್ಟಮ್ ಎಂದು ಅವರಿಗೆ ಅರಿವಾದಾಗ 'ಝಡ್' ಚಿತ್ರದ ಕಥೆ ಕಿಡಿಯಾಯಿತು. ಇದು 'ಎ' ಚಿತ್ರಕ್ಕೆ ಉತ್ತರ. 'ಎ' ಚಿತ್ರ ಸಿನಿಮಾ ನಿರ್ದೇಶಕನೊಬ್ಬನ ಸ್ವಗತವಾಗಿದ್ದರೆ, 'ಝಡ್' ಚಿತ್ರ ನಾಯಕಿ ನಟಿಯೊಬ್ಬಳ 'out burst'. ಇಲ್ಲಿ ಸಿನಿಮಾ ನಟಿಯೊಬ್ಬಳನ್ನು ನಿರ್ದೇಶಕ ತನ್ನ ಸ್ವಾರ್ಥಕ್ಕೆ ಹೇಗೆ



ಪ್ರಕಾಶ್‌ರೈ, ಪ್ರೇಮಾ - ಚಿತ್ರ 'Z'


ಬಳಸಿಕೊಳ್ಳುತ್ತಾನೆ ಎಂಬ ವಿವರಗಳಿವೆ. ಒಟ್ಟಾರೆಯಾಗಿ ಚಿತ್ರ ನಾಯಕಿ ಪರ. ಆದರೆ ಇವೆಲ್ಲಾ ಸ್ಟಂಟ್‌ಗಳೂ ಚಿತ್ರದ ಬಿಜಿನೆಸ್‌ಗೆ ಸಹಾಯವಾಗುತ್ತದೆ. ಎನ್ನುವುದು ಪ್ರವೀಣ್‌ಗೆ ಗೊತ್ತು. ಆ ಕಾರಣಕ್ಕೇ 'ಝಡ್' ಚಿತ್ರದಲ್ಲಿ ಅರೆನಗ್ನ ಹುಡುಗಿಯರಿದ್ದಾರೆ. ಶೋಷಣೆ ಬಗ್ಗೆ ಮಾತಾಡುವ ಹೊತ್ತಿಗೆ, ಅದರ ಚಿತ್ರಣವನ್ನು ಕೊಡಲೇ ಬೇಕಲ್ಲ!

ಒಂದು ಚಿತ್ರಕ್ಕೆ ಇನ್ನೊಂದು ಚಿತ್ರ ಪ್ರತ್ಯುತ್ತರ ರೂಪದಲ್ಲಿ ಬಂದಿದ್ದು ಇದೇ ಮೊದಲು. ಪ್ರೇಕ್ಷಕನಿಗೆ ಎರಡನೇ ಚಿತ್ರ ಅರ್ಥವಾಗಬೇಕಿದ್ದರೆ, ಮೊದಲನೇ ಚಿತ್ರವನ್ನು ನೋಡಲೇಬೇಕು. 'ಝಡ್' ಸೋಲುವುದು ಇಲ್ಲೇ. 'ಎ' ಚಿತ್ರ ನೋಡದೇ ಇದ್ದವರಿಗೆ 'ಝಡ್' ಚಿತ್ರದ ನಾಯಕಿಯ ಆಲಾಪ - ಪ್ರಲಾಪಗಳು ತಟ್ಟುವುದಿಲ್ಲ. ಖಾಸಗಿ ಬದುಕು - ವೃತ್ತಿ ಬದುಕು ಎರಡೂ ಪರಸ್ಪರ 'ಲಿಂಕ್' ಆಗುವ ಸಂದರ್ಭ ಬಂದಾಗ ಇಂಥ ಚಿತ್ರಗಳ ಸೃಷ್ಟಿಯಾಗುತ್ತದೆ.


ಅದಿರಲಿ, 'ಸಿನಿಮಾದೊಳಗೊಂದು ಸಿನಿಮಾ' ಫಾರ್ಮುಲಾಗೆ ಜೋತುಬಿದ್ದು ಇನ್ನು ನಾಲ್ಕೈದು ಚಿತ್ರಗಳು ಸಿದ್ಧವಾಗಿವೆ. ಈ ಪೈಕಿ 'ತರೀಕೆರೆ ಏರಿ ಮೇಲೆ' ಚಿತ್ರ ತೋಪಾಗಿದೆ. ಬಿಡುಗಡೆಗೆ ಕಾಯುತ್ತಿರುವ ಚಿತ್ರಗಳೆಂದರೆ 'ರಂಬೆ ಊರ್ವಶಿ ಮೇನಕೆ', 'ಜೋಡಿ ದಾದಾ', ರಂಭೆ ನೀ ವಯ್ಯಾರದ ಗೊಂಬೆ'.

ಸಿನಿಮಾ ಸೆಟ್‌ನಲ್ಲಿ ನಡೆಯುವ ಸಂಗತಿಗಳೆಲ್ಲಾ ಬೆತ್ತಲಾದರೆ ಪ್ರೇಕ್ಷಕನ ಕುತೂಹಲ ಸಾಯುತ್ತದೆ. ಇಂಥ ಸರಳ ಸತ್ಯ ಗೊತ್ತಿದ್ದರೆ 'ಸಿನಿಮಾದೊಳಗೊಂದು ಸಿನಿಮಾ' ಆಗ್ತಾನೇ ಇರ್ಲಿಲ್ಲ. ■

ಪತ್ರಿಕಾ ಅವಾಂತರ



S. N. ಶಿರಾಲೇಕರ



ನಾನು ಪತ್ರಿಕಾ ಸಂಪಾದಕನನ್ನು ಪ್ರೀತಿಸಬಾರದಾಗಿತ್ತು ಕಣೆ, ನಾನು ಬರೆದ ಪ್ರೇಮ ಪತ್ರಗಳಿಗೆ ಪ್ರತ್ಯುತ್ತರವಾಗಿ ಬರೀ ವಿಷಾದ ಪತ್ರಗಳೇ ಬರುತ್ತಿವೆ.......



ನಿಮ್ಮ ಜೀವನದಲ್ಲಿ ಸ್ವಂತದ್ದೊಂದು ಮನೆ ಖರೀದಿಸುವುದಾಗದಿದ್ದರೂ, ಈ 'ಮನೆ' ಅನ್ನೋ ಪತ್ರಿಕೆಯನ್ನಾದರೂ ಖರೀದಿಸಿದ್ದೀರಲ್ಲಾ, ಅಷ್ಟೇ ಸಾಕು!



ಅಕ್ಕ ತಂಗಿಯರ ಜಗಳ ನಡೆದಿರುವುದು ಬೇರೆ ಮನೆ ಮಾಡೋಕೆ ಅಲ್ಲ ಕಣ್ರೀ.... 'ಮನೆ' ಅನ್ನೋ ಪತ್ರಿಕೆಗಾಗಿ ಅಷ್ಟೇ......

BISILA BADUKU Kannada Monthly MARCH 1999 RNI No. 67406 / 97 Regd. BGW / 394

ಶೀಘ್ರ ಬಿಡುಗಡೆಯಾಗಲಿರುವ 'ಮನೆ' ವಾರಪತ್ರಿಕೆಗೆ ಬರೆಯಿರಿ

ಎರಡು ದೋಣಿಯ ಪಯಣ



ಉದ್ಯೋಗಸ್ಥ ಮಹಿಳೆಯರೇ ಗಮನಿಸಿ. ನೀವು ಯಾವುದೇ ಉದ್ಯೋಗದಲ್ಲಿರಲಿ, ಅದು ನಿಮಗೆ ತೃಪ್ತಿ ಕೊಡುತ್ತಿದೆಯೇ? ಮನೆ, ಮಕ್ಕಳು, ಗಂಡ ಮತ್ತು ಉದ್ಯೋಗ ಎಲ್ಲವನ್ನೂ ಹೇಗೆ ಸಂಭಾಳಿಸುತ್ತಿದ್ದೀರಿ? ಖುಷಿಯಿದೆಯೇ? ವ್ಯಥೆಯಿದೆಯೇ? ಒತ್ತಡವಿದೆಯೇ? ಏನಿದ್ದರೂ ನಿಮ್ಮ ಅನಿಸಿಕೆಗಳನ್ನು ನಮಗೆ ಬರೆದು ಕಳಿಸಿ. ನಿಮ್ಮ ಬರಹ ಅರ್ಧಪುಟ ಮೀರಬಾರದು. ನಿಮ್ಮದೊಂದು ಫೋಟೋ ಕಳಿಸಿ.

ನಾನೂ ಅಮ್ಮನಾದೆ!

ಗಂಡಂದಿರೇ ಇಲ್ಲಿ ನೋಡಿ. ನಿಮ್ಮ ಹೆಂಡತಿ ಉದ್ಯೋಗಸ್ಥೆ. ಆರ್ಥಿಕವಾಗಿ ನಿಮ್ಮ ಜೊತೆಗೆ ಕೈಗೂಡಿಸಿದ್ದಾರೆ. ಆದರೆ ಸಾಮಾಜಿಕವಾಗಿ ನೀವೆಷ್ಟು ನಿಮ್ಮ ಹೆಂಡತಿಯ ಕೆಲಸಕ್ಕೆ ಸಹಕಾರಿಯಾಗಿದ್ದೀರಿ? ನಿಮ್ಮ ಮಕ್ಕಳಿಗೆ ನೀವೂ 'ಅಮ್ಮ'ನ ಪಾತ್ರ ವಹಿಸಿದ್ದೀರಾ? ಅರ್ಧಪುಟದಲ್ಲಿ ನಮಗೆ ಬರೆದು ತಿಳಿಸಿ. ನಿಮ್ಮದೊಂದು ಫೋಟೋ ಕಳಿಸಿ.

ನನ್ನ ಪ್ರಪಂಚ



ಮಕ್ಕಳೇ ನೀವೂ ಬರೆಯಿರಿ. ಶಾಲೆಯಲ್ಲಿ ಮಿಸ್ ಕಾಟ, ಮನೆಯಲ್ಲಿ ಅಮ್ಮ, ಅಪ್ಪನ ಕಾಟ. ಎಲ್ಲರದೂ ಒಂದೇ ಹಾಡು. ಓದುಓದುಓದು! ಇದನ್ನು ಬಿಟ್ಟು ನಿಮಗೇನು ಮಾಡಬೇಕೆನಿಸುತ್ತದೆ? ನಮಗೆ ಬರೆದು ತಿಳಿಸಿ. ಜತೆಗೆ ನಿಮ್ಮ ಭಾವಚಿತ್ರ ಕಳಿಸಿ.

ಸಂಜೆಗಣ್ಣಿನ ನೋಟ

ಮಕ್ಕಳು ಕಲಿತು, ತಮ್ಮ ಬದುಕನ್ನು ದೂರ ದೂರ ರೂಪಿಸಿಕೊಂಡಾಯಿತು. ಕರ್ತವ್ಯಗಳೆಲ್ಲ ಮುಗಿಸಿಯಾಯಿತು! ಈಗ ನಿಮ್ಮ ಬದುಕು ಹೇಗಿದೆ? ನಿರಾಳವಾಗಿದೆಯೇ ಕಾಯಿಲೆಗಳು ಕಾಡುತ್ತಿದೆಯೇ, ಮಕ್ಕಳು ದೂರಾದರೆಂಬ ನೋವಿದೆಯೇ ಅಥವಾ ಎಲ್ಲವನ್ನೂ ನುಂಗಿ, ಮಾಗಿದ ಮನಸ್ಸು, ಅನುಭವಗಳ ಹಿನ್ನೆಲೆಯಲ್ಲಿ 'ರಾಮಾಕೃಷ್ಣಾಂತ' ಬದುಕಲು ಸಾಧ್ಯವಿದೆಯೇ? ನಮಗೆ ಬರೆದು ತಿಳಿಸಿ. ನಿಮ್ಮ ಭಾವಚಿತ್ರ ಕಳಿಸಲು ಮರೆಯಬೇಡಿ.

ಕಥೆ, ಕಾದಂಬರಿ, ಕವನ ಲೇಖನಗಳಿಗೆ ಆಹ್ವಾನ



ಕನ್ನಡಿಗರ ಮನೆ ಮನಗಳಿಗೆ ಭಾರಿ ಪ್ರಮಾಣದಲ್ಲಿ ದಾಳಿ ಇಡಲಿರುವ ಮನೆ ವಾರಪತ್ರಿಕೆ ನಿಮ್ಮದು. ಈ ಪತ್ರಿಕೆಯಲ್ಲಿ ಏನೇನು ಇರಬೇಕೆಂದು ಬಯಸುತ್ತಿರೋ ಅದೆಲ್ಲವನ್ನೂ ಬರೆದು ಕಳಿಸಿ. 'ಮನೆ'ಗೆ ಬರೆಯುವವರು ಉದ್ದಾಮ ಸಾಹಿತಿಗಳೇ ಆಗಿರಬೇಕೆಂದಿಲ್ಲ. ಸಾಮಾನ್ಯ ಓದುಗರಿಗೇ ಇಲ್ಲಿ ಅಧಿಕ ಅವಕಾಶ. ಆದರೆ ಕಡಿಮೆ ಗುಣಮಟ್ಟದ ಬರಹಗಳಿಗೆ ಪ್ರೋತ್ಸಾಹ ಸಿಗಲಾರದು. ನೀವು ನಿಮ್ಮ ಊರು, ಜನ, ರಾಜಕೀಯ, ಉಡುಗೆ, ಅಡುಗೆ, ಮಕ್ಕಳು ಹೀಗೆ ಯಾವ ವಿಷಯದ ಬಗೆಗಾದರೂ ಚುಟುಕಾಗಿ ಬರೆಯಬಹುದು. ನೆನಪಿಡಿ! ಹಸ್ತಪ್ರತಿಯಲ್ಲಿ ಅರ್ಧಪುಟಕ್ಕಿಂತ ಹೆಚ್ಚಾಗಿರುವ ಬರಹಗಳು ಖಂಡಿತಾ ಪ್ರಕಟವಾಗುವುದಿಲ್ಲ. ಕಥೆಗಳು ಹಸ್ತಪ್ರತಿಯಲ್ಲಿ ಒಂದು ಪುಟ ಮೀರಕೂಡದು. ಧಾರಾವಾಹಿಯಾಗಿ ಪ್ರಕಟವಾಗುವ ಕಾದಂಬರಿಗಳು ಹಸ್ತಪ್ರತಿಯಲ್ಲಿ 30 ಪುಟಗಳ ಮಿತಿಯಲ್ಲಿರಬೇಕು. ನಿಮ್ಮ ಬರಹಗಳೊಂದಿಗೆ ಸ್ಟಾಂಪ್ ಹಚ್ಚಿದ ಸ್ವವಿಳಾಸದ ಲಕೋಟೆ ಕಳಿಸಿಕೊಡಿ. ಅಸ್ವೀಕೃತ ಬರಹಗಳನ್ನು ಕಾಯ್ದಿರಿಸುವ ವ್ಯವಸ್ಥೆಯಿಲ್ಲ. ಸ್ವೀಕೃತ ಬರಹಗಳು ಸಮಯಾನುಸಾರ ಪ್ರಕಟಗೊಳ್ಳುತ್ತವೆ. ಅನಗತ್ಯ ಪತ್ರ ವ್ಯವಹಾರ ಬೇಡ.

ಸ್ಪರ್ಧೆ!

ಮಿನಿಕಥೆ :

ಹಸ್ತ ಪ್ರತಿಯಲ್ಲಿ ಒಂದು ಪುಟ ಮೀರಕೂಡದು. ಭಾಷೆ, ವಸ್ತು, ಶೈಲಿ ಚುರುಕಾಗಿರಬೇಕು.

ಹನಿಗವನ :

ಕಡಿಮೆ ಪದಗಳಲ್ಲಿ ಓದುಗರಿಗೆ ಕಚಗುಳಿ ಇಡುವ ಹನಿಗವನಗಳನ್ನು ಮಾತ್ರ ಸ್ಪರ್ಧೆಗೆ ಕಳಿಸಿ.

ಕಾರ್ಟೂನ್:

ಅಡಿ ಟಿಪ್ಪಣಿಗಿಂತ ರೇಖೆಗಳಿಗೇ ಹೆಚ್ಚು ಒತ್ತು ನೀಡಿದ ಕಾರ್ಟೂನ್‌ಗಳು ಅಪೇಕ್ಷಣೀಯ.

ಸೂಚನೆ: ವಿಜೇತರಿಗೆ ಪ್ರಶಸ್ತಿಪತ್ರ ಹಾಗೂ ಬಹುಮಾನ ಕಳಿಸಲಾಗುವುದು. 'ಮನೆ'ವಾರ ಪತ್ರಿಕೆಯ ಮೊದಲ ಸಂಚಿಕೆಯಲ್ಲಿ ಫಲಿತಾಂಶ.

ವಿಳಾಸ: ಸಂಪಾದಕರು, 'ಮನೆ' ವಾರಪತ್ರಿಕೆ, ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ: 7951, ಬಸವೇಶ್ವರನಗರ, ಬೆಂಗಳೂರು - 560 079.